ಜಾತ್ರೆ ಮುಗಿದಿತ್ತು

· ಶಾಂತಾದೇವಿ ಕಣವಿ



ಜಾತ್ರೆ ಮುಗಿದಿತ್ತು

ಜಾತ್ರೆ ಮುಗಿದಿತ್ತು

ಶಾಂತಾದೇವಿ ಕಣವಿ

ಮೈಸೂರು
1981

Jatre Mugidittu - a collection of fourteen short stories by Smt. Shanthadevi Kanavi, published by Aparna Prakashana 49 T K extension Saraswatipuram Mysore-9, 1981, crown octavo 8+149 pages, price Rs. 8-00 12-00

ಮೊದಲನೆಯ ಮುದ್ರಣ 1981

ಬೆಲೆ.

ಸಾಧಾರಣ 8-00 ರೂ.

ಉತ್ತಮ 12-00 ರೂ.

ಪ್ರಕಾಶಕರು : ಎ. ಅನೂರಾಧಾ, ಅಪರ್ಣಾ ಪ್ರಕಾಶನ, 49, ತೊಣಚಿ ಕೊಪ್ಪಲು ಬಡಾವಣೆ, ಸರಸ್ವತೀಪುರಂ, ಮೈಸೂರು-570 009.
ಮುದ್ರಕರು : ನಂದಿ ಮುದ್ರಣಾಲಯ, ನಂ· 703/ಎ, 4ನೇಕ್ರಾಸ್ ರಾಮಾನುಜರಸ್ತೆ, ಮೈಸೂರು-570 004

ಅರಿಕೆ

'ಮರುವಿಚಾರ' ಪ್ರಕಟವಾಗಿ ಮೂರುವರ್ಷ ತುಂಬುದರೊಳಗಾಗಿಯೇ ಈ ನನ್ನ ಹೊಸ ಕಥಾಸಂಕಲನ ಓದುಗರ ಕೈಸೇರುತ್ತಿರುವುದಕ್ಕೆ ಮುಖ್ಯ ಕಾರಣ 'ಗ್ರಂಥಲೋಕ'ದ–ಶ್ರೀ ಆರ್. ಎಲ್. ಅನಂತರಾಮಯ್ಯನವರು. ಕರಡು ತಿದ್ದುವದರಿಂದ ಮೊದಲುಗೊಂಡು ಆಕರ್ಷಕವಾದ ಮುಖಪುಟದೊಂದಿಗೆ ಈ ಪುಸ್ತಕ ಹೊರಬರುವವರೆಗೂ ಅವರು ತೋರಿದ ಆಸ್ಥೆ ಆಸಕ್ತಿಗಳಿಗಾಗಿ ನಾನು ತುಂಬ ಕೃತಜ್ಞಳಾಗಿದ್ದೇನೆ. ಅಚ್ಚುಕಟ್ಟಾಗಿ ಮುದ್ರಿಸಿರುವ ನಂದಿ ಮುದ್ರಣಾಲಯದವರಿಗೂ ಅಪರ್ಣಾ ಪ್ರಕಾಶನಕ್ಕೂ ನನ್ನ ವಂದನೆಗಳು.

ಇಲ್ಲಿಯ ಕಥೆಗಳಲ್ಲಿ ಕೆಲವನ್ನು ಈ ಮೊದಲು ಪ್ರಕಟಿಸಿದ 'ಮಯೂರ' 'ಮಲ್ಲಿಗೆ' 'ತುಷಾರ' 'ಕಸ್ತೂರಿ' ಮೊದಲಾದ ಪತ್ರಿಕೆಗಳ ಸಂಪಾದಕರ ಸೌಜನ್ಯವನ್ನು ನೆನೆಯದಿರಲಾರೆ.

ಎಲ್ಲ ಆತ್ಮೀಯರಿಗೂ ಮೆಚ್ಚುಗೆಯ ಓದುಗರಿಗೂ ಧನ್ಯವಾದಗಳು.

ಶಾಂತಾದೇವಿ ಕಣವಿ.

'ಚೆಂಬೆಳಕು'
ಕಲ್ಯಾಣನಗರ,
ಧಾರವಾಡ–7.
25–2–1981

ಪರಿವಿಡಿ

ಜಾತ್ರೆ ಮುಗಿದಿತ್ತು

“ನೀ ಏನs ಹೇಳ ಸಂಗವ್ವಾ, ಬಾಳೇ ಮಾಡಾಕ ಬಂದ ಇಷ್ಟ ದಿನಾ ಆದರೂ ನಮ್ಮ ಮಲ್ಲವ್ವಗ ನೆಟ್ಟಗ ಅಡಗೀ ಮಾಡಾಕ ಬರೂದಿಲ್ಲ ನೋಡಬೇ.”

“ಹಂಗ್ಯಾಕ ಅಂತೀ ಚಿಗವ್ವಾ. ಮಾಡಾಳಲ್ಲಾ, ಎಲ್ಲಾ ಹ್ವಾರೇನೂ ಮಾಡ್ತಾಳ.”

“ಆದೇನದು ಹಾಂಗ ದುಡದರ ‘ಎತ್ತ ಉಚ್ಚೀ ಹೊಯ್ದ್ಹಾಂಗ’ ಉದ್ದಾsಕ. ಮುಕ್ಕಾಟಲೆ ಕೆಲಸಾ ಮಾಡೂದೊಂದs ಗೊತ್ತದ ನೋಡು ಆ ಮೂದೇವಿಗೆ. ಒಂದು ಶಾಣ್ಯಾತನಾ ಇಲ್ಲಾ, ಯವಹಾರ ಗೊತ್ತಾ ಗಂಗಿಲ್ಲ. ನೆಟ್ಟಾಗ ರೊಕ್ಕಾ ಎಣಿಸಾಕ ಬರೂದಿಲ್ಲಬೇ. ಏನರೆ ತರಾಕ ಅಂಗಡೀಗ ಹ್ವಾದರ ಚಿಲ್ಲರ ಎಣಿಸಾಕ ಸುದ್ದಾ ಬರಾಂಗಿಲ್ಲ, ಅದಕ್ಯಾ ನಾನs ಸಾಯಬೇಕ ನೋಡು.

ಮಲ್ಲವ್ವನ ಕೈಯಾಗ ರೊಕ್ಕಾ ಕೊಡೂವಾಕೀನs ಅಲ್ಲಾ ಈ ಗೌರವ್ವ. ಆದ್ರೂ ಸೊಸಿನ್ನ ಆಡಿಕೊಳ್ಳಾಕ ಹಾಂಗ ಮಾತಾಡತಾಳ. ಹೆಂತಾ ಬಂಗಾರದಂತಾ ಹುಡುಗೀನ್ನ ದಿನಾ ದುಡಿಸೀ ದುಡಿಸೀ ಬೈದೂ ಬೈದೂ ಪ್ಯಾರಿ ಮಾಡಿ ಕುಂಡ್ರಿಸ್ಯಾಳ ಈ ಅತ್ತೆವ್ವ, ಎಂದು ಮನದಲ್ಲೇ ಅಂದುಕೊಂಡು ಸಂಗವ್ವ ಮಾತು ಬೆಳೆಸಿದಳು.

“ದಿನಾs ಶಗಣೀ ಬಳಿಯೂದು, ಕಸಾಮುಸರಿ, ಎಮ್ಮೀ ಹಿಂಡೂದು, ರೊಟ್ಟಿ ಬಡಿಯೂದು, ಮತ್ತ ಮ್ಯಾಲೆ ಹೊಲಕ್ಕೆ ಹೋಗೂದು ಎಲ್ಲಾs ಮಾಡ್ತದಲ್ಲಬೇ ಹುಡುಗೀ. ಒಂದ ತುಟಿ ಎರಡ ಮಾಡಂಗಿಲ್ಲಾ. ತಾ ಏನೋ ತನ್ನ ಕೆಲಸ ಏನೋ, ಭಾಳ ಸಂಬಾವಿತ ಹುಡುಗಿ ಮಲ್ಲವ್ವ. ತಾಯಿ ಸತ್ತ ಮಗಳು. ಈಟೆರ್ತ ನಾ ನೋಡೇನಿ. ಭಾಳ ಗುಣವಂತಿ. ‘ತಾಯಿ ಇಲ್ಲದ್ದು ಬಾಯಿ ಇಲ್ಲದ್ದು’ ಅಂತಾರಲ್ಲಾ ಹಾಂಗ ಆಗೇದ ಅದರ ಬಾಳೇ.”

ಈ ಸಂಗವ್ವ, ತನ್ನ ಹಿರೇ ಸೊಸಿ ಮಲ್ಲವ್ವ ಇಬ್ರೂ ಒಂದs ಊರವರು : ಏಟಂದ್ರು ಈಕೀ ಮಲ್ಲವ್ವನ ಬಿಟ್ಟುಕೊಡಾಕಿ ಅಲ್ಲಾ. ಹಿಂಗ ಮಾತಾಡಿದರ ನಾನs ಖೊಟ್ಟಿ ಆಗತೇನು–ಎಂದು ವಿಚಾರಿಸಿದ ಗೌರವ್ವ ತನ್ನ ಮಾತಿನ ಧಾಟಿ ಬದಲಿಸಿ ಎರಡನೆಸೊಸೆ ಶಕುಂತಲಾನ ಗುಣಗಾನ ಪ್ರಾರಂಭಿಸಿದಳು. ಕೈ ಕೆಲಸ ಮಾಡುತ್ತಲೇ ಬಾಯಿ ವಟಗುಡುತ್ತಿತ್ತು.

"ನಮ್ಮ ಶೇಕವ್ವ ಇಂದ ಹರ‍್ಯಾಗ ಅವಲಕ್ಕಿ ಸೂಸಲಾ ಮಾಡಿದ್ಲು. ಎಷ್ಟ ಸೆಂವಿ ಮಾಡಿದ್ದಳಬೇ, ಒಣಗಿ, ಆವ್ರು, ಚಟ್ನಿ, ಚಾ, ತಿನಿಸು ಎಲ್ಲಾs ಮಾಡ್ತಾಳ."

"ದೊಡ್ಡ ಊರಾಗ ಇದ್ದಾಕಿ. ದೊಡ್ಡವರ ಮಗಳು. ಮತ್ತ ಮ್ಯಾಲೆ ಸಾಲೀ ಕಲೀತಾಕಿ. ಶಾಣ್ಯಾಳ ಅದಾಳವ್ವಾ ನಿನ್ನ ಸೊಸಿ."

"ಶಾಣ್ಯಾತನಾ ಒಂದs ಅಲ್ಲಬೇ. ಎಷ್ಟ ಚುರುಕ ಅದಾಳ ಅಂದೀ. ಕೆಲಸದಾಗ ಹೊಳ್ಳ್ಯಾಡೂದಿಲ್ಲ ನೋಡು ಮಲ್ಲೀ ಹಾಂಗ. ಮೈಮ್ಯಾಗಿನ ಅರಬೀ ಎಷ್ಟ ಹಸನ ಇಟಗೊಂತಾಳ. ಕೆಲಸಾ ಮಾಡ್ಯಾಳೋ ಇಲ್ಲೋ ಅನ್ನೂ ಹಾಂಗ ಝಟ್ ಪಟ್ ಎಲ್ಲಾ ಮುಗಿಸಿ ಮತ್ತ ಓದಿಕೊಂತ ತನ್ನ ಖೋಲ್ಯಾಗ ಕುಂದರತಾಳ. ಹೆಣಮಕ್ಕಳ ಅಂದರ ಹಾಂಗ ಇರಬೇಕ.

ಇದ್ದುಳ್ಳವರ ಬೀಗತನ ಮಾಡಿ ಸೊಸೆ ಮನೆಗೆ ಬಂದಾಗಿನಿಂದ ಅವಳ, ಮತ್ತು ಅವಳ ಸೀರೆ ಕುಬುಸ ಒಡವೆ ವಸ್ತುಗಳ ವರ್ಣನೆಯನ್ನೂ ಅವಳ ಗುಣವಂತಿಕೆಯನ್ನೂ ಗೌರವ್ವ ದಿನವೂ ಹಾಡಿ ಹೊಗಳುವುದನ್ನು ಕೇಳಿ ಕೇಳಿ ಪಳಗಿದ್ದ ಸಂಗವ್ವನಿಗೆ ಸುಮ್ಮನಿರಲಾಗಲಿಲ್ಲ.

"ಈಗೇನ ಮಾಡಾಕ ಹತ್ತ್ಯಾಳ ಶೇಕವ್ವ, ಮಕ್ಕೊಂಡಾಳೇನ?''

"ಗಂಡ ಸಾಲಿಯಿಂದ ಬಂದ ಕೂಡಲೇ ಅಂವಗ ಊಟಕ್ಕ ನೀಡಿ ತಾನೂ ಉಂಡು ಮಕ್ಕೊಂಡಾಳ. ಮಲಗಲಿ ಬಿಡು ಪಾಪ. ಈಗರೇ ಏನ ಕೆಲಸ ಅದ?"

ಪಡಸಾಲೆಯ ಎದುರಿನ ಕಟ್ಟೆಯ ಮೇಲೆ ಕುಳಿತು ಕೂಸಿಗೆ ಮೊಲೆ ಕೊಡುತ್ತಲೇ ಜೋಳ ಕೇರುತ್ತಿದ್ದ ಮಲ್ಲವ್ವನತ್ತ ನೋಡುತ್ತ ಸಂಗವ್ವ ಒಂದು ಬಾಣ ಒಗೆದಳು.

"ಇವತ್ತ ಸವತೀ ಬೀಜಾ ಕಟಿಯಾಕ ನಾವಿಬ್ಬರs ಆದಿವಿ, ಅಕ್ಕವ್ವನೂ ಬರಲಿಲ್ಲಾ. ಸಾವಂತ್ರೆವ್ವ ಹೊಲಕ್ಕ ಹೊಗ್ಯಾಳ ಅಂದಿ.

ಅರಪಾವು ಹಿಟ್ಟು ನಾದೀದಿ. ಇದು ಯಾವಾಗ ಮುಗಿಬೇಕ? ಶೇಕವ್ವನ್ನೂ ಕರದಿದ್ದರ ನಮ್ಮ ಕೂಡ ಕಟೀತಿದ್ದಳು, ಅದಕ್ಕs ಕೇಳಿದೆ."

"ಯಾಕ, ಬ್ಯಾಸರಾತೇನ ನಿನಗ? ಸಾವಂತ್ರೆವ್ವ ಇದ್ದರ ಹಾಡ ಅಂತಿದ್ಳು. ಅಕ್ಕವ್ವ ಕತೀ ಅರಿ ಹೇಳತಿದ್ಳು. ತಡೀ, ಒಂದಿಷ್ಟ ಚಾ ಕುಡೀವಂತೆ, ಕಣ್ಣೀಗ ಬರೂ ಜಂಪು ಹೊಕ್ಕೈತಿ, ಶೇಕವ್ವಾs, ಏ ಶೇಕಕ್ಕಾ, ಏಳಬೇ." ಶೇಕವ್ವ ಓs ಎನ್ನಲಿಲ್ಲ. ಗೌರವ್ವ ಕಟ್ಟಿ ಇಳಿದು ಹೋಗಿ ಕೋಣೆಯ ಬಾಗಿಲು ಬಡಿದಾಗ ಎದ್ದು ಹೊರಗೆ ಬಂದು ಚಹ ಕ್ಕಿಡಲು ಒಳಗೆ ಹೋದಳು.

* * *

ತನ್ನ ಅತ್ತೆಯ ಕೈ ಸವತಿ ಬೀಜ ಕಟೆಯುತ್ತಿದ್ದರೂ ಬಾಯಿ ಒಂದೇ ಸವನೆ ತನ್ನನ್ನೇ ಕಟೆಯುತ್ತಿದ್ದದ್ದು ಮಲ್ಲವ್ವನ ಕಿವಿಗೆ ಬೀಳುತ್ತಿತ್ತು.

ಮದುವಿ ಆಗಿ ಬಂದಾಗಿಂದ ನಮ್ಮತ್ತಿ ಹಂಗಸೂದs ಬಿಟ್ಟಿಲ್ಲಾ. ಮೊದಲ ಒಂದ ಇಷ್ಟು ಸುಮ್ಮನ ಇರತಿದ್ಲು. ಇತ್ತಿತ್ಲಾಗ ಈ ಸಣ್ಣ ಸೊಸಿ ಬಂದಾಗಿಂದಂತೂ ನನ್ನ ಪಾಡು ಯಾರಿಗೂ ಬ್ಯಾಡಾ. ಕೂತರ, ಸಿಂತರ, ಕೆಲಸಾ ಮಾಡಿದರ, ಏನ ಮಾಡಿದರೂ ಬಯ್ಗಳ ಇದ್ದದ್ದs. ನನ್ನ ಗಂಡಾ ಮನೀಗೆ ಹಿರೇ ಮಗಾ ಆದ್ರೂ ಸಾಲೀ ಕಲತಾವ ಅಲ್ಲಾ, ಮಾವ ತೀರಿ ಕೊಂಡ ಕೂಡಲೆ ಒಕ್ಕಲತನಕ್ಕ ಬಿದ್ದಾನ. ಊಟಕ್ಕ, ಮನಗಾಕ ಅಷ್ಟs ಮನೀಗೆ ಬರತಾನ, ಉಳದ ಯಾಳೆ ಎಲ್ಲಾ ಹೊಲದಾಗ. ಹೊಲದ ಕೆಲಸಾ, ಎತ್ತ ಗೋಳಕೂಡs ದಿನಾ ಕಳೀತಾನ. ಮನ್ಯಾಗ ಹೇಣ್ತಿ ಮಕ್ಕಳು ಆದಾರ ಅನ್ನೂ ಖಬರs ಇಲ್ಲಾ ಎತ್ತಗೋಳ್ನ ಪ್ರೀತಿ ಮಾಡೂ ವಷ್ಟ ಸುದ್ದಾ ಹೇಣ್ತಿಮಕ್ಕಳಿಗೆ ಮಾಡೂದಿಲ್ಲಾ. ಮದಿವ್ಯಾಗಿ ಇಷ್ಟ ವರ್ಷ ಆದರೂ ಒಂದಿನಾ ಅರೆ ನೀ ಉಂಡ್ಯಾ? ತಿಂದ್ಯಾ? ನಿನಗ ಏನರೆ ಬೇಕೇನು?–ಅಂತ ನನ್ನ ಕೇಳಿಲ್ಲಾ. ರಟ್ಟೀ ಮುರಿಯೂ ಹಾಂಗ ದುಡದು ದಣದು ಮನೀಗೆ ಬಂದು ಬಿದ್ದಾ ಅಂದರ ಆತು. ಎಂದರೆ ಒಮ್ಮೆ ಹೇಣ್ತಿ ನೆನಪ ಆಗ್ತೈತಿ ತಾಯಿ ಇಲ್ಲದ ಪರದೇಶಿ ನಾನು ಮದುವೀ ಮಾಡಿ ಕೊಟ್ಟ ಮ್ಯಾಲೆ ಅಣ್ಣಾ ಅತ್ತಿಗೀನೂ ಹೊಳ್ಳಿ ನೋಡಲಿಲ್ಲಾ. ಚೊಚ್ಚಲ ಬಾಣಂತನಾ ಒಂದ ಕಾಟಾಚಾರಕ್ಕ ಮಾಡಿ ಮುಗಿಸಿದರು. ಆವಾಗಿಂದ ಸುರುಮಾಡಿದ್ಳು ಅತ್ತೆವ್ವ. ತೊಟ್ಲಾ ಕೊಡಲಿಲ್ಲಾ, ಬಟ್ಲಾ ಕೊಡಲಿಲ್ಲಾ, ಎಂಥಾ ಬಿಕನಾಸಿ ಬೀಗರ ಗಂಟುಬಿದ್ದರ ನಮಗ ಅಂತ. ಆಗ ಸುರೂ

ಆದದ್ದ ಸೋಬಾನ ನಾ ಮೂರ ಮಕ್ಕಳ್ನ ಹಡದರೂ ಇನ್ನೂ ಮುಗದಿಲ್ಲಾ. ಆಮ್ಯಾಲಿನ ಎರಡ ಬಾಣಂತೆನಾ ಇಂಥಾ ಅತ್ತೀ ಕೈಯಾಗ ಹ್ಯಾಂಗ ಆತು ಅನ್ನೂದು ಆ ಶಿವನs ಬಲ್ಲಾ. ಸಂಗವ್ವ ಚಿಗವ್ವನ ಬಂದು ಕೂಸಿಗೆ ನನಗ ನೀರ ಹಾಕಿ ಹೋಗತಿದ್ರು, ಹಡದ ಹದನೈದ ದಿನಕ್ಕ ಎದ್ದು ಎಲ್ಲಾ ಕೆಲಸಾ ಮಾಡತಿದ್ದೆ.

ಜೋಳ ಒನೆಯುತ್ತ, ಕೇರುತ್ತ ಮಲ್ಲವ್ವ ತನ್ನ ನೆನಪಿನ ಹರಳು ಆರಿಸಿ ಆರಿಸಿ ಒಗೆಯುತ್ತಿದ್ದಳು.

ನಾ ಏನ ಮಾಡಿದ್ರೂ ಎಲ್ಲಾs ಹೊಳ್ಯಾಗ ಹುಣಸೀಹಣ್ಣು ತೊಳ ದ್ಹಾಂಗ. ಅದಕ್ಕ ಕಾರಣ ನಮ್ಮ ತವರ್ಮನೀಯವರು ಬಡವರು, ನಾ ಏನೂ ತರಲಿಲ್ಲಾ ಅನ್ನೂದೊಂದ. ಆಕೀ ಅಂದದ್ದೆಲ್ಲಾ ಅನ್ನಿಸಿಕೊಂಡು ತೊತ್ತಿನಾಂಗ ಬಿದ್ದಿರತೇನಿ ನಾನು. ನನಗ ಬುದ್ಧಿ ಇಲ್ಲಾ, ಶಾಣ್ಯಾತನ ಇಲ್ಲಾ ಅಂತ ಹಂಗಸತಾಳ ಅತ್ತಿ. ಅಂದರ ನನಗ ನನ್ನ ಮಕ್ಕಳಿಗೆ ಕೈಯಾಗ ಒಂದ ರೂಪಾಯಿ ಕೊಟ್ಟಾಳೇನು? ಊರ ಬಸವಣ್ಣ ದೇವರ ಜಾತ್ರಿ ಆದರೂ ತಾನು ಹರಕ ಸೀರಿ ಉಟಕೊಂಡು ಮಕ್ಕಳನ ಕರಕೊಂಡು ಬರಿಗೈಲೆ ದೇವರಿಗೆ ಕೈಮುಗದು ಬರಬೇಕು. ತನ್ನ ಗಂಡ ಹೊಲದಾಗ ದುಡದು ರೊಕ್ಕಾ ಕಳಿಸಿದಾಗ ಮೈದುನಾ ಸಾಲೀ ಕಲತಾ, ಕಾಲೇಜು ಕಲತಾ, ಬಿ.ಎ. ಪಾಸಾದ, ಊರಾಗಿನ ಸಾಲ್ಯಾಗ ಮಾಸ್ತರ ಆಗ್ಯಾನ. ಚೊಣ್ಣ, ಕೋಟು ಹಾಕ್ಕೊಂಡು ಶಿಸ್ತಿಲೆ ಅಡ್ಡ್ಯಾಡತಾನು. ಬಿ. ಎ. ಕಲತಾಂವಗ ಇಂಗ್ರೇಜಿ ಕಲಿತ ಹೇಣ್ತಿ ಬಂದ್ಳು. ಆಕೀ ಏನೋ ಗಂಡನ್ನ ಕಟಕೊಂಡು ಶಹರಕ ಹೋಗಬೇಕಂತ ಮಸ್ತ ಯತ್ನಾ ಮಾಡಿದ್ಳು. ಆದರ ಅವಂಗ ಇನ್ನೂ ನೌಕರಿ ಸಿಕ್ಕಿಲ್ಲಂತ ಇಲ್ಲೇ ಉಳದಾಳ. ಒಂದಿಲ್ಲಾ ಒಂದಿನಾ ಈ ಊರ ಬಿಟ್ಟ ಹೋಗಾಕಿನ ಆಕಿ.

ಹೂವಿನ ಪತ್ತಲಾ ಉಟಕೊಂಡು ನಿರಿಗಿ ಒದಕೊಂತ ಅಡ್ಡ್ಯಾಡತಾಳ. ಪಲ್ಲೆ, ಸಾರು, ತಿನಿಸು, ಚಾ ಮಾಡಿಬಿಟ್ಟರ ಆಕೀ ಕೆಲಸ ಮುಗೀತು. ಮಾಡಿದ್ದ ತಿನಸು ಒಯ್ದು ತನ್ನ ಕಪಾಟಿನ್ಯಾಗ ಇಟಕೊಂಡು ಗಂಡಗ ಚಾ ಕೊಡೊ ನೆವಾ ಮಾಡಿ ತಾನೂ ಹೋಗಿ ಅಲ್ಲೇ ತಿಂದು ಬಾಯಿ ಒರಸಿ ಕೊಂಡು ಹೊರಗ ಬರತಾಳ. ಇಂತಾ ಸೊಸಿನ್ನ ಕಂಡರ ನಮ್ಮ ಅತ್ತಿಗೆ ಭಾಳ ಅಕ್ಕರತಿ, ಪ್ರೀತಿ. ಯಾಕಂದ್ರ ಆಕಿ ದೊಡ್ಡವರ ಮಗಳು.

ವಕೀಲರು ಮಗಳಿಗೆ ಬಂಗಾರ ಇಟ್ಟಾರ, ಅಳಿಯಾಗ ಉಂಗುರಾ ಸೂಟು ಕೊಟ್ಟಾರ, ಮೊಮ್ಮಗ್ಗ ಉಡದಾರ, ತೊಟ್ಲಾ, ಬಟ್ಲಾ ಎಲ್ಲಾ ಕೊಟ್ಟಾರ. ಹೋದಾಗೊಮ್ಮೆ ಹೊಸಾ ಸೀರಿ ಕೊಡತಾರ. ಅದಕ್ಕs ಶೇಕವ್ವ ಕುಂತರೂ ಛಂದ, ನಿಂತರೂ ಛಂದ. ಏನಮಾಡಿದರೂ ಮಾಫ. ಆಕೀನ್ನ ಹೊಗಳೂದು ತನ್ನ ಬಯ್ಯೂದು ಅತ್ತಿಗೆ ದಿನದ ರೂಢಿ ಆಗಿ ಬಿಟ್ಟದ.

ಆದರ ಬದಲು ನನ್ನ ಕೈಯಾಗ ನಾಕ ದುಡ್ಡು ರೊಕ್ಕ ಇದ್ದರ, ನನ್ನ ಗಂಡಾ ಹೇಣ್ತಿ ಅನ್ನೂ ಮಾಯಾ ಮಾಡಿದ್ದರ, ಹೀರೆ ಸೊಸಿ ಅಂತ ಹಿರೇತನಾ ಕೊಟ್ಟಿದ್ದರ, ಏನೂ ಇಲ್ಲಾಂದರೂ ಕಡೀಕ ಕತ್ತೀ ದುಡಿದಾಂಗ ಇಷ್ಟ ದುಡೀತೀನಲ್ಲಾ ಇದಕ್ಕಾದರೂ ಕಿಮ್ಮತ್ತ ಕೊಟ್ಟಿದ್ದರ ನನ್ನ ಬಾಳೇ ಇಷ್ಟ ಬವಣಿ ಆಗತಿದ್ದಿಲ್ಲಾ. ಈಗ ಗುಣಾ ಯಾರೂ ನೋಡೂದಿಲ್ಲಾ. ಎಲ್ಲಾರಿಗೂ ಹಣಾನs ಬೇಕು. ಹಣಾ ನೋಡಿದರ ಹೆಣಾ ಬಾಯಿ ಬಿಡ್ತ ದಂತ. ಇನ್ನ ಅತ್ತಿದೇನು ಮಹಾ ? ನನಗ ಹಣಾನೂ ಇಲ್ಲಾ, ನನ್ನವರು, ಅನ್ನವರೂ ಯಾರೂ ಇಲ್ಲಾ. ನನ್ನಂಥ ದಿಕ್ಕೇಡಿ ಯಾತಕ್ಕ ಬದಕಬೇಕು ?

ಕಣ್ಣೀರು ಉಕ್ಕಿಬಂದ ಮಲ್ಲವ್ವನಿಗೆ ಹಳ್ಳ ಕಾಣಿಸಲಿಲ್ಲ. ಗೋಡೆ ಯತ್ತ ತಿರುಗಿ ಸೀರೆಯ ಸೆರಗಿನಿಂದ ಕಣ್ಣು ಒತ್ತಿಕೊಂಡಳು. ತೊಡೆಯ ಮೇಲಿನ ಮಗ ಮಿಸುಕಾಡಿದಾಗ ಆದರ ಬಾಯಲ್ಲಿ ಮೊಲೆ ತುರುಕಿ ಚುಕ್ಕು ಬಡಿದಳು.

ಇದೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತಿದ್ದ ಸಂಗವ್ವನ ಹೊಟ್ಟೆ ಯಲ್ಲಿ ಸಂಕಟವಾಯಿತು. ಚಹ ಗಂಟಲಲ್ಲಿ ಇಳಿಯಲಿಲ್ಲ.

*　　　*　　　*

ಎಂಟು ಹತ್ತು ದಿನ ಕಳೆದ ಮೇಲೆ ಒಂದು ಸಂಜೆ ಸಂಗವ್ವ ಎಮ್ಮೆ ಹಿಂಡಿಕೊಂಡು ಮುಗಿಸಿ ಹಾಲಿನ ತಪ್ಪೇಲಿ ಎತ್ತಿಕೊಂಡು ಅಡಿಗೆಮನೆಗೆ ನಡೆದಾಗ ಹೊರಬಾಗಿಲಲ್ಲಿ ಯಾರೋ ಸಣ್ಣ ದನಿಯಲ್ಲಿ ಚಿಗವ್ವಾs ಎಂದರು.

“ಯಾಕವರು ? '' ಎನ್ನುತ್ತ ತಪ್ಪೇಲಿ ಕಟ್ಟೆಯ ಮೇಲಿಟ್ಟು ಹಕ್ಕೆ ಯಲ್ಲಿಯ ಗುಬ್ಬೀ ಚಿಮಣಿ ಎತ್ತಿ ಹಿಡಿದು ನೋಡಿದ ಸಂಗವ್ವ “ ಮಲ್ಲ ವ್ವೇನು ? ಬಾರವಾ ಒಳಗೆ ಬಾ ” ಎಂದರೂ ಅವಳು ಅತ್ತಿತ್ತ ನೋಡುತ್ತ ಅಂಜುತ್ತ ನಿಂತದ್ದನ್ನು ನೋಡಿ ಹತ್ತಿರ ಹೋಗಿ ಕೈ ಹಿಡಿದು ಒಳಗೆ ಎಳೆ ದಳು. ಮಲ್ಲವ್ವನ ಕೈಯಲ್ಲಿಯ ತಂಬಿಗೆ ನೋಡಿ '' ಬಯಲ ಕಡೆ

ಹೊಂಟವೇನಬೇ ? ಜೋಡಿಗೆ ಬರಲ್ಯಾ ? ಹಾಂಗ್ಯಾಕ ಮಾಡಿದೀ ಮಾರಿ ? ಮೈಯಾಗ ಆರಾಮು ಐತಿಲ್ಲೋ ? " ಎಂದಳು.

ಅವಳ ಯಾವ ಪ್ರಶ್ನೆಗೂ ಉತ್ತರ ಕೊಡದೆ ತಂಬಿಗೆ ಕೆಳಗಿಟ್ಟು ಮಲ್ಲವ್ವ ಮುಖಕ್ಕೆ ಸೆರಗು ಹಚ್ಚಿ ಭೋರೆಂದು ಅಳಹತ್ತಿದಾಗ ಸಂಗವ್ವನಿಗೆ ಏನೂ ತಿಳಿಯದೆ ಕಂಗಾಲಾಗಿ "ಸುಮ್ಕಿರ ತಂಗೀ ಏನಾತು " ಎನ್ನುತ್ತ ಅವಳ ಬೆನ್ನಮೇಲೆ ಕೈಯಾಡಿಸಿ ಸಮಾಧಾನ ಮಾಡಿದಳು.

ಅಳುವಿನ ಜೋರು ಇಳಿದ ಮೇಲೆ ಮಲ್ಲವ್ವ ''ಚಿಗವ್ವಾ, ನಾ ಬಯಲಕಡೆ ಹೋಗಾಕೆ ಬಂದಿಲ್ಲಾ. ನಿನ್ನ ಕಡೇನs ಬಂದೇನಿ. ನಾ ಒಂದ ಮಾತ ಹೇಳ್ತೇನಿ. ನನ್ನಾಣಿ ಯಾರ ಮುಂದೂ ಹೇಳಬಾರ್ದು, '' ಎಂದು ಅತ್ತಿತ್ತ ನೋಡಿದಳು. -'' ಮತ್ತಯಾರರೇ ಅದಾರೇನು ಇಲ್ಲೇ ?'' ಅವಳ ದನಿಯಲ್ಲಿ ಇನ್ನೂ ಗಾಬರಿ ಇತ್ತು.

'' ಛೀ ಹುಚ್ಚೀ, ಇಲ್ಲ್ಯಾರ ಬರಬೇಕ ? ಬಾಳಣ್ಣ ಕುಸ್ತೀಗೆ ಹೋಗ್ಯಾನ ರಾಮಾಪುರಕ. ನಾನs ಒಬ್ಬಾಕೀನs ಅದೀನಿ. ಹೇಳು ಏನದು, ಹೆದರ ಬ್ಯಾಡಾ ನಾ ಅದೀನಿ. ''

ಸಂಗವ್ವನ ಪ್ರೀತಿಯ ಮಾತಿನಿಂದ ಮತ್ತೆ ಅಳು ನುಗ್ಗಿಬಂದರೂ ಕಷ್ಟಪಟ್ಟು ತಡೆದುಕೊಂಡ ಮಲ್ಲವ್ವ "ಚಿಗವ್ವs ನನ್ನ ಹಡದ ತಾಯಿ ಸತ್ತುಹೊದರೂ ನೀನs ತಾಯಿ ಅಂತ ತಿಳಕೊಂಡೇನಿ. ಬಾಳಣ್ಣ ನನಗ ಅಣ್ಣನಕಿಂತಾ ಹೆಚ್ಚ ಅದಾನ. '' ಉಗುಳು ನುಂಗಿ ತಡೆದ ಮಲ್ಲವ್ವನನ್ನು ಸಂಗವ್ವ ಪ್ರೋತ್ಸಾಹಿಸಿದಳು.

" ಹೇಳ ಮತ್ತ ಏನದ ನಿನ್ನ ಮನಸ್ಸಿನ್ಯಾಗ. ನನಗೂ ಹೆಣ ಮಕ್ಕಳಿಲ್ಲಾ. ಸೋಸಿ ಬರೂದು ಇನ್ನೂ ಯಾವ ಕಾಲಕ್ಕೋ ಏನೋ. ನಿನ್ನ, ನಿನ್ನ ಮಕ್ಕಳನ್ನ ನಾಕ ದಿಸಾ ತವರ್ಮನಿ ಮಾಡಾಕ ಕರಕೊಂಡು ಬರಬೇಕು ಅಂದರ ನಿಮ್ಮತ್ತಿ ಕಳಸಾಕ ತಯಾರ ಇಲ್ಲವಾ."

"ಹೌದವ್ವಾ, ದುಡಿಯಾಕ ಆಳ ಬೇಕಲ್ಲ ಅವರಿಗೆ ? ಪುಗಸಟ್ಟೆ, ನನ್ನ ಹ್ಯಾಂಗ ಕಳಸ್ತಾರು. ಮನೀ ಹ್ವಾರೆ ಮಾಡವರ್ಯಾರು ? ನಾನೂ ಕೇಳಿದೆ ಮೊನ್ನೆ ನೀವಿಬ್ಬರೂ ಮಾತಾಡೂದು. " ಅಯ್ಯ ಆಕಿಗೇನ ಕಡಿಮೆ ಆಗೇದ ಇಲ್ಲೆ. ಉಣ್ಣಾಕ ತಿನ್ನಾಕ ಎಲ್ಲಾ ಅದ ಅಲ್ಲಾ. ಈ ಬಿಕನಾಸಿನ್ನ ತವರ್ಮನಿಯವರ ಕರಕೊಂಡ ಹೋಗಾಕ ತಯಾರಿಲ್ಲಾ, ನೀ ಯಾಕ

ಇಲ್ಲದ ಕೊಳ್ಳಿಗೆ ಹಾಕ್ಕೊಂತಿ ಅಂಧ್ವಲ್ಲಾ ನವ್ವೃತ್ತಿ. ನನ್ನ ಹಣೇಬರದಾಗ ಸುಕಾ ಪಡೂದು ಇಲ್ಲದಿದ್ದರೆ ಏನ ಮಾಡಲಿ ಚಿಗವ್ವಾ. ''

"ಅದೆಲ್ಲಾ ಆತ ಬಿಡು. ಈಗೇನಂತೀ ಹೇಳ. ನಿನ್ನ ಮನಸ್ಸಿಗ ಸುಕಾ ಆದರ ಸಾಕು ನನಗ. ''

ಮಲ್ಲವ್ವ ಮಾತನಾಡದೆ ಬಾಳೆಪಟ್ಟೆಯನ್ನು ಸಡಲಿಸಿ ಸೀರೆಯ ನಿರಿಗೆಯಲ್ಲಿ ಮಡಿಸಿಟ್ಟ ಐದು ರೂಪಾಯಿಯ ಹಳೆಯ ಮಾಸಿದ ನೋಟನ್ನು ಅವಳ ಮುಂದೆ ಹಿಡಿದಳು. ಸಂಗವ್ವನ ಕಣ್ಣು ಅಳಿರದವು ''ಇದೆಲ್ಲಿಂದ ಬಂತs ? ''

" ಚಿಗವ್ವಾ, ನೀ ಬಯ್ದಾದರೂ ಬೈ. ಎಡ್ಡ ಹೊಡೆದರೂ ಚಿಂತಿಲ್ಲ. ಇವತ್ತ ಮದ್ಯಾನದಾಗ ಶೇಕವ್ವ ಮನಗಿದ್ದು ಕ್ವಾಣೇ ಬಾಗಲಾ ಹಾಕ್ಕೊಂಡು ಅತ್ತಿ ಯಾರದೋ ಮನೀಗೆ ಹೋಗಿದ್ಲು. ನಾನು ಮೆಣಸಿನಕಾಯಿ ತೊಗೊಂಡು ಹೋಗಿ ಮಾರಿ ಈ ರೊಕ್ಕಾ ಮುಚಿಟ್ಟೆ ಕೊಂಡೆ. ''

"ಅದ್ಹ್ಯಾಂಗ ? ಯಾರೂ ನೋಡಲಿಲ್ಲಾ ? ಯಾರಿಗೆ ಮಾರಿದಿ ?''

" ಕಡಾಲಿ ಮುದುಕಿಗೆ ಮಾರಿದೆ. ಆಕೀಗೂ ಆಣೀ ಹಾಕಿ ಹೇಳೀನಿ, ಯಾರ ಮುಂದೂ ಹೇಳಬ್ಯಾಡ ಅಂತ. ಚೀಲಗಟ್ಟಲೆ ನಿಟ್ಟು ಒಟ್ಟೆದಾಗ ಸ್ವಲ್ಪ ತಗದರ ಯಾರಿಗೂ ಗೊತ್ತಾಗೂದಿಲ್ಲಾ ಅಲ್ಲೇನಬೆ ? ''.

" ಕಳವು ಮಾಡಿ ಮಾರಿ ಸಿಕ್ಕಿಬಿದ್ದಿ ಅಂದರ ನಿನ್ನ ಗಂಡಾ ಮೈಯಾಗಿನ ಎಲವು ಮುರದಾನು. ಮೊದಲs ಸಿಟ್ಟೆನಂವಾ, ಮಲ್ಲಕ್ಕಾ, ನನಗ ಯಾಕೊ ಅಂಜಿಕೆ ಬರತೈತಿ ''

ನೀರು ತುಂಬಿದ ಕಣ್ಣುಗಳಿಂದ ಆವಳನ್ನೇ ದಿಟ್ಟಿಸುತ್ತಾ ಮಲ್ಲವ್ವ ಕೇಳಿದಳು: '' ಚಿಗವ್ವಾs ಹತ್ತು ವರ್ಸಾತು ನನ್ನ ಬಾಳೇ ನೋಡತಿ. ಈ ಗಂಡಾ ಅನಿಸಿಕೊಂಡಾಂವ ನನಗ ಏನ ಮಾಡ್ಯಾನು ? ಮೂರ ಮಕ್ಕಳಾ ಕೊಟ್ಟಾನು ಅಷ್ಟs. ಅವೂ ನನ್ನ ಕೊಳ್ಳಿಗೇ. ಹಸದರ, ಜಡ್ಡಾದರ ಯಾರೂ ದರಕಾರಾ ಮಾಡಾಂಗಿಲ್ಲಾ. ದಿನಾs ಅತ್ತಿ ಕಡೇಂದ ಅನಿಸಿಕೊಂಡು ನನಗೂ ಸಾಕಾಗಿ ಹೋಗೇದ. ನನಗೂ ಕೈಯಾಗ ರೊಕ್ಕ ಬೇಕು, ನನ್ನ ಮನೀ ನನ್ನ ಹೊಲಾ, ನನ್ನ ಗಂಡಾ ನಾನು ದುಡೀತೀವಿ ಅಂತ ಬೆಳಿ ಬರತೈತಿ. ಅದನ್ನ ನಾನು ಮಾರಿದರ ಕಳವು ಹ್ಯಾಂಗ ಆಗ್ತದ ಚಿಗವ್ವಾs ? ಇನ್ನ

ಮ್ಯಾಲೆ ಶೇಂಗಾ, ಜ್ವಾಳ, ಕಾಳು ಏನ ಸಿಕ್ಕದ್ದು ಮಾರಿ ಕೈಯಾಗ ರೊಕ್ಕಾ ಮಾಡಿಕೊಂತೀನಿ.''

ಸಂಗವ್ವ ಮೂಕಳಾಗಿ ಕೇಳುತ್ತಿದ್ದಳು. ಇಂಥಾ ಹುಡುಗೀಗೆ ಬುದ್ಧಿ ಇಲ್ಲಾ, ಯವಾರಾ ಗೊತ್ತಿಲ್ಲಾ ಅಂತಾಳಲ್ಲ ಗೌರವ್ವ !- ಎಂದು ಯೋಚಿಸುತ್ತಿದ್ದಳು. ಸಂಗವ್ವನ ಮೌನ ತಾಳಲಾರದೆ ಮಲ್ಲವ್ವ ಆರ್ತಳಾಗಿ ಬೇಡಿದಳು.

"ಚಿಗವ್ವಾs ನನ್ನ ಹತ್ತರ ರೊಕ್ಕಾ ಇಟಕೊಳ್ಳಾಕ ಹೆದರಿಕಿ ಬರತೈತಿ. ಯಾರರೆ ನೋಡಿಗೀಡ್ಯಾರು ಅಂತ. ನನಗ ಕ್ವಾಣಿ ಇಲ್ಲಾ, ಟ್ರಂಕ ಇಲ್ಲಾ. ಅದಕ್ಕs ಇಲ್ಲೀಗ ಬಂದೆ. ರೊಕ್ಕಾ ತಂದು ನಿನ್ನ ಹತ್ತರ ಇಡತೀನಿ. ಇಟಕೋತೀಯಾ ಚಿಗವ್ವಾ ?"

''ಆ ರೊಕ್ಕಾ ನೀ ಖರ್ಚು ಮಾಡೋದು ನೋಡಿದರ ಎಲ್ಲಿಂದ ಬಂದೂವಂತ ಕೇಳತಾರ, ಆಗ ಏನಹೇಳತಿ ?''

"ನಾ ಇಲ್ಲೆ ಖರ್ಚು ಮಾಡೂದಿಲ್ಲ ಚಿಗವ್ವಾ, ಬಾಳಣ್ಣನ ಮುಂದ ಅಣ್ಣಾಗ ಹೇಳಿ ಕಳಸ್ತೇನಿ 'ಜಾತ್ರೀಗೆ ಕರಾಕ ಬಾ' ಅಂತ. ರೊಕ್ಕಾ ನಾನs ಖರ್ಚು ಮಾಡಿ ಅಲ್ಲೀಗ ಹೋಗಿ 'ಅಣ್ಣ ಕೊಡಿಸ್ಯಾನ' ಅಂತ ಹೇಳಿ ಟೋಪ ಸೆರಗಿನ ಸೀರಿ, ಕೂಸಿಗೆ ಕಾಲ್ಗಡಗ, ಹುಡುಗೂರಿಗೆ ಅಂಗಿಚೊಣ್ಣಾ ತರತೇನಿ. ಏನ ಮಾಡ್ಲಿ, ನಾನೂ ಬದುಕಬೇಕಲ್ಲ ? ಅದನ್ನ ನೋಡಿದರ ನಮ್ಮ ಅತ್ತೀ ಬಾಯಿ ಸ್ವಲ್ಪ ಸುಮ್ಮನ ಆಗ್ತದೇನೋ ನೋಡ್ತೀನಿ. ಖರೇ ರೀತಿಂದ ಬಾಳೇ ಮಾಡಿದರ ಕಿಮ್ಮತ್ತಿಲ್ಲಾ ಚಿಗವ್ವಾs. ಮನೀಯುವರs ಕೂತು ನನಗ ಕಳವುನೂ ಕಲಸ್ತಾರ ಸುಳ್ಳಿನ್ನೂ ಮಾಡ್ತಾರ....'' ಮೊಣಕಾಲು ಸಂದಿಯಲ್ಲಿ ತಲೆ ಹುದುಗಿಸಿ ಬಿಕ್ಕಿಬಿಕ್ಕಿ ಅತ್ತಳು ಮಲ್ಲವ್ವ.

ಸಂಗವ್ವ ಕರಗಿ ನೀರಾದಳು. ಏನಾದರೂ ಮಾಡಿ ಮಲ್ಲವ್ವನಿಗೆ ಸಹಾಯ ಮಾಡಬೇಕೆಂದು ಮನಸ್ಸುಮಾಡಿ ಅವಳು ಕೊಟ್ಟ ರೊಕ್ಕ ತೆಗೆದೊಯ್ದು ಅಡಿಗೆಮನೆಯ ಗೂಡಿನಲ್ಲಿದ್ದ ಒಳಕಪಾಟಿನಲ್ಲಿ ಇಟ್ಟು ಬರವಾಗ ಅದೇ ಹಿಂಡಿದ ಹಾಲು ತಂದು ಕುಡಿಯಲು ಕೊಟ್ಟಳು ಮಲ್ಲವ್ವನಿಗೆ.

ಮುಂದೆ ಮಲ್ಲವ್ವ ಆಗಾಗ ತಂಬಿಗೆ ಹಿಡಿದುಕೊಂಡು ಸಂಜೆ ಕತ್ತಲಾದ ಮೇಲೆ, ಎಲ್ಲರ ಕಣ್ಣುತಪ್ಪಿಸಿ ಸಂಗವ್ವನ ಮನೆಗೆ ಬಂದು ಬಂದು ಹೋದಳು.

*　　　*　　　*

ಸಂಗವ್ವನಿಗೆ ಅರ್ಧ ಎಚ್ಚರ, ಅರ್ಧ ನಿದ್ದೆ. ಯಾರೋ ತನ್ನ ತಲೆಯೆತ್ತಿ, ಬಾಯಿ ಬಿಡಿಸಿ ಔಷಧಿ ಸುರಿದಾಗ ಅದು ಪೂರ್ತಿ ಹೊಟ್ಟೆಗೆ ಇಳಿಯದೆ ಕಟಬಾಯಿಗುಂಟ ಇಳಿಯಿತು. ಒರಟು ಕೈಯೊಂದು ಬಾಯನ್ನು ಒರಸಿದಾಗ ಅವಳು ಸ್ವಲ್ಪ ಕಣ್ಣು ತೆರೆದಳು. ಬಾಳಣ್ಣ ಹತ್ತಿರ ಕುಳಿತಿದ್ದ. ಅವನೇ ಔಷಧಿ ಹಾಕುತ್ತಿದ್ದವನು. ಅವ್ವ ಮಿಸುಕಾಡಿದ್ದು ನೋಡಿ ಅವನ ಮನಸ್ಸಿನ ಕಾತರ ಕಡಿಮೆಯಾಯಿತು. ಅವಳ ಮುಖದ ಹತ್ತಿರ ಬಗ್ಗಿ ಜೋರಾಗಿ ''ಅವ್ವಾs'' ಅಂದ. ಸಂಗವ್ವ ಪೂರ್ಣ ಕಣ್ಣು ತೆರೆದಳು. ಮಗನನ್ನು ಕಣ್ಣು ತುಂಬ ನೋಡಿದಳು.

"ಆರಾಮ ಅದೀಯೇನವ್ವಾs"

ಉತ್ತರ ಹೇಳಬೇಕೆಂದರೆ ಬಾಯೇ ಬರಲೊಲ್ಲದು. ಅವಳ ಬಾಯಿ, ನಾಲಿಗೆ, ಗಂಟಲು ಎಲ್ಲ ಒಣಗಿಹೋಗಿದೆ. ಹೊಟ್ಟೆಯಲ್ಲಿ ಕೆಟ್ಟ ಸಂಕಟವಾಗುತ್ತಿದೆ. ಬಹುಶಃ ಇದೇ ಮರಣಸಂಕಟವೆಂದುಕೊಂಡಳೋ ಏನೋ ಸಂಗವ್ವ. ಕಣ್ಣ ಕೊನೆಯಿಂದ ನೀರು ಹರಿಯಿತು.

"ಯಾಕವ್ವಾ ಅಳತೀದಿ, ತ್ರಾಸ ಭಾಳ ಆಗ್ತದೇನು ? ಎರಡ ದಿನಾ ನ್ಯೆಮಾಲಿ ಅರುವು ಇದ್ದಿದ್ದಿಲ್ಲಾ. ಜ್ವರ ಭಾಳ ಇದ್ವು. ಡಾಗ್ದರನ್ನ ಕರಕೊಂಡು ಬಂದೆ. ಅವರು ಕಟ್ಟಿನ ಜ್ವರಾ ಅಂತ ಹೇಳಿದ್ರು. ಔಷಧಾ ಕೊಟ್ಟಾರ, ಇಂಜೆಶನ್ ಚುಚ್ಚ್ಯಾರ, ಹಾಲು, ಗಂಜಿ, ಮೋಸಂಬಿ ರಸಾ ಕೊಡರೀ ಅಂತ ಹೇಳ್ಯಾರವ್ವಾ."

ಸಂಗವ್ವನಿಗೆ ಮಾತನಾಡಲು ಬರದಿದ್ದರೂ ಮಗ ಹೇಳಿದುದೆಲ್ಲ ಕೇಳಿಸಿತ್ತು. ಕಟ್ಟಿನ ಜ್ವರಾ ಬಂದಾವರು ನಮ್ಮೂರಾಗ ಯಾರೂ ಉಳದಿಲ್ಲ. ಶಾನಬೋಗರ ಮಗಳು ಮದುವೀಗೆ ಬಂದಾಕಿ ಸತ್ಳು. ಪೀರಾಸಾಬನ ಅಣ್ಣ ಸತ್ತಾ, ಮತ್ತ ಯಾರ್ಯಾರೋ ಸತ್ತರು. ಇಂಥ ಜ್ವರ ಬಂದು ಸತ್ತವರೆಲ್ಲರನ್ನೂ ನೆನಪು ಮಾಡಿಕೊಂಡಳು. ತಾನೂ ಸಾಯುವವಳೇ, ಎಂದು ದೃಢನಿಶ್ಚಯ ಮಾಡಿಕೊಂಡಳು. ಸಂಗವ್ವ ಸಾವಿಗೇನು ಹೆದರುತ್ತಿರಲಿಲ್ಲ. ಹಿರಾ ಸತ್ತ ಮೇಲೆ ಒಬ್ಬಂಟಿಗಳಾಗಿ ಮಗನಿಗಾಗಿ ಬದುಕಿದ್ದಳು. ಅವನಿಗೆ ಮದುವೆ ಮಾಡಿ ಮೊಮ್ಮಕ್ಕಳನ್ನು ಆಡಿಸುತ್ತ ಕೂಡ್ರಬೇಕೆಂದರೆ ಅವನು ಇವಳು ಎಮ್ಮೆ ಕಟ್ಟಿ ಹಿಂಡಿ ಕೊಟ್ಟ ನೊರೆಹಾಲು ಕುಡಿದು, ಪೈಲವಾನನಾಗಿ, ಕುಸ್ತಿ ಆಡುತ್ತ ಓಡಾಡುತ್ತಿದ್ದ. ಇವತ್ತಿಲ್ಲಾ ನಾಳೆ, ಮಗಾ

ಕುಸ್ತಿಯ ಹುಚ್ಚು ಬಿಟ್ಟು ಹೆಣ್ಣಿನ ಹಿಂದೆ ಬಿದ್ದಾನು ಎನ್ನುವ ಆಸೆಯಿಂದ ಎಮ್ಮೆಗಳೊಂದಿಗೆ ಗುದ್ದಾಡುತ್ತ, ಒದ್ದಾಡುತ್ತ ಜೀವನ ನಡೆಸಿದ್ದಳು, ಸಂಗವ್ವ. ಅವನ ಮದುವೆ ನೋಡುವುದೊಂದೇ ತನ್ನ ಆಸೆಯಿತ್ತು ಅದೂ ದೇವರ ಮನಸ್ಸಿಗೆ ಬರಲಿಲ್ಲ. ಮತ್ತೆ ಕಣ್ಣು ತುಂಬಿ ಹರಿಯಿತು.

"ಅಳಬ್ಯಾಡವ್ವಾ, ನಿನಗ ಆರಾಮು ಆಗ್ತದ. ಹಾಸಗಿ ಬಿಟ್ಟು ಎಬ್ಬಿಸ ಬ್ಯಾಡಿರಿ ಅಳಗಾಡಸಬ್ಯಾಡರಿ ಅಂತ ಹೇಳ್ಯಾರ ಡಾಕ್ಟರು. ಕಾಳಜಿ ಮಾಡಬ್ಯಾಡರಿ ಅಂದಾರ, ನಾ ಆದೀನಲ್ಲಾ, ನೀ ಯಾಕ ಹೆದರತೀ.''

ತಾನು ಮಲಗಿದಲ್ಲಿಯೇ ಮಲಗಿದರೆ ತಾನು ಮಾಡಿದ ಹೊಲಸು ತೆಗೆಯುವವರಾರು ? ತನ್ನ ಆರೈಕೆ ಮಾಡುವವರಾರು ? ಚಿಂತೆಯಿಂದ ಮತ್ತೆ ಕೊರಗಿದಳು ಸಂಗವ್ವ. ಹರೆಯದ ಮಗನಿಂದ ಎಷ್ಟೊಂದು ಉಪ ಚಾರ ಮಾಡಿಸಿಕೊಳ್ಳುವುದು ? ಸೊಸೆಯಾದರೂ ಇದ್ದಿದ್ದರೆ–

ಕಷ್ಟಪಟ್ಟು "ಸಂಕಟ ಆಗ್ತದ'' ಎಂದಳು. ಕೂಡಲೆ ಅಡಿಗೆಮನೆಗೆ ಹೋಗಿ ಸಾಬೂಅಕ್ಕಿ ಗಂಜಿ, ಹಾಲು ಕೂಡಿಸಿ ತಂದ ಬಾಳಣ್ಣ ಅವಳನ್ನು ಎತ್ತಿಹಿಡಿದು ಕುಡಿಸಿದ.

" ಗಂಜೀ ನೀನs ಮಾಡಿದ್ಯಾs ? '' ಸಂಗವ್ವನ ಕ್ಷೀಣದನಿಯಲ್ಲಿ ದುಃಖ, ಅಚ್ಚರಿ ಎರಡೂ ಇದ್ದವು.

"ಇಲ್ಲವಾ, ಕಾಶವ್ವನ ಮಗಳು ಪಾರ್ವತಿ ಬಂದು ಮಾಡಿದ್ಲು. ಎಮ್ಮಿ ಹಿಂಡೂದೂ, ನಿನ್ನ ಮೈ ಒರಸೂದು, ಸೀರಿ ಬಿಡಸೂದು, ಗಂಜೀ ಕಾಸೂದು ಎಲ್ಲಾ ಆಕೀನs ಮಾಡ್ಯಾಳ ಈಗs ನೀ ಮಕ್ಕೊಂಡಾಗಿಂದ.'' ಪಾರ್ವತಿಯ ಹೆಸರು ಕೇಳಿದ ಸಂಗವ್ವನ ಮುಖದ ಮೇಲೆ ಸಮಾಧಾನದ ಸುಳಿವು ಹಾಯ್ದು ಹೋಯಿತು. ತಾನು ಸೊಸೆಯನ್ನಾಗಿ ಮಾಡಿಕೊಳ್ಳಬೇಕೆನ್ನುವ ಹುಡುಗಿಯರಲ್ಲಿ ಅವಳೂ ಒಬ್ಬಳು.

ಸಮಾಧಾನದಿಂದ ಕಣ್ಣು ಮುಚ್ಚುತ್ತಿದ್ದ ಸಂಗವ್ವನನ್ನು ಬಾಳಣ್ಣ ಮತ್ತೆ ಎಚ್ಚರಿಸಿದ. " ಅವ್ವಾs ನಿನಗ ಮೈಮ್ಯಾಗ ಎಚ್ಚರ ಇಲ್ಲದಾಗ ಮಲ್ಲವ್ವ ಬಂದಿದ್ಲು. ನೀ ಮಲಗಿದ್ದು ನೋಡಿ ಕಣ್ಣಾಗ ನೀರು ತಗದ್ಲು. ಹೋಗೂ ಮುಂದ ಏನೋ ಅಂದ್ಲು. ಹೊಂಗಲ ಜಾತ್ರಿ ಬಂತು. ಅಣ್ಣಗ ಹೇಳಿ ಕಳಸೇನಿ. ರೂಪಾಯಿ ಬೇಕಾಗಿದ್ವು ಅಂದ್ಲು. ಆಕೀಗೆ ರೂಪಾಯಿ ಕಡಾ ಕೊಡತೀನಿ ಅಂದಿದ್ದಿ ಏನಬೇ. "

ಸಂಗವ್ವ ಏಳೆಂಟು ತಿಂಗಳಿಂದ ಮಲ್ಲವ್ವ ತನ್ನ ಹತ್ತಿರ ರೂಪಾಯಿ ಕೂಡಿಟ್ಟ ವಿಷಯ ಗುಟ್ಟಾಗಿ ಮಗನಿಗೂ ಹೇಳಿದಳು. ಜಾತ್ರೆಗೆ ಇನ್ನು ನಾಲ್ಕೇ ದಿನ ಉಳಿದಿವೆ ಎನ್ನುವುದನ್ನು ಕೇಳಿ ಮಗನಿಂದ ಅಡಿಗೆಮನೆಯಲ್ಲಿಯ ಮಾಡಿನಲ್ಲಿಯ ಕಪಾಟಿನಲ್ಲಿಟ್ಟ ರೂಪಾಯಿಗಳನ್ನು ತಂದು ಎಣಿಸಲು ಹೇಳಿದಳು. ಎಣಿಸಿ ನೋಡಿದ ಬಾಳಣ್ಣ ಹೇಳಿದ, 'ನೂರಕ್ಕೆ ಎಂಟು ರೂಪಾಯಿ ಕಡಿಮೆ ಇವೆ' ಎಂದು. ಅವುಗಳನ್ನು ಮುಟ್ಟಿ ನೋಡಿ, ಮಗನ ಕೈಯಲ್ಲಿ ಕೊಟ್ಟು 'ನಾಳೆ ಸಂಜೆ ಮಲ್ಲವ್ವ ಹೊಲದಿಂದ ಬರುವಾಗ ಯಾರಿಗೂ ತಿಳಿಯದಂತೆ, ಯಾರೂ ನೋಡದಂತೆ, ಅವಳ ಕೈಯಲ್ಲಿ ಕೊಟ್ಟು, ಎಣಿಸಿಕೊಳ್ಳಲು ಹೇಳಿ, ಅವ್ವ ಕೊಟ್ಟು ಕಳಿಸಿದ್ದಾಳೆ ಎಂದು ಹೇಳಿ ಬಾ' ಎಂದಳು.

ಮರುದಿನ ಸಂಜೆ ಮಲ್ಲವ್ವ ತಲೆಯ ಮೇಲೊಂದು ಹೊರೆಯನ್ನಿಟ್ಟು ಕೊಂಡು, ಹಿರಿಯ ಮಗನನ್ನು ಮುಂದೆ ಮಾಡಿಕೊಂಡು, ಮನೆಗೆ ಬರುತ್ತ ರೂಪಾಯಿ ಇಲ್ಲದೆ ತವರಿನ ಜಾತ್ರೆಗೆ ಹೋಗುವುದು ಹೇಗೆಂದು ವಿಚಾರದಲ್ಲಿ ಮುಳುಗಿದ್ದಳು. ಎಲ್ಲರ ಹತ್ತಿರ 'ತವರಿಗೆ ಹೋಗುತ್ತೇನೆ. ಅಣ್ಣ ಕರೆಯಲು ಬರುತ್ತಾನೆ' ಎಂದು ಹೇಳಿಯೂ ಆಗಿತ್ತು. ಅಣ್ಣಾ ಮರುದಿನ ಬರುತ್ತೇನೆಂದು ಹೇಳಿಯೂ ಕಳಿಸಿದ್ದ. ಈಸಲ ತಾನು ಹೋಗದಿದ್ದರೆ ಅತ್ತೆ–ನೆಗೆಣ್ಣಿಯರ ಮುಂದೆ ತನ್ನ ಪಾಡು ನಾಯಿಗಿಂತ ಕಡೆಯಾಗುತ್ತದೆ. ಇದೇ ಹೊತ್ತಿನಲ್ಲಿ ಸಂಗವ್ವ ಮಲಗಬೇಕೆ ? ಅವಳು ಆರಾಮ ಆಗುವುದು ಯಾವಾಗ? ತನ್ನರೂಪಾಯಿ ಸಿಗುವುದು ಯಾವಾಗ? ಕೆನ್ನೆಯ ಮೇಲೆ ಹರಿಯುತ್ತಿದ್ದ ಕಣ್ಣೀರನ್ನು ಒರೆಸಿಕೊಳ್ಳಲು ಅವಳ ಕೈ ಖಾಲಿಯಿರಲಿಲ್ಲ. ಸಂಜೆಯವರೆಗೆ ಮೈ ಕೈ ನೊಯುತ್ತಿದ್ದರೂ ಹೊಲದಲ್ಲಿ ಕೆಲಸ ಮಾಡಿದ್ದಳು. ತಲೆಯ ಮೇಲೆ ಭಾರವಾದ ಹೊರೆ ಹೊತ್ತಿದ್ದರಿಂದ ಕುತ್ತಿಗೆ ನೋಯುತ್ತಿತ್ತು. ಹೆಜ್ಜೆಗಳು ನಡುಗುತ್ತಿದ್ದವು. ನಡಿಗೆ ನಿಧಾನವಾಗಿತ್ತು. ಜೊತೆಯವರೆಲ್ಲ ಆಗಲೇ ಮುಂದೆ ಹೋಗಿದ್ದರು. ತಾನು ಇನ್ನು ಮನೆಗೆ ಹೋಗಿ ರೊಟ್ಟಿ ಬಡಿಯಬೇಕು. ಎಲ್ಲರ ಊಟವಾದ ಮೇಲೆ ತನ್ನ ಊಟ, ನಿದ್ದೆ. ಅಲ್ಲಿಯವರೆಗೆ ಹೊಟ್ಟೆಯಲ್ಲಿ ಡೊಂಬರಾಟ, ಮನಸ್ಸಿನ ಸಂಕಟ, ಹೊಟ್ಟೆಯ ಸಂಕಟ, ಎರಡೂ ತಾಳದೆ ಅಳುತ್ತಿದ್ದಳು. ಇದಾವುದನ್ನೂ ತಿಳಿಯದ ಕಂದ ಮುಂದೆ ಮುಂದೆ ಓಡಿಹೋಗಿ 'ಲಗೂ ಲಗೂ ಬಾ' ಎಂದು ಕರೆಯುತ್ತಿದ್ದ.

" ಮಲ್ಲಕ್ಕಾ " ಬಾಳಣ್ಣ ತೀರ ಹತ್ತಿರ ಬಂದು ಕರೆದಾಗಲೇ ಮಲ್ಲವ್ವನಿಗೆ ಎಚ್ಚರ. " ಯಕ್ಕಾ, ತುಸಾ ಕೆಲಸದ, ಇತ್ಲಾಗ ನಿಲುವಿನ ಮರೀಗೆ ಬಾ ".

ಮಲ್ಲವ್ವ ಮಗನಿಗೆ ಅಲ್ಲಿಯೇ ನಿಲ್ಲಲ್ಲು ಹೇಳಿ ತಾನು ಬಾಳಣ್ಣನ ಹಿಂದೆ ಜೋಳದ ನಿಲುವಿನಲ್ಲಿ ಹೊಕ್ಕಳು. ಅವಳಿಗೆ ಮೈಮೇಲೆ ಪೂರ್ಣ ಎಚ್ಚರವಿರಲಿಲ್ಲವೆಂದರೂ ಅಡ್ಡಿಯಿಲ್ಲ.

ಹೊಲದ ಕಡೆಯಿಂದ ಮಲ್ಲವ್ವನ ಗಂಡ ಎತ್ತು ಬಿಟ್ಟುಕೊಂಡು ಹೆಗಲಿಗೆ ಬಾರಕೋಲು, ಇನ್ನೊಂದು ಕೈಯಲ್ಲಿ ಕುಡಗೋಲು ಹಿಡಿದುಕೊಂಡು ಬಂದ, ದಾರಿಯಲ್ಲಿ ನಿಂತ ಮಗನನ್ನು ನೋಡಿ "ಇಲ್ಯಾಕೆ ನಿಂತಿದಿ?" ಅಂದ. ಅವ್ವ, "ಬಾಳೂಮಾಮಾ ಒಳಗದಾರೆ". ಎಂದು ನಿಲುವಿನತ್ತ ಕೈ ತೋರಿಸಿದ ಮಲ್ಲವ್ವನ ಸುಪುತ್ರ.

ಸಿಟ್ಟಿನ ಅಮಲೇರಿದ ಮಲ್ಲವ್ವನ ಗಂಡ, ರೂಪಾಯಿ ಎಣಿಸಿ ಮುಗಿಸಿ ಚಾಳೆ ಪಟ್ಟಿಯಲ್ಲಿ ಸಿಗಿಸಿಕೊಳ್ಳುತ್ತಿದ್ಧ ಮಲ್ಲವ್ವನತ್ತ ಧಾವಿಸಿ " ಹಾದರಗಿತ್ತಿ ! ಎಂದಿಂದ ಕಲತೀ ಈ ಚಾಳಿ; " ಎಂದವನೇ ಕುಡುಗೋಲು ಬೀಸಿದ.

ಒಂದೇ ಹೊಡೆತ, ರುಂಡ ಮುಂಡದಿಂದ ಬೇರೆಯಾಗಿ, ವಿಲಿವಿಲಿ ಒದ್ದಾಡಿ ಬಿತ್ತು. ದಿಗ್ಭ್ರಮೆಗೊಂಡ ಬಾಳಣ್ಣ ಓಡುತ್ತಿದ್ದ. ಮಲ್ಲವ್ವನ ಜಾತ್ರೆ ಮುಗಿದಿತ್ತು.

ಪ್ರಮೇಯ

ಬಿಳಿಯ ಜೋಡು ಕುದುರೆಗಳನ್ನು ಹೂಡಿದ ಸುಂದರವಾದ ರಥದಲ್ಲಿ ಕುಳಿತು ತಾನು ರಾಜಕುಮಾರನೊಡನೆ ಎಲ್ಲಿಗೋ ಹೋಗುತ್ತಿದ್ದಾಳೆ. ಹೊಳೆಯುವ ಪೀತಾಂಬರ, ರತ್ನದ ಆಭರಣ, ವಜ್ರ ಕಿರೀಟ, ಬಂಗಾರದ ಡಾಬಿನಿಂದ ತಾನು ಅಪ್ಸರೆಯಂತೆ ಅಲಂಕಾರ ಮಾಡಿಕೊಂಡಿದ್ದಾಳೆ. ಬದಿಯಲ್ಲಿ ಕುಳಿತ ರಾಜಕುಮಾರನಂತೂ ಆ ಸ್ವರ್ಗದ ಇಂದ್ರನೇ ಇಲ್ಲಿಗೆ ಇಳಿದು ಬಂದಹಾಗೆ ಇದ್ದಾನೆ. ಒಂದು ಕೈಯಿಂದ ತನ್ನನ್ನು ಬಳಸಿ ಹಿಡಿದು, ಇನ್ನೊಂದರಿಂದ ಲಗಾಮು ಹಿಡಿದೆಳೆದು ಕುದುರೆಗಳನ್ನು ಜೋರಾಗಿ ಓಡಿಸುತ್ತಿದ್ದಾನೆ. ರಥದಲ್ಲಿ ತಾವಿಬ್ಬರೇ. ರಾಜಕುಮಾರನ ನಗು, ಕೇಕೆಗಳಿಗೇ ಕುದುರೆಗಳು ರಭಸದಿಂದ ಓಡುತ್ತಿವೆ.ಅವು ದಾರಿಯಲ್ಲಲ್ಲದೆ ಗುಡ್ಡ, ಬೆಟ್ಟ, ಹಳ್ಳ ಕೊಳ್ಳ ಎಲ್ಲ ಕಡೆಗೂ ಓಡುತ್ತಿವೆ. ಕ್ಷಣಕ್ಷಣಕ್ಕೂ ಅವುಗಳ ವೇಗ ಹೆಚ್ಚುತ್ತಿದೆ. ಆನಂದದ ಭರದಲ್ಲಿ ತನ್ನ ಎದೆ ನಗಾರಿಯಂತೆ ಜೋರಾಗಿ ಹೊಡೆದುಕೊಳ್ಳುತ್ತಿದೆ. ಬಿಗಿಯಾಗಿ ರಾಜಕುಮಾರನನ್ನು ಅಪ್ಪಿಕೊಂಡಿದ್ದಾಳೆ. ಇದ್ದಕ್ಕಿದ್ದಂತೆ ಮಹಾಪೂರದಿಂದ ಉಕ್ಕಿ ಹರಿಯುತ್ತಿದ್ದ ನದಿ ದಾರಿಗೆ ಅಡ್ಡವಾಯಿತು. ಅದಕ್ಕೆ ಸೇತುವೆಯೇ ಇಲ್ಲ. ಇದ್ದರೂ ಕಾಣುವಂತಿಲ್ಲ. ರಾಜಕುಮಾರ ತಡಮಾಡದೆ ನದಿಯಲ್ಲಿ ರಥವನ್ನು ಧುಮುಕಿಸಿಬಿಟ್ಟ. ಇನ್ನೊಂದು ಕ್ಷಣದಲ್ಲಿ ರಥ, ಕುದುರೆ, ರಾಜಕುಮಾರ ತನ್ನಿಂದ ಬೇರೆಯಾದರು. ತಾನು ಮಾತ್ರ ತುಂಬಿದ ಪ್ರವಾಹದಲ್ಲಿ ಬಿದ್ದು ಬಿದ್ದು ಏಳುತ್ತ, ನೀರು ಕುಡಿಯುತ್ತ, ಮುಳುಗಿ ಸಾಯುತ್ತೇನೆನ್ನುವ ಸಂಕಟದಿಂದ ಕೈಚಾಚಿ ಕೂಗುತ್ತಿದ್ದಾಳೆ. ಸುತ್ತಮುತ್ತ ಯಾರೂ ಕಾಣುತ್ತಿರಲಿಲ್ಲ. ನಿರ್ಜನ ಪ್ರದೇಶ, ಘೋರ್ಗರೆಯುವ ಪ್ರವಾಹ, ಜೋರಾಗಿ ಕೂಗಿದರೆ ಯಾರಿಗಾದರೂ ಕೇಳಿಸೀತೆಂದು ಹೊಟ್ಟೆಯೊಳಗೆ ಕರುಳು ಕಿತ್ತುಬರುವಂತೆ ವಿಕಾರವಾಗಿ ಕೂಗಿದಳು....

ನಾಗೂs ಏs ನಾಗವ್ವಾs ಎಳು ಹಿಂಗ್ಯಾಕೆ ಒವರಾಕ ಹತ್ತೀದಿ ?" ಪಾರವ್ವ ಅವಳನ್ನು ಅಲುಗಿಸಿ ಎಬ್ಬಿಸಿದಾಗಲೇ ತಟ್ಟನೆ ಎದ್ದು ಕುಳಿತಳು. ನಾಗೂ ಹರಕು ತಟ್ಟಿನ ಮೇಲೆ.

"ಹುಶ್ಯಪ್ಪಾ, ಮೈ ಇನ್ನೂ ನಡಗಾಕ ಹತ್ತೈತಿ ನೋಡ ಯಕ್ಕಾs"- ಬೆವತ್ತಿದ್ದ ಮೈಯನ್ನು ಹರಿದ ಸೀರೆಯ ಸೆರಗಿನಿಂದ ಒರೆಸಿಕೊಳ್ಳುತ್ತ ನಾಗವ್ವ ಅಕ್ಕನತ್ತ ನೋಡಿದಾಗ ಅವಳಾಗಲೇ ಅಂಗಳದಿಂದ ಕೂಗಿದಳು.

"ಕೆಟ್ಟ ಕನಸ ಕಂಡಿದ್ದೀ ಏಳ. ತಾಸ ಹೊತ್ತ ಏರೂತನಾ ಮಕ್ಕೊಂಡರ ಹಾಂಗs ಆಕ್ಕೈತಿ. ಗಡಾನ ಎದ್ದ ಮಾರೀ ತೊಳಕೊಂಡು ಚಾ ಕುಡೀ. ರೊಟ್ಟೀ ಬಡದು ಅಂವಗ ರೊಟ್ಟೀ ಕಟ್ಟಿಕೊಡು. ಆಮ್ಯಾಲೇ ನೀನೂ ಬಾ. ನಾನು ಆವ್ವಾರ ಮನೀ ಕೆಲಸಕ್ಕೆ ಹೊಂಟೆ. ತಡಾ ಮಾಡಿದರ ಸಿಟ್ಟಾಗತಾರು" ಮರಿಯನನ್ನು ಬಗಲಲ್ಲಿ ಎತ್ತಿಕೊಂಡು ಹೊರಟ ಪಾರವ್ವ ತಿರುಗಿ ನಿಂತು ಮತ್ತೆ ಕೂಗಿದಳು. "ಆ ಸಿದ್ದ್ಯಾ ಮಲಗ್ಯಾನ ನೋಡು. ಅವನ್ನ ಎಬ್ಬಿಸಿ, ಚಾ ಕುಡಿಸಿ, ಸಾಲಿಗೆ ಹೋಗನ್ನು. ಬಿಟ್ಟರ ಹಾಂಗs ಬಿದ್ದಕೋತಾನ."

ಬಿಚ್ಚಿದ ಕೂದಲನ್ನು ಬಿಗಿದು ಕಟ್ಟಿದ ನಾಗು ಎದ್ದು ಮುಖ ತೊಳೆದು ಬಂದು ಸಿದ್ದನನ್ನು ಎಬ್ಬಿಸಿದಳು. ಅಂ ಹೂಂ ಎನ್ನುತ್ತ ಮತ್ತೆ ಕೌದಿಯ ಮುಸುಕು ಎಳೆದವನನ್ನು ಅಲ್ಲಿಗೇ ಬಿಟ್ಟುಬಂದು ಚಾ ಕುಡಿದು, ರೊಟ್ಟಿ ಮಾಡಲು ಕುಳಿತಳು. ನಾಗವ್ವನ ರೊಟ್ಟಿಯ ಸಪ್ಪಳ ಕೇಳಿದೊಡನೆಯೇ ಒಳಗೆ ಬಂದ ರಾಮಪ್ಪನಿಗೆ.

"ಮಾವಾs ಸಿದ್ದೂನ ಎಬ್ಬಿಸು. ಸಾಲೀಗೆ ಹೋಗಬೇಕ ಅಂವಿನ್ನೂ".

ಸಿದ್ದಾs, ಲೇ ಸಿದ್ದಾ, ಏಳಲೇ ಮಗನs. ಎಷ್ಟ ಸಾರೆ ಎಬ್ಬಿಸಬೇಕು ನಿನ್ನ? ನಿಮ್ಮವ್ವ ಸಾಲೀಗೆ ಕಳಿಸಿ ಸಾಹೇಬನ್ನ ಮಾಡಬೇಕಂತ ಬಡಕೊಂತಾಳ. ನೀನು ಸಾಲೀ ಬಿಡೂ ಹೊತ್ತ ಆದರೂ ಕೌದೀ ಮುಸುಕು ಹಾಕ್ಕೊಂಡ ಗೊರಕಿ ಹೊಡಿತೀ. ರಾಜಕುಮಾರ ಆಗ್ಯಾನ ಮಗಾ''. ಮಾವನ ಕೊನೆಯ ಮಾತು. ಕೇಳಿದ ನಾಗೂ ಕಿಸಕ್ಕನೆ ನಕ್ಕಳು.

ತನ್ನ ಕನಸಿನ ಮೊದಲ ಭಾಗ ನೆನಪಾದಾಗ ನಾಗೂ ಸಂತೋಷಪಟ್ಟು ರೊಟ್ಟಿ ಹಿಟ್ಟು ನಾದಿ, ಬಡಿದು, ಹೆಂಚಿನಲ್ಲಿ ಹಾಕಿದಳು. ನದಿ

ಯಲ್ಲಿ ತಾನು ಮುಳುಗಿ ಸಾಯುತ್ತಿದ್ದದು ನೆನಪಿಗೆ ಬಂದೊಡನೆ ಹೆಂಚಿನ ಮೇಲೆ ಬೇಯುತ್ತಿದ್ದ ರೊಟ್ಟಿಯಂತೆಯೇ ಬೆಂದಳು. ಸುಟ್ಟು ಕರಕಾದಳು. ಮುದುಕಗಂಡನನ್ನು ಕಳೆದುಕೊಂಡೂ, ಮಕ್ಕಳೂಇಲ್ಲದೆ ದಿಕ್ಕಿಲ್ಲದವಳಾಗಿ ಅಕ್ಕನ ಮನೆಯ ಆಸರೆಗೆ ಬಂದ ತಾನೆಲ್ಲಿ, ತನ್ನ ಬಣ್ಣಬಣ್ಣದ ಕನಸೆಲ್ಲಿ. ಕನಸಿನಲ್ಲಿ ಸ್ವಲ್ಪ ಹೊತ್ತಾದರೂ ರಾಜಕುಮಾರಿಯಾಗಿದ್ದೆನಲ್ಲ. ಆದರೂ ಅದು ಎಷ್ಟಾದರೂ ಕನಸೇ. ಕಣ್ಣು ತುಂಬಿ ಬಂದಾಗ ಹಣೆಯ ಬೆವರಿನೊಡನೆ ಕೂಡಿ ಕೆನ್ನೆಯ ಮೇಲೆ ಹರಿದವು. ಬೆವರು ಒರೆಸುವ ನೆಪದಲ್ಲಿ ರೊಟ್ಟಿ ತಿನ್ನಲು ಕುಳಿತ ಮಾವನಿಗೆ ಕಾಣದಂತೆ ಕಣ್ಣೀರೂ ಒರೆಸಿಕೊಂಡಳು.

" ನಾಗೂ ಯಾಕ ? ಅಳಾಕ ಹತ್ತೀದಿ ? ''

" ಇಲ್ಲ್ರೀ ಮಾವಾ ನಾ ಎಲ್ಲಿ ಅತ್ತೀನಿ. ಬೆವರ ಒರೆಸಿಕೊಂಡೆ.'' ಇತ್ತಿತ್ತಲಾಗಿ ಮಾವನ ಕಣ್ಣು ಹಗಲೆಲ್ಲಾ ತನ್ನ ಮ್ಯಾಲೇ. ತಾನು ಕುಂತದ್ದು ನಿಂತದ್ದು ಎಲಾ ನೋಡತಿರತಾನ.

"ಮುಂಜಾನೆ ಯಾಕೋ ನೆಳ್ಳ್ಯಾಡಿದಾಂಗ ಒದರಾಗ ಹತ್ತಿದ್ದಿ, ಏನಾಗಿತ್ತು ?"

''ಕನಸ ಬಿದ್ದಿತ್ರೀ ಮಾವ. ''

'' ಯಾರರೆ ನಿನ್ನ ಹೊಡೀತಾರೇನೋ ಅನ್ನೂಹಾಂಗ ಒದರತಿದ್ದಿ. ಏನ ಕನಸ ಬಿದ್ದಿತ್ತು ನನ್ನ ಮುಂದರ ಹೇಳಲ್ಲ. ''

'ನನ್ನ ಮುಂದರ ಹೇಳಲ್ಲ ಅಂತಾನ ಮಾವ. ಹೇಳಬೇಕಂತ ಹೊಂಟರ ಅಕ್ಕ ಏನು ಅಂತ ಸುದ್ದಾ ಕೇಳಲಿಲ್ಲಾ. ಇಂವನ ಮುಂದ ಹೇಳ್ಲಾ ? ಆದ್ರ ಕೇಳಿ ನಕ್ಕಬಿಡತಾನೋ ಏನೋ.

''ಯಾಕ ಸುಮ್ಮಕ ಆದಿ ಹೇಳಲ್ಲ. ನಾನೂ ಅಟ ಕೇಳತೀನಿ. ನೀ ಯಾತಕ್ಕ ಹೆದರತೀ ಅನ್ನೂದು ಗೊತ್ತಾಗತೈತಿ.'

ಮಾವ ಅನ್ನೂದು ಖರೇ. ನಾ ಇನ್ನೂತನಾ ಯಾತಕ್ಕೂ ಹೆದರಿದಾಕಿ ಅಲ್ಲಾ. ಸಣ್ಣಾಗಿದ್ದಾಗಿಂದೂ ಯಾರಿಗೂ ಹೆದರತಿದ್ದಿಲ್ಲ. ಪರದೇಶಿ ಮಗಳ ಅಂತ ಅಪ್ಪ ಅಪ್ರೂಪ್ರ ಮಾಡಿ ಜ್ವಾಪಾನ ಮಾಡಿದಾ. ಅಪ್ಪ ಸತ್ರೂ ಅಕ್ಕನ ಅಪ್ಪನಕ್ಕಿಂತಾ ಹೆಚ್ಚಾಗಿದ್ಲು. ಅಕ್ಕ ಗಂಡನ ಮನೀಗೆ ಹೋಗೂದರಾಗ ತಾನs ದೊಡ್ಡಾಕಿ ಆಗಿದ್ಲು. ಮನೀ ಕೆಲಸಾ, ಹೊಲ

ಮನೀ ಹ್ವಾರೇ ಎಲ್ಲಾ ಮಾಡತಿದ್ಲು. ಹರೇಕ ಬಂದಾಗ ಗಂಡಸ್ರು ಹಂತ್ಯಾಕ ಬರಾಕ ಹೆದರತಿದ್ರು. ಹಿಂದಿನವನೀ ಎಲ್ಲಪ್ಪ ಮಾತಾಡಿಕೊಂತ ಹೆಗಲವ್ಯಾಲೆ ಕೈ ಇಟ್ಟಾಗ ಕೈಯಾಗಿನ ಕುಡಗೋಲು ತೊಗೊಂಡು ಏರಿ ಹೋಗಿದ್ಲು. ಮನೀಗೆ ಬಂದ ವ್ಯಾಲೆ ಅಪ್ಪ 'ಭಪ್ಪರೆ ಮಗಳs ನೀ ಗಂಡಸ ಮಗನ ನೋಡ ನನಗ' ಅಂದಿದ್ದಾ.

ಮಾವನ ಮಾತು ಮತ್ತೆ ವರ್ತಮಾನಕ್ಕೆ ಎಳೆಯಿತು ನಾಗವ್ವನನ್ನು.

"ಕನಸ ಹೇಳ ಅಂದರ ಏಟ ದಿವಾಕ ಬಡೀತಿ.''

ನಾಗವ್ವ ರೊಟ್ಟಿ ಬಡಿಯುತ್ತ ಹೇಳಿದ ಕನಸನ್ನು ಕೇಳಿ ರಾಮಪ್ಪ ದೊಡ್ಡ ದನಿಯಿಂದ ನಕ್ಕುಬಿಟ್ಟ.

''ಏs ನಾಗೂs ಮಂಗಳವಾರ ನಿಮ್ಮಕ್ಕನ ಕೂಡ ಸಿನೇಮಾ ನೋಡಾಕ ಹೋಗಿದ್ದೆಲ್ಲಾ ಅದs ಕನಸ ಬಿದ್ದೈತಿ ನೋಡ. ರಾಜ ಕುಮಾರನ ಕಥೀ ಹೌದಲ್ಲೊ, ನೀ ನೋಡಿದ್ದು ?''

ಹೌದೆಂದು ಗೋಣುಹಾಕಿದ ನಾಗವ್ವ ರೊಟ್ಟಿ ಗಂಟು ರಾಮಪ್ಪನ ಕೈಗಿಟ್ಟು ಸಿದ್ದನನ್ನು ಶಾಲೆಗೆ ಅಟ್ಟಿ ಮನೆಗೆ ಕೀಲಿ ಹಾಕಿ ಅವ್ವಾರ ಮನೆಯ ಕೆಲಸಕ್ಕೆ ಹೊರಟಳು.

ತಮ್ಮ ಊರ ಜಾತ್ರ್ಯಾಗ ತಂಬೂದಾಗ ತಟ್ಟಿನ ವ್ಯಾಲೆ ಕುಂತು ತಾನು ಮೊದಲನೇ ಸಾರೆ ಸಿನಿಮಾ ನೋಡಿದ್ಲು. ಮಾತಾಡಿಕೊಂತ ಹಾಡಿಕೊಂತ ಪಡದೇದ ವ್ಯಾಲೆ ಓಡ್ಯಾಡೂ ಜೀವಂತ ಗೊಂಬೀ ನೋಡಿ ಚೋಜಿಗಪಟ್ಟಿದ್ಲು. ಅಕ್ಕನ ಮನೀಗೆ ಇರಾಕ ಬಂದ ಎಷ್ಟೋ ದಿನದ ವ್ಯಾಲೆ ದೇವರ ಸಿನೇಮಾ ಬಂದsದ ಅದನ್ನ ನೋಡಿ ದುಕ್ಕಾ ಮರೀ ಅಂತ ಅಕ್ಕ ಕರಕೊಂಡು ಹೋದ್ಲು. ಸಿನೇಮಾ ತೋರಸೂ ಮನೀ ಭಾಳ ಛಂದಾಗಿತ್ತು. ಕುರ್ಚೆದ ವ್ಯಾಲೆ ಕುಂತಿದ್ವಿ. ದೇವರು ಪ್ರತ್ಯಕ್ಷ ಆದಾಗ ತಾ ಕೈ ಮುಗಿಯೂದ ನೋಡಿ, "ಸುಮಾಕ ಕುಂದ್ರು. ಹಂಗೆಲ್ಲಾ ಮಾಡಬ್ಯಾಡ. ಇಲ್ಲಿ ಮಂದಿ ನಗ್ತಾರು" ಅಂದ್ಲು ಅಕ್ಕ. ಮನೀಗೆ ಬರೂಮುಂದ ಹೇಳಿದ್ಲು ''ಒಳ್ಳ್ಯಾವರನ್ನ ದೇವರು ಕೈಬಿಡೂದಿಲ್ಲ. ನೋಡು ಸಿನೇಮಾದಾಗ ಹ್ಯಾಂಗಾತು ? ಆಕೀಗೆ ಎಷ್ಟ ಕಷ್ಟ ಆದ್ರೂ ಕಡೀಕ ಛಲೋ ಆತಿಲ್ಲೊ. ನೀ ಇನ್ನ ವ್ಯಾಲೇ ಅಳಬ್ಯಾಡಾ ಅಪ್ಪಸತ್ತರ ಏನಾತು ? ನಾ ಅದೀನಿ. ಇದs ನಿನ್ನ ಮನೀ ಅಂತ ತಿಳಕೋ. ಸಿದ್ದಾ,

ಮರಿಯಾ ನಿನ್ನ ಮಕ್ಕಳು ಅಂತ ತಿಳಿಕೋ. ರಟ್ಟ್ಯಾಗ ಕಸುವು ಇರೂ ತನ್ಕಾ ಎಲ್ಲಿದ್ರೂ ದುಡಿಯೂದ ಐತಿ. ಹ್ಯಾಂಗರೆ ಹೊಟ್ಟೀ ತುಂಬಿಸಿ ಕೊಳ್ಳೂಣು" ಅಂತ.

ಅಂದಿನಿಂದ ನಾ ಅಳೂದ ಬಿಟ್ಟಬಿಟ್ಟಿ. ಆ ಮುದುಕ ಗಂಡ ಸತ್ತದ್ದಕ್ಕ ನನಗ ಏನ ದುಕ್ಕ ಆಗಿದ್ದಿಲ್ಲಾ. ಮಂದಿ ಏನರೆ ಆಡಿಕೊಂಡಾರು ಅಂತ ಹೆದರಿ ಅಳತಿದ್ದೆ. ನನಗ ಗಂಡಾ, ಮಕ್ಕಳು ಯಾರೂ ಇಲ್ಲಾ ಒಂಟಿಬಡಕ ಆದೆ. ಪರದೇಶಿ ಆದೆ ಅಂತ ಅನಿಸಿದಾಗ ದುಕ್ಕಾ ಉಕ್ಕಿ ಬರತಿತ್ತು. ಆದರ ಆಸರಕ ದೇವರಂಥಾ ಅಕ್ಕ ಸಿಕ್ಕಮ್ಯಾಲೆ ಸುಮ್ಮ ಕಾದೆ. ಹಾಂಗ ಶಾಹರಕ ಹೊಂದಿಕೊಂಡೆ. ಮೊದಲ ನನಗ ಮನೀ ಕೆಲಸಾ ಮಾಡಾಕ ಬರತಿದ್ದಿಲ್ಲಾ. "ಅವ್ವಾರs ನಮ್ಮ ನಾಗೀ ಕೆಲಸಾ ಹ್ಯಾಂಗರೆ ಸಂಬಾಳಿಸಿಕೊಳ್ರಿ. ಆಕೀಗ ಇದನ್ನೆಲ್ಲಾ ಮಾಡಿ ಪೈವಾಟ ಇಲ್ಲಾ. ಬರಬರತ ತಾನ ಕಲೀತಾಳ" ಅಂತ ದೈನಾಸಬಿಟ್ಟು ಬೇಡಿ ಕೊಂತಿದ್ಲು. ಮನೀಗೆ ಬಂದ ಮ್ಯಾಲೆ ನನಗ ಹೇಳತಿದ್ಲು.

"ನಾಗೂs ಅವ್ವಾರ ಮನೀ ಕೆಲಸಾ ಹಸsನಾಗಿ ಮಾಡಿ, ಭಾಂಡಿ ಲಕಾ ಲಕಾ ಹೊಳಿಯುಃವಾಂಗ ತಿಕ್ಕು. ಅರಿಬೀ ಬೆಳ್ಳಗs ಒಗೀ. ಕಸಾ ಉಡಗೂ ಮುಂದ ಜ್ವಾಕಿ. ಹಾಂ ಮತ್ತ ಮನಾಂಗೆಲ್ಲಾ ಅಡ್ಡ್ಯಾಡ ತೀಯಲ್ಲಾ. ಸಾಮಾನು ಎಲ್ಲ ಕಡೆ ಇಟ್ಟಿರತಾರ. ಕೈ ಸುದ್ದಾಗಿ ಇಟಕೋ. ಆಸೇಕ ಬಿದ್ದು ಕಳವು ಮಾಡಬ್ಯಾಡಾ. ಅವ್ವಾರು ಭಾಳ ಭೋಲೋ ಮನಶ್ಯಾರು ಆದಾರ. ದಯಾ-ಮಾಯಾ ಮಾಡತಾರ. ನಾ ಮರಿಯನ್ನ ಹಡಿಯಾಕ ದವಾಖಾನಿಗೆ ಹೋಗಿದ್ದೆ. ಆವಾಗ ಮುಂಗಡ ರೊಕ್ಕಾ ಕೊಟ್ಟು ಸಾಹಾಯಾ ಮಾಡಾರ ನಮಗ. ಕಷ್ಟದಾಗ ಆದವರನ್ನ ನೆನಸಬೇಕು. ಅವರಿಗೆ ಮೋಸಾ ಮಾಡ್ಬಾರ್ದು. ದೇವ್ರು ಮೆಚ್ಚೂದಿಲ್ಲಾ. ಹಾಂ ಮತ್ತೊಂದ ಮಾತ ಹೇಳತೇನಿ. ಅವರ ಮನೀ ಅಪ್ಪಾರು, ಮಕ್ಕಳು ಯಾರ ಮಾತಾಡ್ಸಿದ್ರೂ ಹಲ್ಕಿರೀ ಬ್ಯಾಡ. ಮಾರೀ ಕೆಳಗಹಾಕಿ ಹೂಂ ಅನ್ನು. ಸಿಟ್ಟಿನಾಗ ಒಂದ ಮಾತ ಹೆಚ್ಚು ಕಡಿಮೀ ಆಡಿದ್ರೂ ತಡಕೋ. ಸಿಡಿಪಿಡಿ ಮಾಡಬ್ಯಾಡಾ. ಒಟ್ಟಿನ ಮ್ಯಾಲೆ ಅವರ ಸಂಬಿಕೆ ಉಳಿಸ್ಕೋಬೇಕ ನಾವು, ತಿಳೀತಿಲ್ಲೊ.".

ಅಕ್ಕ ಹೇಳಿದ್ದಕ್ಕೆಲ್ಲ ತಾನೂ ಹೂಂ ಎನ್ನುತ್ತ ಬಂದಿದ್ದಳು. ಗಂಡನ ಮನೀಗೆ ಹೋಗೂ ಹುಡುಗೀಗೆ ಹೇಳೂ ಹಾಂಗ ಹೇಳಿದ್ಲು ಅಕ್ಕ.

ಆದರ ತಾನು ಹಿಂದಕ ಖರೇನ ಗಂಡನ ಮನೀಗೆ ಹೋಗೂ ಮುಂದ ಅಕ್ಕ ಅತ್ತs ಅತ್ತಿದ್ಲು. ಏನೂ ಹೇಳಿದ್ದಿಲ್ಲಾ, ಅಪ್ಪನ ವಯಸ್ಸಿನ ಗಂಡಗ ನಮ್ಮ ನಾಗೂನ ಕೊಟ್ಟೆವಲ್ಲಾ ಅಂತ ಆಕೀಗೆ ಭಾಳ ದುಕ್ಕ ಆಗಿತ್ತು. ಆದರ ಅಪ್ಪ ಹಾಂಗ ಯಾಕ ಮಾಡಿದಾ ಅನ್ನೂದು ಆಕೀಗೆ ಗೊತ್ತಿತ್ತು. ಅವ್ವ ತನ್ನ ಹಡಿಯೂ ಮುಂದ ಭಾಳ ತ್ರಾಸ ಆತಂತ. ಡಾಕ್ತರನ ಕರ ಕೊಂಡ ಬಂದು ತೋರ್ಸಿದ್ರೂ ಅವ್ವ ಉಳೀಲಿಲ್ಲಾ. ಆವಾಗ ಅಪ್ಪ ಗಂಡನ ಕಡೇಂದ ಸಾಲಾ ಮಾಡಿದ್ನಂತ. ಅದನ್ನ ತೀರಸಲಿಕ್ಕೆ ಆಗಲೇ ಇಲ್ಲಾ. ಅಕ್ಕನ ಲಗ್ಗಣಕ ಮತ್ತಷ್ಟು ಸಾಲಾ ಮಾಡಿದಾ. ಅದನ್ನ ಮುಗಸಾಕ ಅಪ್ಪ ತನ್ನ ಅಂವಗ ಕೊಡಬೇಕಾತು. ರೊಕ್ಕಕ್ಕ ನನ್ನ ಕೊಂಡುಕೊಂಡ ಮುದುಕಾ ಗೂರತಿದ್ದಾ. ಅಂತಾವನಿಂದ ಏನ ಸುಕಾ ಸಿಗಬೇಕ ತನಗ. ಅಂವಾ ಸತ್ತಮ್ಯಾಲೆ ಇದ್ದೋಟು ಅವನ ಹೊಲಾ ಮನೀ ಸವತೀ ಮಕ್ಕು ಸುಲಕೊಂಡರು. ನಾ ಅಲ್ಲೆ ಇದ್ದು ಏನ ಮಾಡಬೇಕಾಗಿತ್ತು? ಹೋಯ್ತು ಚಂಡಾಳಿ ಮಾರ್‍ಯಾಗ ಮಣ್ಣ ಹಾಕ್ಕೊಂಡ ಅಂತ ಇತ್ಲಾಗ ಬಂದಬಿಟ್ಟೆ....

''ನಾಗವ್ವಾs ಎಷ್ಟ ಸಾರೆ ಒರಸತೀಯ ನೆಲಾ. ಸ್ವಚ್ಛ ಆಗೇದ ಸಾಕು ಬಿಡ ಇನ್ನ'' ಅವ್ವಾರ ಮಾತಿನಿಂದ ಎಚ್ಚರಗೊಂಡ ನಾಗವ್ವ ಮುಂದಿನ ಕೆಲಸಕ್ಕೆ ಹೊರಟಳು.

'' ನಾನು ಒಂದೀಟ ಪ್ಯಾಟ್ಯಾಗ ಹೋಗಿ ಬರತೇನಿ ಅವ್ವಾರ ಕೂಡ. ನಾಗೂ ನೀ ಮನೀಗೆ ನಡೀ. ಊಟಾ ಮಾಡಿ ಕಟಗೀ ಮಾಡು ಹೋಗು" ಎಂದಳು ಪಾರವ್ವ.

* * *

ಆ ದಿನ ನಾಗವ್ವ ಮನೆಯ ಕೆಲಸಕ್ಕೆ ಬಾರದುದಕ್ಕೆ ಅವ್ವಾರಿಗೆ ತುಂಬ ಕಸಿವಿಸಿಯಾಗಿತ್ತು, ಪಾರವ್ವನೊಡನೆ ಮಾತನಾಡಲೂ ಅವರಿಗೆ ಬಿಡುವಿರಲಿಲ್ಲ. ಮಧ್ಯಾಹ್ನವೂ ನಾಗವ್ವ ಬಾರದಿದ್ದಾಗ,

" ಪಾರವ್ವಾs, ನಾಗೂ ಆರಾಮ ಅದಾಳಿಲ್ಲೋ ?'' ಎಂದರು.

"ಆದಾಳಲ್ರೀ, ಆಕೀಗೇನ ಆಗೇದ ಧಾಡಿ.''

"ಮತ್ಯಾಕೋ ಕೆಲಸಕ್ಕ ಬರಲಿಲ್ಲಾ.... ? ''

"ಏನು ಬರತಾಳ್ರೀ ? ಮುಂದ್ಯಾಗ ಮಾರೀ ಹ್ಯಾಂಗ ತೋರಸತಾಳ ನಾಚಿಗ್ಗೇಡಿ'' ಪಾರವ್ವನ ಮುಖ ದುಮುದುಮು ಉರಿಯುತ್ತಿತ್ತು. ದನಿ ಏರಿತ್ತು. ಆ ಹೊತ್ತಿನಲ್ಲಿ ಅಪ್ಪಾ ಅವರು ಇರುವುದಿಲ್ಲ ಎನ್ನುವುದೂ

ಗೊತ್ತು ಆವಳಿಗೆ. ಏನು ಕೊಟ್ಟರೂ ತಂಗಿಗೆ ಒಂದು ತುತ್ತು ಕೊಡದೆ ತಿನ್ನುತ್ತಿರಲಿಲ್ಲ ಪಾರವ್ವ. ಅಂಥವಳಿಗೆ ತಂಗಿಯ ಮೇಲೆ ಸಿಟ್ಟು ಬಂದಿದೆ ಯೆಂದರೆ–

"ಯಾಕ ? ಏನಾತು ?''

"ಅವ್ವಾರs ನಿಮ್ಮ ಮುಂದ ಸುಳ್ಳ ಹ್ಯಾಂಗ ಹೇಳಲ್ರಿ ? ದೇವ ರಂತಾವ್ರು ಹರೇದ ಹುಡುಗೀನ್ನ ಮನ್ಯಾಗ ಇಟಕೊಂಡದ್ದಕ್ಕ ನನಗ ಎದೀ ಮ್ಯಾಲೆ ಕುಂತಾಂಗ ಆಗಿತ್ರಿ" ಉಗುಳು ನುಂಗಿ ಸುಮ್ಮನಾದಳು ಪಾರವ್ವ ಹೇಗೆ ಹೇಳಬೇಕೋ ತಿಳಿಯದೆ.

'' ನಿಮ್ಮಲ್ಲೆ ಗಂಡ ಸತ್ತಮ್ಯಾಲೆ ಉಡುಕಿ ಮಾಡಿಕೋತಾರಲ್ಲ. ಹಂಗ ಯಾರಿಗರೆ ಮಾಡಿಕೊಡಬೇಕು'' ಪರಿಹಾರ ಸೂಚಿಸಿದರು. ಅವ್ವಾರು.

''ನಾನೂ ಹಾಂಗs ಮಾಡಿದ್ನರೀ. ಯಾರರೇ ದುಡದು ತಿನ್ನೊ ಗಟ್ಟಿಮುಟ್ಟ ಆಳು ಸಿಕ್ಕರ ಮಾಡಿಕೊಡಬೇಕು ಅಂತs ಮಾಡಿದ್ದೆ. ಹಿರ್ಯಾನ ಮುಂದ ಅಂದಿದ್ದೆ. ಆದರ ಇಂದ ಮುಂಜಾನೆ ಎದ್ದ ಕೂಡಲೆ ನಾಗಿ ಹಿಂದಕ ಮಾಡಿಕೊಳ್ಳಾಕ ಹತ್ತಿದ್ಲು. ನನ್ನ ಎದೀನs ಒಡೀತು. ಕೇಳಿದೆ, ಎರಡ ತಿಂಗಳಾತು ತಲೀಗ ನೀರ ಹಾಕ್ಕೊಂಡಿಲ್ಲಾ ಅಂದ್ಲು."

''ಚ್ಚು, ಚ್ಚು, ಪಾಪ.''

''ನನಗ ಇಂಥಾ ಸಿಟ್ಟು ಬಂತ ನೋಡ್ರಿ, ಕೂದಲ ಹಿಡದು ದರಾ ದರಾ ಎಳೆದು ಒಳಗ ತಂದು ಹಿರ್ಯಾನ ಕಾಲ್ಮರಿ ತೊಗೊಂಡ ಹೊಡದೆ. ಮಿಟ್ಟಿನ ಮಿಸಕಲಿಲ್ಲಾ. ಯಾರ ಕೂಡ ಮಲಗಿದ್ದಿ ಅಂತ ಎಷ್ಟ ಕೇಳಿದ್ರೂ ದೆವ್ವಬಡದ್ಹಾಂಗ ಸುಮಾಕ ಇದ್ಲು. ಹಾಳಾಗಿ ಹೋಗ ರಂಡೆ ನನ್ನ ಮನ್ಯಾಗ ಇರಬ್ಯಾಡ ಅಂತ ಒದ್ದು ಬಂದೆ.''

'' ಹೋಗ ಅಂದರ ಎಲ್ಲಿ ಹೋಗಬೇಕ ಆಕಿ ಪಾಪ ಸಣ್ಣಾಕಿ.''

"ಸಣ್ಣಾಕಿ ಏನ್ರಿ, ಇಂಥಾ ಕೆಲಸ ಮಾಡಬಾರದೂ ಅನ್ನೂದು ಇಕೀಗೆ ತಿಳಿಯೂದಿಲ್ಲೇನ್ರಿ, ನಮ್ಮ ಮಾರಿಗೆ ಮಸೀ ಹಚ್ಚಿದ್ಲು. ಮಂದ್ಯಾಗ ನಾ ಹ್ಯಾಂಗ ಮಾರೀ ತೋರಸ್ಲಿ ? ಯಾವನ ಕೂಡ ಇದ್ಲೋ ಹೋಗ್ಲಿ ಅವನ ಹಿಂದs ಹಾಳಾಗಿ" ಪಾರವ್ವ ಮುಖಕ್ಕೆ ಸೆರಗು ಹಾಕಿ ಅಳಹತ್ತಿದಾಗ ಅವಳನ್ನು ಹೇಗೆ ಸಮಾಧಾನ ಮಾಡಬೇಕೆನ್ನುವುದು ಅವ್ವಾರಿಗೆ ತಿಳಿಯ ಲಿಲ್ಲ.

“ ನಾಳೆ ಆಕೀನ್ನ ಕಳಿಸಿಕೊಡು, ನೀ ಸುಮ್ಮನಿರು, ಬಯ್ಯಬ್ಯಾಡಾ. ಆದದ್ದಾಗಿ ಹೋಗೇದ. ಮನಶ್ಯಾ ಅಂದಮ್ಯಾಲೆ ತಪ್ಪು ಮಾಡೂದು ಸ್ವಾಭಾವಿಕ, ಆಕೀನ್ನ ನಾನs ಕೇಳತೇನಿ, ಏನರೆ ಮಾಡೋಣು, ಸಮಾಧಾನ ಮಾಡಕೋ”

ಅವ್ವಾರು ಹೇಳಿದಂತೆ ನಾಗಿಯನ್ನು ಕಳಿಸಲು ಒಪ್ಪಿಕೊಂಡು ಪಾರವ್ವ ಮನೆಗೆ ಹೋದಳು. ಗಳುವಿನ ಮೇಲಿದ್ದ ಸೀರೆಯೂ ಇರಲಿಲ್ಲ, ಮನೆಯಲ್ಲಿ ನಾಗಿಯೂ ಇರಲಿಲ್ಲ.

* * *

ಪಾನಪಟ್ಟಿಯ ಅಂಗಡಿಯ ಮುಂದೆ ನಿಂತವಳನ್ನು ಅವ್ವಾರು ಮತ್ತೆ ಮತ್ತೆ ನೋಡಿದರು. ನಾಗವ್ವನ ಹಾಗೆಯೇ ಕಾಣುತ್ತಿದ್ದಳು ಆವಳು. ಅಕ್ಕನ ಮನೆಯಿಂದ ಅವಳು ಓಡಿಹೋಗಿ ಐದಾರು ತಿಂಗಳು ಕಳೆದಿದ್ದವು. ಅವಳು ತನ್ನ ಪಾಲಿಗೆ ಸತ್ತಳೆಂದು ಪಾರವ್ವ ಸುಮ್ಮನಾಗಿದ್ದಳು. ಅಂಗಡಿಯವನೊಡನೆ ಕುಲುಕುಲು ನಗುತ್ತ ಮಾತನಾಡುತ್ತಿದ್ದವಳ ನಿಲುವು, ಆಕಾರ ಎಲ್ಲವೂ ಹಾಗೆಯೇ ಇದೆ. ಆದರೆ ಹೂವಿನ ತೆಳ್ಳನ್ನ ಪತ್ತಲ, ಅಗ್ಗದ ರಂಗು ರಂಗಿನ ರಿಬ್ಬನ್ನು, ಪ್ಲಾಸ್ಟಿಕ್ ಮಣಿಸರ, ಕಿವಿಯಲ್ಲಿ ಜೋತಾಡುವ ಹೊಳೆಯುವ ಲೋಲಾಕು, ತಲೆಯಲ್ಲಿ ಹೂವಿನ ಮಾಲೆ ಎಲ್ಲ ಅವ್ವಾರಲ್ಲಿ ಸಂಶಯ ಎಬ್ಬಿಸಿದವು. ಅಲ್ಲದೆ ಇವಳಿಗೆ ಹೊಟ್ಟೆಯೂ ಇಲ್ಲವಲ್ಲ! ಆವರಿನ್ನೂ ಯೋಚಿಸುತ್ತಿದ್ದಾಗಲೇ ಅಂಗಡಿಯವನು ಕೈಮುಟ್ಟಿ ಕೊಟ್ಟ ಪಟ್ಟಿಯನ್ನು ಬಾಯಲಿಡುತ್ತ ಇತ್ತ ತಿರುಗಿದಳು.

ಹೌದು, ನಾಗವ್ವನೇ ಇವಳು—ಅವ್ವಾರು ಆಶ್ಚರ್ಯಪಟ್ಟರು. ಕರೆಯ ಬೇಕೆನ್ನುವಷ್ಟರಲ್ಲಿ ತಿರುಗಿ ನೋಡದೆ ಮರೆಯಾಗಿದ್ದಳು. ಅವ್ವಾರು ಪಾರವ್ವನಿಗೆ ಏನೂ ಹೇಳಲಿಲ್ಲ. ಮತ್ತೊಂದು ಸಲ ಇದೇ ನಾಗವ್ವನನ್ನು ಪೇಟೆಯಲ್ಲಿ ನೋಡಿದರು. ಜೊತೆಗೆ ಚೌಕಳಿ ಲುಂಗಿ, ಬನೀನು ತೊಟ್ಟ ಒಬ್ಬ ಕರಿಯ ಗಂಡಸೂ ಇದ್ದ. ಆ ಸಲವೂ ಗದ್ದಲದಲ್ಲಿ ಮರೆಯಾಗಿದ್ದಳು. ಮೂರನೆಯ ಸಲ ಬಸ್ಸಿನಲ್ಲಿ ಕಾಲಿಡಲೂ ಜಾಗವಿಲ್ಲದೆ ಕೈಯಲ್ಲಿ ಚೀಲ ಹಿಡದುಕೊಂಡು ಮೇಲಿನ ತೊಗಲಿನ ಪಟ್ಟಿಗೆ ಜೋತಾಡುತ್ತಿರುವಾಗ ನಾಗವ್ವ ತಾನು ಕುಳಿತ ಸ್ಥಳದಿಂದ ಎದ್ದು ಅವ್ವಾರಿಗೆ ಕೂಡ್ರಲು ಹೇಳಿದ್ದಳು. ಆ ಗದ್ದಲದಲ್ಲಿ ಅವಳನ್ನು ಮಾತನಾಡಿಸುವುದೂ ಸಾಧ್ಯವಿರಲಿಲ್ಲ.

ದಾರಿಯಲ್ಲಿ ಯಾವಾಗಲೋ ಇಳಿದುಹೋದ ನಾಗವ್ವ ಅವ್ವಾರ ಮನಸ್ಸಿನಿಂದ ಮರೆಯಾಗಿರಲಿಲ್ಲ, ಚಿತ್ರದಂತೆ ಅಚ್ಚೊತ್ತಿದ್ದಳು.

ಆ ಚಿತ್ರ ಮಾಸುವ ಮೊದಲೇ ಒಂದು ದಿನ ಅವ್ವಾರು ಗೆಳತಿಯೊಡನೆ ಸಿನೀಮಾಕ್ಕೆ ಹೋದಾಗ ಬಾಲ್ಕನಿಗೆ ಹೋಗದೆ ಹೆಂಗಸರ ಜಾಗಕ್ಕೆ ಹೋಗಿದ್ದರು. ಇಂಟರ್‌ವಲ್‌ನಲ್ಲಿ ನೋಡಿದಾಗ ಅವರ ಇನ್ನೊಂದು ಬದಿಗೆ ಕುಳಿತವಳು ನಾಗವ್ವನೇ ಆಗಿರಬೇಕೆ? ಈ ಸಲ ಅವರು ಹಿಡಿದ ಪಟ್ಟು ಬಿಡಲಿಲ್ಲ. ಸಿನೀಮಾದಿಂದ ಬರುವಾಗ ದಾರಿಯಲ್ಲಿ ನಾಗವ್ವ ತನ್ನ ಕಥೆ ಹೇಳಿದಳು.

"ಅವ್ವಾರs ಅಕ್ಕ ಹೇಳಿದ್ದು ಖರೇ. ಅಲ್ಲಿಂದ ಬರೂ ಮುಂದ ನಾನು ಎರಡ ತಿಂಗಳ ಹೊಟ್ಟೇಲಿದ್ದೆ...."

"ಮತ್ತ?" ಅವ್ವಾರು ಪ್ರಶ್ನಾರ್ಥಕ ದೃಷ್ಟಿಯಿಂದ ನೋಡಿದರು.

"ನನ್ನ ಹೊಟ್ಟೇನ ನನಗ ಭಾರ ಆದಾಗ ಎಲ್ಲೀ ಕಳ್ಳು ಎಲ್ಲೀ ಕುಡೀ. ಚಿವುಟಿ ಒಗದನ್ರೀ ಅದನ್ನ. ನನ್ನ ಬಾಳೇ ಎಲ್ಲಾ ಬ್ಯಾರೇ ದಾರೀ ಹಿಡಿದಾಗ ಇದನ್ನ ಹೇಳಾಕ ನನಗೇನ ನಾಚಿಕಿ ಇಲ್ಲ ನೋಡ್ರಿ. ಅದನ್ನ ಬಿಟ್ಟೆsಬಿಟ್ಟೇನಿ." ವಿಷಾದ ತುಂಬಿತ್ತು ಅವಳ ದನಿಯಲ್ಲಿ. ಈ ಜೀವನ ಅವಳಿಗೆ ಸುಖ ತಂದಿಲ್ಲವೆನ್ನುವುದು ಸ್ಪಷ್ಟವಾಗಿ ಕಾಣುತ್ತಿತ್ತು.

'ಅಲ್ಲs ನಾಗವ್ವಾs ನಿನ್ನ ಕಾಲ ಮ್ಯಾಲೆ ನೀನs ಕಲ್ಲು ಹಾಕ್ಕೊಂಡಿ. ಈಗ ನೋವಾಗ್ತದ ಅಂತ ಅತ್ತರ ಹ್ಯಾಂಗವ್ವಾ? ನಿನ್ನ ಯಾರಿಗರೆ ಉಡಿಕೀ ಮಾಡಿಕೊಡಬೇಕಂತ ಮಾಡಿದ್ಲು ಪಾರವ್ವ. ಆಕಿ ಎದೀ ಒಡಿಯೂ ಹಾಂಗ ಮಾಡಿ ಓಡಿಬಂದಿ."

"ಹಾಂಗಲ್ರೀ ಅವ್ವಾರ. ನನಗೇನ ಬ್ಯಾಡಾಗಿತ್ತೇನ್ರಿ ಅಕ್ಕನ ಆಸರಾ? ಇಲ್ಲೆ ಹದಿನೆಂಟುಮಂದಿ ಹರದು ಪಲ್ಲೆ ಮಾಡತಾರ ನನ್ನ. ಈ ಸುಕಾ ಯಾರಿಗೆ ಬೇಕಾಗಿತ್ರೀ?" ನಾಗವ್ವನ ಕಣ್ಣು ತುಂಬಿದ್ದವು.

ಸಿಟ್ಟಾಗಿ ಎರಡೇಟು ಹೊಡದ್ರೂ ನೀ ತಡಕೋಬೇಕಾಗಿತ್ತ ನಾಗವ್ವಾs. ತಪ್ಪು ಮಾಡದ್ದಿ ಅಂದಮ್ಯಾಲೆ ಶಿಕ್ಷಾ ಅನುಭೋಗಸಬೇಕಲ್ಲ. ನಾ ಹೇಳಿದ್ದೆ ಪಾರವ್ವಾಗ "ನಾಗೂ ಸಣ್ಣಾಕಿ ತಿಳೀಲಾರದ ತಪ್ಪು ಮಾಡ್ಯಾಳ, ಅಷ್ಟು ಸಿಟ್ಟಾಗಬ್ಯಾಡ, ಡಾಕ್ಟರರಿಗೆ ಹೇಳಿ ಏನರೆ ಮಾಡೂಣು ಅಂತ."

ಅವ್ವಾರ ದನಿಯಲ್ಲಿಯ ಸಹಾನುಭೂತಿ ಧೈರ್ಯ ಕೊಟ್ಟಿತೋ ಏನೋ ನಾಗವ್ವ ಅಂಗಲಾಚಿದಳು. "ಅವ್ವಾರs ಹೊಟ್ಟ್ಯಾಗಿನ ಒಂದ ಮಾತ ನಿಮ್ಮ ಮುಂದ ಹೇಳತೀನಿ. ಅಕ್ಕನ ಮುಂದ ಅನ್ನಬ್ಯಾಡ್ರಿ ನನ್ನಾಣಿ ಆಗೇದ.''

ಅವ್ವಾರು ಭರವಸೆ ಕೊಟ್ಟಮೇಲೆ "ಅವ್ವಾರs ಉಪ್ಪು ಹುಳಿ ತಿನ್ನೂ ಮನುಶ್ಯಾಳು ನಾಗವ್ವಾ ತಪ್ಪು ಮಾಡಿರಬೇಕು ಅಂತ ನೀವು ತಿಳಕೊಂಡೀರಿ. ಅಕ್ಕಾ ಹಾಂಗs ತಿಳಕೊಂಡು ಹೊಲಸರಂಡಿ ಅಂತ ನನ್ನ ಬಯ್ಯತಿರ ಬೇಕು. ಆದರ ಅವ್ವಾರ ನನ್ನ ಮ್ಯಾಲೆ ಆಸೇ ಮಾಡಿ ನನ್ನ ಕೆಡಿಸಿದವರು ಯಾರ ಗೊತ್ತೈತಿ ಏನ್ರಿ ?'' ಎಂದು ನಾಗವ್ವ ನೇರವಾಗಿ ಕೇಳಿದಾಗ ಅವ್ವಾರ ಮೈ ಜುಮ್ಮೆಂದಿತು. ಏನು ಹೇಳುವಳೋ ಎಂದು ಎದೆ ಡವಗುಟ್ಟಿತು.

"ನನ್ನ ಪಿರುತೀ ಅಕ್ಕನ ಗಂಡ, ನನ್ನ ಮಾವ ನನಗ ಗಂಟ ಬಿದ್ದನ್ರಿ. ಅಕ್ಕ ಕೆಲಸಕ್ಕ ಹೋದಾಗ ಬಂದು ನನ್ನ ಕಾಡತಿದ್ದಾ. ಒಪ್ಪ ದಿದ್ದರ ಮನೀಬಿಟ್ಟ ಹೊರಗ ಹಾಕ್ಕೇನಿ ಅಂತಿದ್ದಾ" ದುಃಖದಿಂದ ಗಂಟಲು ನರ ಸೇರಿದಂತಾಗಿ ಸುಮ್ಮನಾದಳು ನಾಗವ್ವ.

" ಪಾರವ್ವಾ ಭಾಳ ಸಾರೆ ಕೇಳಿದ್ಲಂತ ಯಾರು ಅಂತ, ನೀ ಯಾಕ ಹೇಳಲಿಲ್ಲಾ ?"

" ಅವ್ವಾರs ಸಣ್ಣಾಂದಿರತ ನನ್ನ ಮಗಳಕ್ಕಿಂತಾ ಹೆಚ್ಚ ಜ್ವಾಪಾನ ಮಾಡ್ಯಾಳ್ರಿ. ಗಂಡ ಸತ್ತಮ್ಯಾಲೆ ಆಸರಾ ಕೊಟ್ಟಾಳ್ರಿ, ತನ್ನ ಬಾಯಾ ಗಿನ ತುತ್ತ ರೊಟ್ಟ್ಯಾಗ ನನಗ ಅರ್ಧ ಕೊಟ್ಟಾಳ್ರಿ, ಹಂತಾ ಅಕ್ಕನ ಬಾಳೇಕ ಬೆಂಕೀಹಚ್ಚಬೇಕೇನ್ರಿ ನಾನು ? ಆಕೀಗೆ ಸವತಿಯಾಗಿ ಕಂಟಕ ಆಗೂದಕ್ಕಿಂತ ಕಣ್ಣಮರಿ ಆಗಿ ಹೋಗಬೇಕಂತ ಮನೀ ಬಿಟ್ಟ ಬಂದಿನ್ರಿ. ಅವ್ವಾರs ನಿಮ್ಮ ಕಾಲ ಬೀಳತೀನಿ, ಆಕೀ ಮುಂದ ಹೇಳಬ್ಯಾಡ್ರಿ, ಗಂಡಾ ಹೇಣ್ತಿ ಜಗಳಾಡ್ಯಾರು. ನಾ ಹೋಗ್ತೀನಿ ಇನ್ನ. ನಿಮ್ಮ ಮನೀ ಕಟ್ಟೀ ಕಲ್ಲು ಹತ್ತೂ ಮರ್ಯಾದಿ ಕಳಕೊಂಡೇನ್ರಿ, ಮರೆತಬಿಡ್ರಿ ನನ್ನ.''

ಬಿರಬಿರನೆ ಹೊರಟುಹೋದ ನಾಗವ್ವನನ್ನೇ ನೋಡುತ್ತ ಅವ್ವಾರು ಮೂಕರಾಗಿ ನಿಂತರು.

ತೆಪ್ಪೋತ್ಸವ

"ಯತ್ತೀs, ಎಬೇ ಗಂಗವ್ವತ್ತೀ, ಅಲ್ನೋಡು ದೀವಟಗಿ ಬೆಳಕ ಹೊಂಡದಾಗ ಬಿದ್ದ ಎಷ್ಟ ಛಂದ ಕಾಣಸ್ತೇತಿ."

ಗಂಗವ್ವತ್ತಿ ತನ್ನ ವಾರಿಗೆಯ ಮುದುಕಿಯೊಡನೆ ಮಾತಿನಲ್ಲಿ ಮಗ್ನಳಾದವಳು ಇತ್ತ ತಿರುಗದೆಯೇ "ಹೌದಬೇ ಛಂದ ಐತಿ" ಎಂದು ಉತ್ತರಿಸಿದ್ದು ಕೆಂಪವ್ವನ ಕಿವಿಗೇ ಬೀಳಲಿಲ್ಲ. ಡೊಳ್ಳು, ನಗಾರಿ, ಜಾಗಟೆಗಳ ಸಪ್ಪಳ ಒಂದು ಕಡೆಯಾದರೆ, ಜನರ ಗದ್ದಲ ಗಜಿಬಿಜಿಯಲ್ಲಿಯೂ ಎಲ್ಲರ ಹರಟೆ, ಮಾತು, ಕೇಕೆಯನ್ನು ಹಿಂದಿಕ್ಕಿ, ಕಿವಿ ಗಡಚಿಕ್ಕುವಂತೆ ಸಿನಿಮಾ ಹಾಡು ಒದರುವ ತುತ್ತೂರಿ ಒಂದು ಕಡೆ, ಜಾತ್ರೆಯಲ್ಲಿ ಕೂಡಿದ ಸಾವಿರಾರು ಜನರ ಗದ್ದಲದ ನಡುವೆಯೂ ಕೆಂಪವ್ವ ಒಬ್ಬಂಟಿಗಳಂತೆ ತದೇಕಚಿತ್ತದಿಂದ ಹೊಂಡದ ನೀರಿನಲ್ಲಿ ಹೊಯ್ದಾಡುತ್ತಿದ್ದ ದೀವಟಿಗೆಗಳ ಪ್ರತಿಬಿಂಬಗಳನ್ನೇ ದಿಟ್ಟಿಸುತ್ತಿದ್ದಳು. ಒಮ್ಮೊಮ್ಮೆ ಸುಣ್ಣ ಬಳಿದುಕೊಂಡು ಶುಭ್ರವಾಗಿದ್ದ ದೇವಸ್ಥಾನವನ್ನು ಅದರ ಮುಂದಿನ ದೀಪಸ್ತಂಭವನ್ನು ನೋಡುತ್ತಿದ್ದಳು. ಆವಳು ಆ ಜಾತ್ರೆಗೆ ಬಂದದ್ದೂ ಅದೇ ಮೊದಲು. ಬಂದದ್ದು ಅನಿರೀಕ್ಷಿತವಾಗಿಯೇ.

ಕೆಂಪವ್ವ ಗಂಡನ ಮನೆಯಿಂದ ತವರುಮನೆಗೆ ಬಂದಿದ್ದಳು. ದಿನವೂ ಅವೇ ಮಾತು. ನೆರೆ-ಹೊರೆಯವರು, ಗೆಳತಿಯರು, ಪರಿಚಿತರು ಎಲ್ಲರೂ ಹೊಲಕ್ಕೆ ಹೋಗುವಾಗ, ಬರುವಾಗ, ತಂಬಿಗೆ ಹಿಡಿದುಕೊಂಡು ಹಳ್ಳದ ದಂಡೆಗೆ ಹೊರಟಾಗ ಯಾವಾಗ ಭೆಟ್ಟಿಯಾದರೂ ಕೇಳುವದು ಒಂದೇ ಪ್ರಶ್ನೆ.

"ಯಾವಾಗ ಬಂದೀ ಕೆಂಪವ್ವಾ ? ಆರಾಮ ಅದೀಯು? ಬಯಕಿ-ಗಿಯಕಿ ಹತ್ತ್ಯಾದೇನು ?" ಎಲ್ಲರಿಗೂ ನಕಾರದ ಉತ್ತರ ಹೇಳಿ ಹೇಳಿ ಕೇಸರಿಟ್ಟಿತ್ತು. ತನ್ನ ಉತ್ತರ ಕೇಳಿದೊಡನೆ ಕೆಲವರು ಸಂತಾಪ ಸೂಚಿಸುವರು, ಕೆಲವರು ಕನಿಕರ ತೋರಿಸುವರು, ಇನ್ನೂ ಕೆಲವರು "ಮಕ್ಕಳು

ಆದಾವೇಳು ಅದಕ್ಯಾಕ ಚಿಂತಿ ಮಾಡತಿ?" ಎಂದು ಆಸೆ ತೋರಿಸುವರು. ಆದರೆ ಬಹಳಷ್ಟು ಹಿಂದೆ ಹೋಗಿ ಆಡಿಕೊಳ್ಳುವವರೇ. 'ಮದಿವ್ಯಾಗಿ ಎಂಟ ವರಸಾತು. ಇನ್ನೂ ಬಸರಾಗಿಲ್ಲಂತ. ಇನ್ನೇನ ಆಕ್ಯಾವು? ಕೆಂಪವ್ವ ಬಂಜೀನೇ ಸೈ.'

ಕೆಂಪವ್ವನ ಅತ್ತಿ ಸ್ವಾದರತ್ತಿ ಅಂತ ಸುಮ್ಮಕ ಆದಾಳ. ಇಲ್ಲಾಂದರ ಈಟೊತ್ತಿಗೆ ಬ್ಯಾರೇಲಗ್ನಾ ಮಾಡುತಿದ್ದಳು ಮಗಂಗ."

"ನಿಂಗೀ, ಸಾತೀ, ಈರೀ ಜ್ವಾಕಿರೇ, ನಿಮ್ಮ ಮಕ್ಕಳ್ನ ಆಕೀ ಕೈಯಾಗ ಕೊಟ್ಟಗಿಟ್ಟೀರಿ. ಬಂಜೀನೆಳ್ಳು ಛಲೋ ಅಲ್ಲ." ಮುದುಕಿಯರು ತಾಯಂದಿರಿಗೆ ಬೆದರಿಕೆಯನ್ನೂ ಹಾಕಿ ಆಗಿತ್ತು. ಹೀಗೇ ಒಂದಲ್ಲ ಎರಡಲ್ಲ ನೂರಾರು ಮಾತು. ದಿನವೂ ನಾಲ್ಕಾರು ರೊಟ್ಟೀ ತಿನ್ನುವ ಕೆಂಪವ್ವನ ಬಂಜೆ ಹೊಟ್ಟೆ ಈ ಮಾತುಗಳನ್ನೂ ನುಂಗಿತ್ತು. ಅವಳ ಮನಸ್ಸು ಮಾತ್ರ ಹಂಚಿನ ಮೇಲಿನ ರೊಟ್ಟಿಯಂತೆ ಬೇಯುತ್ತಿತ್ತು.

ಅತ್ತೆಯಲ್ಲಿ ಮನೆಯ ನೆರೆಮನೆಯ ಮಕ್ಕಳು ಬಂದಾಗಲೆಲ್ಲ ಅತ್ತೆ ಅವುಗಳನ್ನು ಎತ್ತಿಕೊಂಡು, ಮುದ್ದಾಡಿ, ತಿನ್ನಲು ಬೆಲ್ಲ ಕೊಟ್ಟು ಕಳಿಸಿದಾಗ ತನ್ನ ಹೊಟ್ಟೆಯಲ್ಲಿ ಎನೋ ಒಂದು ರೀತಿಯ ಸಂಕಟ. ಮದುವೆಯಾದ ಮೊದಲ ವರುಷವಷ್ಟೇ ತಾನು ಸುಖವಾಗಿ ಇದ್ದದ್ದು ಮುಂದೆ ಸುರುವಾಯಿತು ಪ್ರತಿ ತಿಂಗಳೂ ದಾರಿ ನೋಡುವದು. ತಾನು ಎರೆದುಕೊಂಡ ಕೂಡಲೆ ಅತ್ತೆಯ ಮುಖ ಸಪ್ಪಗಾಗುವದು. ಮುಂದಿನ ವರುಷಗಳಲ್ಲಿ ಅತ್ತೆಯ ಸಿಟ್ಟು-ಸೆಡವು ಹೆಚ್ಚಾದವು. ಏನು ಕೆಲಸ ಮಾಡಿದರೂ ತಪ್ಪು. ಕುಳಿತರೂ ತಪ್ಪು. ನಿಂತರೂ ತಪ್ಪು. ತಪ್ಪೇ. ದಿನವೂ ಮನೆಯಲ್ಲಿ ಜೈದಾಟ, ಗೊಣಗಾಟ. ತಿಂದ ಕೂಳು ಸೇರದಂತಾದಾಗ ಏನು ಮಾಡಬೇಕು? ಮಕ್ಕಳ ಮಾತೆತ್ತಿದಾಗೆಲ್ಲ ಮೊದಮೊದಲು ಗಂಡ ನಕ್ಕುಬಿಡುತ್ತಿದ್ದ. ಆಮೇಲೆ "ಈಗೇನು ಮುದುಕಿ ಆದೇನು ನೀನು. ಆದಾವು ಬಿಡು. ಅದಕ್ಯಾಕ ಚಿಂತೀ ಮಾಡತೀ"–ಎಂದು ಚೇಷ್ಟೆ ಮಾಡುತ್ತಿದ್ದ. ಇತ್ತಿತ್ತಲಾಗಿ ತನ್ನ ಸಪ್ಪೆ ಮೋರೆ ನೋಡಲಾರದೆ, ಅತ್ತೆಯ 'ಇನ್ನೊಂದು ಮದ್ವೀ ಮಾಡಿಕೋ' ಎನ್ನುವ ಕಿಟಕಿಟಿ ತಾಳಲಾರದೆ ಮನೆಯನ್ನು ಬಿಟ್ಟು ಹೆಚ್ಚು ಹೊತ್ತು ಹೊರಗೇ ತಿರುಗುತ್ತಿದ್ದ. ಪಾಪ! ಅವನಾದರೂ ಏನು ಮಾಡಬೇಕು?

ತವರಿಗೆ ಹೋದಾಗ ಅವ್ವ ಮೊದಮೊದಲು ಸಂಶಯದಿಂದ ಕೇಳುತ್ತಿದ್ದಳು. "ಚಂದ್ರಪ ನಿನ್ನ ಕೂಡ ಬೇಸಿ ಆದಾನಿಲ್ಲಬೇ''. ಅದರ ಹಿಂದಿನ ಅರ್ಥ ತಿಳಿದ ತಾನು ನಾಚಿಕೆಯಿಂದ ನಕ್ಕು ಬಿಡುತ್ತಿದ್ದಳು. ಅವಳು ಮತ್ತಿಷ್ಟು ಗಂಭೀರವಾಗಿ "ಹೊರಚಾಳಿ-ಗಿರಚಾಳಿ ಏನೂ ಇಲ್ಲ ಹೌದಲ್ಲೋ" ಎಂದು ಕೆದಕಿ ಕೇಳಿದಾಗ "ಹಂತಾದೇನೂ ಇಲ್ಲಬೇ. ಮನ್ಯಾಗs ಮನಗತಾರ. ಎಲ್ಲಾ ಗಂಡಾ-ಹೇಣ್ತಿ ಹಾಂಗ ಅದೀವಿ ನಾವೂ'' ಎಂದು ಗಂಡನನ್ನು ಮೇಲುಗಟ್ಟಿ ಮಾತನಾಡಿದ್ದಳು. ಇಂದಿಲ್ಲ ನಾಳೆ ಮಕ್ಕಳು ಆದಾವು ಎನ್ನುವ ಆಸೆಯಲ್ಲಿಯೇ ವರುಷಗಳೂ ಕಳೆದಿದ್ದವು.

ತವರುಮನೆಯಲ್ಲಿ ಅತ್ತಿಗೆಗೆ ಮೂರನೆಯ ಹೆರಿಗೆಯಾಗಿತ್ತು. ಗಂಡು ಮಗು, ನೋಡಿದರೆ ದೃಷ್ಟಿ ಹತ್ತುವ ಹಾಗಿತ್ತು. ಪುಟ್ಟ ಚೆಂಡಿನಂಥ ಕೂಸು. ಅತ್ತಿಗೆ ಏನಾದರೂ ಅಂದಾಳೆಂದು ಹೆದರಿ ಹೆದರಿ ತೊಟ್ಟಿಲಲ್ಲಿ ಇಣಿಕಿ ನೋಡುತ್ತಿದ್ದಳು ಕೆಂಪವ್ವ. ಅವ್ವ ಒಮ್ಮೆ ಬಾಣಂತಿಗೆ ನೀರು ಹಾಕಲು ಹೋದಾಗ ಅಳುತ್ತಿದ್ದ ಕೂಸನ್ನು ಎತ್ತಿಕೊಂಡು ಒಂದು ನಿಧಿ ಸಿಕ್ಕಂತೆ ಎದೆಗೆ ಅವಚಿಕೊಂಡು ಕುಳಿತಿದ್ದಳು. ಮಗು ಅತ್ತಿತ್ತ ಮುಖ ತಿರುವಿದಾಗ ಕಚಗುಳಿ ಇಟ್ಟ ಅನುಭವವಾಗಿ ಬಗ್ಗಿ ಮಗುವಿನ ಮುಖಕ್ಕೆ ಲೊಚ ಲೊಚ ಮುತ್ತು ಕೊಟ್ಟಿದ್ದಳು. ಆಗಿನ ಹಿಗ್ಗು, ಹೇಳಲಾಸಲ್ಲ. ಎದೆ ತುಂಬಿ ತುಂಬಿ ನಿಂತಿತ್ತು. ತಾನು ಮಗುವನ್ನು ಎತ್ತಿ ಮುತ್ತುಕೊಟ್ಟಿದ್ದು ಅವ್ವನ ಮನಸ್ಸಿಗೆ ಬಂದಿರಲಿಲ್ಲ. ತಾನು ಕೋಣೆ ಬಿಟ್ಟು ಹೊರ ಬಂದೊಡನೆ ಹೊರಸಿನ ಬುಡಕ್ಕೆ ಕುಪ್ಪಡಿಗೆ ಸರಿಸುತ್ತ "ಪಾರವ್ವಾs ಕೂಸಿನ್ನ ಕೆಂಪೀ ಕೈಯ್ಯಾಗ ಕೊಡಬ್ಯಾಡ ಅಂತ ಎಷ್ಟ ಸಾರೆ ಹೇಳಬೇಕು ನಿನಗ? ಏನರ ಆದೀತು. ಎತ್ಲಾಗರೆ ಛಂದಾಗಿ ಬೆಳೀಲಿ ನನ್ನ ಮೊಮ್ಮಗಾ'' ಎಂದ ಅವ್ವನ ಮಾತು ಕಿವಿಗೆ ಬಿದ್ದಿದ್ದೇ ತಡ ಬಾಯಿಗೆ ಸೆರಗು ತುರುಕಿ ಓಡೋಡುತ್ತ ಹಿತ್ತಲ ಬಾವಿ ಕಟ್ಟೆಗೆ ಬಂದು ಕುಳಿತು ಅತ್ತು ಅತ್ತು ಎದೆ ಹಗುರ ಮಾಡಿಕೊಂಡಿದ್ದಳು. ಅವ್ವನಿಗೂ ಗೊತ್ತಾಗಿರಬೇಕು ತನ್ನ ಮಗಳು ಬಂಜೆ ಎನ್ನುವುದು. ಆದಕ್ಕೇ ಇಂಥ ಮಾತು ಕೇಳಬೇಕಾಯಿತು. ಒರಗಿ ನಿಂತ ಬಾವಿಯನ್ನೇ ಇಣುಕಿ ನೋಡಿದಳು ಕೆಂಪವ್ವ. ಒಳಕ್ಕೆ ಹಾರಿಬಿಡಲಾ? ಎಂದಿತು ಒಡಲ ಸಂಕಟ. ಆದರೆ

ಧೈರ್ಯವಾಗಲಿಲ್ಲ. ತನ್ನ ಕಣ್ಣೀರು ಅದುನ ನೋಡಲೇ ಅಣ್ಣನ ಮಕ್ಕಳು ಕೂಗುತ್ತಿದ್ದರು.

"ಅಮ್ಮ ಬಂದ್ಲು, ಗಂಗವ್ವ ಬಂದ್ಲು."

ಗಂಗವ್ವತ್ತಿ ಬಂದಿದ್ದಾಳೆ ಹೆತ್ತ ಮಗಳನ್ನು ಮೊಮ್ಮಗುವನ್ನೂ ನೋಡಲು ಎಂದುಕೊಂಡು ಮನೆಯೊಳಗೆ ಬಂದ ಕೆಂಪವ್ವ ಬೇಗನೆ ಉಪಚಾರದಲ್ಲಿ ತೊಡಗಿದಳು. ಯಥಾಪ್ರಕಾರ ಎಲ್ಲರೊಡನೆ ಕೆಂಪವ್ವನ ಯೋಗಕ್ಷೇಮವನ್ನೂ ವಿಚಾರಿಸಿದರು, ಗಂಗವ್ವ. ಆಯಿತು, ಮಕ್ಕಳಾಗಲಿಲ್ಲವೆಂದೊಡನೆ ಮುದುಕಿ ಒಂದೇ ರಾಗ ಹಾಡಿದಳು, "ನಮ್ಮ ನರಸಾಪುರ ಹನುಮಪ್ಪಗ ಬೇಡಿಕೊ. ಮಕ್ಕಳಿಲ್ಲದವರಿಗೆ ಮಕ್ಕಳ್ನ ಕೊಡುತಾನ. ಭಾಳ ಸತ್ಯುಳ್ಳ ದೇವರು. ನೀ ಹೂಂ ಅನ್ನು, ನಾನs ಕರಕೊಂಡ ಹೋಗತೀನಿ. ನಮ್ಮ ಊರಿಂದ ಹರದಾರಿ ನೆಲಾ ಆಗತೈತಿ. ಈ ಹುಣ್ಣಿವೀಗೆ ದೊಡ್ಡ ಜಾತ್ರಿ ಆಕ್ಕೈತಿ. ನೋಡಾಕ ಎರಡ ಕಣ್ಣ ಸಾಲೂದಿಲ್ಲ. ಭಾಳ ಮಂದಿ ಕೂಡತಾರ. ಹರಕೀ ಹೊರು. ಮುಂದಿನ ವರ್ಷ ಖಾತ್ರಿ ಮಗಾ ನಿನಗ ಹುಟ್ಟತಾನ. ನಡಿ ನನ್ನ ಕೂಡ" ಎಂದು. ಮುದುಕಿಯ ಮಾತುಕೇಳಿ ಮನಸ್ಸು ತೂಗಾಡಿತು. ತನಗೂ ಅತ್ತೆಮನೆ ತವರುಮನೆ, ಪರಿಚಿತ ಮುಖಗಳು. ಮತ್ತೆ ಮತ್ತೆ ಕೇಳುವ ಅವೇ ಪ್ರಶ್ನೆಗಳು ಇವುಗಳಿಂದ ದೂರ ಬಹಳ ದೂರ ಎಲ್ಲಿಯಾದರೂ ಹೋಗಬೇಕು. ಓಡಿಹೋಗಬೇಕು ಅನಿಸುತ್ತಿತ್ತು. ಅದಕ್ಕೇ ಗಂಗವ್ವತ್ತಿಯ ಮಾತಿಗೆ ಮಣಿದು ಅಂದು ಮುಂಜಾನೆಯೇ ಈ ಜಾತ್ರೆಗೆ ಬಂದಿದ್ದಳು. ಬಂದೊಡನೆ ಸ್ನಾನಮಾಡಿ, ಮಡೀಸೀರೆ ಉಟ್ಟುಕೊಂಡು, ದೇವರಿಗೆ ಹಣ್ಣುಕಾಯಿ ಮಾಡಿಸಿ, ಹರಕೆ ಹೊರಲು ಗುಡಿಗೆ ಹೋಗಿದ್ದಳು. ಗುಡಿಯ ಸುತ್ತ ಹಣ್ಣು, ಹೂವು, ಕಾಯಿ, ಕರ್ಪೂರ, ಬೆಂಡು, ಬತ್ತಾಸು, ಊದುಬತ್ತಿ, ರಿಬ್ಬನ್, ಬಲೂನು, ಬಳೆಗಳ ನಾನಾ ತರದ ಅಂಗಡಿಗಳು. ವಿಪರೀತ ಗದ್ದಲ. ಅದರಲ್ಲೇ ನುಗ್ಗಾಡುತ್ತ ದಾರಿ ಮಾಡಿಕೊಂಡು ಒಂದು ಅಂಗಡಿ ಎದುರು ನಿಂತರು. ಗಂಗವ್ವತ್ತಿ ಹಣ್ಣು, ಕಾಯಿ ಖರೀದಿ ಮಾಡಿದಳು. ಇವಳು ಕೊಟ್ಟ ನೋಟು ತೆಗೆದುಕೊಂಡು ಚಿಲ್ಲರೆ ಕೊಡುತ್ತಿದ್ದ ಅಂಗಡಿಯವನನ್ನೇ ನೋಡಿದಳು. ಮತ್ತೆ ಮತ್ತೆ ನೋಡಿದಾಗ ತುಂಬಾ ಪರಿಚಿತ ಮುಖವಿದು ಎನಿಸಿತು.

"ಕೆಂಪವ್ವಾs ಬಾರಬೇ ಗುಡೀಗೆ ಹೋಗೂಣು, ಹೊತ್ತಾಗತೈತಿ" ನಾಲ್ಕು ಹೆಜ್ಜೆ ಮುಂದೆ ಹೋದ ಗಂಗವ್ವತ್ತಿ ಕೂಗುತ್ತಿದ್ದಳು.

"ಬಂದೆ" ಎನ್ನುತ್ತ ಮುಂದೆ ಹೆಜ್ಜೆ ಇಟ್ಟ ಕೆಂಪವ್ವನತ್ತ ಅಂಗಡಿಯುವ ಸರಕ್ಕನೇ ಹೊರಳಿ ನೋಡಿದ. ಗುರುತು ಸಿಕ್ಕಿತು. 'ಹನುಮಣ್ಣ' ಬಾಯಿ ಮೇಲೆ ಕೈ ಇಟ್ಟುಕೊಂಡಳು ಕೆಂಪವ್ವ. ಹೌದೆನ್ನುವಂತೆ ನಸು ನಕ್ಕ ಹನುಮಣ್ಣನಿಗೆ ಉಸಿರು ಬಿಡಲೂ ಪುರುಸೊತ್ತಿಲ್ಲದಷ್ಟು ಗಿರಾಕಿಗಳು ಸುತ್ತಿಕೊಂಡಿದ್ದರು. ಗಂಗವ್ವನ ಹಿಂದೆ ಕನಸಿನಲ್ಲಿದಂತೆ ನಡೆದುಹೋದ ಕೆಂಪವ್ವ ಹೇಗೆ ದೇವರಿಗೆ ಅಡ್ಡ ಬಿದ್ದಳೋ, ಪ್ರದಕ್ಷಿಣೆ ಹಾಕಿದಳೋ, ಹಣ್ಣು-ಕಾಯಿ ಮಾಡಿಸಿ ಅಂಗಾರ ತೆಗೆದುಕೊಂಡಳೋ ಆ ಹನುಮಂತ ದೇವರಿಗೇ ಗೊತ್ತು. ಅವಳ ಚಿತ್ತವೆಲ್ಲ ಅಂಗಡಿಕಾರನ ಮೇಲಿತ್ತು.

ಗಂಗವ್ವತ್ತಿ ಹೆಬ್ಬಾಗಿಲು ದಾಟಿ ಹೊರಬರುತ್ತಿರುವಾಗ ಕೇಳಿದಳು, "ಹರಕೀ ಹೊತ್ತೀ ಹೌದಲ್ಲೋ ಕೆಂಪವ್ವಾ. ಮುಂದಿನ ವರಸ ಮಗನ ಕರಕೊಂಡು ಜಾತ್ರಿಗೆ ಬರೂಹಾಂಗ ಮಾಡಪ್ಪಾ ನಮ್ಮಪ್ಪಾ ಅಂತ ಕೇಳಿ ಕೊಂಡಿ ಇಲ್ಲೋ" ಎಂದು.

'ಹೂಂ' ಎಂದು ಯಾಂತ್ರಿಕವಾಗಿ ಗೋಣು ಹಾಕಿದಳು ಕೆಂಪವ್ವ. ನಿಜ ಹೇಳಬೇಕೆಂದರೆ ಅವಳು ಹರಕೆ ಹೊರುವುದನ್ನೇ ಮರೆತಿದ್ದಳು. ನಿಜ ಹೇಳಿದರೆ ಗಂಗವ್ವತ್ತಿ ಛೀ ಎಂದಾಳು. ತನ್ನ ಮಾನ ಉಳಿದೀತೆ? ಮಕ್ಕಳಿಲ್ಲದ ಚಿಂತಿ ಇವಳಿಗೆ ಎಳ್ಳಷ್ಟೂ ಇಲ್ಲ ಎಂದಾರು ಮಂದಿ, ಎಂದು ಹೆದರಿ ಸುಳ್ಳು ಹೇಳಿದಳು.

ಇಬ್ಬರೂ ಕೂಡಿ ತಮ್ಮ ಊರವರೊಡನೆ ಗಿಡದ ಬುಡದಲ್ಲಿ ಕುಳಿತು ಬುತ್ತಿ ಬಿಚ್ಚಿ ತಿಂದರು. ಆಗ ಕೂಡಿದ ಜನರೆಲ್ಲ ರಾತ್ರಿ ನಡೆಯುವ ತೆಪ್ಪೋತ್ಸವ ನೋಡಿಕೊಂಡೇ ಹೋಗೋಣವೆಂದಾಗ ಗಂಗವ್ವತ್ತಿ ಒಪ್ಪಿ ಕೊಂಡಳು. ಸಂಜೆ ಆದೊಡನೆ ಚುರಮುರಿ, ಡಾಣಿ, ಉಂಡಿ, ಭಜಿ ಎಲ್ಲ ಕೂಡಿಸಿ ತಿಂದು ಹೊಟ್ಟೆ ತುಂಬ ನೀರು ಕುಡಿದು ರಾತ್ರಿಯ ಊಟದ ಚಿಂತೆ ಬಿಟ್ಟು ತೆಪ್ಪೋತ್ಸವ ನಡೆಯುವ ಹೊಂಡದ ಕಟ್ಟೆಗೆ ತಾನು ಗಂಗವ್ವತ್ತಿ ಯೊಡನೆ ಬಂದು ಕುಳಿತಳು....

ಕೆಂಪವ್ವನ ನೆನಪಿನ ದೀವಟಿಗೆಗಳು ಒಂದೊಂದಾಗಿ ಆರುತ್ತಿದ್ದವು. ಮತ್ತೆ ಎಣ್ಣೆ ಉಗ್ಗಿದಾಗ ಧಗ್ಗೆಂದು ಹತ್ತಿಕೊಳ್ಳುತ್ತಿದ್ದವು. ಹೊಂಡದಲ್ಲಿಯ

ದೀವಟಿಗೆಗಳ ಪ್ರತಿಬಿಂಬಗಳ ನೃತ್ಯವನ್ನೇ ನೋಡುತ್ತ ಕೆಂಪವ್ವ ಯೋಚಿಸುತ್ತಿದ್ದಳು. ಅಷ್ಟರಲ್ಲಿ ದೇವರ ಪಾಲಕಿ ಬಂದೇಬಿಟ್ಟಿತು. ಅದ ರೊಡನೆ ದೊಡ್ಡದೊಂದು ಜನರ ಗುಂಪು ಬಂದು ಹೊಂಡವನ್ನೂ ಮುತ್ತಿತು. ಆ ಗದ್ದಲದಲ್ಲಿ ಗಂಗವ್ವತ್ತಿ ಅವಳ ಗೆಳತಿ ಇವಳಿಂದ ದೂರವಾದರು. ದೀಪದ ಅಲಂಕಾರ ಮಾಡಿ, ಬಾಳೆಗಿಡಗಳಿಂದ ಮಂಟಪ ಕಟ್ಟಿದ ತೆಪ್ಪ ದಲ್ಲಿಯ ದೇವರ ಉತ್ಸವ ಹೊಂಡದ ಸುತ್ತಲೂ ಚಲಿಸಿತು. ಅದರ ಹಿಂದೆ ಸಣ್ಣ ಸಣ್ಣ ತೆಪ್ಪದ ಮೇಲೆ ಬಾಳೆ ಎಲೆಯಲ್ಲಿ ಕೂಸುಗಳನ್ನು ಮಲಗಿಸಿ ಅವುಗಳೊಡನೆ ಜನರೂ ಈಸುತ್ತ ಪ್ರದಕ್ಷಿಣೆ ಹಾಕಿದರು. ಹರಕೆಹೊತ್ತು ಮಕ್ಕಳಾದವರು ಹೀಗೆ ಮಾಡುತ್ತಾರೆಂದು ಹತ್ತಿರವಿದ್ದವರು ಹೇಳಿದ್ದು ಕೆಂಪವ್ವನ ಕಿವಿಗೆ ಬಿತ್ತು. ತನಗೆ ಮಗುವಾದರೆ ತಾನೂ ಹೀಗೆ ತೆಪ್ಪದಲ್ಲಿ ತೇಲಿಸಬೇಕೆ? ಮಗು ಮುಳುಗಿ ಸತ್ತುಹೋದರೆ? ಕೆಂಪವ್ವನ ಮೈ ನಡುಗಿತು. ಹಿಂದೆ ಯಾರೋ ಅವಳ ಬೆನ್ನು ತಟ್ಟುತ್ತಿದ್ದರು. ಅವಳ ಮುಖ, ಕಣ್ಣು ಅರಳಿದವು. ಹನುಮಣ್ಣ 'ಗದ್ದಲ ಬಿಟ್ಟು ಇತ್ತ ಬಾ' ಎಂದು ಕರೆ ಯುತ್ತಿದ್ದ. ಗಂಗವ್ವತ್ತಿ ದೂರದಲ್ಲಿದ್ದದ್ದು ನೋಡಿದ ಕೆಂಪವ್ವ ಅವನ ಹಿಂದೆ ಹೊರಟಳು. ಅವರು ಗದ್ದಲ ದಾಟಿ ಹೊರಬರುತ್ತಿದ್ದಾಗ ಸುತ್ತ ಮುತ್ತಲಿಂದ ದಾಳಿ ಮಾಡುವಂತೆ ಜನ ತೆಪ್ಪೋತ್ಸವ ನೋಡಲು ಧಾವಿಸಿ ಬರುತ್ತಿತ್ತು. ಆ ಜನಸಾಗರದಲ್ಲಿ ಸೇರಿ ಹೊರಬರಲಾರದೆ ಮಿಡುಕುತ್ತಿದ್ದಳು ಕೆಂಪವ್ವ. ಎದುರು ಬಂದ ರೇಶಿಮೆ ರುಮಾಲಿನ ಯುವಕನೊಬ್ಬ ಕುಡಿದ ಮಬ್ಬಿನಲ್ಲಿ ಇವಳನ್ನು ಹಾಯ್ದು ಇವಳ ಸೆರಗು ಹಿಡಿದು ಎಳೆದ. ಕೂಡಲೆ ಹನುಮಣ್ಣ ಮಿಂಚಿನಂತೆ ಹಾರಿ ಅವನ ಎದೆಹಿಡಿದು ನೂಕಿ ಕೆಂಪ ವ್ವನ ಕೈಹಿಡಿದು ಎಳೆದುಕೊಂಡು ಓಡೋಡಿ ಹೊರಗೆ ಬಂದ. ಜನರನ್ನೆಲ್ಲ ದಾಟಿ ಗಿಡಗಳ ಗುಂಪಿನ ಹತ್ತಿರ ಬಂದಾಗ ಕೆಂಪವ್ವನ ಎದೆ ಇನ್ನೂ ಡಬಡಬ ಬಡಿದುಕೊಳ್ಳುತ್ತಿತ್ತು.

ಸಿಟ್ಟಿನಿಂದ ತುಟಿ ಕಚ್ಚುತ್ತ ಹನುಮಣ್ಣ, "ಸೂಳೆಮಗನ್ನ ತಂದು ಕಂಡ ಕಂಡ ಹೆಣಮಕ್ಕಳ ಮ್ಯಾಲ ಕೈಮಾಡತಾನ" ಅವನ ಕೈ ಇನ್ನೂ ಕೆಂಪವ್ವನ ಕೈಯನ್ನು ಬಿಟ್ಟಿರಲಿಲ್ಲ.

''ನೀ ಇದ್ದಿ ಅಂತ ಸುಮ್ಮನ ಬಿಟ್ಟೆ. ಇಲ್ಲಾಂದರ ನಾಕೇಟು ಕೊಟ್ಟು ಅವನ ಅಮಲು ಇಳಿಸಿಬಿಡತಿದ್ದೆ'' ಥೂ ಎಂದು ಕ್ಯಾಕರಿಸಿ ಉಗುಳಿದ ಕುಡುಕನಿದ್ದ ದಿಕ್ಕಿಗೆ ಹನುಮಣ್ಣ.

ಎದೆ ಬಡಿತ ಸ್ತಿಮಿತಕ್ಕೆ ತಂದುಕೊಂಡ ಕೆಂಪವ್ವ ನಯವಾಗಿ ತನ್ನ ಕೈ ಬಿಡಿಸಿಕೊಂಡು "ಹನುಮಣ್ಣಾ" ಎಂದಾಗ ತಟ್ಟನೆ ಅವಳ ಬಾಯ ಮೇಲೆ ಕೈಯಿಟ್ಟ. "ಈ ಅಣ್ಣಾ ಗಿಣ್ಣಾ ಅನ್ನಬ್ಯಾಡಾ ಕೆಂಪೀ. ಮೊದಲಿ ನಾಂಗs ಹನುಮಾs ಅನ್ನು. ನಾ ನಿನಗ ಅಣ್ಣ ಆಗಾಕ ಒಲ್ಲೆ."

"ಹನುಮಾ ಇಂದ ಮುಂಜಾನೆ ನನಗೆ ಲಗೂನ ನಿನ್ನ ಗುರುತs ಸಿಗಲಿಲ್ಲ."

"ನಿನಗ ಹ್ಯಾಂಗ ಸಿಕ್ಕೀತು. ಎಂಟು ವರ್ಸಾತು ನನ್ನ ನೋಡಿ, ನಿನ್ನ ಮದಿವಿ ಆದಮ್ಯಾಲೆ ನಂದು ನಿಂದು ಭೇಟ್ಟೇನs ಇಲ್ಲ. ಕೆಂಪೀ ನೀ ಹ್ಯಾಂಗದೀ, ಆರಾಮ ಅದೀಯ ? ಸ್ವಾದರತ್ತಿ ಮಗನ್ನ ಮಾಡಿ ಕೊಂಡು ನನ್ನ ಮರತಬಿಟ್ಟಿ."

ಕೆಂಪವ್ವನಿಗೆ ಎದೆಯಲ್ಲಿ ಏನೋ ಚುಚ್ಚಿದಂತಾಗಿ "ನಿನ್ನ ಮರತಿಲ್ಲ ಹನುಮಾ, ಸಣ್ಣಾಂದಿರತ ಕೂಡಿ ಆಡೀವಿ, ಉಂಡೀವಿ, ತಿಂದೀವಿ, ಜಗಳ ಆಡೀವಿ. ನಿನ್ನ ಹ್ಯಾಂಗ ಮರತೇನು? ನಿನ್ನ ನೆಪ್ಪ ಹಗಲೆಲ್ಲ ಆಕ್ಕಿತ್ತ ನನಗ. ಆದರ ಯಾರ ಮುಂದ ಹೇಳಲಿ?"

"ಇರಲಿ ಬಿಡು. ನೀ ಮರತಿಲ್ಲಲ್ಲ ಅದs ಸಂತೋಷ. ನಿನಗೆ ಮಕ್ಕಳೆಷ್ಟು? ನಿನ್ನ ಹಿರ್‍ಯಾ ಯಾಕ ಬಂದಿಲ್ಲ ಜಾತ್ರೀಗೆ?"

ಕೆಂಪವ್ವ ತನ್ನ ಬಂಜೆ ಪುರಾಣವನ್ನೆಲ್ಲ ಓದಿದಾಗ ಹನುಮನ ಮುಖ ಬಾಡಿತು. "ನನ್ನ ಮಾಡಿಕೋದಿದ್ದರೂ ನೀನರೆ ಸುಕದಿಂದ ಅದೀ ಅಂತ ತಿಳದಿದ್ದೆ. ನೀ ಬ್ಯಾರೆಯವರಾಕಿ ಆದಮ್ಯಾಲೆ ನನಗೆ ಯಾಕೋ ಆ ಊರಾಗ ಇರಾಕ ಮನಸ ಬರಲಿಲ್ಲ. ಅವ್ವನ್ನ ಅಣ್ಣಾನ್ನ ಮನ್ಯಾಗ ಬಿಟ್ಟು ಕುಸ್ತಿ ಆಡಿಕೋತ ಊರೂರು ತಿರುಗಿದೆ. ಮೈಯಾಗಿನ ಶಕ್ತಿ ಕಡಿಮ್ಯಾದ ಮ್ಯಾಲೆ ಇಲ್ಲೆ ಅಂಗಡೀ ಹಾಕೊಂಡು ಕೂತೇನಿ."

"ವ್ಯಾಪಾರ ಛಲೋ ನಡೆತಿರಬೇಕಲ್ಲ. ಭಾಳ ಜಾಗ್ರತ ದೇವರು ಅಂತಾರ. ಭಕ್ತರು ಭಾಳ ಮಂದಿ. ಮಕ್ಕಳಿಲ್ಲದವರಿಗೆ ಮಕ್ಕಳ್ನ ಕೊಡತಾನಂತ, ಅಲ್ಲಾ ಅಂದ ಹಾಂಗ ನಿನಗೆ ಮಕ್ಕಳೆಷ್ಟು?"

ನಾ ಲಗ್ನಾನs ಆಗಿಲ್ಲ ಕೆಂಪೀ. ಮಕ್ಕಳು ಎಲ್ಲಿಂದ ಬರಬೇಕ? ಈ ಹನುಮಂತದೇವರು ಗಂಡಸರೂ ಹಡಿಯೂಹಾಂಗೆ ವರಾ ಕೊಡ್ತಾ ನೇನು?"

ನಾಚಿ ಕೆಂಪಾದ ಕೆಂಪಿ "ಹೋಗs ನಿನ ಏನು ಮಾತಾಡ್ತೀ? ದೇವರಿಗೆ ಹಾಂಗೆಲ್ಲ ಅನಬಾರದು. ಕೆಡಕ ಮಾಡ್ತಾನು. ತಪ್ಪಾತು ಅಂತ ಗಲ್ಲಾಗಲ್ಲ ಬಡಕೋ'' ಎಂದು ಸಲಿಗೆಯಿಂದ ಅವನ ಕೆನ್ನೆ ತಟ್ಟಿ.

ಉತ್ತೇಜಿತನಾದ ಹನುಮು ಅವಳ ಕೆನ್ನೆ ಹಿಡಿದು ಮೇಲೆತ್ತಿ ಕಣ್ಣಲ್ಲಿ ಕಣ್ಣಿಟ್ಟು ಕೇಳಿದ ''ನೀನೂ ಮಕ್ಕಳ ಸಲುವಾಗಿ ಇಲ್ಲಿ ಬಂದೀಯು ಕೆಂಪಿ?''

ಎಲ್ಲಾಗೊತ್ತಿದ್ದವನ ಮುಂದೆ ಗುಟ್ಟೇನು ಬಂತು. "ಹೂಂ ನಮ್ಮತ್ತಿ ಭಾಳ ಸಿಟ್ಟಾಗ್ಯಾಳು. ಮಕ್ಕಳಾಗಲಿಲ್ಲ ಅದಕ ಬ್ಯಾರೆ ಹೆಂಡತಿ ಮಾಡತೇನಿ ಅಂತಾಳು.'' ಕೆಂಪಿಯ ಕಣ್ಣಲ್ಲಿ ನೀರು ತುಂಬಿದವು.

ಹನುಮು ಅವಳ ಕಣ್ಣೀರು ಒರೆಸಿದ ''ನಿನ್ನ ಗಂಡ ಏನಂತಾನ?''

"ಅವ ಏನಂದಾನ ಪಾಪ. ಮಕ್ಕಳು ಯಾರಿಗೆ ಬ್ಯಾಡ. ಸುಮ್ಮಕ ಇರತಾನ. ನಾನು ಬಂಜಿ, ಮಕ್ಕಳ ಬಗ್ಗೆ ಬೇಡಿ ಬಂದಿಲ್ಲ'' ನಿಟ್ಟುಸಿರು ಬಿಟ್ಟ ಕೆಂಪಿಯ ಮುಗ್ಧ ಮುಖವನ್ನು ಮೆಲ್ಲಗೆ ಚುಂಬಿಸಿ ''ಕೆಂಪೀ" ಎಂದ ಹನುಮು ಪ್ರೀತಿಯಿಂದ.

ಅವನ ತೋಳಿನಲ್ಲಿದ್ದ ಕೆಂಪಿ ಅಮಲಿನಲ್ಲಿದ್ದವಳಂತೆ 'ಆ' ಎಂದಳು. ''ನಿನಗ ಮಕ್ಕಳು ಆಗದಿದ್ದರ ನಿನ್ನ ಗಂಡ ಬಿಡತಾನು. ಬ್ಯಾರೆ ಲಗ್ನಾ ಮಾಡಿಕೊತಾನು. ಆಗ ನೀ ನನ್ನ ಹತ್ತಿರ ಬಾ. ನಾ ನಿನ್ನ ಉಡಿಕೀ ಮಾಡಿಕೊಂತೇನಿ. ನೀ ಚಿಂತೀ ಮಾಡಬ್ಯಾಡ. ನೀ ನನ್ನ ಕೆಂಪಿ. ನಾ ನಿನ್ನ ಎಷ್ಟು ಪಿರೂತಿ ಮಾಡತೇನಿ ನಿನಗ ಗೊತ್ತಿಲ್ಲ. ನಾ ನಿನಗೆ ಮಕ್ಕಳಿಲ್ಲ ಅಂತ ಹೇಳಿ ಅಳಿಸೂದಿಲ್ಲ. ನಾನು ನೀನೂ ಕೂಡಿ ಸುಕದಿಂದ ಇರೂಣು ಕೆಂಪೀ'' ಹನುಮು ಅವಳನ್ನಪ್ಪಿ ಮುದ್ದಾಡಿದ. ಕೆಂಪಿಯ ಯೋಚನೆಗಳು ತಟ್ಟನೆ ನಿಂತವು. ಎರಡೂ ಕೈಗಳಿಂದ ಕುತ್ತಿಗೆಯನ್ನಪ್ಪಿ ''ಹನುಮಾ'' ಎಂದಳು.

ಜಾಗದ, ನಗಾರ, ಡೊಳ್ಳು, ಸನಾದಿ, ಕಾಳಿ, ನಗು, ಕೇಕೆ ಎಲ್ಲ ಸಪ್ಪಳಗಳು ಕೂಡಿ ಭೋರ್ಗರೆದು ಮಹಾಪೂರ ಬಂದ ನದಿಯಂತೆ ತುಂಬಿ ಹರಿದು ದಂಡೆಯಿಂದ ದಂಡೆಗೆ ಅಪ್ಪಳಿಸಿದವು. ಕೇಳುವವರ ಕಿವಿ ಕಿವುಡಾದವು ಜನ ಹುಚ್ಚೆದ್ದು ಕುಣಿಯಿತು. ಅಮಲೇರಿ ತೂರಾಡಿತು. ಹಣ್ಣು, ಕಾಯಿ, ಉತ್ತತ್ತಿ, ಟೊಪ್ಪಿಗೆ, ರುಮಾಲು ಗಗನದಲ್ಲಿ ಹಾರಿ ಹಾರಿ ಬಿದ್ದವು. ತೆಪ್ಪೋತ್ಸವದಿಂದ ದಣಿದ ದೇವರು ಗರ್ಭಗುಡಿ ಸೇರಿ ಮಲಗಿದ. ಅವ

ನೊಡನೆ ಅರ್ಚಕರು, ಸೇವಕರು, ಭಕ್ತರು, ಹಂಗಳೆಯರು, ಕೂಸು-ಕುನ್ನಿಗಳು ಎಲ್ಲರೂ ಎಲ್ಲ ಕಡೆಗೂ ದಣಿದು ದಣಿದು ಮಲಗಿದರು. ಹೊಂಡದ ಕಟ್ಟೆಯ ಮೇಲಿನ ದೀಪಗಳು ಎಣ್ಣೆ ತೀರಿ, ಒಂದೊಂದಾಗಿ ಶಾಂತವಾಗುತ್ತ ಕೊನೆಗೆ ಗುಡಿ, ದೀಪಸ್ತಂಭ, ಹೊಂಡ, ತೆಪ್ಪ ಎಲ್ಲವೂ ಕತ್ತಲೆಯಲ್ಲಿ ಒಂದಾಗಿ ಕರಗಿಹೋದವು.

ಅಸ್ತವ್ಯಸ್ತವಾಗಿದ್ದ ಕೂದಲು, ಸೀರೆಯನ್ನು ಸರಿಪಡಿಸಿಕೊಂಡ ಕೆಂಪವ್ವನನ್ನು ಹನುಮಣ್ಣ ಗಂಗವ್ವತ್ತಿ ಇಳಿದುಕೊಂಡ ಜಾಗಕ್ಕೆ ಮುಟ್ಟಿಸಿ ಹೋದ. ಮರುದಿನ ಬೆಳಗ್ಗೆ ಊರದಾರಿ ಸವೆಯಿಸುತ್ತಿರುವಾಗ 'ಹಿಂದಿನ ರಾತ್ರಿ ಹೊಂಡದ ಹತ್ತಿರ ಗದ್ದಲ ಬಹಳವಾಗಿ ತಾವಿಬ್ಬರೂ ತಪ್ಪಿಸಿಕೊಂಡ ಮೇಲೆ ಗಂಗವ್ವತ್ತಿಯನ್ನು ಹುಡುಕಿ, ಹುಡುಕಿ ದಣಿದು, ತಮ್ಮ ಜಾಗಕ್ಕೆ ಮೊದಲೇ ಬಂದು ಮಲಗಿದ್ದನ್ನು ಕತೆ ಮಾಡಿ ವರ್ಣಿಸಿ ಹೇಳಿದಳು ಕೆಂಪವ್ವ.

*　　　　*　　　　*

ಮರು ವರುಷದ ಜಾತ್ರೆಗೆ ಬಂದ ಕೆಂಪವ್ವ ಮೂರು ತಿಂಗಳ ಮಗನನ್ನೆತ್ತಿಕೊಂಡೇ ಬಂದಿದ್ದಳು. ಜೊತೆಗೆ ಗಂಡ, ಅತ್ತೆ ಬಂದಿದ್ದರು. ಕಾಯಿಕೊಳ್ಳಲು ಹನುಮನ ಅಂಗಡಿಗೇ ಬಂದಳು. ಹನುಮ ಬೆರಗಾಗಿ ನೋಡಿದ. ಮುದ್ದಾದ ಗಂಡುಮಗು. ಎತ್ತಿಕೊಳ್ಳಲು ಕೈ ಚಾಚಿದ. ಬಂದೇಬಿಟ್ಟಿತು ಕೂಸು. ಅತ್ತೆ ನರಸಾಪುರದ ಹನುಮಂತದೇವರನ್ನು ಭಕ್ತಿಯಿಂದ ಕೊಂಡಾಡಿದಳು. ತನ್ನ ವಂಶ ಉದ್ಧಾರ ಮಾಡಿದ್ದಕ್ಕೆ ಪ್ರತಿವರ್ಷ ತಪ್ಪದೆ ಜಾತ್ರೆಗೆ ಬರುತ್ತೇನೆಂದು ಹರಕೆ ಹೊತ್ತಳು. ಮೊಮ್ಮಗುವನ್ನು ತೆಪ್ಪದಲ್ಲಿ ಮಲಗಿಸಿ ಹೊಂಡದ ಸುತ್ತ ತಿರುಗಿಸಿ ಹರಿಕೆ ತೀರಿಸಿದಳು. ಚಂದ್ರಣ್ಣನಿಗೆ ಈಸು ಬಾರದ್ದರಿಂದ ತೆಪ್ಪದ ಜೊತೆಗೆ ಹನುಮನೇ ಈಸಿ ಹೋದ. ಕೆಂಪವ್ವ, ಅವಳ ಅತ್ತೆ ಮುಷ್ಟಿಯಲ್ಲೇ ಜೀವ ಹಿಡಿದುಕೊಂಡು ತೆಪ್ಪ ತಿರುಗಿ ಬರುವವರೆಗೆ ಕಾದರು. ಹನುಮ ಕೂಸು ಎತ್ತಿ ತಂದು ಹೆಮ್ಮೆಯಿಂದ ಕೆಂಪಿಯ ಕೈಗೆ ಒಪ್ಪಿಸಿದ. ಮೇಲೆ ಆಕಾಶದಲ್ಲಿ ನಗುವ ನಕ್ಷತ್ರಗಳು. ಕೆಳಗೆ ದೀಪಮಾಲೆ. ಕಣ್ಣು ಕೋರೈಸುವ ಇಂಥ ಬೆಳಕಿನಲ್ಲಿ ಎದುರಿಗೆ ನಿಂತ ಹನುಮನ ರೂಪು ತಳೆದು ಬಂದ ಮಗುವನ್ನು ಎದೆಗವಚಿಕೊಂಡು ಮುತ್ತಿಕ್ಕಿ ಮೆಲ್ಲಗೆ 'ಹನುಮಾ' ಎಂದಳು ಕೆಂಪವ್ವ. ಹನುಮ ಹೊರಳಿ ನೋಡಿ ನಸುನಕ್ಕು ತನ್ನ ಅಂಗಡಿಯೆಡೆಗೆ ನಡೆದ.

ಸುಶೀಲೆ

ಬೆಳಗಿನ ಹೊತ್ತು, ಕೋಳಿ ಕೋ-ಕ್ಕೋ ಎಂದಾಗ ಸುಶೀಲೆ ಎಚ್ಚರಾದಳು. ಹೊರಗೆ ಇನ್ನೂ ಕತ್ತಲು. ಎದ್ದು ಮಾಡುವುದಾದರೂ ಏನು ಎಂದುಕೊಳ್ಳುತ್ತ ಮತ್ತೆ ಹಾಸಿಗೆಯ ಮೇಲೆ ಹಾಗೆಯೇ ಹೊರಳಿದಳು. ರಾತ್ರಿ ನಿದ್ದೆ ತಡವಾಗಿ ಹತ್ತಿದ್ದರಿಂದ ಕಣ್ಣುಗಳು ಉರಿಯುತ್ತಿದ್ದರೂ ಮತ್ತೆ ಕಣ್ಣೆವೆ ಮುಚ್ಚಲಿಲ್ಲ. ಜಯಂತಿ ಗಳ ಎಣಿಸುವವರಂತೆ ದಿಟ್ಟಿಸುತ್ತ ಮಲಗಿದ್ದಳು.

ಮಗ್ಗುಲುಮನೆಯಲ್ಲಿ ಹಿರಿಯನಿಂದ ಹಿಡಿದು ಚಿಕ್ಕ ಮಗುವಿನವರೆಗೆ ಎಲ್ಲರೂ ಎದ್ದಿದ್ದರು. ದಡಲ್ ಬಡಲ್ ಪಾತ್ರೆಗಳು, ಬರ್ ಬರ್ ಕಸಬರಿಗೆ, ಒದರುವ ನಾಯಿ, ಕೂಗುವ ಕೋಳಿ, ಅರಚುವ ಆಡು, ಕಿರುಚುವ ಮಕ್ಕಳು-ಎಲ್ಲವೂ ಸಪ್ಪಳ ಮಾಡುತ್ತಿದ್ದವು. ನಡುನಡುವೆ ಕಪ್ಪು ಬಸಿಗಳ ಕಿಣಿಕಿಣಿ ನಾದ, ರೊಟ್ಟಿ ಬಡಿತ, ಬಾನ್‌ಚೋದ, ಹರಾಮಜಾದೀ, ಸೊಕ್ಕಬಂದ್ಯೆತೇನ ಲೌಡಿಮಗನ ಒದ್ದೇನು-ಎನ್ನುವ ಇಮಾಮನ ಬೈಗಳಗಳೂ ಕೇಳುತ್ತಿದ್ದವು. ಇಮಾಮ-ಸುಶೀಲೆಯ ಗಂಡ ಕಾಶೀಮನ ಅಣ್ಣ. ಮನೆ ತುಂಬಿದ ಮಕ್ಕಳು, ರೋಗಿಷ್ಟ ಹೆಂಡತಿ, ಮುಪ್ಪಿನ ತಾಯಿ ಇವರಿಗೆಲ್ಲ ಇಮಾಮ ಬೆಳಗಿನಿಂದ ಸಂಜೆಯವರೆಗೆ ಬೈಗಳುಗಳ ಸರಮಾಲೆಯನ್ನೇ ಹೆಣೆಯುತ್ತಿದ್ದ. ಅದರಲ್ಲಿ ಎಷ್ಟೋ ಸಲ ಸುಶೀಲೆಯನ್ನು ಗುರಿಯಾಗಿಟ್ಟುಕೊಂಡೇ ಬಯ್ಯುತ್ತಿದ್ದ. ಕೇಳಿ ಕೇಳಿ ಅವಳ ಕಿವಿ ಜಡ್ಡುಗಟ್ಟಿದ್ದವು. ಕಾಶೀಮನೇ ಎಷ್ಟೋಸಲ ತಾಳ್ಮೆ ಕಳೆದುಕೊಂಡು ಅವನಿಗೆ ತಿರುಗಿ ಉತ್ತರಕೊಡುತ್ತಿದ್ದ. ವಾದಿಸುತ್ತಿದ್ದ. ಕೈಗೆ ಕೈ ಹತ್ತುವ ಪ್ರಸಂಗ ಬಂದಾಗ ಮಾತ್ರ ಸುಶೀಲೆ ನಡುವೆ ಹೋಗಿ ತಾನು ಏಟು ತಿಂದಾದರೂ ಕಾಶೀಮನನ್ನು ಒಳಗೆ ಎಳೆದುಕೊಂಡು ಬರುತ್ತಿದ್ದಳು. ಕಾಶೀಮ ಒಳಗೆ ಬಂದೊಡನೆ ಏಟು ತಿಂದ ಸುಶೀಲೆಯನ್ನು ರಮಿಸುತ್ತಿದ್ದ. ಆಗ ಅವಳು ಅವನ ಕೊರಳಿಗೆ ಜೋತುಬಿದ್ದು,

ಅವರು ನಿನ್ನ ಬಯ್ಯೂದು, ಹೊಡಿಯೂದು ಎಲ್ಲಾ ನನ್ನ ಸಲುವಾಗಿ ಅಲ್ಲೇನು ? ಪಾಪ ನನ್ನ ಸಲುವಾಗಿ ನೀನು ಪೆಟ್ಟು ತಿಂದಿ'' ಎಂದು ಅವನ ಎದೆಗೆ ಮೂಗು ತಿಕ್ಕುತ್ತಿದ್ದಳು.

ಕಾಶೀಮ ! ಎಲ್ಲಿ ಆದಾನ ಕಾಶೀಮ !! ನಾನು ಬೆಚ್ಚಗ ಮನ್ಯಾಗ ಮಲಗೇನಿ, ನನ್ನ ಕಾಶೀಮ ಹೊಡತಾ ತಿಂದು ಜೇಲಿನ್ಯಾಗ ಬಿದ್ದಾನು. ಸುಶೀಲೆ ತನ್ನ ಮಗ್ಗುಲೆಲ್ಲ ಕೈಯಾಡಿಸಿ ಬಿಕ್ಕಿ ಬಿಕ್ಕಿ ಅತ್ತಳು. ಆದರೆ ಅವಳ ಕಣ್ಣು ಒರೆಸುವ ಕಾಶೀಮ ಹತ್ತಿರ ಇರಲಿಲ್ಲ.

ತಾನಿನ್ನೂ ಆಗ ಪುಟ್ಟ ಹುಡುಗಿ, ಮೊಣಕಾಲ ಮುಚ್ಚುವ ಅಂಗಿ, ಕಿವಿಯ ಹತ್ತಿರ ಬಿಗಿಯಾಗಿ ಹೆಣೆದ ಎರಡು ಜಡೆ, ಕೈಯಲ್ಲಿ ಎರಡೆರಡು ಕರ್ಪುರ ಬಳೆ. ಈ ಅಲಂಕಾರದಲ್ಲಿ ತಾನು ಅವ್ವ ಹೇಳಿದೊಡನೆ ಗೌಡರ ಮನೆಗೆ ಓಡಿ ಬರುತ್ತಿದ್ದಳು. ಅವ್ವನ ಕೆಲಸವಲ್ಲದೆ ಅದರಲ್ಲಿ ತನ್ನ ಸ್ವಾರ್ಥವೂ ಇರುತ್ತಿತ್ತು. ಗೌಡರ ಮನೆಯ ಹೆಬ್ಬಾಗಿಲು ಹೊಸ್ತಿಲ ಮೇಲೆ ಹತ್ತಿ, ಇಳಿದು, ಪಡಸಾಲೆಯ ಕಟ್ಟೆಯನ್ನೇರಿ, ಗೌಡರು ಕೂಡ್ರುವ ಕೋಣೆಯ ಬಾಗಿಲ ಬಳಿ ನಿಂತು, "ಅವ್ವಾ ನಿಮ್ಮನ್ನ ಕರಿತಾಳ್ರಿ ಚಹಾ ಕುಡ್ಯಾಕ ಬರ್ರಿ'' ಎಂದು ಕೂಗುವಳು. ಮಂಚದ ಮೇಲೆ ಮಲಗಿ ಆರಾಮ ತೆಗೆದುಕೊಳ್ಳುತ್ತಿದ್ದ. ಗೌಡರು ಗೋಡೆಯ ಮೇಲಿನ ಗಡಿಯಾರ ನೋಡಿ, ತಿರುಗಿ ತನ್ನ ಕಡೆಗೆ ಹೊರಳಿ ಹುಂ ಎಂದು ಹುಂಕಾರ ಮಾಡಿದೊಡನೆ ಅಲ್ಲಿಂದ ಹಿತ್ತಲಿಗೆ ಓಡುವುದೊಂದೇ ಕೆಲಸ ತನಗೆ. ಅಲ್ಲಿ ದನದ ಹಕ್ಕೆಯಲ್ಲಿ ಕಾಶೀಮ ಒಂದಿಲ್ಲೊಂದು ಕೆಲಸ ಮಾಡುತ್ತಿರುತ್ತಿದ್ದ. ಆಗ ಅವನಿನ್ನೂ ಎಂಟ್ಹತ್ತು ವರುಷದ ಹುಡುಗನಿರಬೇಕು. ಅವನಿಗೆ ಜೋತುಬಿದ್ದೊಡನೆ ತನ್ನನ್ನು ಎತ್ತಿಕೊಳ್ಳುತ್ತಿದ್ದ. ಪೇರಲಕಾಯಿ, ಬಾರೀಕಾಯಿ, ಬಳಿಚೂರು, ಚೆಂಡುಹೂ ಏನಾದರೂ ಒಂದು ತನಗೆ ಕೊಡುತ್ತಿದ್ದ. ಅವನೊಡನೆ ಆಟವಾಡಿ ಸಾವಕಾಶ ಕತ್ತಲಾದ ಮೇಲೆ ಮನೆಗೆ ತಿರುಗುವುದು ತನ್ನ ದಿನದ ರೂಢಿ.

ಮುಂದೆ ಸಾಲೆಗೆ ಹೋಗುತ್ತಿರುವಾಗಲೂ ಸಾಲೆ ಬಿಟ್ಟೊಡನೆ ಗೌಡರ ಮನೆಗೆ ಹೋಗುವುದನ್ನು ತಪ್ಪಿಸುತ್ತಿರಲಿಲ್ಲ. ಗೌಡರು ತನಗೆ ಏನಾಗ ಬೇಕೆನ್ನುವುದು ಇನ್ನೂ ಗೊತ್ತಿರಲಿಲ್ಲ. ಮನೆಯಲ್ಲಿ ಅವ್ವ, ತಾನು ಇಬ್ಬರೇ. ಸಂಜೆಯಾದೊಡನೆ ಚಹಕ್ಕೆಂದು ತಮ್ಮ ಮನೆಗೆ ಬಂದ ಗೌಡರು

ತಿರುಗಿ ಯಾವಾಗ ಹೋಗುತ್ತಾರೋ ತನಗೆ ತಿಳಿದಿರಲಿಲ್ಲ. ದೊಡ್ಡವಳಾದಂತೆ ನೆರೆಹೊರೆಯುವರಿಂದ ತನ್ನ ಅವ್ವ–ಅಂಬವ್ವ–ಗೌಡರು ಇಟ್ಟುಕೊಂಡ ಹೆಂಗಸು, ತಾನು ಗೌಡರಿಗೆ ಹುಟ್ಟಿದವಳು ಎನ್ನುವ ಮಾತು ಕೇಳಿದ್ದಳು. ಅವ್ವ ಗೌಡರ ಹೆಂಡತಿ ಅಲ್ಲ ಹೆಂಗಸು ಎನ್ನುವುದು ತಿಳಿಯಬೇಕಾದರೆ ಮತ್ತೆ ಕೆಲವು ವರುಷ ಕಳೆದಿದ್ದವು. ಅದನ್ನು ಕಾಶೀಮನೇ ತನಗೆ ತಿಳಿಸಿ ಹೇಳಿದ್ದ. ಅವನು ತನ್ನ ಗುರು, ಗೆಳೆಯ ಸಂಬಂಧಿ ಎಲ್ಲವೂ ಆಗಿದ್ದ.

ಕಾಶೀಮ, ಇಮಾಮ ಇಬ್ಬರೂ ಗೌಡರ ಮನೆಯ ಹಿರಿಯ ರೈತ ಇಬ್ರಾಹಿಮನ ಮಕ್ಕಳು. ಅವರು ಹುಟ್ಟಿದ್ದು, ಬೆಳೆದದ್ದು ಗೌಡರ ಆಶ್ರಯದಲ್ಲಿಯೆ. ಅವರಿಗೆ ಗೌಡರ ಎಲ್ಲ ಸುದ್ದಿಯೂ ಗೊತ್ತಿತ್ತು. ಅವ್ವ ಗೌಡರನ್ನೇ ನಂಬಿ ನಡೆಯುವ ಹೆಂಗಸಾದ್ದರಿಂದ ಅವಳ ಹೆಸರಿಗೆ ನಾಲ್ಕು ಎಕರೆ ಹೊಲ ಹಚ್ಚಿದ್ದಾರೆಂದು ಕಾಶೀಮ ತನಗೆ ಹೇಳಿದ್ದ. ಸಾಲೆ, ಅಭ್ಯಾಸ, ಗೆಳತಿಯರೊಡನೆ ಆಟ, ಕಾಶೀಮನ ಒಡನಾಟದಲ್ಲಿ ತಾನು ಹಾಯಾಗಿ ದಿನ ಕಳೆಯುತ್ತಿದ್ದಳು. ಹೊಟ್ಟೆಯ ತುಂಬ ಊಟ, ಒಳ್ಳೆಯ ಅರಿವೆ, ಪಟ್ಟಣಕ್ಕೆ ಹೋದಾಗಲೆಲ್ಲ ಗೌಡರು ತರುತ್ತಿದ್ದ ಸಿಹಿ ತಿಂಡಿತಿನಸು, ಬಳೆ, ರಿಬ್ಬನ್ನು, ಹೂವು, ಇವುಗಳಿಂದಲೇ ತನಗೆ ಹಬ್ಬ. ಇವುಗಳನ್ನು ತನಗೆ ತಂದುಕೊಡುವ ಗೌಡರನ್ನು ಕಂಡರೆ ಭಯ, ಭಕ್ತಿ. ಅವರ ಹತ್ತಿರ ಹೋಗಲು ಹೆದರಿಕೆಯಾಗುತ್ತಿತ್ತು. ಗೌಡರ ಮಕ್ಕಳಾದ ನಿಂಗಣ್ಣ, ನೀಲಾ, ತಮ್ಮ ತಂದೆಯ ತೊಡೆಯ ಮೇಲೆ ಆಡುತ್ತಿದ್ದುದನ್ನು ಒಮ್ಮೊಮ್ಮೆ ಬಾಗಿಲ ಸಂದಿಯಲ್ಲಿ ನಿಂತು ಇಣುಕಿ ನೋಡುತ್ತಿದ್ದಳು. ಹಾಗೆ ನೋಡುತ್ತಿದ್ದಾಗ ಗೌಡತಿ ಬಂದುಬಿಟ್ಟರೆ ತೀರಿತು. ಹುಲಿ ಕಂಡ ಚಿಗರಿಯಂತೆ ತಾನು ಹೆದರಿ ಓಡುತ್ತಿದ್ದಳು. ಓಡುತಿದ್ದ ತನ್ನನ್ನೂ, ದುಮುಗುಟ್ಟುವ ಹೆಂಡತಿಯ ಮುಖವನ್ನೂ ನೋಡಿ ಗೌಡರು ಹಾಹಾಹಾs ಎಂದು ಚಾವಣಿ ಹಾರಿಹೋಗುವ ಹಾಗೆ ನಗುವುದು ತನಗೆ ರಸ್ತೆಯಲ್ಲಿಯೂ ಕೇಳುತ್ತಿತ್ತು. ಹಾಗೆ ಒಮ್ಮೆ ಓಡುತ್ತಿದ್ದಾಗ ತಾನು ಬಿದ್ದುಬಿಟ್ಟಿದ್ದಳು. ರಸ್ತೆಯ ಕಲ್ಲು ಹಣೆಗೆ ನಟ್ಟು, ರಕ್ತಸುರಿದು ಕಣ್ಣು ಕತ್ತಲೆ ಬಂದಾಗ ಕಾಶೀಮನೇ ಎತ್ತಿಕೊಂಡು ಮನೆಗೆ ತಂದು ಇಳಿಸಿದ್ದ. ಡಾಕ್ಟರ ಹತ್ತಿರ ಗಾಯಕ್ಕೆ ಪಟ್ಟಿ ಕಟ್ಟಿಸಿಕೊಂಡು ಬಂದು ಉಪಚಾರ ಮಾಡಿದ. ಅವನು ಮಾಡಿದ್ದು ಒಂದಲ್ಲ ಎರಡಲ್ಲ.

ತಾನು ದೊಡ್ಡವಳಾದಂತೆ ಗೌಡರ ಮನೆಗೆ ಹೋಗುವುದನ್ನು ಬಿಟ್ಟು ಬಿಟ್ಟಿದ್ದಳು. ಅವರ ಮನೆಯವರು ತನ್ನನ್ನು ಕೀಳಾಗಿ ನೋಡುವುದು ತನಗೆ ಸೇರುತ್ತಿರಲಿಲ್ಲ. ಅವ್ವ ಎಷ್ಟು ಕೇಳಿಕೊಂಡರೂ ಹಟಕ್ಕೆ ಬಿದ್ದು ತಾನು ಹೋಗುತ್ತಿರಲಿಲ್ಲ. ಕಾಶೀಮನನ್ನು ಕರೆ ಎಂದರೆ ಮಾತ್ರ ಹೋಗುತ್ತಿದ್ದಳು. ಗೌಡರ ಮನೆಗೆ ತಾನು ಹೋಗದಿದ್ದರೂ ಸಾಲೆಗೆ ಹೋಗುವಾಗ, ಬರುವಾಗ ಕಾಶೀಮ ಭೇಟಿಯಾಗುತ್ತಿದ್ದ. ಮೊದಲಿನಂತೆ ಮೈ ಕೈ ಮುಟ್ಟಿ ಸಲಿಗೆ ಮಾಡುತ್ತಿರಲಿಲ್ಲ. ಆದರೂ ಕೂತು ಮಾತಾಡುವುದೂ, ಹೂವು ಹಣ್ಣು ತಂದು ಕೊಡುವುದೂ ಬಿಟ್ಟಿರಲಿಲ್ಲ. ಅಪ್ಪನಿಗೆ ಗೌಡರು ಕೊಟ್ಟ ಹೊಲವನ್ನು ಕಾಶೀಮ ತಾನೇ ಹರಗಿ, ಉತ್ತು, ಬಿತ್ತಿ ಕೊಡುತ್ತಿದ್ದ. ಇದರಿಂದ ಗೌಡರನ್ನು ಬಿಟ್ಟರೆ ನಮ್ಮ ಮನೆಗೆ ಅವನೇ ಹತ್ತಿರದವನಾಗಿದ್ದ. ದೊಡ್ಡವಳಾಗಿ ಸೀರೆ ಉಡುವ ಹಾಗಾದ ಮೇಲೆ ಅವನನ್ನು ನೋಡಿದೊಡನೆ ತನ್ನ ಮೈಯಲ್ಲಿ ಮನಸ್ಸಿನಲ್ಲಿ ಏನೇನೋ ಆಗುತ್ತಿತ್ತು. ಅವನ ಹತ್ತಿರ ಒಬ್ಬಳೇ ಇದ್ದರೆ ನಡುಕ, ನಾಚಿಕೆ, ಸಂತೋಷ, ಏನಾಗುತ್ತಿತ್ತೋ ಹೇಳಲಿಕ್ಕೂ ಬರುವಂತಿರಲಿಲ್ಲ. ಅವನೂ ಈಗ ಹೇಳುತ್ತಿರುತ್ತಾನೆ, ತನಗೂ ಹಾಗೇ ಆಗುತ್ತಿತ್ತಂತೆ.

ಇಮಾಮನ ನಾಯಿ ಜೋರಾಗಿ ಬೊಗಳಿದಾಗ ಸುಶೀಲೆ ಗಡಬಡಿಸಿ ಎದ್ದಳು. ಮಂಪರಿನಲ್ಲಿ ಕಾಶೀಮನ ತೆಕ್ಕೆಯಲ್ಲಿದ್ದಂತೆ ಕನಸು ಕಾಣುತ್ತಿದ್ದವಳು ಬರಿ ಹಾಸಿಗೆ ನೋಡಿ, ನಿಟ್ಟುಸಿರು ಬಿಟ್ಟು, ಇಂದು ತಾನು ಕೋರ್ಟಿಗೆ ಸಾಕ್ಷಿ ಹೇಳಲು ಹೋಗಬೇಕೆನ್ನುವುದು ನೆನಪಾಗಿ ಹಾಸಿಗೆಯಿಂದ ಎದ್ದು ಹಿತ್ತಲಿಗೆ ಬಂದಳು.

ಅಲ್ಲೊಂದು ಮುಟ್ಟಾಟ ನಡೆದಿತ್ತು. ಇಮಾಮನ ಒಂದು ದೊಡ್ಡ ಕೋಳಿ ಮೋಟುಗೋಡೆಯನ್ನು ಹಾರಿ ತನ್ನ ಹಿತ್ತಲಿಗೆ ಬಂದಿತ್ತು. ಅದನ್ನು ಹಿಡಿದೊಯ್ಯಲು ಸಲೀಮಾ, ನಬೀ ಓಡಾಡುತ್ತಿದ್ದರು. ಅದು ಅವರ ಕೈಗೆ ಸಿಕ್ಕದಂತೆ ರೆಕ್ಕೆ ಪಟಪಟ ಬಡಿದು ಮತ್ತೆ ಓಡುತ್ತಿತ್ತು. ಕೊನೆಗೆ ಇಮಾಮನೇ ಗೋಡೆ ಜಿಗಿದು ಬಂದು ಕೋಳಿಯನ್ನೆತ್ತಿಕೊಂಡು ಮುಖ ತೊಳೆಯುತ್ತಿದ್ದ ಸುಶೀಲೆಯತ್ತ ದುರುಗುಟ್ಟಿ ನೋಡಿ, ಕ್ಯಾಕರಿಸಿ ಉಗುಳಿ,

" ಹಲ್ಕಾ ರಂಡೇs, ನನ್ನ ತಮ್ಮಾಗ ಒಳೇ ಗಂಟು ಬಿದ್ದೀ ನೀನು. ಅವನ ಬಾಳೇ ಹಾಳುಮಾಡಿದಿ " ಎಂದ.

ಸುಶೀಲೆ ಏನೂ ಕೇಳದವಳಂತೆ ಸುಮ್ಮನೆ ಹಲ್ಲು ತಿಕ್ಕುತ್ತಿದ್ದಳು. ಅವನಿಗೆ ಉತ್ತರಕೊಡದೆ 'ಥೂ' ಎಂದು ಉಗುಳಿದಳು. ಕಾಶೀಮ ಹೋದಾಗಿನಿಂದ ಇದೇ ತರದ ಮಾತು ಕೇಳಿ ಕೇಳಿ ಬೇಸತ್ತಿದ್ದಳು. ಇವತ್ತು ಕೊನೆಯ ದಿನ. ಕೋರ್ಟಿನಲ್ಲಿ ಏನಾಗುವುದೋ ನೋಡಬೇಕು. ಕಾಶೀಮನಿಗೆ ಶಿಕ್ಷೆ ಕೊಡುವರೋ, ಖುಲಾಸೆ ಮಾಡುವರೋ ಎಲ್ಲವೂ ತನ್ನ ಸಾಕ್ಷಿಯನ್ನೇ ಅವಲಂಬಿಸಿದೆ ಎಂದು ವಕೀಲರು ಹೇಳಿದ್ದರು. ಮುಖದ ಮೇಲೆ ಕೈಯಾಡಿಸುತ್ತ ಕೈ ಕುತ್ತಿಗೆಗೆ ಹೋಯಿತು. ಕೊರಳು ಬರಿದಾಗಿತ್ತು. ಇಮಾಮ ಅವಳನ್ನು ನೋಡುತ್ತ ನಿಂತೇ ಇದ್ದ. ಇವತ್ತು ಅವನ ಸಿಟ್ಟು ಹೆಚ್ಚಾದಂತಿತ್ತು.

ಅವಳ ಕಡೆಗೆ ಕೈ ತಿವಿಯುತ್ತ "ಏ ಛಿನಾಲೀ, ನಿನಗೆ ಏಟೂ ಚಿಂತಿ ಇಲ್ಲೇನು? ಕಾಶೀಮ ನಿನ್ನ ಗಂಡ ಅಂತ ಹೇಳ್ತೇದಿ. ಅಂವಾ ನಿನ್ನ ಸಲುವಾಗಿ ಕಾಲು ಮುರುಕೊಂಡು ಜೇಲಿನ್ಯಾಗ ಬಿದ್ದರೂ ನಿನ್ನ ಸೊಕ್ಕು ಮುರದಿಲ್ಲೇನು?" ಎಂದು ಒದರಿದ.

ಈಗ ಸುಶೀಲೆ ತಡೆಯಾಗಲಿಲ್ಲ. 'ಹೋಗೋ ಮೂಳಾ' ತಮ್ಮನ ಮ್ಯಾಲೆ ಅಟ ಪಿರೂತಿ ಇದ್ದಾಂವಾ ನೀನು ಬಿಡಿಸಿಕೋಬೇಕಾಗಿತ್ತು. ಎಲ್ಲರೂ ಕೂಡಿ ಅಂವನ್ನ ಹೊಡಿಯೂ ಮುಂದ ನೀ ಏನ ಸತ್ತಿದ್ದೇನ? ನಿನ್ನ ಮಂದಿ ಕರಕೊಂಡು ಬಂದು ಹೊಡದಾಡಬೇಕಾಗಿತ್ತು" ಎಂದು ಮತ್ತೆ ಮುಖಕ್ಕೆ ನೀರು ಉಗ್ಗಿಕೊಂಡಳು.

"ಗೌಡರು ದೊಡ್ಡವರು. ಅವರ ಇರೋದ ಹ್ಯಾಂಗ ಬಡದಾಡೋದು? ನೀವು ಗಂಡಾ-ಹೆಂಡ್ತಿ ಅಲ್ಲಾ, ನೀನು ನಿಮ್ಮ ಜಾತಿ ಬ್ಯಾರೆ ಬ್ಯಾರೆ ಅಂತ ಅವರೆಲ್ಲಾ ಹೇಳಿದ ಮುಂದ ನೀನು ಕಾಶೀಮನ ಬಿಟ್ಟು ಹೋಗಬೇಕಾಗಿತ್ತು. ನಿನಗ ಆಸರಾ ಕೊಟ್ಟು ಮನ್ಯಾಗ ತಂದು ಇಟಕೊಂಡು ಗೌಡರ ಇರೋದ ಬಡದಾಡಿ ಕಾಲು ಮುರಕೊಂಡ. ನೀ ಪಿಶಾಚಿ ಹಿಡದಾಂಗ ಹಿಡಿದ ಅವನ್ನ" ಇಮಾಮ ದನಿ ಏರಿಸಿದ.

"ನಾ ಅವನ ಹಿಡದೇನಿ. ಹೇಣ್ತಿ ಅಂತ ಹೇಳಿ ಮಂಗಳಸೂತ್ರಾ ಕಟಿಕೊಂಡೇನಿ. ಅವನ ಕೈ ನನ್ನ ಜೀಂವಾ ಇರೂ ತನಾ ಬಿಡೂದಿಲ್ಲ. ಹೆಂಗಸಾಗಿ ಹುಟ್ಟಿದ್ರೂ ಇವತ್ತ ಕೋರ್ಟಿಗೆ ಹೋಗಿ ಅವನ್ನ ಬಿಡಿಸಿಕೊಂಡು ಬಂದು ಇದs ಊರಾಗ ಬಾಳೇ ಮಾಡತೇನಿ. ನೀನು ಬಳೇ

ಇಟಗೊಂಡು ಮನ್ಯಾಗ ಕುಂಡ್ರ ಹೆಂಗಸರಾಂಗ'' ಎಂದವಳೇ ಹಿತ್ತಲು ಬಾಗಿಲು ರಪ್ಪನೆ ಮುಚ್ಚಿಕೊಂಡಳು.

* * *

"ರಾಮಣ್ಣಾs ಏ ಯಣ್ಣಾs ಬಾರಪ್ಪೋ ಕೋರ್ಟಿಗೆ ಹೋಗೋಣ" ಸುಶೀಲೆ ಕೂಗಿದಾಗ ಬೀಡಿ ಹಚ್ಚಿಕೊಳ್ಳುತ್ತಲೇ ಹೊರಗೆ ಬಂದ ರಾಮಣ್ಣ,

'' ಸೂಸವ್ವ, ನೀ ಮುಂದ ನಡಿ. ಸ್ವಲ್ಪ ಕೆಲಸ ಐತಿ. ನೀ ಕತ್ತರಿಗೆ ಹೋಗೂದರಾಗ ನಾ ಬರತೇನಿ ಎಂದ.''

ಹಳ್ಳಿಯಿಂದ ಪಟ್ಟಣಕ್ಕೆ ಮೂರು ಮೈಲಿನ ದಾರಿ. ಸುಶೀಲೆಗೆ' ಅಷ್ಟು ನಡೆಯುವುದೇನೂ ಕಷ್ಟದ ಕೆಲಸವಲ್ಲ. ಈಗ ಇಪ್ಪತ್ತು ದಿನಗಳಿಂದ ಜೇಲಿಗೆ ದವಾಖಾನೆಗೆ ಎಷ್ಟೋ ಸಲ ಓಡಾಡಿದ್ದಳು. ಇವತ್ತು ಕೊನೆಯ ದಿನ. ಕಾಶೀಮನನ್ನು ಬಿಡಿಸಿಕೊಂಡೇ ಬರಬೇಕು ಎನ್ನುವ ಹುರುಪಿನಿಂದ ದಾಪುಗಾಲು ಹಾಕುತ್ತಿದ್ದಳು. ಕಳೆಕೀಳಲು ಹೊರಟ ಹೆಂಗಸರ ಗುಂಪೊಂದು ಹಿಂದಿನಿಂದ ಬಂದು ಅವಳನ್ನು ಕೂಡಿಕೊಂಡಿತು. ಅವರೆಲ್ಲರೂ ಅವಳಿಗೆ ಗುರುತಿನವರು. ಚಿಕ್ಕಂದಿನಿಂದಲೂ ಅವಳನ್ನು, ಅಂಬವ್ವನನ್ನು, ಕಾಶೀಮನನ್ನು ಬಲ್ಲವರು.

" ಸೂಸವ್ವಾ ಶಹರಕ ಹೊಂಟೇಯೇನ ಬೇ?

" ಹೌದಬೇ ಚಿಗವ್ವಾ. "

" ಕಾಶೀಮನ ಕಾಲುನೋವು ಕಡಮೆ ಆಗ್ಯೆತೇ ನಬೇ ? ''

'' ಕಾಲು ಮುರಿದಿತ್ತವ್ವಾ, ಅದಕ್ಕೆ ಸಿಮೆಂಟು ಹಾಕಿದ್ರು. ಈಗ ಬಿಚ್ಚ್ಯಾರ, ಹಗರಕ ನಡೀತಾನ.''

" ಪಾsಪ ಹದಿನೆಂಟು ಮಂದಿ ಕೂಡಿ ಬಡದರ ಅವನ ಮೈ ಏನಾದೀತು ? ಹಣೀಗೂ ಟಾಕೀ ಹಾಕ್ಯಾರಂತಲ್ಲ ಸೂಸವ್ವಾ. "

'' ಹೌದಬೇ. ಆದರೂ ಗಾಯ ಮಾಯ್ದತಿ. ಆರಾಮ ಅದಾನ. ಈಗ ಅವನ್ನ ಹ್ಯಾಂಗ ಬಿಡಿಸಿಕೊಂಡ ಬರಬೇಕು ಅನ್ನೂದೊಂದೆs ಚಿಂತೆಯವ್ವಾ ನನಗ.''

'' ಶಿವಶಿವಾ ಹೆಂತಾ ಕಾಲ ಬಂತಪ್ಪಾ. ಹೊಡತ ತಿಂದಾಂವಾ ಅಂವಾ. ಮತ್ತ ಅವನ್ನ ಜೇಲಿಗೆ ಹಾಕ್ಯಾರಂತಲ್ಲ'' ಒಬ್ಬ ಮುದುಕಿ ನಿಟ್ಟುಸಿರಿಟ್ಟಳು.

“ ರೊಕ್ಕ ಇದ್ದವರ ಕಾಲವ್ವಾ ಇದು ಯವ್ವಾ. ಸುಳ್ಳು ಖರೇವು ಯಾರೂ ಕೇಳಾಂಗಿಲ್ಲ. ಗೌಡರ ನಿಂಗಣ್ಣ ಅವನ ಗೆಣ್ಯಾರು ಕೂಡಿ ಕಾಶೀಮನ್ನ ಹೊಡೆದರು. ಮತ್ತು ಪೋಲೀಸರಿಗೆ ಹೇಳಿ ಅವನ್ನ ಜೇಲಿಗೆ ಹಾಕಿದರು. ”

“ ಸೂಸಕ್ಕಾ ಕಾಶೀಮಣ್ಣ ಗೌಡರ ರೈತಾ. ಸಣ್ಣಾಂದಿರತ ಅವರ ಮನ್ಯಾಗ ಜೀತಾ ಮಾಡ್ಯಾನು. ಅವನ್ಯಾಕ ಹೊಡೆದರು ಜೀಂವಾ ಹೋಗೋ ಹಾಂಗ ? ”

“ ಯವ್ವಾ ಆ ಕತಿ ದ್ವಾಡದೈತಿ, ಹೇಳಿದರ ಮುಂದಿಗಿ ಗೊತ್ತಾಗ ತೈತಿ. ಇಲ್ಲಾಂದರ ಎಲ್ಲಾರೂ ಕಾಶೀಮುನ ತಪ್ಪ ಮಾಡ್ಯಾನೋ ಏನೋ ಅಂತ ತಿಳಿಕೋತಾರ. ನಾ ಹೇಳ್ತೀನಿ ಕೇಳಿ. ಗೌಡರು ನಮ್ಮವ್ವಗ ನಾಲ್ಕು ಎಕರೆ ಹೊಲಾ ಹಚ್ಚಿದ್ದು ನಿನಗೆ ಗೊತ್ತೈತೆಲ್ಲ. ” ಸುಶೀಲೆಗೆ ತನ್ನ ಸುಖ ದುಃಖ ಕೇಳಲು ಊರಲ್ಲಿ ಜನ ಇದ್ದಾರೆನ್ನುವ ಸಮಾಧಾನ ಸಿಕ್ಕಿತ್ತು.

“ ಹೌದಬೇ, ಅಂಬವ್ವ ಗೌಡರಿಗೆ ಹೆಂಗಸಾದರೂ ಗರತಿ ಗಂಗವ್ವನ ಹಾಂಗ ನಂಬಿಗಿಯಿಂದ ನಡಕೊಂಡಳು ಅನ್ನೋದು ಊರಿಗೇ ಗೊತ್ತೈತಿ, ಆಕೀ ಹೊಟ್ಟೆಗೆ ಬೇಕು ಅಂತ ಹೊಲಾ ಹಚ್ಚಿದರು. ಅವರಿಗೇನ ಕಡಿಮಿ ಐತಿ, ಮನಾರ ಒಟ್ಟೈತಲ್ಲಾ. ”

ಕಾಶೀಮಾ ನಮ್ಮ ಹೊಲಾ ಮಾಡತಿದ್ದಾ, ಕಾಳು–ಕಡ್ಡಿ ಎಲ್ಲಾ ಸುಸೂತ್ರ ತಂದ ಹಚ್ಚತಿದ್ದಾ. ನಮಗ ಹೊಟ್ಟೀ ಚಿಂತಿ ಇದ್ದಿದ್ದಿಲ್ಲ. ಆಮ್ಯಾಕೆ ಗೌಡರು ಸತ್ರು. ಆವಾಗ ನಿಂಗಣ್ಣಾ ಕಾಶೀಮುಗ ಬೆದರಿಸಿದ ನಂತ. ಕಾಳು-ಕಡ್ಡಿ ನಮ್ಮ ಮನೀಗೆ ತಂದುಹಾಕು. ನಾನು ಅಂಬವ್ವನ ಹೊಟ್ಟೀಗೆ ಕೊಡುತೀನಿ ಅಂತ ಅಂದನಂತ. ಅದು ನಮ್ಮ ಅವ್ವನ ಕಿವೀಗೆ ಬಿತ್ತು. ಆಕಿ ಹೋಗಿ ಗೌಡಶಾನಿ ಕಾಲು ಹಿಡಕೊಂಡು ಕಣ್ಣೀರ ಹಾಕಿ ದಳು. ಆಗ ಸುಮ್ಮನಾದ. ಮುಂದ ಅವ್ವ ಸಾಯೂ ಮುಂದ ಗೌಡರ ಮಗನ್ನ ಕರೀರಿ ಅಂತ ಹೇಳಿ ವಿಲಿವಿಲಿ ಒದ್ದಾಡಿದ್ಲು. ಹೇಳಿಕಳಿಸಿದ್ರೂ ಒಬ್ರೂ ಬರಲಿಲ್ಲ. ಹತ್ತರ ಇದ್ದ ಕಾಶೀಮುಗ ನನ್ನ ಮಗಳು ಜ್ವಾಕಿ ಅಂತ ಹೇಳಿ ಜೀವಾಬಿಟ್ಳು. ”

“ ಮುಂದ ಗೊತ್ತಾದ ಬಿಡು. ನೀವಿಬ್ಬರೂ ಕೂಡಿ ಆಡಿದ್ರಿ, ಮಾಡಿದ್ರಿ, ಹೇಣ್ತಿ ಅಂತ ನಿನ್ನ ಮನೀಗೆ ಕರಕೊಂಡು ಹೋಗಿ ಕಾಶೀಮು

ಮಂಗಳಸೂತ್ರ ಕಟ್ಟಿದಾ. ಐಯ್ಯಾ ಪಿರೀತಿ ಮಾಡಿ ಮುಸಲರವಾ ಗೌಡರ ಮಗಳ್ನ ಲಗ್ನಾ ಮಾಡಿಕೊಂಡಾನ ಅಂತ ಆಡಿಕೊಂಡು ಊರ ಮಂದಿ ಬಿದ್ದ ಬಿದ್ದ ನಕ್ಕರು '' ಎಂದಳು ಮಾಯವ್ವ.

ನಡೆಯುತ್ತಿದ್ದ ಸುಶೀಲೆ ಥಟ್ಟನೆ ನಿಂತಳು.

''ಚಿಗವ್ವಾ, ನಾನು ಗೌಡರ ಮಗಳು ಅಂತ ಈ ಊರವರು ಯಾವ ಬಾಯಿಂದ ಹೇಳತಾರ ? ಬಿದ್ದ ಬಿದ್ದ ನಕ್ಕರು ಅಂತ ಹೇಳ್ತಿಯಲ್ಲ ಅವರು ನನ್ನ ಮದಿವಿ ಮಾಡಿಕೋತಿದ್ದರೇನು ? ನಮ್ಮವ್ವ ಸತ್ತಾಗ ಯಾರರೆ ಬಂದರೇನು ? ಪರದೇಶಿ ಮಗಳು ಅಂತ ಯಾರರೆ ಅಕ್ಕರತಿ ತೋರ್ಸಿದರೇನು ? ಆವಾಗ ಕಾಶೀಮನ್ನ ಬಿಟ್ಟರ ನನಗ ಯಾರ ದಿಕ್ಕಿದ್ದರು ? ಸೂಳಿ ಮಗಳ ಸಂಗತಿ ಬ್ಯಾಡಾ ಅನ್ನೂ ಹಾಂಗ ಎಲ್ಲಾರೂ ಮಾರಿ ತಿರಿವಿದರು. ಅವ್ವ ಸತ್ತಮ್ಯಾಲೆ ನಿಂಗಣ್ಣನ ಹಾಡಾಟ ಮತ್ತ ಸೂರು ಆತು. ' ಹೋ ನನ್ನ ತಾಬೇಕ ತೊಗೋತಿನಿ. ಈ ಕಾಗದಕ ಸಹೀ ಮಾಡು, ಅಂದಾ. "ನಮ್ಮಪ್ಪ ಹೊಲ ನನಗ ಕೊಟ್ಟಾರ ನಾ ಸಹಿ ಮಾಡೂದಿಲ್ಲ, ಹೊಲಾ ನಂದು. ಅದು ಹೋದರ ನಾನು ಹೊಟ್ಟೆಗೆ ಕೇರ ಹಾಕ್ಕೊಳ್ಳೇನು ? '' ಅಂದೆ.

" ಅದಕ್ಕೇನಂದಾ ನಿಂಗಣ್ಣಾ. ''

" ಸೂಳಿ ಮಗಳಿಗೆ ಹೊಟ್ಟೆ ತುಂಬೂದೇನು ಕಷ್ಟ ಇಲ್ಲ. ಅಂಗಡಿ ತಗಿ ಯಾಪಾರ ಮಾಡು" ಅಂದಾ. ನನಗ ಮೈ ಉರೀತು ನೋಡಬೇ. ನಾನೂ ತಿರಿಗಿ ಅಂದೆ ' ಈ ಮಾತು ನಿಮ್ಮ ಮನ್ಯಾಗಿನ ತಂಗಿಗೆ ಹೇಳ ಹೋಗೋ ' ಅಂತ. ''

" ಐಯ್ಯಾ ನನ ಶಿವನ ಆಕಿ ಒಬ್ಬಾಕಿ ತಂಗೇನ ಈ ನಿಂಗಣ್ಣಗ. ನೀನೂ ಅವರ ಅಪ್ಪನ ಮಗಳs ಅಲ್ಲೇನು ? ಇಷ್ಟೂ ತಿಳಿಯೂದಿಲ್ಲs. ನಿನ್ನ ಹೊಲದ ಮ್ಯಾಲ್ಯಾಂಕ ಅವನ ಕಣ್ಣು. ಅವನಿಗೆ ಏನ ಕಡಿಮಿ ಆಗ್ಯೆತಿ. "

'' ಮನಿಶ್ಯಾನ ಆಶೇಕ ಮಿತಿ ಇಲ್ಲಾ ಚಿಗವ್ವಾ. ಎಷ್ಟ ಇದ್ದರೂ ಇನ್ನೂ ಬೇಕು ಅಂತಾನ. ಆಮ್ಯಾಗ ದಿನಾ ಬಂದ ತ್ರಾಸ ಕೊಡಾಕ ಹತ್ತಿದಾ. ಒಬ್ಬಾಕೆ ಮಲಗಿದಾಗ ದಬಾ ದಬಾ ಬಾಗಿಲು ಬಡಿಯೂದು, ಮನೀಮ್ಯಾಲೆ ಕಲ್ಲು ಒಗಿಯಾದು ಮಾಡಿದಾ. ಇದನ್ನೆ ನೋಡಿ

ಮೂರು ಸಂಜೀಗೆ ಮುಂಚೆ ಬಾಗಿಲಾ ಹಾಕ್ಕೊಂಡು ಮಲಗತಿದ್ದೆ. ತಂಬಿಗಿ ತೊಗೊಂಡು ಹಳ್ಳಕ್ಕೆ ಹೋದರ ಯಾರ ಬೆನ್ನತ್ತ್ಯಾರೋ ಅಂತ ಹೊಳ್ಳಿ ಹೊಳ್ಳಿ ನೋಡತಿನ್ನಿ. ಮನೀ ಬಿಟ್ಟ ಹೊರಗ ಹೋಗೂದು ಅಂದರ ಜೀವಸದ ಸುತ್ತ ಬರತಿತ್ತು. ಒಮ್ಮೊಮ್ಮೆ ಸತ್ತರೆ ಹೋಗಲ್ಯಾ ಅಂತಿದ್ದೆ. ಕಾಶೀಮನ ಮುಂದ ದಿನಾ ಅಳತಿದ್ದ. ಒಂದ ದಿನಾ ಅಂವಾ ' ನಿನಗ ಯಾರೂ ದಿಕ್ಕಿಲ್ಲ ಸೂಸೀ. ಅದಕ್ಕ ಹಾಂಗ ಮಾಡತಾರ. ಎಷ್ಟ ದಿನ ಅಳತೀ. ನಮ್ಮ ಮನೀಗೆ ಬಂದಬಿಡು. ನಾ ನಿನ್ನ ಮದುವಿ ಮಾಡಿಕೋತಿನಿ ಅಂದಾ. ನನಗ ಏನ ಹೇಳಬೇಕೋ ತಿಳೀಲಿಲ್ಲ. ಇಮಾಮು ಸುಮ್ಮನಿರತಾನೇನು ? ಅಂದೆ. ನಾವು ಇಬ್ಬರು ಬ್ಯಾರ ಇರೂಣ ಅಂದಾ. ಆವಾಗ ನಾ ಸುಮ್ಮನ ನನ್ನ ಮನೀ ಖಾಲಿಮಾಡಿ ಅವನ ಹಿಂದ ಮನೀಗೆ ಹೋದೆ. ಅವರಣ್ಣ ನಾನಾತರದ ಬೈಗಳಾ ಬೈದಾ. ಹೊಡ್ಯಾಕೂ ಬಂದಾ. ಕಾಶೀಮ ಜಪ್ಪ ಅನಲಿಲ್ಲಾ. ಅಡಗಿ ಮನಿ, ಕ್ವಾಣಿ ಬ್ಯಾರೇ ಮಾಡಿಕೊಂಡಾ. ನನಗೊಂದು ಮಂಗಳಸೂತ್ರಾ ಕಟ್ಟಿದಾ. ನಾವು ಸಂಸಾರಾ ಹೂಡಿದ್ವಿ. '' ಉಕ್ಕಿಬರುತ್ತಿದ್ದ ಕಣ್ಣೀರು ಒರೆಸಿಕೊಂಡಳು ಸುಶೀಲೆ.

" ಇರಲಿ ಬಿಡು ಸೂಸವ್ವ ಅಳಬ್ಯಾಡಾ. ಹಾಂಗ ಹೇಳು ಮುಂದೇನಾತು ? " ಕೆಂಚವ್ವ ಬೆನ್ನ ಮೇಲೆ ಕೈಯಿಟ್ಟು ಸಮಾಧಾನ ಮಾಡಿದಳು. ಆ ಪರದೇಶಿಯ ದುಃಖವನ್ನು ನೋಡಿ ಎಲ್ಲರ ಬಾಯಿ ಬಂದಾಗಿದ್ದವು, ಕಣ್ಣು ಹನಿಯಾಗಿದ್ದವು.

" ಹೊಲಾ ತಿರಿಗಿ ಸಿಗಲಿಲ್ಲ ಅನ್ನೂ ಸಿಟ್ಟಿಗೆ ಒಂದ ದಿನ ರಾತ್ರಿ ನಿಂಗಣ್ಣಾ ಎಂಟ್ಹತ್ತು ಮಂದಿ ಕುಡುಕರ್‍ನ ಕರಕೊಂಡು ಬಂದು, ಒದ್ದು, ಬಾಗಲಾ ತಗಿಸಿ, ಬಾಯಿಗೆ ಬಂದ್ಹಾಂಗ ನನ್ನ ಬಯ್ದಾ. ಹೊಯ್ಮಾಲಿ ಎಷ್ಟು ಹಾರ್‍ಯಾಡತಾಳ ಸೀರಿ ಕಳದ ಹೊಡೀರೆಲೆ ಆಕೀನ್ನ. ಮದುs ಅಂತ, ಹೇಣ್ತೀ ಅಂತ. ಕಸುಬು ಮಾಡೂದು ಬಿಟ್ಟು ಮುಸ ಲನ ಕೂಡ ಸಂಸಾರ ಮಾಡತಾಳಂತ ಅಂತ ಒದರ್‍ಯಾಡಿದಾ. ನಾಕ ಮಂದಿ ಕೂಡಿ ನನ್ನ ಎಳದ್ರ, ಕಾಶೀಮ ಬಿಡಿಸಿಕೊಳ್ಳಾಕ ಬಂದಾ. ಎಲ್ಲರೂ ಕೂಡಿ ಅವನ್ನ ಹಣದ್ರು. ಇವನೂ ಸುಮ್ಮನ ಇರಲಿಲ್ಲಾ ಕೈಗೆ ಸಿಕ್ಕ ಬಡಿಗಿ ತೊಗೊಂಡು ಹೊಡದಾ. ತಾನೂ ಕಾಲು ಮುರಕೊಂಡ. ಇಷ್ಟೆಲ್ಲಾ ಮಾಡಿ ಮತ್ತ ನಿಂಗಣ್ಣ ಕಾಶೀಮ ಲುಚ್ಚಾ ಅದಾನ, ಗುಂಡಾಗಿರಿ

ಮಾಡತಾನ. ಊರಾಗಿನ ಹೆಂಗಸರ ಮ್ಯಾಲೆ ಕೈ ಮಾಡತಾನ ಅಂತ ಪೊಲೀಸರಿಗೆ ಹೇಳಿ ಜೇಲಿಗೆ ಹಾಕಿಸಿದ. ಖಟ್ಲಿ ಹಾಕಿಸಿದಾ. ತಿಂಗಳಾ ತಬೇ ಕಾಶೀಮ ಜೇಲಿನ್ಯಾಗ ಬಿದ್ದು, ಕಾಲಿಗೆ ಸಿಮೆಂಟು ಹಾಕ್ಯಾರ. ನಡಿಯಾಕ ಬರಾಂಗಿಲ್ಲ. ಹೊಟ್ಟೆ ತುಂಬ ಕೂಳು ಕೊಡಾಂಗಿಲ್ಲ. ಮತ್ತು ಮ್ಯಾಲೆ ಒದೀತಾರಂತ, ಬಡೀತಾರಂತ. ಕಡದರೆ ಎರಡ ಆಳ ಅಕ್ಕಿದ್ದಾ. ಈಗ ಸೊರಗಿ ಕಡ್ಡಿ ಆಗ್ಯಾನ. ಯಮ್ಮಾss. ನಾ ಏನ ಮಾಡ್ಲಿ. ಎಲ್ಲಿಗ ಹೋಗ್ಲಿ ಅಂತ ಹುಚ್ಚ ಹಿಡಿದಾಂಗ ಆಗೈತಿ. ಶಿವ ಶಿವಾ ಆ ದೇವರಿಗೆ ಕಣ್ಣಿಲ್ಲೇನಬೇ. ನಾವೇನು ಪಾಪ ಮಾಡೀವೋ ಏನೋ " ಸುಶೀಲೆ ಸೆರಗಿಗೆ ಮುಖವಿಟ್ಟು ಭೋರೆಂದು ಅತ್ತುಬಿಟ್ಟಳು.

"ಸೂಸವ್ವಾss. ಅಳಬ್ಯಾಡಾ. ನೀನು ದಿಟ್ಟ ಹೆಣಮಗಳು ಅದೀ ಅಂತ ಹೊಡದಾಡಾಕ ನಿಂತೀದಿ. ಧೈರ್ಯಾ ತೊಗೋ. ಗಟ್ಟಿ ಮನಸ್ಸು ಮಾಡು. ನೀನು ವಕೀಲರಿಗೆ ಇಟ್ಟೀಯಂತಲ್ಲ. ಅವರು ಕಾಶೀಮನ್ನ ಬಿಡಸ್ತಾರ. ಅವರಿಗೇ ಕೈಕಾಲ ಬೀಳು. ದೇವರು ನೆಟ್ಟಗ ಮಾಡ ತಾನ. ಹಣ ಮಪ್ಪಗ ಹರಕೀ ಹೊರು. ತಂಗೀ ಅಳಬ್ಯಾಡಾ. ಅಕಾ ರಾಮಣ್ಣ ಬಂದ ನೋಡು. ಕೋರ್ಟಿಗ ಹೊತ್ತಾಗತೈತಿ. ಹೋಗಿ ಬಾ." ಕೆಂಚವ್ವ ಧೈರ್ಯದ ಮಾತು ಹೇಳಿ ಹೆಂಗಸರೊಡನೆ ಹೊಲಕ್ಕೆ ಹೊರಳಿದಾಗ ರಾಮಪ್ಪ ಬಂದು ಸುಶೀಲೆಯನ್ನು ಕೂಡಿಕೊಂಡ.

* * *

ಕೋರ್ಟಿನ ಸಿಪಾಯಿ ತನ್ನ ಹೆಸರು ಹಿಡಿದು ಕೂಗಿದಾಗ ಸುಶೀಲೆ ನೈ ತುಂಬಾ ಸೆರಗು ಹೊದ್ದು, ತಲೆಕೆಳಗೆ ಹಾಕಿಕೊಂಡು ಒಳಹೊಕ್ಕಳು. ಸಾಕ್ಷಿಯ ಕಟಕಟಿ ಹತ್ತಿದ ಮೇಲೆ, ತಲೆ ಎತ್ತಿ ನೋಡಿದಾಗ ಎದುರಿಗೆ ಮೊದಲು ಕಂಡದ್ದು ಕಾಶೀಮನ ಬಾಡಿದ ಕಂಗೆಟ್ಟ ಮುಖ. ಕುಂಟು ಕಾಲಿನ ಮೇಲೆ ಭಾರ ಹಾಕದೆ ಕಟಕಟೆಗೆ ಒರಗಿ ನಿಂತಿದ್ದನಾತ. ಸುಶೀಲೆಯ ಕಣ್ಣು ತುಂಬಿಬಂದವು. ಆ ಜಾಗ ಕೋರ್ಟು ಎನ್ನುವುದು ನೆನಪಾಗಿ ತಟ್ಟನೆ ಮುಖ ಹೊರಳಿಸಿ ನ್ಯಾಯಾಧೀಶರನ್ನು ನೋಡಿ ಕೈಮುಗಿದಳು. ತನ್ನನ್ನು ಕಾಪಾಡುವವರು ನೀವೇ ಎನ್ನುವ ದೀನಭಾವ ಅವಳ ಮುಖ ದಲ್ಲಿತ್ತು.

ವಕೀಲರ ಪಾಟೀಸವಾಲಿಗೆ ಉತ್ತರವಾಗಿ, ತನ್ನ ಹೆಸರು ಸುಶೀಲೆ. ತನ್ನ ತಾಯಿ ಅಂಬವ್ವ ಸೂಳೆಗಾರಿಕೆಯಿಂದ ಹೊಟ್ಟೆ ತುಂಬಿಸಿಕೊಂಡು

ನಾಲ್ಕು ಎಕರೆ ಹೊಲ ಸಂಪಾದಿಸಿದ್ದಳು. ತಾನು ಅವಳ ಒಬ್ಬಳೇ ಮಗಳು. ತಾಯಿ ಸತ್ತಮೇಲೆ ತಾನೂ ಸೂಳೆಗಾರಿಕೆ ಮಾಡುತ್ತಿದ್ದೇನೆ ಎಂದು ಹೇಳಿದಳು. ಅಪರಾಧಿ ಸ್ಥಾನದಲ್ಲಿರುವ ಕಾಶೀಮ ತನ್ನನ್ನು ಇಟ್ಟುಕೊಂಡವನು. ಹೀಗೆ ಇನ್ನೂ ಎಷ್ಟೋ ಜನ ತನ್ನಲ್ಲಿ ಬರುತ್ತಾರೆ, ಎಂದು ಹೇಳಿ ಅವರೆಲ್ಲ ಆಗಾಗ ತನ್ನ ಜೊತೆ ಮಲಗಲು ಬರುತ್ತಾರೆಂದು ನಿಂಗಣ್ಣ ಮತ್ತು ಸಂಗಡಿಗರನ್ನೂ ತೋರಿಸಿದಳು. ಒಂದು ರಾತ್ರಿ ಕಾಶೀಮ ತನ್ನ ಜೊತೆಗಿದ್ದಾಗ, ನಿಂಗಣ್ಣ ಬಂದು ಗದ್ದಲ ಮಾಡಿ, ಎಬ್ಬಿಸಿ ತಮ್ಮನ್ನು ಹೊರಗೆ ಎಳೆದು ಅಪಮಾನ ಮಾಡಿದ್ದಲ್ಲದೆ, ಎಲ್ಲರೂ ಕೂಡಿ ಕಾಶೀಮನನ್ನು ಹೆಣ ಬೀಳುವಂತೆ ಹೊಡೆದರೆಂದೂ ಹೇಳಿದಳು. ಇದಕ್ಕೆಲ್ಲ ಕಾರಣ ತಾನು. ಅವರಿಗೆಲ್ಲ ತಾನು ಬೇಕಾಗಿದ್ದವಳು. ಇದರಲ್ಲಿ ಕಾಶೀಮನದು ಏನೂ ತಪ್ಪಿಲ್ಲ. ಅವನು ನಿರಪರಾಧಿ, ಎಂದು ಹೇಳಿಬಿಟ್ಟಳು.

ಸರಕಾರಿ ವಕೀಲರು ಎಷ್ಟು ಪ್ರಯತ್ನಿಸಿದರೂ ಅವಳ ಬಾಯಿಂದ ಏನೂ ಬರಲಿಲ್ಲ. ಇದನ್ನೇ ಪಟ್ಟುಹಿಡಿದಳು. ಕೋರ್ಟು ಮುಕ್ತಾಯವಾಯಿತು.

ಮಧ್ಯಾಹ್ನ ನ್ಯಾಯಾಧೀಶರು ಕಾಶೀಮ ನಿರಪರಾಧಿ ಎಂದು ಬಿಡುಗಡೆ ಮಾಡಿ, ನಿಂಗಣ್ಣ ಮತ್ತು ಸಂಗಡಿಗರಿಗೆ ಮತ್ತೊಮ್ಮೆ ಈ ರೀತಿ ನಿರ್ಲಜ್ಜರಾಗಿ ವರ್ತಿಸದಂತೆ ಎಚ್ಚರಿಕೆ ಇತ್ತು ಬಿಟ್ಟುಬಿಟ್ಟರು.

ಕಾಶೀಮನ ಹೆಗಲಿಗೆ ಆಧಾರ ಕೊಟ್ಟು ನಡೆಸಿಕೊಂಡು ಹೊರಗೆ ಬಂದು, ಒಂದು ದೊಡ್ಡ ಹುಣಿಸೆಗಿಡದ ನೆರಳಿಗೆ ಉಸ್ಸೆಂದು ಕುಳಿತ ಸುಶೀಲೆ ರಾಮಣ್ಣನಿಗೆ, ''ಯಣ್ಣಾ ಗಂಟಲು ಆರಿ ಹೋಗೇತಿ. ಮೂವಾರಿಗೂ ಇಲ್ಲೇ ಚಾ, ಪೂರಿಪಲ್ಲೆ ತರ್ರಿಯೊ'' ಎಂದು ಅಂಗಲಾಚಿದಳು. ರಾಮಣ್ಣ ಅತ್ತ ಹೋದಮೇಲೆ ಸೋತು ಹೋದವಳಂತೆ, ಕಾಶೀಮನ ತೊಡೆಯ ಮೇಲೆ ತಲೆ ಇಟ್ಟು, ಬಿಕ್ಕಿ ಬಿಕ್ಕಿ ಅತ್ತಳು.

ಅವಳ ತಲೆಯ ಮೇಲೆ ಕೈಯಾಡಿಸುತ್ತ ಕಾಶೀಮ ಸುಮ್ಮನೆ ಕುಳಿತಿದ್ದ. ಅವನ ಕೈ ಅವಳ ಕುತ್ತಿಗೆಗೆ ಹೋದಾಗ ತಟ್ಟನೆ ಅಲ್ಲಿಯೇ ನಿಂತಿತು. ಅದನ್ನು ತಿಳಿದ ಸುಶೀಲೆ ಅವನ ಕೈ ಮೇಲೆ ಕೈ ಇಟ್ಟು,

“ಕೋರ್ಟಿನ್ಯಾಗ ಸಾಕ್ಷಿ ಹೇಳಾಕ ವಕೀಲರು ನನಗ ಕಲಿಸಿದ್ದರು. ನಿನ್ನ ಬಿಡಿಸಿಕೊಳ್ಳಾಕ ಬ್ಯಾರೆ ದಾರೀನ ಇಲ್ಲಾ ಅಂತ ಅಂದರು. ಅದಕ್ಕ ಸುಳ್ಳು ಹೇಳಿದೆ. ನನ್ನ ಮಂಗಳ ಸೂತ್ರಾ ಮಾರಿ ವಕೀಲರಿಗೆ ರೊಕ್ಕಾ ಕೊಡತೇನಿ” ಎಂದಳು. ಕಾಶೀಮ ಆಗಲೂ ಮಾತನಾಡಲಿಲ್ಲ. ಅವನ ಕಣ್ಣೀರು ಅವಳ ಕೆನ್ನೆಯ ಮೇಲೆ ಬಿದ್ದು ಹರಿದುಹೋದವು.

ಗುಟ್ಟು

“ಮುಕ್ತಾ” ಗಂಡನ ಕರೆ ಕಿವಿಗೆ ಬಿದ್ದೊಡನೆಯೇ ಪಡಸಾಲೆಯಲ್ಲಿ ಕುಳಿತು ತಂಗಿಯೊಡನೆ ಅಕ್ಕಿ ಆರಿಸುತ್ತಿದ್ದ ಮುಕ್ತಾ ಅವಸರದಿಂದ ಎದ್ದು ಸೆರಗು ಸರಿಪಡಿಸಿಕೊಳ್ಳುತ್ತ ಕೋಣೆಗೆ ನಡೆದಳು. ನಡೆದಳು ಎನ್ನುವುದಕಿಂತ ಓಡಿದಳೆಂದೇ ಹೇಳಬಹುದು. ಅಕ್ಕನ ಸಡಗರವನ್ನು ಗಮನಿಸುತ್ತಿದ್ದ ಗೌರಿಯ ದೃಷ್ಟಿ ಕೋಣೆಯ ಬಾಗಿಲತ್ತ, ತಾನಾಗಿಯೇ ಹೊರಳಿತು.

ಹೆಂಡತಿ ಬಂದೊಡನೆ ಮಂಚದ ಮೇಲೆ ಮಲಗಿದ್ದ ಗಂಡ ಮಲಗಿದಲ್ಲಿಂದಲೇ ಕೈ ಚಾಚುತ್ತಾನೆ. ಇವಳು ಹತ್ತಿರ ಹೋದೊಡನೆ ಎಳೆದು ಎದೆಯ ಮೇಲೆ ಮಲಗಿಸಿಕೊಂಡು ತಲೆಕೂದಲಲ್ಲಿ ಬೆರಳಾಡಿಸುತ್ತ ‘ಚಿನ್ನಾ? ಚಹಾ ಕುಡಿದ ಮೇಲೆ ಫಸ್ಟ್ ಶೋ ಸಿನಿಮಾಕ್ಕೆ ಹೋಗೋಣವಾ ಎನ್ನುತ್ತಾನೆ. ಅದಕ್ಕೆ ಸಂತೋಷದಿಂದ ಹೂಂ ಗುಟ್ಟಿ ಅಕ್ಕ ಏಳುತಿದ್ದಾಗ ಅವಳನ್ನು ಬಿಡದೆ ಎಳೆದು ಮುತ್ತಿಡುತ್ತಾನೆ. ಅಕ್ಕ ಹುಸಿಕೋಪ ತೋರಿಸಿ ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾಗ ಬಲವಾಗಿ ಹಿಡಿದುಕೊಂಡು ಮತ್ತೆ ಮುತ್ತಿಡುತ್ತಾನೆ.

ಯೋಚನಾಪರಳಾಗಿದ್ದ ಗೌರಿಯ ಕೈ ತನ್ನ ಕೆನ್ನೆಯ ಮೇಲಾಡುತ್ತಿತ್ತು. ಥಕ್ಕನೆ ಕೋಣೆಯ ಬಾಗಿಲು ತೆರೆದುಕೊಂಡು ಮುಕ್ತಾ ಹೊರಬಂದಾಗ ಗಲಿಬಿಲಿಗೊಂಡು, ಕೆಂಪಾಗಿದ್ದ ಗೌರಿ ಅಕ್ಕನಿಗೆ ಮುಖ ತೋರಿಸದೆ ಅಕ್ಕಿಯ ಮೇಲೆ ಬಗ್ಗಿದಳು.

ಅಕ್ಕ ಗಂಡನ ಮನೆಯಿಂದ ಬಂದು ಎಂಟೆತ್ತು ದಿನಗಳಾಗಿದ್ದವು. ಅವಳನ್ನು ತರುಗಿ ಕರೆದೊಯ್ಯಲು ಈಗ ಭಾವ ಬಂದಿದ್ದಾರೆ. ಅತ್ತೆಯ ಮನೆಯಲ್ಲಿ ಹೆಂಡತಿಯೊಡನೆ ಸಂತೋಷವಾಗಿ ಎರಡು ದಿನ ಕಳೆದು ನಾಳೆ ಮತ್ತೆ ಊರಿಗೆ ಹೊರಟಿದ್ದಾರೆ. ಆದರೆ ತಾನು ತವರಿಗೆ ಬಂದು ತಿಂಗಳು ಸನಿಹಕ್ಕೆ ಬಂದಿತು. ಗಂಡ ಜೊತೆಯಲ್ಲಿ ಕಳಿಸಲೂ ಬರಲಿಲ್ಲ. ಗಂಡನೊಡನೆ ನಡೆದ ಒಂದು ಮಾತಿನಿಂದ ವಿರಸ ಬೆಳೆದು ತಾನು ಸಿಟ್ಟು ಮಾಡಿ

ಕೊಂಡು ಬಂದಿದ್ದಾಳೆ. ತಾನು ಹೊರಟು ಬರುವಾಗ ಗಂಡ ಹೇಳಿದ್ದ, "ಗೌರೀ ನೀನು ತವರ್ಮನಿಯೊಳಗೆ ಬೇಕಾದಷ್ಟು ದಿವಸ ಇರು. ಆದರೆ ನಾ ಕರೀಲಿಕ್ಕೆ ಬರೂದಿಲ್ಲಾ. ತವರು ಮನಿ ಬ್ಯಾಸರ ಆದಾಗ ನೀನು ತಿರುಗಿ ಬಾ. ಆದರ ನಾ ಮಾತ್ರ ನನ್ನ ವಿಚಾರ ಬದಲಾಸುದಿಲ್ಲಾ. ನೆನಪ ಇಟ್ಟುಕೋ."

ಗೌರಿಯ ಕೈ ಚಕ್ಕುಲಿ ಕರಿಯುತ್ತಿದ್ದರೂ ಮನಸ್ಸು ಗಂಗಾಧರನ ಹಿಂದೆ ಹೋಗಿತ್ತು, "ಗೌರಿ ನೀನು ಮಾಡಿದ ಚಕ್ಕುಲಿ ಬಾಳ ರುಚಿ ಆಗ್ಯಾವ" ಒಂದು ದಿನ ಬಿಸಿ ಬಿಸಿ ಚಕ್ಕುಲಿ ತಿನ್ನುತ್ತ ಗಂಗಾಧರ ಹೇಳಿದ್ದ.

"ಇರಲಿ ಬಿಡ್ರಿ ಸಾಕು ಭಾಳ ಹೊಗಳ ಬ್ಯಾಡ್ರಿ, ನಾನು ಮಾಡಿದ್ದೆಲ್ಲಾ ನಿಮಗ ರುಚೀನ ಆಗಿರ್ತದ. ನಮ್ಮ ಅವ್ವ ಅಡಿಗಿ ಎಷ್ಟು ಛಲೋ ಮಾಡ್ತಾಳ. ನಾನು ಹೊಸದಾಗಿ ಕಲೀಲಿಕ್ಕೆ ಹತ್ತೇನಿ.

"ನಿಮ್ಮವ್ವ ನಿನಗೆ ತರತರದ ತಿನಿಸು ಅಡಿಗೆ ಮಾಡಿ ಉಣಿಸಿರಬಹುದು ಗೌರೀ. ಅದಕ, ನಿನಗ ರುಚಿ ತಿಳಿಯೂದಿಲ್ಲಾ. ಆದರ ನಮ್ಮ ಅವ್ವ ಹೊಲದಾಗ ಕೂಲಿ ಕೆಲಸ ಮಾಡಿ ನನ್ನ ಜ್ವಾಪಾನ ಮಾಡ್ಯಾಳ. ರೊಟ್ಟಿ, ಬ್ಯಾಳಿ ನುಚ್ಚು ಬಿಟ್ಟರೆ ನನಗೆ ಏನೂ ಸಿಗುತ್ತಿದ್ದಿಲ್ಲಾ. ಯಾರರೆ ಕೊಟ್ಟರ ಮಜ್ಜಿಗಿ, ಇಲ್ಲಾಂದರ ಅದೂ ಇಲ್ಲಾ. ಅದಕ್ಕs ಈಗ ನೀ ಮಾಡಿದ್ದೆಲ್ಲಾ ನನಗ ರುಚಿ ಹತ್ತತದ. ಒಂದು ಚೂರು ಚಕ್ಲಿ ನೋಡಿಲ್ಲೆ. ಆ ಅನ್ನು" ಎನ್ನುತ್ತ ಚಕ್ಕುಲಿ ಮುರಿದು ಬೇಡವೆಂದರೂ ಅವಳ ಬಾಯಿಗೆ ತುರುಕಿದ್ದ. ಹೊಸದಾಗಿ ಮದುವೆಯಾದ ಗಂಡ ಹೆಂಡಿರ ಮಧ್ಯ ಬಾರದೆ ಹಿತ್ತಲಲ್ಲಿ ಕಸ ಕೀಳಲು ಕುಳಿತಿದ್ದ ಅತ್ತೆಯನ್ನು ಕರೆದು ಗೌರಿಯೇ ಚಕ್ಕುಲಿ ತಿನ್ನಲು ಕೊಟ್ಟಿದ್ದಳು.

ಗಂಗಾಧರ ತನ್ನನ್ನು ನೋಡಲು ಬಂದು ಹೋದ ಮೇಲೆ ಅಪ್ಪ-ಅವ್ವ ಅವನ ಬಗ್ಗೆ ಮಾತನಾಡಿಕೊಂಡಿದ್ದು ತನ್ನ ಕಿವಿಗೂ ಬಿದ್ದಿತು. ಹುಡುಗ ಮನೆಯಿಂದ ಸ್ಥಿತಿವಂತನಲ್ಲ. ಅಪ್ಪ ಇಲ್ಲ. ಅವ್ವನನ್ನ ಬಿಟ್ಟರೆ ಹತ್ತಿರದ ಬಳಗದವರಾರೂ ಇಲ್ಲ, ತಾಯಿಯೇ ಕಷ್ಟಪಟ್ಟು ಓದಿಸಿದ್ದಾಳೆ, ಒಳ್ಳೆಯ ಉದ್ಯೋಗದಲ್ಲಿದ್ದಾನೆ. ಸ್ವಭಾವ ಬಹಳ ಒಳ್ಳೆಯದು ಎಂದು ಪರಿಚಿತರೂ ಹೇಳಿದ್ದಾರೆ. ಜಾತಕ ನೋಡಿಸಬೇಕೆಂದರೆ ಮಗ ಇನ್ನೂ ಹೊಟ್ಟೆಯಲ್ಲಿರುವಾಗಲೇ ತಂದೆ ಸತ್ತದ್ದರಿಂದ ಜಾತಕ ಬರೆಸಿಲ್ಲ. ಒಂದೆ

ರಡು ಸಲ ಗಂಗಾಧರನನ್ನು ನೋಡಿದ ಮೇಲೆ ಅವನ ಮೇಲೆ ಪ್ರೀತಿ, ವಿಶ್ವಾಸ ಬೆಳೆದು ಮಗಳನ್ನು ಸಂತೋಷವಾಗಿ ಧಾರೆಯೆರೆದುಕೊಟ್ಟರು. ಮದುವೆಗೆ ಮೊದಲು ಗಂಗಾಧರನು ತನ್ನೊಡನೆ ಮಾತನಾಡಲೂ ಇಲ್ಲ, ಪಾರ್ಕು ಸಿನೇಮಾ ಎಂದು ಓಡಾಡಲೂ ಇಲ್ಲ. ಈ ವಿಷಯದಲ್ಲಿ ತಾಯಿ ತುಂಬಾ ಕಟ್ಟು ನಿಟ್ಟು. ತಾನು ಅಕ್ಕ ದೊಡ್ಡವರಾದ ಮೇಲೆ ಯಾವ ಗಂಡಸರೆದುರೂ ನಿಂತು ಮಾತನಾಡಿದವರಲ್ಲ. ತಂದೆಯೊಡನೆ ಹೆಚ್ಚು ಸಲಿಗೆ ಮಾಡುವ ಹಾಗಿಲ್ಲ. ಅಣ್ಣಂದಿರು ಇಲ್ಲ, ಸಂಬಂಧಿಕರು, ಸ್ನೇಹಿತರು ಯಾರಾದರು ಬಂದರೆ ತಾಯಿಯ ದೃಷ್ಟಿ ತಮ್ಮ ಮೇಲೆಯೇ. ಅವರು ಬರುವ ಮೊದಲು ತಾವಿಬ್ಬರೂ ಒಳ ಕೋಣೆ ಸೇರಬೇಕು. ಗುಡಿಗೆ, ಅಪರೂಪಕ್ಕೊಮ್ಮೆ ಸಿನಿಮಾಕ್ಕೆ ತಾಯಿಯೊಡನೆಯೇ ಹೋಗಬೇಕು. ಗೆಳತಿಯರ ಜೊತೆಗೂ ಹೋಗುವಂತಿಲ್ಲ. ಹೈಸ್ಕೂಲು ವಿದ್ಯಾಭ್ಯಾಸ ಮುಗಿದು ಮನೆಯಲ್ಲಿಯೇ ಮೂರುನಾಲ್ಕು ವರ್ಷ ಕುಳಿತಾಗ ಮನೆ ಎನ್ನುವದೊಂದು ಸೆರಮನೆಯಾಗಿತ್ತು ತಮಗೆ. ಹೆಣ್ಣು ಮಕ್ಕಳನ್ನು ಇಷ್ಟೊಂದು ಕಟ್ಟು ನಿಟ್ಟಿನಲ್ಲಿಟ್ಟ ತಾಯಿ ಮಕ್ಕಳ ಸಮಾಧಾನಕ್ಕೆ ಆಗಾಗ ಹೇಳುವದಿತ್ತು.

“ ಹೆಣ್ಣು ಮಕ್ಕಳ್ನ ಜ್ವಾಪಾನಾ ಮಾಡುವುದು ಭಾಳ ಕಠಿಣವ್ವಾ. ಅವರ್ನ ಕಣ್ಣು ರೆಪ್ಪಿಯೊಳಗ, ಇಟಕೊಂಡಿರಬೇಕು. ಮದುವಿ ಆಗುತನಕಾ ನಮ್ಮ ಜವಾಬ್ದಾರಿ, ಮದುವಿ ಆದಮ್ಯಾಲೆ ನೀವು ಬೇಕಾದಷ್ಟು ಆಡರಿ, ಕುಣಿರಿ, ತಿರುಗಿರಿ ಬ್ಯಾಡ ಅನ್ನುದಿಲ್ಲಾ. ಆದರ ಕೊಡು ಹುಡುಗಿ ಅಂದ ಮ್ಯಾಲ ಒಬ್ಬರು ಕಣ್ಣೆತ್ತಿ ನೋಡಧಾಂಗ, ಬೆರಳೆತ್ತಿ ಆಡಿಕೊಳ್ಳದಾಂಗ ಇರಬೇಕು ” ತಾಯಿಯ ಈ ಜೀವನ ಸಿದ್ಧಾಂತದಿಂದ ತನಗೆ ಎಷ್ಟು ತೊಂದರೆಯಾಗಿತ್ತು ಎಂದು ಅವಳೇನು ಬಲ್ಲಳು? ಗಂಡಸಿನ ಎದುರು ನಿಂತು ಕೂಡ ಮಾತನಾಡದೆ ಮೂರು ಮೈಲು ದೂರಕ್ಕೆ ಹಾರುವ ತನ್ನ ಪ್ರಥಮ ರಾತ್ರಿ ಹೇಗಿತ್ತು? ಎಲ್ಲ ಹೆಂಗಳೆಯರು ಗಂಗಾಧರನೊಡನೆ ತನ್ನನ್ನು ಕೂಡ್ರಿಸಿ, ಆರತಿ ಮಾಡಿ, ಕೋಣೆಯ ಕದವಿಕ್ಕಿಕೊಂಡು ಹೋದ ಮೇಲೆ ಅವನನ್ನ ಕಣ್ಣೆತ್ತಿ ನೋಡಲು ನಾಚಿಕೆ ಸಾವಾಗಿ, ಭೂಮಿಯೇ ಬಾಯ್ದೆರೆದು ತನ್ನನ್ನು ನುಂಗಬಾರದೇ ಎನ್ನಿಸಿತ್ತು. ಅವನು ಮುಂದಾಗಿ ತನ್ನನ್ನು ಅಪ್ಪಿದಾಗ ಮುತ್ತಿಟ್ಟಾಗ ತಾನು ಯಾವ ರೀತಿ ನಡೆದುಕೊಂಡೆ ಎನ್ನುವುದು ಅವನಿಗೊಬ್ಬನಿಗೇ ಗೊತ್ತು. ಮುಂದೆ ಎಂಟು ದಿನಗಳವರೆಗೂ

ಪೂರ್ತಿಯಾಗಿ ಗಂಡನ ವಶವಾಗಿರಲಿಲ್ಲ ತಾನು. ಗಂಗಾಧರ ಒಳ್ಳೆಯವನಾದುದರಿಂದಲೇ ಸಂಯಮ ತಾಳ್ಮೆಗಳಿಂದ ತನ್ನನ್ನು ಒಲಿಸಿಕೊಂಡ.

"ಗೌರೀ ಚಕ್ಲೀಗೆ ಉರಿ ಕಡಿಮೀ ಮಾಡು, ಸಾವಕಾಶ ಕರೀ" ನಡುವೆಯೇ ತಾಯಿ ಎಚ್ಚರಿಸಿದರು.

ಜೊತೆಗೆ ಗಂಡನಿಲ್ಲದೆ ಒಬ್ಬಳೇ ತವರಿಗೆ ಬಂದ ಮಗಳನ್ನು ತಾಯಿ ಸಂದೇಹದಿಂದ ಪ್ರಶ್ನಿಸಿದ್ದರು.

"ಅವ್ವಾs ಅವರಿಗೆ ಡಿಪಾರ್ಟಮೆಂಟಲ್ ಪರೀಕ್ಷೆ ಅದ. ಅಭ್ಯಾಸ ಮಾಡ್ತರ. ಅದಕs ನಾ ಒಬ್ಬಾಕೀನs ಬಂದೆ. ಅವರ ಪರೀಕ್ಷೆ ಆಗೂತನಕ ಇಲ್ಲೇ ಇರತೀನಿ" ಹೊಸತಾಗಿ ಮದುವೆಯಾದ ಅಳಿಯ ಹೆಂಡತಿಯೊಡನೆ ಇದ್ದು ಅಭ್ಯಾಸ ಮಾಡುವುದು ಅಸಾಧ್ಯ ಎನ್ನುವುದನ್ನು ನೆನೆದು ನಕ್ಕಿದ್ದರು ಅವ್ವ, ಹದಿನೈದು ದಿನ ಕಳೆದಮೇಲೆ ನಿನ್ನೆ "ಗಂಡನ ಪತ್ರಾನ ಬಂದಿಲ್ಲಲ ಗೌರಿ" ಎಂದು ಅವ್ವ ಗಾಬರಿಯಿಂದ ಕೇಳಿದಾಗ "ಪರೀಕ್ಷದ ಗದ್ದಲದಾಗ ಬರೀಲಿಕ್ಕೆ ಆಗಿರಲಿಕ್ಕಿಲ್ಲ ಅವ್ವಾ" ಎಂದು ಉತ್ತರಿಸಿ ಪಾರಾಗಿದ್ದಳು. ಆದರೆ ದಿನದಿನಕ್ಕೂ ತನ್ನ ಪರಿಸ್ಥಿತಿ ಹದಗೆಡತೊಡಗಿತ್ತು. ಎಷ್ಟು ದಿನ ಹೀಗೇ ಕಳೆಯಬಹುದು ತಾನು. ಒಂದಿಲ್ಲೊಂದು ದಿನ ತನ್ನ ಸುಳ್ಳು ಬಯಲಿಗೆ ಬಂದೇ ಬರುತ್ತದೆ. ಆಗ ಅಪ್ಪ-ಅವ್ವನ ಮನಸ್ಸಿಗೆ ಹೇಗಾದೀತು? ತನ್ನ ಗಂಡ ಅತ್ತೆಯರ ಬಗ್ಗೆ ಅವರಿಗೆ ಎಷ್ಟೊಂದು ತಿರಸ್ಕಾರ ಹುಟ್ಟೀತು? ಆ ಮನೆಗೆ ತನ್ನನ್ನು ಕೊಟ್ಟದ್ದಾಗಿದೆ. ಈಗತಾನೂ ಅವರಿಗೂ ಹೊರಗಿನವಳು. ಅದು ಇಲ್ಲಿ ಹೆಜ್ಜೆ ಹೆಜ್ಜೆಗೂ ಅನುಭವಕ್ಕೆ ಬರುತ್ತಾ ಇದೆ. ಈಗ ತನ್ನ ಸಮಸ್ಯೆಯನ್ನು ಮನೆಯಲ್ಲಿ ಹೇಳಿದರೂ ಅವರು ತಾನೇ ಏನುಮಾಡಲು ಸಾಧ್ಯ. ಬಹಳವಾದರೆ ಅಂಥವರ ಮನೆಗೆ ನಿನ್ನನ್ನು ಕಳಿಸುವದಿಲ್ಲ. ಇಲ್ಲಿಯೇ ಇದ್ದುಬಿಡು. ನಾನೇ ಸಾಕ್ತೀನಿ ಎಂದು ಅಪ್ಪ ಹಾರಾಡಬಹುದು. ಆಗ ತನಗೆ ಗಂಡನ ಮನೆ ತಪ್ಪಿಹೋಗುತ್ತದೆ. ಗಂಡನಿಗೇನೊ ಬೇರೆ ಹೆಂಡತಿ ಸಿಗಬಹುದು, ನನಗೆ? ಗಂಡಬಿಟ್ಟವಳು ಎನ್ನುವ ಶಬ್ದ ಹೇರಿಕೊಂಡು, ಎಲ್ಲರ ದೃಷ್ಟಿಯಲ್ಲಿಯೂ ತನಗೆ ಕಿಮ್ಮತ್ತು ಇಲ್ಲವಾಗಿಸಿಕೊಂಡು ತವರಲ್ಲಿರಬೇಕು. ಅಕ್ಕನಿಗೆ ಸಿಗುವ ಆದರ, ಉಪಚಾರ ತನಗೆ ಸಿಗುವುದಿಲ್ಲ. ಆದರೂ ಇನ್ನೊಂದು ವಿಚಾರವೂ ಬರುತ್ತಿದೆ. ತಾನು ಹಾಗೆ ಏಕಾಂಗಿಯಾಗಿ ಕೊನೆಯ ತನಕವೂ ತವರಿ

ನಲ್ಲಿ ಇರಬಲ್ಲೆನೇ ? ತನ್ನ ಮನ ಶ್ಯಾಂತಿಯನ್ನೆ ಕವಡಿ ಸಮಸ್ಯೆಗಳ ಬಂಡೆ ಯನ್ನೆ ತನ್ನ ಎದೆಯ ಮೇಲೆ ಹೇರಿ ಉಸಿರುಕಟ್ಟಿಸುವಂತೆ ಮಾಡುತ್ತಿರುವುದು ಏನು ...ಅದು ತನ್ನ ಗಮನಕ್ಕೆ ಬರದಿದ್ದರೆ, ತಿಳಿಯದಿದ್ದರೇ ಚೆನ್ನಾಗಿತ್ತೇನೋ.

ಗುರಣ್ಣ ಇಂಥವನಿರಬಹುದೆಂದು ತನಗೆ ಅನಿಸಿರಲೇ ಇಲ್ಲ. ಅವನ ಸ್ಥಾನಮಾನ ತನ್ನ ಗಂಡನ ಮನೆಯಲ್ಲಿ ಪ್ರಮುಖವಾಗಿತ್ತು. ಮೊದಲು ಗಂಗಾಧರನೊಡನೆ ತನ್ನನ್ನು ನೋಡಲು ಬಂದವನೂ ಅವನೇ. ಮುಂದೆ ಎಲ್ಲ ಕಾರ್ಯಗಳಲ್ಲೂ ಯಜಮಾನಿಕೆ ವಹಿಸಿ ಮಾತನಾಡಿದವನೂ ಅವನೇ. ಅವರು ಸಂಬಂಧದಲ್ಲಿ ತಮಗೆ ಮಾವನಾಗಬೇಕು ಅವರನ್ನು ಬಿಟ್ಟರೆ ತಮ್ಮ ಮನೆಯಲ್ಲಿ ಹಿರೇತನ ಮಾಡುವ ಗಂಡಸರಾರೂ ಇಲ್ಲವೆಂದು ಅತ್ತೆಯೇ ಅವನೆದುರು ಹೇಳಿದ್ದಳು. ಆದ್ದರಿಂದ ಮದುವೆ ಮನೆಯಲ್ಲೂ ಅವನಿಗೆ ಅಗ್ರಸ್ಥಾನ ದೊರೆತಿತ್ತು. ಬಾಗಿಲುಕೋಟೆಯಲ್ಲಿ ಹೊಸ ಮನೆ ಹೂಡಲು ತನ್ನ ಗಂಡನಿಗೆ ಸಹಾಯ ಮಾಡಿದ್ದ. ತನ್ನನ್ನು ಗಂಡನ ಮನೆಗೆ ಕರೆದೊಯ್ಯಲು ಬಂದಿದ್ದ. ಆಗಾಗ ಅತ್ತೆಯ ಬಾಯಲ್ಲಿ ಅವನ ಗುಣಗಾನ ಕೇಳಿ ಗುರಣ್ಣನ ಬಗ್ಗೆ ತನಗೂ ಪೂಜ್ಯ ಭಾವನೆ ಹುಟ್ಟಿತ್ತು. ತಂಗೀ ತಂಗೀ ಎಂದು ಬಾಯ್ತುಂಬ ಕರೆದು ಮಾತಾಡಿಸುತ್ತಿದ್ದ. ಹಳ್ಳಿಯಿಂದ ಬರುವಾಗ ಬರಿಗೈಯಿಂದ ಬರುತ್ತಿರಲಿಲ್ಲ. ಕಾಯಿ, ಪಲ್ಯ. ಹಣ್ಣು ಹೂವು, ವೀಳ್ಯದೆಲೆ ತಂದು ತನ್ನನ್ನು ಕರೆದು ಕೊಡುತ್ತಿದ್ದ. ಬಂದಾಗಲೆಲ್ಲ ಎರಡು ಮೂರು ದಿನ ಇದ್ದು ಹೋಗುವಾಗ 'ತಂಗಿ ನಾನು ಹೋಗಿ ಬರ್ತಿನವ್ವಾ' ಎಂದು ಕರೆದರೆ ತಾನು ಅವನ ಕಾಲು ಮುಟ್ಟಿ ನಮಸ್ಕಾರ ಮಾಡಿ ಬೀಳ್ಕೊಡುತ್ತಿದ್ದಳು.

ಹೀಗೆ ಒಂದು ಸಲ ಬಂದಾಗ ಗುರಣ್ಣ 'ಫ್ಲೂ' ಜ್ವರದಿಂದ ತಮ್ಮ ಮನೆಯಲ್ಲಿಯೇ ಮಲಗಿಬಿಟ್ಟ. ಅತ್ತೆ ಅವನ ಹಾಸಿಗೆ ಬಿಟ್ಟು ಸರಿಯದೆ ಔಷಧಿ ಗಂಜಿ ಕುಡಿಸಿ, ಕಾಲು ತಲೆ ಒತ್ತಿ ಉಪಚಾರ ಮಾಡುತ್ತಿದ್ದಳು. ಅದನ್ನು ನೋಡಿದಾಗಲೇ ತನಗೇಕೋ ವಿಚಿತ್ರವೆನಿಸಿತ್ತು. ಆದರೂ ರೋಗಿಯ ಹತ್ತಿರ ಮನೆಯವರಾರೂ ಇಲ್ಲ, ಬೇನೆಯವರಿಗೆ ಉಪಚಾರ ಮಾಡಿದರೇನು ತಪ್ಪು ಎನಿಸಿ ಸುಮ್ಮನಾಗಿದ್ದಳು. ಒಂದೆರಡು ತಿಂಗಳು ಕಳೆದ ಮೇಲೆ ಮತ್ತೆ ಬಂದ. ಗುರಣ್ಣನ ಜೊತೆಗೆ ಅತ್ತೆ ಅಡಿಗೆ ಮನೆ

ಯಲ್ಲಿ ಮಲಗಿದುದನ್ನು ನೋಡಿ ತಾನು ದಂಗಾಗಿದ್ದಳು. ಮನಸ್ಸಿಗೆ ಗಾಬರಿಯಾಗಿ ಕೇಳಲೋ ಬೇಡವೋ ಎಂದು ಅಂಜುತ್ತ ಗಂಡನೆದುರು ಉಸುರಿದ್ದಳು. ಅದಕ್ಕೆ ಅವನು ಏನೂ ಉತ್ತರ ಕೊಡದೆ ನಕ್ಕುಬಿಟ್ಟಿದ್ದ. ಕೊನೆಗೊಮ್ಮೆ ಗಂಟು ಬಿದ್ದು ಕೇಳಿದಾಗ ಬಾಯಿ ಬಿಟ್ಟಿದ್ದ. ತನ್ನ ತಂದೆ ಸತ್ತಾಗ ತಾಯಿ ಹದಿನೈದು ಹದಿನಾರೋ ವರುಷದ ಹುಡುಗಿ. ತಾಯಿ ತಂದೆ ಮೊದಲೇ ಸತ್ತಿದ್ದರು. ಹತ್ತಿರದ ಸಂಬಂಧಿಕರಾರೂ ಇರಲಿಲ್ಲ. ಹೊಟ್ಟೆ ಪಾಡಿಗೆ ಹೊಲದಲ್ಲಿ ಕೂಲಿ ಕೆಲಸ ಮಾಡುತ್ತಿದ್ದಳು. ತಾನು ಹುಟ್ಟಿದ ಮೇಲೆ ಜವಾಬ್ದಾರಿ ಜಾಸ್ತಿಯಾಯಿತು. ಆಗ ಗುರಣ್ಣ ಬಹಳ ಸಹಾಯ ಮಾಡಿದ. ಅದಕ್ಕೆ ಪ್ರತಿಯಾಗಿ ಅವನಿಗೆ ತನ್ನನ್ನೇ ಕೊಟ್ಟುಕೊಂಡಳು. ಹಾಗೆಯೇ ಇವರಿಬ್ಬರಿಗೂ ಸಂಬಂಧ ಬೆಳೆಯಿತು. ತನ್ನ ವಿದ್ಯಾಭ್ಯಾಸಕ್ಕೆಲ್ಲಾ ಗುರಣ್ಣನೇ ಸಹಾಯ ಮಾಡಿದ. ಈ ವಿಷಯ ತನಗೆ ಮೊದಲು ತಿಳಿದಾಗ ಎರಡು ದಿನ ತಾಯಿಯೊಡನೆ ಮಾತೇ ಆಡಿರಲಿಲ್ಲ. ಮರುದಿನ ಅವಳೇ ಕಣ್ಣೀರುಗರೆಯುತ್ತ 'ನಾನು ಬುದ್ಧಿಗೇಡಿ, ಮಗನಽ, ನಿನ್ನ ಸಲುವಾಗಿ ಬದಕೇನಿ. ನಿನ್ನ ಸಲುವಾಗಿ ಇದನ್ನೆಲ್ಲಾ ಮಾಡಿದೆ. ನೀನು ಮಾತು ಬಿಟ್ಟರೆ ನಾ ಎಲ್ಲಿ ಹೋಗಲಿ" ಎಂದು ಅತ್ತಾಗ ಮನಸ್ಸು ಕರಗಿತು. ಅವಳ ಆಗಿನ ಪರಿಸ್ಥಿತಿ ಅರಿವಾಗಿ ತಾನೂ ಹೊಂದಿಕೊಂಡೆ. ಇಷ್ಟಾದರೂ ಅವರಿಬ್ಬರೂ ತುಂಬಾ ಗುಟ್ಟಾಗಿದ್ದಾರೆ. ಹಳ್ಳಿಯಲ್ಲಿ ಹೆಸರು ಕೆಡಿಸಿಕೊಂಡಿಲ್ಲ—ಎಂದು ಗಂಗಾಧರ ಹೇಳಿದಾಗ ತನ್ನ ಅತ್ತೆ ಇಂಥ ನೀತಿಗೆಟ್ಟ ಹೆಂಗಸು ಎಂದು ಜಿಗುಪ್ಸೆ ಹುಟ್ಟಿತು. ಅವಳನ್ನು ಗುರಣ್ಣನೊಡನೆ ಹಳ್ಳಿಗೆ ಕಳಿಸಿಬಿಡಿರಿ. ಹೊಟ್ಟೆ ಬಟ್ಟೆಗೆ ಕೊಡೋಣ ಎಂದಾಗ ಗಂಡ ಅದು ಸಾಧ್ಯವೇ ಇಲ್ಲವೆಂದು ಖಡಾ ಖಂಡಿತವಾಗಿ ಹೇಳಿದ್ದ. ತಾನು ಅವನೊಡನೆ ಇದೇ ಕಾರಣಕ್ಕಾಗಿ ಜಗಳವಾಡಿ ತವರಿಗೆ ಬಂದು ತಿಂಗಳಾಗಿತ್ತು, ಗಂಡನಿಂದ ಪಶ್ಚಾತ್ತಾಪದ ಪತ್ರವಿಲ್ಲ. ಕರೆಯ ಬರುವ ಸುಳಿವಿಲ್ಲ. ತನಗಾದರೋ ಕುಳಿತರೆ, ನಿಂತರೆ, ತಿಂದರೆ, ನಕ್ಕರೆ ಗಂಡನ ನೆನಪು ಕಾಡುತ್ತದೆ. ರಾತ್ರಿ ಕಳೆಯುವುದಂತೂ ಇನ್ನೂ ಕಠಿಣ. ನಿಟ್ಟುಸಿರು ಬಿಡುತ್ತ ಹೊರಳಾಡುವುದೊಂದೇ ಗತಿ ತನಗೆ.

ಮಗಳು ಮನದಲ್ಲೇನೋ ಮುಚ್ಚಿಕೊಂಡು ತನ್ನಲ್ಲೇ ಒದ್ದಾಡುತ್ತಿದ್ದಾಳೆ ಎನ್ನುವುದು ತಾಯಿಗೆ ಅರಿವಾದಾಗ ಮನಸ್ಸಿನಲ್ಲೇ ನಕ್ಕು ಗಂಡ

ನಿಗೆ ಹೇಳಿದ್ದರು. ಪರೀಕ್ಷೆ ಮುಗಿದಿದ್ದರೆ ಬೇಗ ಬರಬೇಕೆಂದು ಗಂಗಾಧರ ನಿಗೆ ಬರೆಯಿರಿ ಎಂದು.

ಇದ್ದಕ್ಕಿದ್ದ ಹಾಗೆ ಒಂದು ದಿನ ಗಂಡ ಬಂದು ಇಳಿದಾಗ ಗೌರಿ ಸಂತೋಷದಿಂದ ಮೂಕಳಾದಳು. ತಾನು ಗೆದ್ದುಕೊಂಡೆನೆಂದಳು. ತಾನು ಬರುವಾಗ ಗಂಡ ಹೇಳಿದ್ದ.

" ಗೌರಿ ಈಗ ನೀನು ಸರಿಯಾಗಿ ವಿಚಾರ ಮಾಡದ ಸಿಟ್ಟಿನ ಕೈಯ್ಯಾಗ ಬುದ್ದೀ ಕೊಟ್ಟು ನನ್ನ ಬಿಟ್ಟು ಹೊರಟೇದಿ. ಆದರ ಬಾಳ ದಿನಾ ನಾವಿಬ್ಬರೂ ಬಿಟ್ಟು ಇರೊದು ಸಾಧ್ಯ ಇಲ್ಲಾ ಅನ್ನೂದು ಮುಂದ ನಿನಗ ಗೊತ್ತಾಗತದ. "

ಕಬ್ಬಿಣದಂತೆ ಗಟ್ಟಿಯಾಗಿದ್ದ ಗಂಡ ತನ್ನ ಹತ್ತಿರ ಬಂದಿದ್ದಾನೆ. ಈ ರಾತ್ರಿ ಏನಾದರೊಂದು ಇತ್ಯರ್ಥ ಮಾಡಿಯೇ ಬಿಡಬೇಕು. ಈ ತರದ ಸಂದಿಗ್ಧದಲ್ಲಿ ಸಿಕ್ಕು ತೊಳಲಾಡುವುದು ತನಗೆ ಬೇಕಿಲ್ಲ. ಆದರೆ ಗಂಡ ತನ್ನಿಂದ ಆಕರ್ಷಿತನಾಗಿ ಬರಲಿಲ್ಲ ಎನ್ನುವದು ಅವನು ತನಗೆ ತಂದೆಯ ಪತ್ರ ತೋರಿಸಿದಾಗಲೇ ಗೊತ್ತಾದದ್ದು.

" ಮಾವನವರ ಪತ್ರಾ ನೋಡಿ ನನಗ ನಿನ್ನ ದೊಡ್ಡ ಮನಸ್ಸ ತಿಳೀತು. ಗೌರಿ ನಮ್ಮಿಬ್ಬರ ಜಗಳದ ಕಾರಣ ನೀ ಅವರಿಗೆ ಹೇಳಿಲ್ಲ. ಪರೀಕ್ಷಾ ನೆವಾ ಹೇಳಿದಿ. ಅದಕ್ಕs ಧೈರ್ಯದಿಂದ ತಲೆ ಎತ್ತಿಕೊಂಡು ಇಲ್ಲಿಗೆ ಬಂದೆ. ಎಷ್ಟಂದರೂ ನೀ ನನ್ನ ಗೌರಿ. ನನ್ನ ಸುಖ-ದುಃಖಾ, ಮಾನಾ-ಮರ್ಯಾದಿ, ಕುಂದು ಕೊರತೆ ಎಲ್ಲಾ ನಿನ್ನವೂ ಆಗ್ತಾವ, ನಾ ನಿನ್ನ ಎಷ್ಟು ಪ್ರೀತಿ ಮಾಡ್ತೀನಿ ಗೊತ್ತಿಲ್ಲಾ ನಿನಗ " ಗೌರಿಯ ನುಣುಪು ಕೆನ್ನೆಗಳ ಮೇಲೆ ಮೃದುವಾಗಿ ಕೈ ಆಡಿಸುತ್ತಾ ಗಂಗಾಧರ ಅವಳ ಕಿವಿಯಲ್ಲಿ ಪಿಸುಗುಡುತ್ತಿದ್ದ. ಗಂಡನ ಸಾಮೀಪ್ಯದಿಂದ, ಸೂಕ್ಷ್ಮವಾಗಿ ಕಂಪಿಸುತ್ತಿದ್ದ ಗೌರಿ.

" ಇಷ್ಟು ದಿನಾ ಹೋಟೆಲಿನಲ್ಲಿ ಊಟ ಮಾಡಿದಿರೇನು ? " ಅತ್ತೆ ಊರಲ್ಲಿ ಇದ್ದಾಳೋ ಹಳ್ಳಿಗೆ ಕಳಿಸಿದ್ದಾನೋ ತಿಳಿಯುವ ಕುತೂಹಲ ಅವಳಿಗೆ ನೇರವಾಗಿ ಕೇಳಲು ಮನಸ್ಸಾಗದೆ ಸುತ್ತುಬಳಸಿ ಕೇಳಿದಳು.

" ಇಲ್ಲಾ ಗೌರೀ, ಅವ್ವ ಅಡಿಗೆ ಮಾಡತಾಳ, ಆದರೂ ನಿನ್ನಷ್ಟು ರುಚಿ ಆಗೂದಿಲ್ಲಾ ಅಂತ ಒದ್ದಾಡತಾಳ. ನೀ ಯಾವಾಗ ತವರ್ಮನಿ

ಯಿಂದ ಬರತೀ ಅಂತ ಕೇಳತಿದ್ದಳು. ” ಮಾತನಾಡುತ್ತ ಗೌರಿಯನ್ನು ಹತ್ತಿರ ಸೆಳೆದುಕೊಂಡಿದ್ದ ಗಂಗಾಧರ.

“ ನಾನು ತವರಿಗೆ ಬಂದ ಕಾರಣ ಅವರಿಗೆ ಗೊತ್ತಿಲ್ಲಲ್ಲಾ ” ಗೌರಿಯ ದನಿಯಲ್ಲಿ ಸಂದೇಹವಿತ್ತು. ಎಲ್ಲಿ ಗೊತ್ತಿದೆಯೋ ಎನ್ನುವ ಭಯವಿತ್ತು.

“ ಇಲ್ಲಾ ಗೌರಿ ನಾ ಏನೂ ಹೇಳಿಲ್ಲ. ನಾ ಹೇಳದಿದ್ದರ ಆಕಿಗೆ ಹ್ಯಾಂಗ ಗೊತ್ತಾಗಬೇಕು? ನಿಮ್ಮ ತಾಯಿಗೆ ವೈಯ್ಯಾsಗ ಆರಾಮ ಇಲ್ಲಾ ಅದಕs ಇನ್ನೂ ಬಂದಿಲ್ಲಾ ಅಂತ ಅವ್ವಗ ಹೇಳೇನಿ. ”

ಇಬ್ಬರ ಸುಳ್ಳು ಕಾರಣಗಳನ್ನು ನೆನೆದು ಗೌರಿಗೆ ನಗು ಬಂತು. ಅವಳ ನಗೆ ಮಾಸುವ ಮೊದಲೇ ಗಂಗಾಧರ ಕೇಳಿದ.

“ ಈ ಸಾರೆ ನನ್ನ ಕೂಡ ಬರ್ತಿಯಲ್ಲಾ”. ಗೌರಿಯ ಮೌನ ಕಂಡು ಕಾತರನಾಗಿ ಮತ್ತೆ ಹೇಳಿದ, “ ಗೌರೀ ನೀನು ತಿಳುವಳಿಕೆ ಇದ್ದಾಕಿ ಇದ್ದೀ. ಸ್ವಲ್ಪ ಅರ್ಥ ಮಾಡಿಕೋ. ಅವ್ವಗ ನನ್ನ ಬಿಟ್ಟರ ಯಾರೂ ಇಲ್ಲಾ. ನನಗ ನೀನು ಇದ್ದೀ ನಿನಗ ನಾನು ಇದ್ದೀನಿ. ಆವಾಗ ಅವ್ವಗ ಯಾರಿದ್ದರು? ಹೆಣ್ಣಾಗಿ ವಿಚಾರ ಮಾಡು. ಆಗ ಅವ್ವ ಪರಿಸ್ಥಿತಿ ಕೈ ಗೊಂಬಿ, ಅಸಹಾಯಕಳು ಅನ್ನುದು ನಿನಗ ತಿಳೀತದ. ನೀನು ಬೆಳೆದ ವಾತಾವರಣ, ಮನೆತನದ ಪರಿಸ್ಥಿತಿ ಬ್ಯಾರೆ, ಅದಕ ಇಷ್ಟ ಒದ್ದಾಡತೀದಿ. ನೀನು ನನ್ನ ಪ್ರೀತಿ ಮಾಡ್ತಿಯಲ್ಲಾ. ನನಗಾಗಿ ಅವ್ವ ಕಾಲು ಜಾರಿದಳು ಅನ್ನೂದು ನೆನಪಿಟ್ಟುಕೊ, ಅಂದರ ಸಿಟ್ಟು ಬರೂದಿಲ್ಲಾ. ಇನ್ನ ಮನೆತನದ ಮರ್ಯಾದಿ ಪ್ರಶ್ನಿ ಅಂದರ ನಿನಗ ಗೊತ್ತಿದ್ದ ಗುಟ್ಟು ಯಾರಿಗೂ ಹೇಳಬ್ಯಾಡ ಆಯಿತು. ಸೂಕ್ಷ್ಮ ಆಗಿ ಅವ್ವನಿಗೂ ಹೇಳ್ತೇನಿ, ಗುರಣ್ಣಾಗ ಇನ್ನ ಇಲ್ಲಿಗೆ ಬರಬ್ಯಾಡಾ ಅಂತ ಹೇಳ್ತೀನಿ, ಗಂಗಾಧರ ಕೊನೆಯ ಮಾತು ಹೇಳುವಾಗ ತುಂಬ ಆರ್ತನಾಗಿದ್ದ.

ಗೌರಿ ಗಂಡನ ಎದೆಯಲ್ಲಿ ಮುಖ ಹುದುಗಿಸಿ” “ ಆಗಲಿ, ಈ ಸಾರೆ ನೀವು ನನ್ನ ಬಿಟ್ಟು ಹೋಗಬ್ಯಾಡ್ರಿ ” ಎಂದಳು.

ಕಥೆಯಾದಳು ಹುಡುಗಿ

ಬಚ್ಚಲು ಮನೆಯಿಂದ ಮಡಿಸೀರೆ ಸುತ್ತಿಕೊಂಡು ಹೊರ ಬರುತ್ತಿದ್ದ ಮಗಳನ್ನು ಕಂಡು ಗಿರಿಜವ್ವ " ನೀಲಕ್ಕಾs ನಿನ್ನ ಜಳಕ ಆತಲ್ಲ, ಲಗೂನ ದೇವರ ಮನಿಯೊಳಗ ಪಾರ್ವತಿ ಹೆಸರಲೆ ಸೀರಿ ಏರಿಸಿ ಪೂಜಿ ಮಾಡು. ಮಾವನ್ನ ಕೇಳಿ ಬಂಗಾರ ಸಾಮಾನು ಇಸಕ್ಕೊಂಡು ಹಾಕು " ಎಂದು ಹೇಳಿ ಹೂರಣ ರುಬ್ಬುತ್ತಿದ್ದ ಹೆಣ್ಣಾಳಿನ ಹತ್ತಿರ ಬಂದು ಹೂರಣ ಹಿಡಿದು ನೋಡಿ " ಕಾಳವ್ವಾs ಇನ್ನೊಂದಿಷ್ಟು ಸಣ್ಣಾಗಿ ರುಬ್ಬು, ಇಲ್ಲಂದರೆ ಹೋಳಿಗಿ ಹರಿತಾವ '' ಎನ್ನುತ ಒಲೆಯ ಮುಂದೆ ಕುಳಿತು ವಡೆ ಕರಿಯುತ್ತಿದ್ದ ಗಂಗಮ್ಮನಿಗೆ " ಯಮ್ಮಾs, ನಾ ವಡೀ ಕರೀತಿನಿ ಏಳು. ಭಾಳ ಹೋತ್ತಾತು ನೀನು ಒಲಿ ಮುಂದ ಕುಂತು, ಹೊರಗೆ ಹೋಗು ಮಂದಿ ಭಾಳ ಬಂದಾರ. ನೀರಲಗಿರಿಯವರು, ಹೊಸೂರವರು, ಅಣ್ಣೀಗೇರಿ ಬೀಗರು ಎಲ್ಲಾರೂ ಬಂದಾಂಗ ಕಾಣತೈತಿ, ಮಾತಾಡಸ ಹೋಗು ಅವರನ್ನ '' ಎಂದು ತಾಯಿಯನ್ನು ಎಬ್ಬಿಸಿ ಹೊರಗೆ ಕಳಿಸಿದಳು.

ಪಡಸಾಲೆಗೆ ಬಂದ ಮುದುಕಿ ಅಲ್ಲಿ ಕೂಡಿದ ಜನ ನೋಡಿ ನೆಲಕ್ಕೆ ಕುಸಿದೇ ಬಿಟ್ಟಳು. ಸೆರಗು ಮುಖಕ್ಕೆ ಮುಚ್ಚಿಕೊಂಡು ಹೋ ಎಂದು ಅಳ ಹತ್ತಿದಳು. ಮುಂದೆ ಬಂದ ನಾಗಪ್ಪಣ್ಣ

'' ಗಂಗಮ್ಮನೋರ, ಸಮಾಧಾನ ತೋಗಳ್ರಿ, ಜೀವಕ್ಕೆ ತ್ರಾಸ ಮಾಡಿಕೊಬ್ಯಾಡ್ರಿ '' ಎಂದಾಗ " ಯಣ್ಣಾs, ನನ್ನ ಹೊಟ್ಟ್ಯಾಗ ಬೆಂಕಿ ಬಿದ್ದೈತಿ. ಬಣ್ಣದ ಗೊಂಬೀ ಹಂತಾ ನನ್ನ ಪಾರಕ್ಕನ್ನಕ ಳಕೊಂಡು ನಾ ಹ್ಯಾಂಗ ಸುಮ್ಮಕಿರಲಿ. ಶಿವಾ ಈ ಮುದಿಕಿನ್ನ ಯಾಕ ಒಯ್ಯಲಿಲ್ಲಾ? ಇನ್ನೂ ಕಣ್ಣು ಬಿಟ್ಟ ಆಡೊ ನನ್ನ ಮೊಮ್ಮಗಳನ್ನ ಒಯ್ದಾ. '' ರಾಗ ತೆಗೆದು ಅಳುತ್ತಿದ್ದ ಮುದುಕಿಯನ್ನು ನೋಡಿದವರ ಕಣ್ಣುಗಳೆಲ್ಲ ತುಂಬಿ ಬಂದವು.

ಧೋತರದ ಮುಸುಕು ಬಿಗಿದು ಮಂಚದ ಮೇಲೆ ಮಲಗಿದ್ದ ಬಸಣ್ಣ ಎದ್ದು ಕುಳಿತು ಅವ್ವನನ್ನು ಗದರಿಸಿದ "ಎಬೇ ಯಾಕ ಅಳತಿ? ಹಾಂಗ ಅತ್ತರ ಹೋದಾಕಿ ತಿರಿಗಿ ಬರತಾಳೇನ?" ಮಗನ ಕೆಂಪುಕಣ್ಣು, ಕೆದರಿದ ಕೂದಲು, ಮಾಸಿದ ಧೋತರ ನೋಡಿದ ಗಂಗವ್ವ ಮತ್ತೆ ದನಿ ಎತ್ತರಿಸಿದಳು. "ಯಪ್ಪಾ ನೋಡ್ರೋ ನನ್ನ ಮಗನ್ನ. ದೊರಿ ಹಾಂಗ ನೆರದಾಡತಿದ್ದಾ. ಹ್ಯಾಂಗ ಹಾಸಿಗೆ ಹಿಡದಾನ. ಮಗಳು ಹೋದಾಗಿಂದ ಹೊಟ್ಟೆಗೆ ಕೂಳು ತಿನವೊಲ್ಲ. ಕಣ್ಣು ಮುಚ್ಚವೊಲ್ಲ. ಪಾರೂ, ಪಾರಕ್ಕಾ ನಿನ್ನ ನಾನs ಕೊಂದಂಗಾತು ಅಂತ ಹುಚ್ಚಾಗಿ ಬಡಬಡಸ ತಾನ."

ಅವ್ವನ ಮಾತು ಕೇಳಿ ಬಸಣ್ಣನ ಬತ್ತಿದ ಕಣ್ಣುಗಳಲ್ಲಿ ಮತ್ತೆ ಸೆಲೆ ಒಡೆಯಿತು. ಧೋತರ ಹೊಚ್ಚಿಕೊಂಡು ಅಳು ಹೊರಗೆ ಬರದಂತೆ ತಲೆ ದಿಂಬಿಗೆ ಮುಖವೊತ್ತಿದ. ವಿರುಪಾಕ್ಷಪ್ಪ ಹತ್ತಿರ ಹೋಗಿ ಗೆಳೆಯನ ಬೆನ್ನ ಮೇಲೆ ಕೈಯಾಡಿಸಿ "ಬಸಣ್ಣಾs, ಹೋದವರು ನಮ್ಮವರು ಅಲ್ಲಾಂತ ತಿಳಕೋಬೇಕು. ಎಲ್ಲಾರೂ ಒಂದಿಲ್ಲ ಒಂದ ದಿನಾ ಹೋಗೂದ ಅದ. ಒಬ್ಬರು ಹಿಂದ ಒಬ್ಬರು ಮುಂದ. ಪಾರಕ್ಕನ ಆಯುಷ್ಯ ಅಷ್ಟs ಇತ್ತು. ತನ್ನ ಪಾಲಿನ ಕೆಲಸಾ ಮುಗಿಸಿ ತನ್ನ ಹಾದೀ ಹಿಡಿದ್ಲು. ಶಿವಗ ಬೇಕಾ ಗಿತ್ತು ಕರಕೊಂಡಾ. ನೀ ಧೈರ್ಯಾ ತೊಗೋಬೇಕು. ಮನಸ್ಸು ಗಟ್ಟಿ ಮಾಡಿಕೋಬೇಕು." ಎಂದ. ಬಸಣ್ಣನ ಹೃದಯದ ಒಳಗಿನ ಕುದಿಯನ್ನು ವಿರುಪಾಕ್ಷಪ್ಪ ಚೆನ್ನಾಗಿ ತಿಳಿದಿದ್ದ. ಪಾರ್ವತಿ ಸತ್ತು ತಿಂಗಳು ಕಳೆಯುತ್ತ ಬಂದಿತ್ತು. ಅವನಿಗೆ ಈಗಾಗಲೇ ನೂರಾರು ಸಲ ಬಾಯಿಮಾತಿನ ಒಣ ವೇದಾಂತವನ್ನು ಹೇಳಿದ್ದ. ಅವನ ಮನಸ್ಸಿಗಾದ ನೋವನ್ನು ಕಾಲವೇ ಮಾಯಿಸಬೇಕು ಎನ್ನುವದು ತಿಳಿದಿದ್ದರೂ ಮತ್ತೆ ನೂರಾಒಂದನೆಯ ಸಲ ಸಾಂತ್ವನದ ಮಾತುಗಳನ್ನಾಡಿದ್ದ.

"ಮುತ್ತಿನಂಥಾ ಗಂಡು ಮಕ್ಕಳನ್ನ ನೋಡಿ ನಿಮ್ಮ ದುಃಖಾ ಮರೀಬೇಕ್ರಿ." ಬಸಣ್ಣನ ಮಗನಿಗೆ ಹೆಣ್ಣುಕೊಟ್ಟ ನಾಗಪ್ಪಣ್ಣ ನುಡಿದರು.

"ಪಾರವ್ವ ಪುಣ್ಯವಂತಿ. ಮುತ್ತೈದಿ ಸಾವಂತ್ರಿ ಆಗಿ ಸತ್ಲು." ಇನ್ನೊಬ್ಬ ವಿಧವೆ ಮುದುಕಿ ದನಿಗೂಡಿಸಿದಳು.

"ಏಳ್ರಿ ಇನ್ನ. ಬಸಣ್ಣಾ ಜಳಕಾ ಮಾಡ್ರಿ. ದಿನಾ ಮಾಡಾಕ ಬೀಗರು ಬಿಜ್ಜರು ಎಲ್ಲಾರೂ ಬಂದಾರ. ಇಸಬಾಯಿ ತೊಳಕೊಳ್ಳೂಣು. ನಿಮ್ಮ ದುಃಖಾ ಆ ಶಿವಾನs ಮರಸಬೇಕು.'' ಎಲ್ಲರಿಗಿಂತ ಹಿರಿಯರಾದ ವಿರಭದ್ರಪ್ಪ ಒತ್ತಾಯ ಮಾಡಿದಾಗ ಬಸಣ್ಣ ಮಂಚದಿಂದ ಇಳಿದು ತೂಗಾಡುತ್ತ ಮಗ ಚಂದ್ರಶೇಖರನ ಹೆಗಲ ಮೇಲೆ ಕೈಯೂರಿ ಬಚ್ಚಲಿಗೆ ಹೊರಟ.

ಅಡುಗೆ ಮನೆಯ ಒಳಬಾಗಿಲಲ್ಲಿ ನಿಂತ ನೀಲಕ್ಕ ಮೆಲುದನಿಯಲ್ಲಿ 'ಮಾವಾs' ಎಂದಳು. ಬಸಣ್ಣ ಮುಖವೆತ್ತಿದ. ಗಂಟಲು ಕಟ್ಟಿದ ನೀಲಕ್ಕ "ಪಾರಕ್ಕಗ ಸೀರಿ ಏರಿಸಿ ಪೂಜಿ ಮಾಡಬೇಕು. ಬಂಗಾರ ಸಾಮಾನು ಕೊಡು.'' ಎಂದಳು. ನಡದಲ್ಲಿದ್ದ ಕೀಲಿಕೈ ಗೊಂಚಲನ್ನು ಅವಳತ್ತ ಒಗೆದು ಹೇಳಿದ "ಉಮೇಶಗ ಹೇಳು ತಿಜೋರಿ ಕೀಲಿ ತಗದು ಕೊಡು ಅಂತ. ಸೀರಿ, ಖಣಾ ನಿಮ್ಮವ್ವನ ಹತ್ತರ ಅದಾವ." ನೀಲಕ್ಕ ಗಂಡ ತೆಗೆದುಕೊಟ್ಟ ವಸ್ತ್ರ-ಒಡವೆಗಳನ್ನೆಲ್ಲ ತಾಟಿನಲ್ಲಿ ತುಂಬಿಕೊಂಡು ತಂದು ಪೂಜೆಗೆ ಅಣಿ ಮಾಡಿದಳು.

ಪೂಜೆ :

ಅವ್ವ ಕೊಟ್ಟ ಹಸಿರು ರೇಶಿಮೆಯ ಇಳಕಲ್ಲ ಸೀರೆಯನ್ನು ಸೆರಗು ಮೇಲಾಗಿ ಮಾಡಿ ಚೌಕಾಗಿ ಮಡಿಚಿ ದೇವರ ಜಗುಲಿಯ ಹತ್ತಿರ ಮಣೆಯ ಮೇಲೆ ಗೋಡೆಗೆ ಆನಿಸಿ ಇಟ್ಟು. ತ್ರಿಕೋನಾಕಾರ ಮಡಿಚಿದ ಜರದ ಖಣವನ್ನು ಸೀರೆಯ ಮೇಲೆ ಇಟ್ಟಳು. ಪಾಟ್ಲಿ, ಬಿಲಾವರ, ತೋಡೆ, ಮುತ್ತಿನ ಬಳೆ ,ಮುತ್ತಿನ ಸರ, ನತ್ತು, ಬುಗುಡಿ, ಚಂದ್ರಹಾರ, ತಾಳಿಸರ ಎಲ್ಲವನ್ನೂ ಮನುಷ್ಯರಿಗೆ ಹಾಕುವಂತೆ ಅಂದವಾಗಿ ಜೋಡಿಸಿ ಹಾಕಿ, ಬಂಗಾರದ ಕರಡಿಗೆಯನ್ನೂ ಹಾಕಿ, ಅರಿಶಿಣ, ಕುಂಕುಮ, ವಿಭೂತಿ ಹಚ್ಚಿದಳು. ಕೆನ್ನೆಯ ಮೇಲೆ ಹರಿಯುತ್ತಿದ್ದ ಕಣ್ಣೀರನ್ನು ಹಿಂಗೈಯಿಂದ ಆಗಾಗ ಒರೆಸಿಕೊಳ್ಳುತ್ತಲೇ ಎಣ್ಣೆ, ಬತ್ತಿಗಳನ್ನು ಹಾಕಿ ಎರಡು ಸಮೆಗಳನ್ನು ಥಾಳಾಗಿ ಉರಿಸಿಟ್ಟಳು. ಬೆಳ್ಳಿಯ ಆರತಿ ತುಂಬಿಟ್ಟಳು. ಗುಲಾಬಿ, ಮಲ್ಲಿಗೆ, ಸೇವಂತಿಗಿಯ ಹೂಗಳನ್ನು ಏರಿಸುವಾಗ ಪಟಪಟ ಕಣ್ಣೀರು ಸೀರೆಯ ಮೇಲೇ ಉದುರಿದವು. ಇನ್ನು ತಡೆಯಲಾಗದೆ ಮೊಣಕಾಲುಗಳಲ್ಲಿ ಮುಖ ಮುಚ್ಚಿಕೊಂಡು ಕುಳಿತುಬಿಟ್ಟಳು. ಮುಚ್ಚಿದ ಕಣ್ಣುಗಳ ಹಿಂದೆ ನೆನಪುಗಳ ಬೆಳಕು ತೂಗಾಡಿತು.

"ಅವ್ವಾs ಬೇ ನಾ ಬಿದ್ದೇ" ಎಂದು ಅಳುತ್ತ ಓಡಿ ಬರುತ್ತಿದ್ದ ಪುಟ್ಟ ಪಾರೂನನ್ನು ಅವ್ವ ಧಾವಿಸಿ ಹೋಗಿ ಎತ್ತಿಕೊಂಡು ಸೆರಗಿನಿಂದ ಮುಖ, ಮೈ, ಕೈ ಒರೆಸುತ್ತಿದ್ದಳು. ನನ್ನವ್ವ ಗಿರಿಜವ್ವ ಸೋದರತ್ತೆಯಾದರೂ ಅವಳನ್ನು ಪಾರೂ ಅವ್ವಾ ಎಂದೇ ಕರೆದದ್ದು. "ಆಕೀಗೆ ಅತ್ತೀ ಅನಬೇಕವ್ವಾ" ಎಂದು ಅಮ್ಮ ಕಲಿಸಿದಾಗೆಲ್ಲ "ನೀಲಕ್ಕ ಅವ್ವಾ ಅಂತ ಯಾಕ ಕರೀತಾಳ, ನಾನು ಹಾಂಗs ಕರಿಯಾಕಿ" ಎಂದು ಗಲ್ಲ ಉಬ್ಬಿಸಿ ಹೇಳುವಳು. ಗಿರಿಜವ್ವ ಅವಳಿಗೆ ಅವ್ವನಾದರೆ ನಾನು ಅಕ್ಕ. ಯಾವಾಗಲೂ ನನ್ನನ್ನು ಬಿಟ್ಟು ಅತ್ತಿತ್ತ ಸರಿದವಳಲ್ಲ. ಕೂಡಿಯೇ ಆಡುವುದು, ಉಣ್ಣುವದು, ತಿನ್ನುವದು, ಮಲಗುವದು ಎಲ್ಲಾ ಕೂಡಿಯೇ ಮಾಡಬೇಕು. ಮಾವ ಅರಿವೆ-ಅಂಚಡಿ, ರಿಬ್ಬನ್ನು, ಬಳೆ ಏನು ತಂದರೂ ಎರಡೆರಡು ತರಲೇಬೇಕು. ಇಬ್ಬರೂ ಕೂಡಿ ಹೊಸ ಅರಿವೆ ಹಾಕಿಕೊಂಡು ಕುಣಿದಾಡಿದಾಗ ಪಾರೂನಿಗೆ ಬಹಳ ಹಿಗ್ಗು.

ಅವಳಿಗಿಂತ ಎರಡು ವರುಷ ಹಿರಿಯಳಾದ ನಾನು ಮೊದಲು ದೊಡ್ಡವಳಾಗಿದ್ದೆ. ಅವ್ವ ಮಾವನಿಗೆ ಹೇಳಿ ನನ್ನ ಸಾಲೆ ಬಿಡಿಸಿಬಿಟ್ಟಳು. ಆಗ ಪಾರೂನ ಸಿಟ್ಟು, ಹಟ ಹೇಳತೀರದು. ಉಣ್ಣಲಿಲ್ಲ, ಸಾಲೆಗೂ ಹೋಗಲಿಲ್ಲ. ಮೂಲೆಯಲ್ಲಿ ಮುಸುಕು ಹಾಕಿ ಮಲಗಿಬಿಟ್ಟಳು. ಕೊನೆಗೆ ಅವಳ ಹಟಕ್ಕೆ ಮಣಿದು ಮಾವ "ಗಿರಿಜವ್ವಾ, ಈಗ ಕಾಲ ಬದಲಾಗೇದವ್ವ. ಹೆಣ್ಣುಮಕ್ಕಳೂ ಸಾಲೀ ಕಲೀತಾರ. ನೀಲೂ ಸಾಲಿಗೆ ಹೋಗಲಿ ಬಿಡು. ಇಬ್ಬರೂ ಕೂಡಿ ಜೋಡಾಗಿ ಹೋಗತಾರ, ಬರತಾರ." ಎಂದು ಒಪ್ಪಿಸಿದ್ದರು. ತಂದೆಯನ್ನು ಕಳೆದುಕೊಂಡು, ನೆಲೆ ತಪ್ಪಿ ಸೋದರಮಾವನ ಮನೆಗೆ ಬಂದ ನನಗೆ ಪಾರೂನಿಂದಾಗಿ ಯಾವ ಕೊರತೆಯೂ ಕಾಣಲಿಲ್ಲ.

'ಪಾರೂ ದೊಡ್ಡಾಕಿ ಆಗಿ ಸೀರೀ ಉಡೂ ಹಂಗಾದ್ಲು. ಆಕೀ ಕೈ, ಕೊರಳು ಭಣಾ ಭಣಾ ಅಂತಾವ. ಬಂಗಾರದ ಬಳಿ, ಸರಾ ಮಾಡಿಸಿ ಹಾಕಬೇಕಲ್ಲ.' ಎಂದು ಅವ್ವ, ಅಮ್ಮ ಮಾವನಿಗೆ ಹೇಳಿದಾಗ ನಾನು ಅಲ್ಲಿಯೇ ಇದ್ದೆ. ಮಾವ ಪಾರೂನ ಅವ್ವನ ಹಳೆಯ ದಾಗೀನುಗಳನ್ನೆಲ್ಲ ಮುರಿಸಿ ಬಳೆ, ಸರ ಮಾಡಿಸಿ ತಂದರು. ಪಾರೂ ಅವುಗಳನ್ನು ದೇವರ ಮುಂದಿಟ್ಟು ನಮಸ್ಕಾರ ಮಾಡಿ, ಅಲ್ಲೇ ನಿಂತಿದ್ದ ನನ್ನ ಕೈಗಳಿಗೆ ಕೆಂಪು ಕಾಜಿನ ಬಳೆಗಳ ಜೊತೆಗೆ ಎರಡು ಬಂಗಾರದ ಬಳೆ ಏರಿಸಿ, ಉಳಿದುದನ್ನು

ತಾನು ಹಾಕಿಕೊಂಡಳು. ಇಬ್ಬರೂ ಹೋಗಿ ಹಿರಿಯರಿಗೆ ನಮಸ್ಕಾರ ಮಾಡಿದಾಗ ಅವ್ವ ಅವಳನ್ನಪ್ಪಿ ಅತ್ತುಬಿಟ್ಟಳು. ಮಾವ ಏನೋ ತಪ್ಪು ಮಾಡಿದವರಂತೆ ಎದ್ದು ಹೋದರು. ಎಂಟು ದಿನಗಳಲ್ಲಿಯೇ ನನಗೂ ಬಂಗಾರದ ಬಳೆ ಮಾಡಿಸಿ ತಂದು ಹಾಕಿದರು.

ಪಾರೂ ಬಣ್ಣದಲ್ಲಿ ನನಗಿಂತಲೂ ಕಪ್ಪು. ಚಿಕ್ಕವಳಿದ್ದಾಗ ಬಿದ್ದು ಗಾಯವಾಗಿ ಹಣೆಯಲ್ಲಿ ಕಚ್ಚು ಬಿದ್ದಿತ್ತು. ಕಣ್ಣು, ಮೂಗು ನೇರವಾಗಿ ಮೈ ಕೈ ಮಾಟವಾಗಿ ಲಕ್ಷಣವಾಗಿದ್ದರೂ ಅವಳಿಗೆ ಆ ಸಮಾಧಾನ, ಆಗಾಗ ತನ್ನ ಕಪ್ಪನ್ನೆತ್ತಿ ಅವಳು ಆಡಿಕೊಂಡಾಗ ನನಗೆ ಸಂಕಟವಾಗು ತ್ತಿತ್ತು. ಅವ್ವ ಅವಳ ಮುಖವನ್ನು ಬೊಗಸೆಯಲ್ಲಿ ಹಿಡಿದು, ನೆಟಿಗೆ ಮುರಿದು “ನನ್ನ ಕೂಸು ಭಾಗ್ಯವಂತಿ, ಪುಣ್ಯವಂತಿ, ಗುಣದಾಗ ಅಪರಂಜಿ, ಇಂಥಾ ಮಗಳ್ನ ಇಟ್ಕೊಂಡು ಬಾಳೆ ಮಾಡೂ ಪುಣ್ಯೇ ನಿಮ್ಮ ಅವ್ವಗಿಲ್ಲ” ಎಂದಾಗ ಪಾರೂ ಮಾತ್ರ “ನೀ ಆದಿಯಲ್ಲ ನನ್ನವ್ವ” ಎಂದು ಅತ್ತೆಯನ್ನಪ್ಪಿಕೊಳ್ಳುವಳು.

ನಾವು ಬೆಳೆದು ದೊಡ್ಡವರಾದಂತೆ ಅವಳ ಅಣ್ಣ ಉಮೇಶನೂ ಬೆಳ ದಿದ್ದ, ಮಾವನ ಸಮ ಎತ್ತರವಾಗಿದ್ದ. ನನ್ನೊಡನೆ ಮಾತು ಕಡಿಮೆ ಮಾಡಿದ್ದ. ಎಲ್ಲರ ಕಣ್ಣು ತಪ್ಪಿಸಿ ಆಗಾಗ ಕಳ್ಳನೋಟದಿಂದ ಹೊಸಬಳನ್ನು ನೋಡುವ ಹಾಗೆ ನನ್ನನ್ನು ನೋಡುತ್ತಿದ್ದ. ನನಗೆ ಮೈ ತುಂಬ ನಾಚಿಕೆ. ಅವನತ್ತ ನೋಡಿಯೂ ನೋಡದ ಹಾಗೆ ಮಾಡುತ್ತಿದ್ದೆ. ಅವನ ಯಾವ ಕೆಲಸವನ್ನೂ ನಾನು ಮುಂದಾಗಿ ಹೋಗಿ ಮಾಡುತ್ತಿರಲಿಲ್ಲ. ಪಾರೂ ತುಂಟತನದಿಂದ ಬೇಕಾಗಿಯೇ ನನಗೆ ಅವನ ಕೆಲಸ ಹಚ್ಚುತ್ತಿದ್ದಳು. ನಾವು ಮಾತನಾಡುವಂತೆ ಮಾಡುತ್ತಿದ್ದಳು, ನಾವು ನಾಚುತ್ತ ತಡವರಿ ಸುತ್ತ, ಕೆಂಪಾಗುತ್ತ ಮಾತಾಡಿದಾಗ “ಓಹೋ ಗಂಡಾ ಹೇಣ್ತಿ ಮಾತಾ ಡಿದರೋ” ಎಂದು ಚಪ್ಪಾಳೆ ತಟ್ಟಿ ನಗುವಳು.

ತನ್ನ ಒಳ್ಳೊಳ್ಳೆಯ ರೇಶಿಮೆ ಸೀರೆಗಳನ್ನು ನನಗೆ ಉಡಿಸಿ ನನ್ನ ಚಂದ ನೋಡುವದರಲ್ಲಿಯೇ ಅವಳಿಗೆ ತೃಪ್ತಿ. ‘ನೀಲಕ್ಕಾ ನೀ ಬೆಳ್ಳಗ ಅದಿ. ಈ ಕೆಂಪು ಸೀರಿ ನಿನಗೆ ಎಷ್ಟು ಛಂದ ಕಾಣಸ್ತದ ನೋಡು’ ಎಂದು ಉಡಲು ಸೀರಿ ಕೊಟ್ಟು ಜಡೆಗೆ ಮಲ್ಲಿಗೆ ಮಾಲೆ ಮುಡಿಸಿ, ಕುಂಕುಮ ತಿದ್ದಿ ತೀಡಿ ‘ನಮ್ಮ ಮನೀ ಲಕ್ಷ್ಮಿ ನೀನು’ ಎಂದು ಹಿರಿಯ ರಂತೆ ನೆಟಿಗೆ ಮುರಿಯುವಳು.

ನಮ್ಮ ಮದುವೆಯ ಮೊದಲಿನ ಮಾತು, ಹೀಗೇ ಒಂದು ದಿನ ಅವಳ ಸೀರೆ ಉಟ್ಟಿದ್ದೆ. ಕೋಣೆಯಲ್ಲಿ ಕುಳಿತು ಇಬ್ಬರೂ ಹೆಣೆಯುತ್ತಿದ್ದೆವು. ನಾನು ಬಾಗಿಲಿಗೆ ಬೆನ್ನು ಮಾಡಿ ಕುಳಿತ್ತಿದ್ದೆ. ಒಮ್ಮೆ ತಲೆಯೆತ್ತಿದಾಗ ಪಾರೂ ಅಲ್ಲಿ ಇರಲಿಲ್ಲ, ಹಿತ್ತಲಿಗೆ ಹೋಗಿರಬಹುದೆಂದು ಸುಮ್ಮನಾದೆ. ಬಾಗಿಲ ಹತ್ತಿರ ಹೆಜ್ಜೆಯ ಸಪ್ಪಳವಾಯಿತು. ಪಾರೂ ಬಂದಿರಬಹುದೆಂದು ಹೊರಳಿ ನೋಡಲಿಲ್ಲ. ಯಾರೋ ನನ್ನ ಕಣ್ಣು ಮುಚ್ಚಿದರು. ಹೆಣಿಕೆ ಬಿಟ್ಟು ನನ್ನ ಕೆನ್ನೆಯ ಮೇಲಿದ್ದ ಕೈಹಿಡಿದು ಬೆಚ್ಚಿ ಬಿದ್ದೆ. ಗಂಡು ಕೈ ! ! ಉಮೇಶ ನನ್ನ ಕಿವಿಯಲ್ಲಿ, ಪಿಸುಗುಟ್ಟಿದ, " ನೀಲೂ ನೀ ಅಂತ ತಿಳೀಲಿಲ್ಲಾ, ಸೀರಿ ನೋಡಿ ಪಾರೂ ಅಂತ ತಿಳಕೊಂಡಿದ್ದೆ " ಬಾಗಿಲ ಕಡೆಗೆ ಧಾವಿಸಿದ. ಆಗಲೇ ಪಾರೂ ಬಾಗಿಲ ಹತ್ತಿರ ನಿಂತು, ' ನೀನು ಬರತೀ ಅಂತ ಗೊತ್ತಿತ್ತು ಉಮಣ್ಣಾ, ಅದಕ್ಕs ನಾ ಹೋಗಿದ್ದೆ ' ಎಂದು ಬಿದ್ದು ಬಿದ್ದು ನಗುತ್ತಿದ್ದಳು.....

'ಪಾರೂ ಪಾರೂ ನನ್ನ ಬಿಟ್ಟು ಹೋಗಿಬಿಟ್ಟೆ ನಾನೇನು ಮಾಡಲಿ ' ನೀಲಕ್ಕನ ಹೃದಯ ಕರಗಿ ನೀರಾಗಿ ಹರಿಯಿತು.

ಎಡೆ :

ಒಲೆಯ ಮುಂದೆ ಕುಳಿತು ವಡೆ ಕರಿಯುತ್ತಿದ್ದ ಗಿರಿಜವ್ವ ಪಡಸಾಲೆ ಯಲ್ಲಿಯ ರೋದನವನ್ನು ಕೇಳಿದಳು. ಅಳು-ಅಳು-ಅಳು. ತಿಂಗಳಾ ಯಿತು. ಮನೆಯಲ್ಲಿಯ ಯಾರ ಕಣ್ಣೂ ಬತ್ತಿಲ್ಲ ! ನದಿಗೆ ಮಹಾಪೂರ ಬಂದಂತೆ ಎದೆಯನ್ನೊಡೆದು ಎರಡೂ ದಂಡೆಯಿಂದ ದುಃಖ ಉಕ್ಕಿ ಉಕ್ಕಿ ಬರುತ್ತದೆ. ಯಾವ ಆಣೆಕಟ್ಟೆಗೂ ಇದನ್ನು ತಡೆದು ನಿಲ್ಲಿಸಲು ಶಕ್ತಿ ಯಿಲ್ಲ.

ತನ್ನ ಅತ್ತಿಗೆ ಸಣ್ಣ ಮಕ್ಕಳನ್ನು ಬಟ್ಟು ಸತ್ತಾಗಲೂ ಇಷ್ಟು ದುಃಖ ವಾಗಿರಲಿಲ್ಲ. ಅಣ್ಣ ಮತ್ತೆ ಮದುವೆ ಬೇಡ ಎಂದುಬಿಟ್ಟ. ಮಗಳೆಂದರೆ ಅಣ್ಣನಿಗೆ ಪ್ರಾಣ. ಪಾರೂ ಆದರೂ ಅಷ್ಟೆ. ಅಷ್ಟು ಪುಟ್ಟ ದೇಹದಲ್ಲಿ ದೇವರು ಎಷ್ಟು ದೊಡ್ಡ ಮನಸ್ಸು ಕೊಟ್ಟಿದ್ದ ! ಆಳಿನಿಂದ ಹಿಡಿದು ಅಣ್ಣನ ವರೆಗೆ ಯಾರ ಮನಸ್ಸೂ ನೋಯಿಸಿದವಳಲ್ಲ.

ಪಾರೂ ಮದುವೆಯಾಗಿ ಗಂಡನ ಮನೆಗೆ ಹೊರಟು ನಿಂತಾಗ ತನ್ನನ್ನು ಅಪ್ಪಿ ಅತ್ತದ್ದು ನೋಡಿದರೆ ಪಡಸಾಲೆಯ ಕಂಬಗಳಿಗೂ ಕಣ್ಣೀರು

ಬಂದಿರಬೇಕು. ಒಬ್ಬಳೇ ಮಗಳು ಸುಖವಾಗಿರಲಿ ಎಂದು ಅಣ್ಣ ದೊಡ್ಡ ಶ್ರೀಮಂತ ವ್ಯಾಪಾರಸ್ಥರ ಒಬ್ಬನೇ ಮಗನನ್ನ ಹುಡುಕಿದ್ದ. ಮಗಳಿಗೆ ಹತ್ತು ತೊಲೆ ಬಂಗಾರ ಹಾಕಿ, ಅಳಿಯನಿಗೆ ಬಂಗಾರದ ಕರಡಿಗೆ ಮೇಲೆ ಹತ್ತುಸಾವಿರ ರೂಪಾಯಿ ಕೊಟ್ಟು ಅದ್ದೂರಿಯಾಗಿ ಮದುವೆ ಮಾಡಿದ್ದ. ಪಾರ್ವತಿಯ ಗಂಡ ಕೆಂಪಗೆ ಎತ್ತರವಾಗಿ ನೋಡಲು ಚೆನ್ನಾಗಿದ್ದ. ಹೊಸ ಮೊದಲಗಿತ್ತಿಯೊಡನೆ ಪಾರೂನ ಚಿಕ್ಕವ್ವ ಅವಳ ಗಂಡನ ಮನೆಗೆ ಹೋಗಿ ಬಂದಳು. ಬೀಗರ ಶ್ರೀಮಂತಿಕೆ, ಆಳು, ಕಾಳು, ಕಾರು, ಮನೆ ಎಲ್ಲಾ ಹೊಗಳಿದರೂ ಅವರಿಗೆ ಶ್ರೀಮಂತಿಕೆ ಸೊಕ್ಕು ಬಹಳ. ಹುಡುಗನ ದೊಡ್ಡವ್ವ, ಅಕ್ಕ–ತಂಗಿಯರು ನಮ್ಮನ್ನು ದರಕಾರು ಮಾಡಲೇ ಇಲ್ಲ ಎಂದು ನನ್ನ ಮುಂದೆ ದೂರು ಹೇಳಿದ್ದಳು. 'ಅವರು ಎಷ್ಟಾದರೂ ಗಂಡಿನವರು, ನಾವು ಹೆಣ್ಣಿನವರು, ನಾವೇ ತಗ್ಗಿ ನಡೆಯಬೇಕು' ಎಂದು ಅವಳನ್ನು ಸಮಾಧಾನ ಮಾಡಿದ್ದೆ. ಗಂಡನ ಮನೆಗೆ ಹೋಗಿ ಬಂದ ಪಾರೂ ಮಾತ್ರ ಸಪ್ಪಗಿದ್ದಳು. ಮುಖ ಬಾಡಿತ್ತು. ನೀಲಕ್ಕ ನಾನು ಕೂಡಿ ಕೇಳಿದಾಗ 'ಮೈಯಾಗ ಆರಾಮ ಇಲ್ಲ ಅತ್ತೀ' ಎಂದು ಮಾತು ಹಾರಿಸಿದಳು. ನಮಗೆ ನಂಬಿಕೆಯಾಗಲಿಲ್ಲ. ಅವಳು ಗಂಡನ ವಿಷಯವಂತೂ ಎತ್ತಲೇ ಇಲ್ಲ. ಆಣೆ ಇಟ್ಟು ಬಹಳ ಒತ್ತಾಯ ಮಾಡಿದಾಗ ಅತ್ತು ಬಿಟ್ಟಳು. ಅವಳು ಅಲ್ಲಿ ಹತ್ತು ದಿನವಿದ್ದರೂ ಗಂಡ ಅವಳನ್ನು ಮಾತಾಡಿಸಿರಲಿಲ್ಲ. ಮೊದಲನೆಯ ದಿನ ನಿರ್ವಾಹವಿಲ್ಲದೆ ಕೋಣೆಯಲ್ಲಿ ಮಲಗಿದ್ದ. ತಾನು ಮಂಚದ ಮೇಲೆ ಸುಪ್ಪತ್ತಿಗೆಯ ಮೇಲೆ ಮಲಗಿ–ಅದೂ ಅಣ್ಣ ಕೊಟ್ಟದ್ದು–ಅವಳನ್ನು ಕೆಳಗೆ ಜಮಖಾನೆಯ ಮೇಲೆ ಮಲಗಲು ಹೇಳಿದ್ದನಂತೆ. ಅದೊಂದೇ ಅವನು ಮಾತಾಡಿದ್ದು. ಮುಂದೆ ಅವನು ಮಲಗಲು ಬಂದಿರಲೇ ಇಲ್ಲ. ಪಾರ್ವತಿ ಎಲ್ಲವನ್ನೂ ಹೊಟ್ಟೆಯಲ್ಲಿಟ್ಟುಕೊಂಡೇ ಬಂದಿದ್ದಳು. ನನ್ನ ಎದೆ ಧಸ್ಸೆಂದಿತು. ಕೈ ಕಾಲು ಹೋದಂತಾಗಿ ಬಹಳ ಹೊತ್ತು ಮಾತು ಬರಲೇ ಇಲ್ಲ. ಬೀಗರ ಮನೆತನ ನೋಡಿ ಬಂದ ಮೇಲೆ ಅಣ್ಣನ ಮುಂದೆ ಹೆದರುತ್ತ ನಾನೇ ಮಾತು ತೆಗೆದಿದ್ದೆ. "ಅಣ್ಣಾs ಹುಡುಗ ಪಾರೂನಕಿಂತ ಹತ್ತು ವರ್ಷ ದೊಡ್ಡಾಂವ. ಮತ್ತ ಮಂದಿ ಏನೇನೋ ಮಾತಾಡತಾರ."

"ಗಿರಿಜವ್ವಾs ನೀ ಹೇಳೂ ಮಾತ ನನ್ನ ಕಿವಿಗೂ ಬಿದ್ದೈತೆ. ಒಬ್ಬನs ಮಗಾ, ಚೆಲುವ. ಕೈಯಾಗ ರೊಕ ಓಡ್ಯಾಡತಾವ. ಚೈನೀ ಮಾಡತಿ

ದ್ದಾನು. ಗಂಡಸ ಮಗ ಅದಾನ. ತಪ್ಪೇನದೆ ಅದರೊಳಗ? ನಾಳೆ ಹೇಣ್ತಿ ಮನೆಗೆ ಬಂದಳೆಂದರ ತಾನs ಹಾದಿಗೆ ಬರತಾನ. ನಿನ್ನ ಅತ್ತಿಗಿ ಬರೂ ತನ್ಕಾ ನಾನು ತುಸು ಹಾರ್‍ಯಾಡಿದ್ನೇನ?'' ಎಂದು ಅಣ್ಣ ನಕ್ಕು ಬಿಟ್ಟಿದ್ದ. ಬೀಗರ ಶ್ರೀಮಂತಿಕೆ, ಅಳಿಯನ ಚಂದ ನೋಡಿ ಅಣ್ಣ ಮಗಳನ್ನ ಕೊಟ್ಟು ಬಿಟ್ಟಾ "ತಾಯಿ ಸತ್ತ ಮಗಳ್ನ ನೀನs ಕಾಪಾಡಬೇಕು. ದೇವರs ಆಕೀ ಗಂಡಗ ಛಲೋ ಬುದ್ಧಿ ಕೊಡು" ಎಂದು ಪೂಜೆಗೆ ಕುಳಿತಾಗ ದೇವರನ್ನು ಬೇಡಿಕೊಂಡು ನಾಲ್ಕು ಹೂ ಹೆಚ್ಚಿಗೆ ಏರಿಸಿದೆ. ಪಾರೂನ ಅದೃಷ್ಟ ಚೆನ್ನಾಗಿದ್ದರೆ ಯಾಕೆ ಸುಖದಿಂದ ಇರಬಾರದು ಎಂದು ಸಮಾಧಾನ ಪಟ್ಟಿದ್ದೆ. ಆದರೆ ಅವಳು ಎರಡನೆಯ ಸಲ ಗಂಡನ ಮನೆಯಿಂದ ಬಂದ ಮೇಲೆ ಆ ಸಮಾಧಾನ ಉಳಿಯಲಿಲ್ಲ.

"ಪಾರೂ ಇಷ್ಟ್ಯಾಕ ಸೊರಗೀ. ಮೈಯಾಗ ಬರೇ ಎಲಬು ಕಾಣ್ತಾವ. ಅತ್ತೀ ಮನ್ಯಾಗ ಕೂಳು ಹಾಕ್ತಾರೋ ಇಲ್ಲೋ." ಎಂದು ಅವಳ ಬೆನ್ನು ಮೇಲೆ ಕೈಯಾಡಿಸಿ ಕೇಳಿದಾಗ,

"ಅತ್ತೀ ನಾ ಒಂದ ಮಾತ ಕೇಳ್ತೇನಿ.; ಖರೇ ಹೇಳು.' ಎಂದು ದೈನಾಸ ಬಿಟ್ಟು ಕೇಳಿದ್ದಳು. ನಾನು ಹೂಂಗುಟ್ಟಿದಾಗ "ಅವರಿಗೆ ನನ್ನ ಮದುವಿ ಮಾಡಿಕೊಳ್ಳೊ ಮನಸ್ಸಿತ್ತೋ ಇಲ್ಲೋ ಕೇಳಿದಿರೇನು? ನೀವs ಜುಲುಮಿ ಮಾಡಿ ಗಂಟ ಹಾಕಿದಿರಿ ಅಂತಾರಲ್ಲ" ಎಂದಳು. ಬಸಣ್ಣ, ವಿರುಪಾಕ್ಷಣ್ಣ ಕೂಡಿ ಈ ಮನೆತನ, ಈ ಹುಡುಗನ್ನ ಕೈಬಿಡಬಾರದು. ಹಿರೇರಿಗೆ ಗಂಟು ಬಿದ್ದು ಹುಡುಗನ್ನ ಒಪ್ಪಿಸಬೇಕು. ಕೇಳಿದಷ್ಟು ರೊಕ್ಕಾ ಕೊಟ್ಟರೂ ಪಾರ್ವತಿ ಲಗ್ನಾ ಮಾಡಬೇಕು. ಹುಡುಗಿ ಸುಖದಿಂದ ಇರತಾಳ ಎಂದು ಮಾತನಾಡಿಕೊಂಡದ್ದು ನಾನು ಕೇಳಿದ್ದೆ. ಹಾಗೆ ಒತ್ತಾಯ ಮಾಡಬಾರದಾಗಿತ್ತು. ಆಗಿ ಹೋಗಿದೆ. ಈಗ ಮಾತಾಡಿ ಏನು ಪ್ರಯೋಜನ? ಎಂದು ಸುಮ್ಮನಿದ್ದೆ.

"ಯಾಕ ಅತ್ತೀ ಸುಮುನs ಕುಂತಿ. ನನ್ನ ಅವರಿಗೆ ಮದುವೀ ಮಾಡಿ ನನ್ನ ಕುತ್ತಿಗೆ ಉರುಲು ಹಾಕಿದಿರಿ. ಬಡವಗ ಕೊಟ್ಟಿದ್ರ ಸುಖದಿಂದ ಇರಿತಿದ್ನಿ. ಅಷ್ಟ್ಯಾಕ ಜುಲುಮಿ ಮಾಡಿದಿರಿ? ನಾ ನಿಮುಗ ಭಾರ ಆಗಿದ್ನೇನು?" ಎಂದು ಅವಳು ಅತ್ತಾಗ ಅವಳನ್ನು ಸಮಾಧಾನ ಮಾಡಲು ಮಾತು ಸಿಗದೆ ಒದ್ದಾಡಿದೆ. "ಹಾಂಗ ಅನಬ್ಯಾಡವ್ವ

ಪಾರೂ. ನಿನ್ನ ಗ್ರಹಾ ಛಲೋ ಇಲ್ಲ. ಅದಕ್ಕs ಈಗ ತ್ರಾಸಾಗ್ತದ. ಮುಂದೆಲ್ಲಾ ಬರೊಬರಿ ಆಗ್ತದ. ತಾಳಿಕೋ, ಹೆಣ್ಣುಮಕ್ಕಳು ತಾಳಿಕೊಂಡಷ್ಟು ಬಾಳತಾರ.'' ಎಂದರೂ ನನ್ನ ಹೃದಯ ಅಳ್ತಾನೇ ಇತ್ತು.

ಪಾರ್ವತಿಯ ಮದುವೆಯಾಗಿ ವರ್ಷವಾಗಿತ್ತು. ಉಮೇಶನ ಜೊತೆಗೆ ನೀಲಕ್ಕನ ಲಗ್ನ ಗೊತ್ತುಮಾಡಿ, ಮಗಳು-ಅಳಿಯ ಬೀಗರನ್ನೆಲ್ಲ ಅಣ್ಣ ಸ್ವತಃ ಹೋಗಿ ಕರೆದು ಬಂದ. ಅಳಿಯರಾಯ ಬರಲು ಒಪ್ಪಲೇ ಇಲ್ಲ. ಸೊರಗಿ ಹೋದ ಪಾರ್ವತಿ ಮೈತುಂಬ ಭಾರನಾಗುವಂತೆ ಬಂಗಾರ ಹೇರಿಕೊಂಡು ಜರದ ಸೀರೆ ಉಟ್ಟು, ಅಣ್ಣನ ಮದುವೆಯಲ್ಲಿ ಕಾಲೆಳೆಯುತ್ತ ಓಡಾಡಿದಳು. ಅವಳ ಕಣ್ಣುಗಳಲ್ಲಿ ಜೀವವಿರಲಿಲ್ಲ. ಮದು–ಮಕ್ಕಳನ್ನು ಕಂಡಾಗ ನಗುವಳು ಕೆಲೆಯುವಳು, ಚೇಷ್ಟೆ ಮಾಡುವಳು. ಮತ್ತೆ ಮಂಕಾಗುವಳು. ನಾನೇ ನೋಡಲಾರದೆ ಕೆಲವು ದಿನ ತವರಿನಲ್ಲಿ ಇರಲಿ ಎಂದು ಅಣ್ಣನಿಗೆ ಹೇಳಿ ಒತ್ತಾಯ ಮಾಡಿ ಇಟ್ಟುಕೊಂಡೆ.

ಪಾರ್ವತಿ ಬಂದು ಮೂರು ತಿಂಗಳು ಕಳೆದರೂ ಆ ಮಹಾರಾಯ ನೇನೂ ಹೆಂಡತಿಯ ನೆನಪು ಮಾಡಿಕೊಂಡು ಒಂದು ದಿನವೂ ಮಾವನ ಮನೆಗೆ ಬರಲಿಲ್ಲ. ಪಾರ್ವತಿಯನ್ನೇ ಕೇಳಿದೆ.

'' ಅತ್ತೀ, ಅವರಿಗೆ ನಾ ಬೇಕಾಗೇ ಇಲ್ಲಾ. ನಾನು ಊರೊಳಗ ಇದ್ದರೂ ಅವರು ಮನೀಯೊಳಗ ಮಲಗೂದಿಲ್ಲಾ. ಕೈಯ್ಯಾಗ ರೊಕ್ಕ ಇರ ತದ, ಕುಡೀಲಿಕ್ಕೆ ಕಲಿತಾರ. ಊರ ತುಂಬಾ ಸೂಳೇರು ಅದಾರ. ಏನು ಸುಖಾ ಸಿಗತೈತಿ ಅಂತ ಇಲ್ಲಿಗೆ ಬರಬೇಕು ಅವರು.'' ಈ ಮಾತು ಹೇಳು ವಾಗ ಪಾರ್ವತಿ ಅಳಲಿಲ್ಲ, ಕಣ್ಣೀರು ಬತ್ತಿಹೋಗಿರಬೇಕು.

ಇನ್ನೊಂದು ದಿನ ಬಾವಿಯ ಕಟ್ಟೆಯ ಮೇಲೆ ಕುಳಿತು ಮಾತನಾಡು ವಾಗ ಕೈಮೇಲಿನ ಗಾಯ ತೋರಿಸಿದಳು. ಅವಳ ಗಂಡ ಹೊಡೆದಾಗ ನಾಚು ಒಡೆದು, ಗಾಜು ನಟ್ಟು ರಕ್ತ ಸೋರಿದರೂ ಹೊರಳಿ ನೋಡದೆ ಹೋಗಿದ್ದನಂತೆ. ಗಾಯ ಮಾಯಲು ತಿಂಗಳು ಕಳೆಯಿತು. ಯಾರು ಕೇಳಿ ದರು ಬಳೆ ಹೆಚ್ಚಿ ನೋವಾಗಿದೆ ಎಂದು ಹೇಳುತ್ತಿದ್ದಳಂತೆ. ಅವಳ ತಲೆ ಕೂದಲು ಉದುರಿ ಅಲ್ಲಲ್ಲಿ ಬಿಳಿ ಕೂದಲೂ ಕಾಣುತ್ತಿದ್ದವು.

ಮಗಳನ್ನು ಮತ್ತೆ ಗಂಡನ ಮನೆಗೆ ಕಳಿಸಿ ಬರುವ ಮಾತೆತ್ತಿದಾಗ ಅಣ್ಣನೊಡನೆ ಸೂಕ್ಷ್ಮವಾಗಿ ಅವಳ ಅಲ್ಲಿಯ ಸ್ಥಿತಿಯನ್ನು ಹೇಳಿದೆ. ಅಣ್ಣ ಎಷ್ಟೋ ಹೊತ್ತು ಸುಮ್ಮನೆ ತಲೆಯ ಮೇಲೆ ಕೈ ಹೊತ್ತು ಕುಳಿತ.

"ನನ್ನ ಕೈಯಾರ್ ನಾನs ಮಗಳ ಕುತ್ತಿಗೆ ಕೊಯ್ದ್ಂಗಾತು ಗಿರಿಜವ್ವಾ" ಎಂದು ಕಣ್ಣಲ್ಲಿ ನೀರು ತಂದ. "ನನ್ನ ಕೈ ಗುಣಾ ಖೊಟ್ಟಿ ಅದ. ನಿನ್ನ ಮದುವಿ ಮಾಡಿದೆ, ನೀ ಗಂಡನ್ನ ಕಳಕೊಂಡು ತಿರಿಗಿ ಮನೇಗೆ ಬಂದಿ, ಮಗಳ ಮದುವಿ ಮಾಡಿದೆ. ಆಕೀ ಗಂಡ ಆಕಿ ಪಾಲಿಗೆ ಇದ್ದೂ ಸತ್ತಾಂಗ ಆದಾ."

"ಛೀ ಛೀ ಹಾಂಗ್ಯಾಕ ಕೆಟ್ಟ ಮಾತು ಆಡತಿ. ಇವತ್ತಿಲ್ಲಾ ನಾಳೆ ಅಳಿಯಾಗ ಛಲೋ ಬುದ್ಧಿ ಬಂದೀತು. ಆಕೆ ಬಾಳೆ ಹಸನ ಆದೀತು." ಅಂದೆ. ನಮ್ಮ ಮಾತು ನಡೆದಾಗ ರೈತ ಪರಪ್ಪ ಬಂದು ಕರೆದದ್ದರಿಂದ ಅಣ್ಣ ಎದ್ದು ಹೋದ. ಪರಪ್ಪನ ಜೊತೆಗೆ ಅವನ ಮಗಳು ಜಾನವ್ವನೂ ಬಂದಿದ್ದಳು.

"ಜಾನಿ ಆರಾಮ ಅದೀ ಏನs"

"ಹೂನ್ರಿ ಯವ್ವಾ ನಿಮ್ಮ ಪುಣ್ಯೆದಿಂದ ಆರಾಮ ಅದಿನ್ರಿ, ಹಡ್ಯಾಕ ತವರ್ಮನಿಗೆ ಕರಕೊಂಡು ಬಂದಾಸ್ರಿ ಅಪ್ಪ, ನಿಮ್ಮನ್ನ ಪಾರಕ್ಕವರ್ನ ನೋಡಿ ಹೋಗೊಣಂತ ಬಂದೆ."

ಜಾನಿಗೆ ಮೊದಲೊಂದು ಮದುವೆಯಾಗಿತ್ತು. ಅವನು ಕುಡಿದು ಬಂದು ಹೆಂಡತಿಯನ್ನು ಹೊಡೆದು ಬಡಿದು ಮಾಡುತ್ತಿದ್ದ. ಪರಪ್ಪ ಅಳಿಯನಿಗೆ ಬುದ್ಧೀ ಹೇಳಿ ನೋಡಿದ. ಅವನು ತಿದ್ದಲಿಲ್ಲ. ಅವನಿಗೆ ಸೋಡಚೀಟಿ ಕೊಡಿಸಿ ಮಗಳನ್ನು ಬೇರೆಯವನಿಗೆ ಉಡಿಕೆ ಮಾಡಿ ಕೊಟ್ಟಿದ್ದ. ಜಾನಿಯ ಮಾತು ಕೇಳಿ ಪಾರ್ವತಿ ಆಗಲೆ ಹಳೆಯ ಸೀರೆ, ರೊಟ್ಟಿ ಪಲ್ಯ ಹಿಡಿದುಕೊಂಡು ಬಂದಿದ್ದಳು.

ಉಮೇಶ–ನೀಲಾ ಹೊಸದಾಗಿ ಮದುವೆಯಾದವರು. ಅವರ ಸರಸ, ಚೇಷ್ಟೆ, ನಗು, ಮಾತುಗಳಿಂದ ಮನೆಯಲ್ಲಿ ಜೀವಕಳೆ ಇರುವಂತೆ ಕಾಣುತ್ತಿತ್ತು. ಅವರಿಬ್ಬರೂ ವಾಕಿಂಗ್ ಇಲ್ಲವೆ ಸಿನಿಮಾಕ್ಕೆ ಹೊರಟಾಗ ಪಾರ್ವತಿ ಅವರ ಜೊತೆ ಹೋಗುತ್ತಿರಲಿಲ್ಲ. ಹೋಗು ಪಾರೂ ಎಂದು ಜುಲುಮೆ ಮಾಡಿದರೆ,

"ಬ್ಯಾಡ ಅತ್ತೀ, ರಾಜಾ–ರಾಣಿ ಅವರಿಬ್ಬರೆs ಹೋಗಿ ಬರಲಿ. ಶಿವಪೂಜೆಯೊಳಗ ಕರಡಿ ಬಿಟ್ಟಾಂಗ ನಡುವೆ ನಾ ಯಾಕ? ನಾನು ನಿನ್ನ ಜೋಡಿ ಮನ್ಯಾಗs ಇರತೇನಿ" ಎಂದಾಗ ಕರಳು ಕಿತ್ತು ಬರುತಿತ್ತು.

ಗಂಡನೊಡನೆ ಕೂಡಿ ಇರುವ ಚಿಕ್ಕ ವಯಸ್ಸು ಈ ವಯಸ್ಸಿನೊಳಗೆ ಇವರು ಮನೆಯೊಳಗ ಯಾಕ ಕೊಳೀಬೇಕು ? ಎಷ್ಟಾದರೂ ಅದು ಅವಳ ಮನೀ, ಅವಳ ಅತ್ತೀ-ಮಾವಾ ನಾದಿನಿ, ಅಲ್ಲೇ ಇದ್ದರ ಅವಳ ಗಂಡನ ಮನಸ್ಸು ಇವತ್ತಿಲ್ಲಾ ನಾಳೆ ಕರಗೀತು, ತಿರುಗೀತು ಅಂತ ವಿಚಾರ ಮಾಡಿ ಅಣ್ಣಾ ನಾನು ಕೂಡಿಹೋಗಿ ಪಾರೂನ್ನ ಗಂಡನ ಮನೀಗೆ ಕಳಿಸಿ ಬಂದಿವಿ. ಅಣ್ಣ ಅವರ ಕಾಲು ಹಿಡದುಕೊಂಡು 'ನನ್ನ ಮಗಳಲ್ಲ ನಿಮ್ಮ ಮಗಳು ಅಂತ ತಿಳಿಕೊಳ್ರಿ' ಅಂತ ಕಣ್ಣೀರು ತಂದು ಹೇಳಿಕೊಂಡ. ನಾನೂ ಹೆಣ್ಣ ಮಕ್ಕಳಿಗೆ ಹೇಳಿದೆ.

" ಇಂಥಾ ಕರೇ ಮಸಡಿಯಾಕಿ ಕೂಡ ಪ್ರೀತಿಯಿಂದ ಇರೂ ಅಂದರ ನಮ್ಮಣ್ಣ ಹ್ಯಾಂಗ ಇರಬೇಕು ? ಆದರೂ ನಮ್ಮ ಮನೀ ಸೊಸಿ ಮಾಡಿ ಕೊಂಡ ತಪ್ಪಿಗೆ ಮನ್ಯಾಗ ಇಟ್ಕಕೋತೀವಿ. ಹೊಟ್ಟಿಗೆ ಹಾಕತೀವಿ. ಬಿಟ್ಟ ಹೋಗ್ರಿ " ಅಂತ ಪಾರೂನ ಹಿರೇ ನಾದಿನಿ ಸೊಕ್ಕಿಲೆ ಮಾತಾಡಿ ದಳು. ಆ ಮಾತು ಹೊಟ್ಟ್ಯಾಗ ಇಟಕೊಂಡು ನಾ ಕುದ್ದಕೊಂತ ಊರಿಗೆ ಬಂದೆ.

ನಾವು ಬಂದು ಎರಡು ತಿಂಗಳು ಆಗಿದ್ದಿಲ್ಲಾ ತಾರು ಬಂತು. ಅಣ್ಣ ಹೋಗಿ ಪಾರೂನ್ನ ಕರಕೊಂಡು ಬಂದಾ. ಗಲ್ಲದ ಮ್ಯಾಲೆ ಸುಟ್ಟಫಾಯಾ ಮೈಯಾಗ ಜ್ವರಾ ಬೆಂಕಿ. ಅವಳ ಗಂಡನ ದೊಡ್ಡವ್ವ ಸಿಟ್ಟಿಗೆದ್ದು ಸುಡೂ ಬದನಿಕಾಯಿ ಇವಳ ಗಲ್ಲಕ್ಕ ಒತ್ತಿದ್ಲಂತ. ಯಾಕಂತ ಕೇಳಿದರ ಮೂರು ಕಾಯಿ ಸುಡಲಿಕ್ಕೆ ಹಾಕು ಅಂದರ ನಾಲ್ಕು ಯಾಕ ಹಾಕಿದಿ ಅಂತ ಸಿಟ್ಟ್ಯಾಗಿ ಹಾಂಗ ಮಾಡಿದ್ಲಂತ. ಗಿಳೀ ಹಾಂಗ ಸಾಕಿ ಕಟಕರ ಕೈಯ್ಯಾಗ ಕೊಟ್ಟದ್ದೀವಿ ನಾವs. ಆ ಮನೀಯೊಳಗಿನ ಮಂದೀ ಎಲ್ಲರ್ನೂ ಕುತ್ತಿಗಿ ಹಿಚಿಕಿ ಕೊಲ್ಲಬೇಕು ಅನ್ನೂವಷ್ಟು ರಾಕ್ಷಸತನಾ ಹುಟ್ಟಿತ್ತು, ನನ್ನ ಮೈಯಾಗ. ಆದರ ನನ್ನ ಕೈಯೊಳಗಿದ್ದದ್ದು ಕಣ್ಣೀರು ಹಾಕೂದು ಒಂದs.

ಪಾರ್ವತಿ ತವರ್ಮನಿಗೆ ಬಂದು ಎಷ್ಟು ವರ್ಷ ಕಳೆದರೂ ಅವರು ಸೊಸಿ ಅದಾಳೋ, ಸತ್ತಾಳೋ ಅಂತ ಕೇಳಲಿಲ್ಲಾ. ಯಾರ್ಯಾರ ಬಾಯಿಂದ್ಲೋ ಸುದ್ದಿ ಬರುತಿದ್ವು: ಆಕಿ ಮಾವ ಸತ್ತಾ. ಅತ್ತಿ ಅಂತೂ ಮೊದಲs ಸತ್ತಿದ್ಲು. ಆಕೀ ಗಂಡ ಆಸ್ತೀ ಎಲ್ಲಾ ಹಾಳ ಮಾಡಿ ಮೈ ತುಂಬ ಸಾಲಾ ಮಾಡಿಕೊಂಡಾನ ಅಂತ. ಅಣ್ಣ ಮನಸ್ಸು ಗಟ್ಟಿ

ಮಾಡಿದ್ದಾ, ಚಕಾರ ಶಬ್ದ ಮಾತಾಡಿತಿದ್ದಿಲ್ಲಾ. ಶ್ರೀಮಂತಿಕೆ ಸೊಕ್ಕು ಇಳದ ಹೋದ ಮ್ಯಾಲೆ ಪಾರೂನ ಗಂಡಂಗ ಬುದ್ಧಿ ಬಂದೀತೇನೋ ಅಂತ ನಾನs ವಿಚಾರ ಮಾಡುತಿದ್ದೆ, ಅವಳ ಪಾಲಿನ ಎಡೀ ಎಂಥಾದಿತ್ತೂ ಅನ್ನೊದು ನಮಗೆ ಕಡೀತನಕಾ ತಿಳೀಲಿಲ್ಲಾ....

ಹೋಳಿಗೆ, ಹುಗ್ಗಿ, ಕಡುಬು, ವಡಿ, ಅನ್ನ, ಕೋಸಂಬರಿ, ಸಂಡಿಗೆ ಮತ್ತೆ ಪಾರ್ವತಿಗೆ ಪ್ರೀತಿ ಎಂದು ಹೂರಣ, ಒಂದು ದಾಟಿಯಲ್ಲಿ ತಟ್ಟಿನ ಸಾರು ಎಲ್ಲವನ್ನೂ ತಾಟಿನಲ್ಲಿ ಎಡೆ ಮಾಡಿಕೊಂಡ ಗಿರಿಜವ್ವ ದೇವರ ಕೋಣೆಗೆ ಬಂದಳು.

ಭಾವಚಿತ್ರ :

"ಇರಪಾಕ್ಷಪ್ಪ ಕಾಕಾ, ಅಪ್ಪ ಕರೀಲಿಕ್ಕೆ ಹತ್ತ್ಯಾನ. ಲಗೂನ ಬರಬೇಕಂತ" ಎಂದು ಬಸಣ್ಣನ ಮಗ ಚಂದ್ರಶೇಖರ ಬಂದು ಹೇಳಿದಾಗ ಅವಸರದಿಂದ ಬಂದೆ. "ಯಾಕಪ್ಪ, ಏನಂಥಾ ಅವಸರಾ ಕರ್‍ಯ್ಯಾಕ ಕಳಿಸಿದ್ದಿ ? ದಿನಾ ನೀನ ನಮ್ಮ ಅಂಗಡಿಗೆ ಬರಾಂವಾ.'' ಪಡಸಾಲೆ ಮೆಟ್ಟಲೇರುತ್ತ ಕೇಳಿದೆ.

ಬಸಣ್ಣ ಸನ್ನೆ ಮಾಡಿ ತನ್ನ ಕೋಣೆಗೆ ಕರೆದೊಯ್ದ. "ಇರಪಣ್ಣಾ, ಪಾರಕ್ಕನ ಗಂಡ ಬಂದಾನ." 'ಆ' ಎಂದು ಬಾಯಿ ತೆಗೆದೆ. "ಮದುವಿ ಆಗಿ ಎಂಟು ವರುಷದ ಮ್ಯಾಗ ಈಗ ಅಳಿಯಾ ಬಂದಾನs. ಛೇಷಾತು ಬಿಡು. ಹೇಣ್ತಿನ್ನಾ ಕರಕೊಂಡು ಹೋಗಾಕ ಈಗ ಬಂದಾನೇನು ?''

"ಆ ಸುದ್ದೀ ಇನ್ನೂ ಮಾತಾಡಿಲ್ಲಾ. ಅಂದರ ಸಾಲಕ್ಕ ಬಡ್ಡೀ ತುಂಬ ಬೇಕಾಗೇದಂತ. ತುಂಬದಿದ್ದರೆ ಮನೀ ಜಪ್ತಿ ಮಾಡತಾರಂತ. ಹತ್ತು ಸಾವಿರ ರೂಪಾಯಿ ಕೇಳತಾನ. ಏನ ಮಾಡಲಿ ತಿಳೀವೊಲ್ಲದು."

ಸಿಟ್ಟಿನಿಂದ ನನ್ನ ಮೈ ಉರಿಯಿತು. ಪಾರ್ವತಿ ನನ್ನ ಕಣ್ಣ ಮುಂದ ಆಡಿ ಬೆಳೆದ ಕೂಸು, ಹೂವಿನಂತಾ ಹುಡುಗಿ. ಆಕಿನ್ನ ಆ ರಾಕ್ಷಸಾ ಹಿಚಿಕಿ ಹಾಕಲಿಕ್ಕೆ ಹತ್ತ್ಯಾನ. ಇಂಥಾವಗ ಕೊಟ್ಟಿದ್ದs ಮೊದಲು ನಮ್ಮ ತಪ್ಪು. ಈ ತಪ್ಪು ತಿದ್ದಿಕೊಳ್ಳೋದು ಹ್ಯಾಂಗ ಇನ್ನ ? ಏನು ಹೇಳಲೂ ತೋಚದೆ ಸುಮ್ಮನಿದ್ದೆ.

"ಈಗ ನನಗ ಏನ ಮಾಡಂದಿ ? ಹತ್ತು ಸಾವಿರ ಎಲ್ಲಿಂದ ತರಲಿ ? ಕೊಡದಿದ್ದರೆ ಅಂವಗ ಸಿಟ್ಟು ಬರ್ತದ.''

" ಸಿಟ್ಟು ಬಂದು ಇನ್ನೇನ ಮಾಡತಾನ ಅಂವಾ ಮಾಡೋದೆಲ್ಲಾ ಮಾಡಿ ಮುಗಿಸ್ಯಾನ. ಪಾರಕ್ಕನ್ನ ನೋಡಿದರ ಹೊಟ್ಯಾಗ ಸಂಕಟ ಆಗ ತೈತಿ. ನನ್ನ ಕೇಳಿದರ ಹತ್ತು ಸಾವಿರ ರೂಪಾಯಿ ಹೋಗಲಿ ಕವಡೀ ಸುದ್ಧಾ ಕೊಡಬಾರದು ಅಂತ ಅನಸ್ತದ. "

" ನನ್ನ ಹೊಟ್ಯಾಗ ಸಿಟ್ಟು ಕುದೀತದ ಇರಪಣ್ಣಾ. ಆದರ ನನ್ನ ಮಗಳ ಬಾಳೇ ನೇರ ಆಗಬೇಕಲ್ಲ. ಇವತ್ತಿಲ್ಲ ನಾಳೆ ಆಂವಗ ಬುದ್ಧಿ ಬಂದೀತು ಅಂತ ನನಗೆ ಆಸೇ. "

" ಹೌದು ನೀ ಅನ್ನೊದು ಖರೇನ ಅದ. ಸಿಟ್ಟಿನ್ಯಾಗ ಹುಡುಗಿನ್ನ ಕಳಿಸಿಕೊಡ್ರಿ ಅಂತ ಹಟಾ ಮಾಡಿ, ಕರಕೊಂಡು ಹೋಗಿ ಆಕೀಗೆ ತ್ರಾಸ ಕೊಟ್ಟರ ಏನ್ಮಾಡೊದೂ. ಆದರ ಒನ್ಮೆಲೆ ಹತ್ತು ಸಾವಿರ ಕೊಡಬ್ಯಾಡ, ಐದು ಸಾವಿರ ಕೊಡೋಣು. ಹೇಣ್ತಿನ್ನ ಕರಕೊಂಡು ಹೋಗಿ ಸುಖದಿಂದ ಇಟ್ಟಕೋ, ನಿನಗ ಎಲ್ಲಾ ರೀತಿಯಿಂದ ಸಹಾಯ ಮಾಡ್ತೀವಿ ಅಂತ ಹೇಳೋಣು. ನಾಕಮಂದಿ ಹಿರೇರ್ನ ಕರಸು, ಅವರೂ ಕೂಡಿ ಅವಂಗ ಬುದ್ಧಿ ಮಾತು ಹೇಳಲಿ "

ಐದು ಸಾವಿರ ರೂಪಾಯಿ ಎಲ್ಲರ ಮುಂದೆ ಕೊಟ್ಟು, ಛೀ ಮಾಡಿ, ಬುದ್ಧೀ ಮಾತು ಹೇಳಿದೆವು. ಆದರೆ ಅಳಿಯನ ಗಂಟು ಮುಖಾ ಬಿಚ್ಚ ಲಿಲ್ಲ. ಮನುಷ್ಯನಂತೆ ಕಾಣಲಿಲ್ಲ. ಪಿಶಾಚಿ ಕಳೆ ಬಂದಿತ್ತು. ಅವನ ಬಣ್ಣ ಸುಟ್ಟುಹೋಗಿತ್ತು. ಎಲುಬಿನ ಹಂದರವಾಗಿದ್ದ. ಕುಡಿದು ಕೆಂಪಾದ ಕಣ್ಣು, ಹೊಲಸು ಅರಿವೆ. ಇವನೇ ಪಾರೂನ ಗಂಡ ಹೌದೋ ಅಲ್ಲವೋ ಎನ್ನುವ ಹಾಗಿದ್ದ. ಹಣ ತೆಗೆದುಕೊಂಡು ಎದ್ದು ಹೊರಟ, ಇರು ಎಂದರೂ ಕೇಳಲಿಲ್ಲ. ಕಟ್ಟಿ ಇಳಿದು ಹೋಗುವಾಗ " ಎಲ್ಲಾರೂ ಕೂಡಿ ನನ್ನ ಅಪಮಾನ ಮಾಡಿದ್ರಿ. ಕೇಳಿದಷ್ಟು ರೊಕ್ಕಾನೂ ಕೊಡ ಲಿಲ್ಲಾ, ನಿಮ್ಮನ್ನೆಲ್ಲಾ ನೋಡ್ತೀನಿ ಒಂದು ಕೈ " ಎಂದು ಗೊಣಗುಟ್ಟಿ ಹೋದ.

ಮರು ದಿನ ಶನಿವಾರ. ನೀಲಕ್ಕ–ಪಾರಕ್ಕ ಕೂಡಿ ಹಣಮಂತ ದೇವರ ಗುಡಿಗೆ ಹೋಗಿದ್ದರು. ಬರುವಾಗ ದಾರಿಯಲ್ಲಿ ಪಾರ್ವತಿಯ ಗಂಡ ಎದುರಿಗೆ ಬಂದ. ಅವನನ್ನು ನೋಡಿ ಇಬ್ಬರೂ ಹೆದರಿಬಿಟ್ಟರು. ಅವನು ಕುಡಿದಿದ್ದ. ಮೈ ಮೇಲೆ ಎಚ್ಚರವಿರಲಿಲ್ಲ. ಬಂದವನೇ ಪಾರ್ವತಿ ಯನ್ನು ಹಿಡಿದು ಎಳೆದ. ಕೈಯ್ಯಲ್ಲಿಯ ಹಣ್ಣು ಕಾಯಿ ಕೆಳಗೆ ಬಿದ್ದವು.

ದಬ ದಬ ಬಡಿಯಹತ್ತಿದ್ದ. ಬಿಡಿಸಿಕೊಳ್ಳಲು ಬಂದ ನೀಲಕ್ಕನನ್ನು ದೂಡಿದ. ಸೆರಗು ಎಳೆದು ಸೀರೆ ಕಳದೇ ಎಷ್ಟು ಕೊಸರಾಡಿದರೂ ಬಿಡದೆ ರಸ್ತೆಯಲ್ಲಿ ಹೊಡೆಯುತ್ತಿದ್ದ. ದಾರಿಯಲ್ಲಿ ಹೋಗುವ ಗಂಡಸರು ಕೂಡಿ ಅವನನ್ನು ಹಿಡಿದು ಬಿಡಿಸಿಕೊಂಡರು. ಯಾರೋ ಅವಳ ಮೈಮೇಲೆ ಸೀರೆ ಹೊಚ್ಚಿದರು. ಇನ್ನೊಬ್ಬರು ಟಾಂಗಾ ಮಾಡಿ ಮನೆಗೆ ಕಳಿಸಿಕೊಟ್ಟರು.

ಮರುದಿನ ಪಾರ್ವತಿ ಹಿತ್ತಲಿನ ಬಾವಿಯ ಪಾಲಾಗಿದ್ದಳು. ಈಗ ....ಈಗ ಪಾರ್ವತಿ ಪಡಶಾಲೆಯ ಬಾಗಿಲ ಮೇಲೆ ದೊಡ್ಡ ಚೌಕಟ್ಟಿನಲ್ಲಿ ಕುಳಿತು, ಹೂವಿನ ಮಾಲೆ ಹಾಕಿಸಿಕೊಂಡು ಬರಿಯ ಭಾವಚಿತ್ರವಾಗಿ ದ್ದಾಳೆ.

ಅಣ್ಣ-ತಮ್ಮ

ನ್ಯಾರೀ ಮುಗಿಸಿ ಬುತ್ತೀ ಕಟ್ಟಿಸಿಕೊಂಡು ಹೊಲಕ್ಕೆ ಹೋಗುವ ಮೊದಲು ಪಡಸಾಲೆಯ ಕಟ್ಟೆಯ ಮೇಲೆ ಕುಳಿತು, ಬಯ್ಯುತ್ತ ಒದರಾಡುತ್ತ ಆಳುಗಳಿಂದ ಮನೆಯ ಹೆಣ್ಣುಮಕ್ಕಳಿಂದ ಕೆಲಸಮಾಡಿಸುವ ಅವ್ವನ ಹತ್ತಿರ ಒಂದುಗಳಿಗೆ ಹೊತ್ತು ಕೂತು ಅವಳ ಚಂಚೀಬಿಚ್ಚಿ ಎಲಡಿಕೆ ಹಾಕಿಕೊಳ್ಳುವದು ಈರಪ್ಪನ ದಿನದ ರೂಢಿ. ಆಗ ಬೀಡಿ ಸೇದುತ್ತ ಅಲ್ಲಿಯೇ ಸುತ್ತಾಡುತ್ತಿರುತ್ತಿದ್ದ ಶಿವಪ್ಪ ತಮ್ಮನಿಗೆ ಹೊಲದ ಕೆಲಸ ಹೇಳುವದೂ, ಕೇಳುವದೂ ಮಾಡುತ್ತಿದ್ದ. ಕೇಳುವದಕ್ಕಿಂತ ಹೆಚ್ಚಾಗಿ ಹೇಳುವದೇ ಇರುತ್ತಿತ್ತು. ಹರೆಯಕ್ಕೆ ಬಂದು ಹೊಲಗೆಲಸದ ಜವಾಬ್ದಾರಿಯನ್ನೆಲ್ಲ ತಾನೇ ಹೊತ್ತುಕೊಂಡು ಮಾಡುತ್ತಿದ್ದ ಈರಪ್ಪನಿಗೆ ಈಗ ತಿಳಿಯದ ವಿಷಯ ಯಾವುದೂ ಇರದಿದ್ದರೂ ಶಿವಪ್ಪ ತನ್ನ ಅಧಿಕಾರ ಚಲಾಯಿಸಲು ಏನಾದರೂ ಹೇಳುತ್ತಲೇ ಇರುತ್ತಿದ್ದ. ಬೆಟ್ಟು ಚೀಪುತ್ತಿದ್ದ ಕಾಲದಿಂದಲೂ ಅವನ ಬಾರಕೋಲಿನ ಸವಿ ಉಂಡು ಬೆಳೆದ ಈರಪ್ಪನಿಗೆ ಅಣ್ಣನ ಮಾತಿಗೆ ಕೀಲೆತ್ತಿನಂತೆ ಗೋಣಿ ಅಲ್ಲಾಡಿಸುವದೊಂದೇ ಗೊತ್ತು. ತಲೆ ಎತ್ತಿ ತನ್ನನ್ನು ದಿಟ್ಟಿಸಿ ನೋಡಿ ಮಾತನಾಡುವ ಧೈರ್ಯವಿಲ್ಲದೆ ಗೋಡೆ ನೋಡುತ್ತಲೋ, ಎತ್ತಿನ ಬೆನ್ನು ತುರಿಸುತ್ತಲೋ ತನ್ನ ಮಾತು ಕೇಳುವ ತಮ್ಮನನ್ನು ನೋಡಿ ಶಿವಪ್ಪ ಹುಬ್ಬು ಹಾರಿಸಿ, ಮೀಸೆಯ ಮರೆಯಲ್ಲೇ ನಗುತ್ತಿದ್ದ. ತನ್ನ ಮುಂದೆ ಕುಳಿತು ಎಲೆಯ ನಾರು ಗೀರುತ್ತಿದ್ದ, ಎದೆಯುದ್ದ ಬೆಳೆದ ಮಗನಿಗೆ ಕೆಂಚವ್ವ ಒಂದು ದಿನ—

"ಈರ್ಯಾs ಶಿವಪ್ಪ ಬೆನಕಟ್ಟೆಗೆ ಹೋಗಿದ್ದಾs—" ಯಾಕೆ ಹೋಗಿದ್ದ ಎಂದು ಮಗ ಕೇಳುವನೇನೋ ಎಂದುಕೊಂಡು ಸುಮ್ಮನಾಗಿದ್ದ ಕೆಂಚವ್ವ ಕಿಮಕ್ ಎನ್ನದಿದ್ದರೂ ಕಿವಿ ನಿಮಿರಿಸಿದ್ದ ಮಗನನ್ನು ನೋಡಿ ನಕ್ಕು ಮುಂದುವರಿಸಿದಳು. "ಹುಡುಗಿ ಶಿವಪ್ಪನ ಮನಸ್ಸೀಗಿ ಬಂದ್ಲಂತ. ಕಣ್ಣು ಮೂಗಿಲೆ ಬೇಸಿ ಅದಾಳಂತ. ನಮ್ಮ ಒಕ್ಕಲತನದ ಮನೀ ಬದಕ ಮಾಡಾಕ ಗಟ್ಟಿಮುಟ್ಟನೂ ಅದಾಳಂತ. ಮನೆತನಾ

ನೋಡಾಕ ಬರ್ರಿ ಅಂತ ಹೇಳಿ ಬಂದಾನು.'' ಹಕ್ಕೆಯಲ್ಲಿ ಕಣ್ಣು ಮುಚ್ಚಿ ಸೊಪ್ಪು ಮೆಲಕಾಡಿಸುವ ಗೌರಿಯನ್ನೇ ನೋಡುತ್ತಿದ್ದ ಈರಪ್ಪ ತುಟಿ ಬಿಚ್ಚಲಿಲ್ಲ. "ಸುಮಾಕ ಹಾಂಗ್ಯಾಕ ಕುಂತೀ ಈರಣ್ಣನ ಮುಂದಿನ ಬಸವಣ್ಣನಾಂಗ. ನಿನ್ನ ಲಗ್ನಾ ಮಾಡಾಕ ನಿಂತೇವಿ. ಏನಾರ ಮಾತಾಡು.'' ಮುದುಕಿಯ ದನಿಗೆ ಗೌರಿ ಬೆಚ್ಚಿ ಕಣ್ತೆರೆದರೂ ಈರಪ್ಪ ತುಟಿಯಲ್ಲೇ ನಕ್ಕ.

"ನಾ ಏನ ಹೇಳ್ಲಬೇ. ನಿನಗ ಅಣ್ಣಾಗ ಮನಸಿಗಿ ಬಂದರ ಆತು. ನನ್ನೇನ ಕೇಳತಿ?'' ಎನ್ನುತ್ತ ಸಂಗವ್ವ ತಂದುಕೊಟ್ಟ ಬುತ್ತೀಗಂಟು ಹೆಗಲಗೇರಿಸಿಕೊಂಡು ಹೊರಟೇಬಿಟ್ಟ. ಹೊಸಿಲು ದಾಟುವ ಮೊದಲು ಗೌರಿಯ ಹತ್ತಿರ ಹೋಗಿ ಮೆದುವಾಗಿ ಅದರ ಮುಖ, ಗಂಗೆದೊಗಲು ತುರಿಸಲು ಮರೆಯಲಿಲ್ಲ.

* * *

ಕಾಶವ್ವ ಗಂಡನ ಮನೆಗೆ ಬಂದು ಎಂಟು ದಿನಗಳಾದರೂ ಇನ್ನೂ ಮನ ಬಿಚ್ಚಿ ಮಾತನಾಡದ, ಹಗಲಲ್ಲಿ ಮುಖವೆತ್ತಿ ತನ್ನತ್ತ ನೋಡದ ಈರಪ್ಪನನ್ನು ಕಂಡು ಅವಳಿಗೆ ಒಳಗೊಳಗೇ ನಗು. ಗಂಡ ತನಗಿಂತಲೂ ಹೆಚ್ಚು ನಾಚುಬುರುಕ. ಮೊದಲ ದಿನ ಮನೆಯ ಹೊಸಿಲಿಗೆ ಮೊಳೆ ಜಡಿದು ಮನೆ ತುಂಬಿಸಿಕೊಂಡ ಅತ್ತೆ ತಮ್ಮಿಬ್ಬರಿಗೂ ಅಡಿಗೆ ಮನೆಯಲ್ಲಿ ಮಲಗಲು ಹೇಳಿದ್ದಳು. ಶಿವಪ್ಪ ಮಾವ ಹೆಂಡತಿಯೊಡನೆ ಮಲಗುವ ಕೋಣೆಯೊಂದನ್ನು ಬಿಟ್ಟರೆ ಈ ಮನೆಗೆ ಬೇರೆ ಕೋಣೆಯೇ ಇಲ್ಲವಲ್ಲ! ದೇವರ ಕೋಣೆಯಲ್ಲಿ ದೊಡ್ಡ ಪೆಟ್ಟಿಗೆಯ ಮೇಲೆ ಅತ್ತೆವ್ವ ಹಾಸಿಕೊಂಡಿದ್ದಳು. ಅದು ಹೆಚ್ಚು ಜನ ಅಡ್ಡಾಡದ, ಬೇರೆಯಾಗಿದ್ದ ಕೋಣೆಯಾದರೂ ಈ ಮನೆಯಲ್ಲಿ ಈರಬದ್ರದೇವರಿದ್ದುದರಿಂದ ಅಲ್ಲಿ ಗಂಡ ಹೆಂಡತಿ ಮಲಗುವ ಹಾಗಿಲ್ಲ ಎಂದು ಅವಳೇ ಹೇಳಿದ್ದಳು. ಎಲ್ಲರ ಊಟವಾದ ಮೇಲೆ ಮುಸುರೆ ತೆಗೆದು, ಗಡಿಗೆ ಗಂಗಾಳ ತೊಳೆದು, ಕಸ ಗುಡಿಸಿ ತಮ್ಮ ಹಾಸಿಗೆ ಹಾಸಿದ್ದಳು ಕಾಶವ್ವ. ಎಲ್ಲರೂ ಮಲಗಲು ಹೋದಮೇಲೆ ಅತ್ತೆವ್ವ "ಮನಿಕ್ಕೋ ಹೋಗು ಈರಪ್ಪಾs. ರಾತ್ರಿ ಬಾಳಾ ಆತು" ಎಂದಾಗ ಬರಲೋ ಬೇಡವೋ ಎಂದು ಅಂಜಂಜುತ್ತ ಒಳಗೆ ಕಾಲಿಡುತ್ತಿದ್ದ ಗಂಡನನ್ನು ನೋಡಿ ಸೆರಗಿನ ಮರೆಯಲ್ಲೇ ಮುಸಿ ಮುಸಿ ನಕ್ಕಿದ್ದಳು. ಒಳಗೆ ಬಂದು ಮಲಗಿ ಎಷ್ಟೊತ್ತಾದರೂ ಅವನು ತನ್ನ ಕಡೆಗೆ ಹೊರಳದಿದ್ದುದು ನೋಡಿ ಸಿಟ್ಟೂ ಬಂದಿತ್ತು. ತವರಿನಲ್ಲಿ ತನ್ನ ಗೆಣತಿಯರ ಅನು

ಭವ ಕೇಳಿ ತಿಳಿದಿದ್ದ ಕಾಶವ್ವ ತಾನೇ ಧೈರ್ಯದಿಂದ ಅವನ ಮೈಸುತ್ತ ಕೈಹಾಕಿದಾಗಲೂ ಈರಪ್ಪ ತರತರ ನಡುಗುತ್ತಿದ್ದ. ಅವನ ನಡುಗು ನಿಲ್ಲಿಸಲು ತಾನೇ ಹತ್ತಿರ ಸರಿದು ತಬ್ಬಿಕೊಂಡಿದ್ದಳು.

ಅಂದು ಏಕೋ ಬಹಳ ಧೈರ್ಯಮಾಡಿ ಹಕ್ಕೆಯಲ್ಲಿ ಗೌರಿಗೆ ಮುರುವು ಇಡುತ್ತಿದ್ದ ಕಾಶವ್ವನ ಬೆನ್ನ ಮೇಲೆ ಇಟ್ಟೊ ಇಡದಂತೆ ಕೈಇಟ್ಟು ಮುಟ್ಟಿ 'ಕಾಶೀ' ಎಂದು ಕರೆದು ಹತ್ತಿರವೇ ನಿಂತ ಈರಪ್ಪ. ಅವಳು ನಗುವ ಕಣ್ಣುಗಳಿಂದ 'ಏನು' ಎನ್ನುವಂತೆ ಅವನನ್ನೇ ನೋಡಿದಾಗ "ಗೌರೀ ಎಂಟ ದಿನಾ ಆತ ಯಾಕೋ ಒದರಾಕ ಹತ್ತೇತಿ'' ಎಂದು ಪೆಚ್ಚು ಪೆಚ್ಚಾಗಿ ನಕ್ಕ. ಗೌರಿಯ ವಿಚಿತ್ರ ದನಿಯ ಒದರುವಿಕೆಯ ಅರ್ಥ ಅವಳಿಗೆ ಗೊತ್ತಿಲ್ಲವೆ ? ಅವಳು ನಾಚಿ ಕೆಂಪಗಾಗಿ "ಸಾಕ ಬಿಡ ಶಾಣ್ಯಾ ಅದೀ'' ಎಂದು ಅವನ ಸೋಟೆಗೆ ತಿವಿದಾಗ ಅವನು ಅವಳ ಕೈ ಹಿಡಿದೆಳೆದು ಗಲ್ಲ ಕಡಿದಿದ್ದ. ಹಕ್ಕೆಯ ಬಾಗಿಲ ಹತ್ತಿರ ಸಪ್ಪಳವಾದಾಗ ಇಬ್ಬರೂ ದೂರ ಸರಿದಿದ್ದರು. ಶಿವಪ್ಪ ಮೋರೆ ಅತ್ತ ತಿರುವಿಕೊಂಡು ಬಿರುಸಿನಿಂದ ಹೊರಗೆ ಹೊರಟಿದ್ದ. ಈರಪ್ಪ ಕಣ್ಣು ಅರಳಿಸಿಕೊಂಡು ತಪ್ಪು ಮಾಡಿದ ಮಗುವಿನಂತೆ ಅವನು ಹೋದತ್ತ ನೋಡುತ್ತಿದ್ದ.

ಈರಪ್ಪ ಆಗಾಗ ಪರ ಊರಿಗೆ ಹೋಗುತ್ತಿದ್ದ. ಹೊಲದಲ್ಲಿ ಕೆಲಸವಿದ್ದಾಗ ಅಲ್ಲಿಯೇ ಮಲಗುತ್ತಿದ್ದ. ಆವಾಗೆಲ್ಲ ಕಾಶವ್ವ ಬೇಸರದಿಂದ ಗಂಡನೊಡನೆ ಜಗಳವಾಡುತ್ತಿದ್ದಳು. "ಹಗಲೆಲ್ಲಾ ಊರಿಗೆ-ಕೇರಿಗೆ ನೀನs ಯಾಕ ಹೋಕ್ಕೀ. ಮಾವ ಯಾಕ ಹೋಗೂದಿಲ್ಲಾ ? ಊರ ಕಾರಬಾರಾ ಮಾಡಾಕ ಅಡ್ಡ್ಯಾಡತಾನ. ಮನೀ ಕೆಲಸ ಮಾಡಾಕ ಆಗೂದಿಲ್ಲೇನ ?'' ಎಂದು. ಅವಳ ದನಿ ಹೊರಗೆ ಕೇಳಿಗೀಳೀತು ಎನ್ನುವ ಭಯದಿಂದ ಅವಳ ತುಟಿಗಳ ಮೇಲೆ ಮೆತ್ತಗೆ ಅಂಗೈ ಇಡುತ್ತ ನಗುವ ಗಂಡನನ್ನು ಕಂಡರೆ ಅವಳಿಗೆ ಸಿಟ್ಟೊ ಬಾರದು. ಅವಳು ಒಬ್ಬಳೇ ಮಲಗುವ ಪ್ರಸಂಗ ಬಂದಾಗ ಒಮ್ಮೆ ಅತ್ತೆವ್ವ "ಕಾಶವ್ವ ನನ್ನ ಹಂತ್ಯಾಕ ಮನಿಕ್ಕೋ ಬಾ. ಈರಪ್ಪ ಊರಿಗೆ ಹೋಗ್ಯಾನ'' ಎಂದು ಕರೆದಾಗ ಮುದುಕಿಯ ಮೈ, ಕಾಲು ಹಿಚುಕುತ್ತ, ಅವಳ ಒಟಗುಡುವಿಕೆ ಕೇಳುವುದಕ್ಕಿಂತಲೂ ಒಬ್ಬಳೇ ಮಲಗುವುದೇ ಹಿತವೆನ್ನಿಸಿ ಉಪಾಯವಾಗಿ "ಬ್ಯಾಡಾ ಅತ್ತೆವ್ವ. ದ್ವಾಮಿ ಭಾಳ ಕಡೀತಾವು ಅಲ್ಲೆ. ಇಲ್ಲೇ ಒಲಿ ಹಂತ್ಯಾಕ ಬೆಚ್ಚಗತಿ'' ಎಂದು ಜಾರಿಕೊಂಡಿದ್ದಳು. ಅವಳ ಮನದ ಮೂಲೆಯಲ್ಲೊಂದು ಆಸೆ,

ಗಂಡನ ಕೆಲಸ ಬೇಗ ಮುಗಿದರೆ ರಾತ್ರಿಯೇ ತಿರುಗಿ ಬಂದಾನು. ಹಾಗೆ ಬಂದಾಗ ತಾನು ಅಲ್ಲಿಯೇ ಇದ್ದು ಅವನನ್ನು ಇದಿರುಗೊಳ್ಳಬೇಕು ಎನ್ನುವದು.

ಮತ್ತೊಮ್ಮೆ ಗೊಬ್ಬರ ಹೇರಲು ಈರಪ್ಪ ಮಾಸೂರಿಗೆ ಹೋಗಿದ್ದ. ಕಣ್ಣಿಗೆ ಎಣ್ಣೆ ಹಾಕಿಕೊಂಡು ರಾತ್ರಿ ಕಳೆದರೂ ಎರಡನೆಯ ದಿನವೂ ಈರಪ್ಪ ಬರಲಿಲ್ಲ. ಬಾಗಿಲು ಸಪ್ಪಳಕ್ಕೆ ಕಿವಿ ಕೊಟ್ಟು ಮಲಗಿದವಳಿಗೆ ನಿದ್ದೆಯೂ ಚೆನ್ನಾಗಿ ಹತ್ತಿರಲಿಲ್ಲ. ಕೊನೆಗೆ ಮೂರನೆಯ ಸಂಜೆ ಬಂದ. ಊರಿನಿಂದ ಬಂದು ಹಿತ್ತಿಲ ಬಾವಿಯ ಹತ್ತಿರ ಮಕ್ಕತ್ತಲಲ್ಲಿ ಕಾಲು ತೊಳೆಯುತ್ತಿದ್ದ. ಕಾಶವ್ವನ ಜೀವ ತಕತಕ ಕುಣಿಯಿತು. ಅತ್ತಿತ್ತ ನೋಡಿದಾಗ ಅತ್ತೆ. ನೆಗೆಣ್ಣಿ ಹುಡುಗರು ತಮ್ಮ ತಮ್ಮ ಕೆಲಸದಲ್ಲಿದ್ದರು. ಹಿತ್ತಲಲ್ಲಿ ಆಳುಗಳ ಸುಳಿವೂ ಇರಲಿಲ್ಲ. ಕದ್ದು ಹಾಲು ಕುಡಿಯಲು ಹೋಗುವ ಕಳ್ಳ ಬೆಕ್ಕಿನಂತೆ ಹೆಜ್ಜೆ ಸಪ್ಪಳ ಮಾಡದೆ ಹತ್ತಿರ ಹೋಗಿ ಬಗ್ಗಿದ ಗಂಡನ ಬೆನ್ನ ಮೇಲೆ ಕೈ ಇಟ್ಟಳು. ಅವನು ಸರಕ್ಕನೆ ಎದ್ದು ಅವಳನ್ನು ಹಿಡಿದುಕೊಂಡ. ಕಣ್ಣು ಇಷ್ಟಗಲ ಮಾಡಿದ ಕಾಶವ್ವ 'ಆ' ಎಂದು ಚೀರುವ ಮೊದಲೇ ಬಿಗಿಯಾಗಿ ಅವಳನ್ನು ತಬ್ಬಿಕೊಂಡು ತಡೆಯಿಲ್ಲದೆ ಮುದ್ದಿಸಿದ. ಲಗ್ನದಲ್ಲಿ ಈರಪ್ಪನಿಗೆ ಹೊಲಿಸಿದ ಕೋಟು ತೊಟ್ಟ ಶಿವಪ್ಪ ಒಂದೇ ಅಪ್ಪುಗೆಯಲ್ಲಿ ಅವಳ ಮೈ ಪುಡಿ ಪುಡಿ ಮಾಡಿದ್ದ. ಕೈ ಕಾಲುಗಳಲ್ಲಿಯ ಶಕ್ತಿ ಉಡುಗಿ ಹೋಗಿ ಅವನು ಕೈ ಬಿಡುತ್ತಲೇ ನೆಲಕ್ಕೆ ಬಿದ್ದಳು. ಸರಸರನೆ ಶಿವಪ್ಪ ಹೊರಟುಹೋದ. ಬಿದ್ದಲ್ಲಿಯೇ ಬಿದ್ದು ಬಿಗಿಯಾಗಿ ಕಣ್ಣು ಮುಚ್ಚಿಕೊಂಡಳು ಕಾಶವ್ವ.

ಮೊದಲು ಹುಡುಗಿ ನೋಡಲು ಬಂದವನು ಶಿವಪ್ಪ. ತನ್ನನ್ನು ಒಪ್ಪಿದ್ದ. ತನ್ನ ಮನಸ್ಸಿಗೆ ಬಂದರೆ ಈರಪ್ಪನಿಗೆ ಬಂದಂತೆಯೆ. ತಮ್ಮನನ್ನು ತಾನೇ ಸಾಕಿ ಸಲಹಿದ್ದೇನೆ. ತಾನು ಹಾಕಿದ ಉಗುಳು ತಮ್ಮ ದಾಟುವದಿಲ್ಲ—ಎಂದೆಲ್ಲ ಬಹಳ ಮಾತಾಡಿ ಲಗ್ನ ಗೊತ್ತುಮಾಡಿಕೊಂಡೇ ಹೋಗಿದ್ದ. ಈರಪ್ಪನನ್ನು ತಾನು ನೋಡಿದ್ದು ಲಗ್ನದ ಹೊತ್ತಿನಲ್ಲೇ, ಅವನು ತನ್ನ ಪಾಲಿನ ದೇವರಾಗಿದ್ದ. ಆದರೆ ಲಗ್ನವಾಗಿ ಬಂದಮೇಲೆ ಆಗಾಗ ಮಾವನ ಕಾಲಿಗೆ ಬಿದ್ದಾಗ ಭುಜ ಹಿಡಿದು ಮೇಲೆ ಎತ್ತೋದು, ಊಟಕ್ಕೆ ನೀಡುವಾಗ ಬೇಕು ಬೇಡ ಹೇಳಲು ಕೈ ಚಾಚಿ ಎದೆ, ಬೆನ್ನು ಮುಟ್ಟುವದು, ಏನಾದರೂ ಕೊಡಲು ಹೋದಾಗ ಬೇಕಂತಲೇ ಮೈ

ಮುಟ್ಟುವದು ಇವಕ್ಕೆಲ್ಲ ಹೆಚ್ಚಿನ ಅರ್ಥ ಕಲ್ಪಿಸಿರಲಿಲ್ಲ ತಾನು. ಆದರೆ ... ಮಾವ.... ಮಾವನ.... ಮನಸ್ಸು.... ಒಂದೊಂದೇ ನೆನಪಿನ ನಿರಿಗೆ ಬಿಚ್ಚಿ ಬಿಚ್ಚಿ ಶಿವಪ್ಪ ಚಿತ್ತಲಾಗುತ್ತಿದ್ದ ಕಾಶವ್ವನ ಮುಚ್ಚಿದ ರೆಪ್ಪೆಗಳ ಹಿಂದೆ. ಎದ್ದು ಕಾಲು ಎಳೆದು ಹಾಕುತ್ತ ಮನೆಯೊಳಗೆ ಬಂದ ಕಾಶವ್ವ ಗಂಡ ಬರುವ ವರೆಗೂ ಅತ್ತೆಯ ಮಗ್ಗುಲು ಬಿಟ್ಟು ಸರಿಯಲಿಲ್ಲ. ತನ್ನ ನೆರಳಿಗೆ ತಾನೇ ಹೆದರುವಂತೆ ಅಂಜಿ ಹಿಂದೆ ಮುಂದೆ ನೋಡುತ್ತ ಅಡ್ಡಾಡಿದಳು.

ತನ್ನನ್ನು ಕಂಡರೆ ಮುಖ ಮರೆಮಾಡಿಕೊಳ್ಳುವ, ದೂರ ದೂರವೇ ಹಾಯ್ದಾಡುವ ಕಾಶವ್ವನನ್ನು ಕಂಡಾಗ ಶಿವಪ್ಪನ ಮನಸ್ಸು ಉಂಡೀ ಅರ್ಧ ತಿಂದ ಮೇಲೆ ಕಸಿದರೆ ಅಳುವ ಮಗುವಿನಂತೆ ಹಟ ಮಾಡುತ್ತಿತ್ತು. ಶೀರಕಲ ಬಿದಿರಿನಂತಿದ್ದ, ಎಲಬು ಚುಚ್ಚುವ, ಎಣ್ಣೆ ಬಸಿದು ಹೋದ ಸಂಗವ್ವ ದುಂಡು ದುಂಡಗೆ ಚೆಂಡಿನಂತೆ ಪುಟಿಯುವ ಹರೆಯದ ಕಾಶವ್ವನ ಮುಂದೆ ನಡೆದಾಡುವ ಹೆಣವಾಗಿದ್ದಳು ಅವನ ಪಾಲಿಗೆ.

'' ಕಾಶವ್ವ ಮಾಡಿದ ಪಲ್ಲೆ ಎಷ್ಟ ಸವಿ ಆಗೈತಿ ನೋಡ. ಮುದುಕಿ ಆದರೂ ನಿನಗ ಹಿಂಗ ಒಂದ ದಿನಾ ಮಾಡಾಕ ಬರಾಂಗಿಲ್ಲ'' ಎಂದು ಮಾವ ತಾನು ಮಾಡಿದ ಪಲ್ಲೆ ಹೊಗಳಿದ ದಿನ ಕಾಶವ್ವನ ಗಂಟಲಲ್ಲಿ ತುತ್ತು ಇಳಿಯುತ್ತಿರಲಿಲ್ಲ. ಕಾಶವ್ವ ಮಾಡುವ ಎಲ್ಲ ಕೆಲಸಗಳನ್ನೂ ಹೊಗಳುತ್ತ, ಅದು ತಾ ಇದು ಮಾಡು ಎಂದೆಲ್ಲ ಮಾವ ಕರೆದಾಗ ಅವಳ ಕೈ ಕಾಲು ಕುಸಿದಂತಾಗಿ ಹೆಜ್ಜೆ ಇಡಲೂ ಆಗುತ್ತಿರಲಿಲ್ಲ.

ಯುಗಾದಿ ಹಬ್ಬಕ್ಕೆ ಶಿವಪ್ಪ ಎಲ್ಲರಿಗೂ ಹೊಸ ಸೀರೆ, ಅರಿವೆ ತಂದ. ಹೆಂಡತಿಯ ಸೀರೆಗಿಂತ ಇಪ್ಪತ್ತು ರೂಪಾಯಿ ಹೆಚ್ಚು ಕೊಟ್ಟು ಜರದ ಥಡಿಯ ನೀಲಿ ಬಣ್ಣದ ಸೀರೆ ತಂದಾಗಲೂ ಅವಳ ಮೋರೆಜೋಲು ಬಿದ್ದಿತ್ತು. ಅದನ್ನು ಉಟ್ಟುಕೊಂಡ ಹೆಂಡತಿಯನ್ನು ನೋಡಿ ಈರಪ್ಪ ಹಿಗ್ಗಿ ಹೀರೆಕಾಯಾಗಿದ್ದ.

'' ನೋಡs ಅಣ್ಣಾನ್ನ ಬಯ್ಯತ್ತೀs. ನಿನಗ ಎಂಥಾ ಚಂದ ಸೀರಿ ತಂದಾನ. ರತಿದೇವಿ ಹಾಂಗ ಕಾಣತ್ತಿತ್ತೀ ನನಗ'' ಎಂದು ಮುತ್ತು ಕೊಡಲು ಮುಂದೆ ಬಂದ ಗಂಡನ ಅಮಾಯಕ ಮುಖ ನೋಡಿ ತನ್ನ ಕಣ್ಣೀರು ಅವನಿಗೆ ಕಾಣದಂತೆ ಸೆರಗು ಅವನ ಮುಖದ ತುಂಬ ಹೊದಿಸಿ ಮಗುವಿನಂತೆ ಎದೆಗೆ ಅವಚಿಕೊಂಡಿದ್ದಳು ಕಾಶವ್ವ.

* * *

ಜಳಕ ಮಾಡಿ ಹೊರಗೆ ಬಂದ ಕೆಂಚವ್ವ ' ಏs ಸಂಗೀs ಕಾಶೀs, ಮಾನಿಂಗಾs ಎಲ್ಲಿ ಸತ್ತಿರೋ ಎಲ್ಲಾರೂ, ಬರ್ರಿಲ್ಲೆ. ಇಲ್ಲೇ ಇಟ್ಟಿದ್ದೆ. ಯಾರ ತೊಗೊಂಡೀರಿ ? " ಎಂದು ಗಲಗಲ ಬಾಯಿ ಮಾಡಿದಾಗ ಹಿತ್ತಲ ಹಕ್ಕೆ, ಎಲ್ಲ ಕಡೆಯಿಂದಲೂ ಓಡಿ ಬಂದರು ಮನೆಯ ಜನ. ಕೆಂಚವ್ವನ ಬಾಯಿಯೇ ಅಂಥಾದ್ದು. ತುತ್ತೂರಿಗೆ ಮುತ್ತು ಕೊಟ್ಟ ಹಾಗೆ. " ಏನದು ? ಏನ ಇಟ್ಟಿದ್ದಿ. '' ?

" ನನ್ನ ಗುಂಡಿನ ಸರಾ. ದಿನಾ ಇಡೋ ಹಾಂಗ ತಗದು ದೇವರ ಕಟ್ಟೇಮ್ಯಾಲೆ ಇಟ್ಟು ಜಳಕಕ್ಕೆ ಹೋಗಿದ್ದೆ. ಈಗ ಸಿಗುವಾಲ್ದು. ಯಾರು ತೊಗೊಂಡೀರಿ ಕೊಟ್ಟುಬಿಡ್ರಿ. ''

' ನನಗೊತ್ತಿಲ್ಲ ನಮ್ಮವ್ವ ' ' ನಾ ಹಕ್ಯಾಗಿದ್ದೆ ' ನಾ ಹಿತ್ತಲಕ ಹೋಗಿದ್ದೆ ' ಒಬ್ಬೊಬ್ಬರೆ ಜಾರಿಕೊಳ್ಳುತ್ತಿದ್ದಾಗ ಅವಳ ಸಿಟ್ಟು ನೆತ್ತಿಗೇರಿತು. " ಸುಮಾಕ ಒಳ್ಳೇ ಮಾತಿಲೆ ಸರಾ ಕೊಡ್ರಿ. ಭೋಸಡೇರs ಇಲ್ಲಾಂದರ ನಿಮ್ಮ ಸೀರಿ ಕಳೀತಿನಿ, ಚಮಡಾ ಸುಲೀತೇನಿ. ಏನಂತ ತಿಳಿದೀರಿ ನನ್ನ '' ಎಂದು ಅವಳು ಚೀರಿದಾಗ ಮನೆಯ ಮಾತು ಇನ್ನು ಬೀದಿಗೆ ಬೀಳುತ್ತದೆಂದು ತಿಳಿದ ಶಿವಪ್ಪ ಸರ ಹುಡುಕುವ ಕೆಲಸ ತಾನೇ ವಹಿಸಿಕೊಂಡು ಅವ್ವನಿಗೆ ದೇವರ ಪೂಜೆ ಮಾಡಲು ಹೋಗು ಎಂದು ಹೇಳಿದ. ಈರಪ್ಪ ಹೊಲಕ್ಕೆ ಹೋಗಿ ತಾಸಾಗಿತ್ತು. ಹುಡುಗರನ್ನು ಹೊರಗಟ್ಟಿದ. ಬಾರಕೋಲಿನಿಂದ ಸಂಗವ್ವನಿಗೊಂದು ಝಾಡಿಸಿದ. ಅವಳು ' ನಾ ತೊಗೊಂಡಿಲ್ಲಾ ' ಎಂದು ಹೊಯ್ಕೊಳ್ಳುತ್ತ ಹಿತ್ತಲಿಗೆ ಓಡಿದ ಮೇಲೆ ಕಾಶವ್ವನತ್ತ ತಿರುಗಿ ಕಣ್ಣು ಕೆಕ್ಕರಿಸಿ " ಏಯ್, ನೀ ಸರಾ ತೊಗೊಂಡೀಯೇನೆ " ಎಂದ. ಬಾಯಿ ಒಣಗಿಹೋದ ಕಾಶವ್ವ ನಡುಗುತ್ತ ನಿಂತೇ ಇದ್ದಳು. ದರದರ ಅವಳ ಹಿಡಿದೆಳೆದು ಕೋಣೆಗೆ ಒಯ್ದು ಬಾಗಿಲು ಮುಚ್ಚಿದ. ಅವಳ ತವರುಮನೆಯಿಂದ ತಂದ ಬಣ್ಣದ ತಗಡಿನ ಟ್ರಂಕು ಮೂಲೆಯಲ್ಲಿತ್ತು. ಅದಕ್ಕೆ ಕೀಲಿ ಇರಲಿಲ್ಲ. ಅದನ್ನು ತೆಗೆದು ತೋರಿಸಲು ಹೇಳಿದ.

" ನಾ ಸರಾ ತೊಗೊಂಡಿಲ್ಲ ಮಾವಾ, ನನ್ನ ಹೊಡೀಬ್ಯಾಡಾ '' ಎಂದು ಬಿಕ್ಕುತ್ತ ಕೇಳಿಸಿಯೂ ಕೇಳಿಸದಂತೆ ಅವಳು ಉಸಿರು ಬಿಟ್ಟಾಗ ಅವಳ ತುಂಬಿದ ಎದೆಯನ್ನೇ ತಿನ್ನುವಂತೆ ನೋಡುತ್ತಿದ್ದ ಶಿವಪ್ಪ ಅಸಹ್ಯ

ವಾಗಿ ನಗುತ್ತ " ನೀ ತೊಗೊಂಡೀ ಇಲ್ಲೋ ನೋಡಬೇಕಾಗೇದ ನನಗ. ಅದಕ್ಕ ಆ ಸಾಮಾನೆಲ್ಲಾ ತಗೀ ಅಂತೇನಿ. ತೋರಸು ತಗದು '' ಅಬ್ಬರಿಸಿದ.

ಮುಂಡಿಗಾಲೂರಿ ಕುಳಿತು ಒಂದೊಂದೇ ಅರಿವೆ, ಸೀರೆ ಸರಿಸಿದಳು. ಅಲ್ಲಿಯೇ ಇತ್ತು ಸರ, ಸರಕ್ಕನೆ ಬಗ್ಗಿ ಸರ ಎತ್ತಿ ಹಿಡಿದು ಅವಳ ಕಣ್ಣ ಮುಂದೆ ತೂಗಾಡಿಸುತ್ತಾ,

" ಹಹ್ಹಹ್ಹ ಇದೇನು ಗುಂಡಿನ ಸರಾನೋ, ಸಕ್ಕರಿ ಸರಾನೋ " ಎಂದು ಮತ್ತೆ ನಕ್ಕ. ಅದು ತನ್ನ ಟ್ರಂಕಿನಲ್ಲಿ ಬಂದಿತೆನ್ನುವ ಆಲೋಚನೆಯಿಂದ ಮುಂದೇನಾಗುವದೋ ಎನ್ನುವ ಭಯದಿಂದ ಬದ್ಧಿಶೂನ್ಯಳಂತೆ ಅದನ್ನೇ ನೋಡುತ್ತ ಮೂಕಿಯಾಗಿದ್ದಳು ಕಾಶವ್ವ.

" ತುಡುಗ ಮಾಡಾಕ ಕಲ್ತೀಯಾ ಕಾಶೀ. ನಮ್ಮ ಮನ್ಯಾಗ ಇದೆಲ್ಲಾ ತಪ್ಪಸಾಂಗಿಲ್ಲ. ಈ ಸುದ್ದಿ ಉಳದವರಿಗೆ ಗೊತ್ತಾದರ ಮಾನಗೇಡಿ ಆಕ್ಕ್ಯದ. ಈರಪ್ಪ ಒದ್ದು ಹೊರಗ ಹಾಕ್ತಾನ. ಮುಂದೇನು ಗತಿ ನಿಂದು ? ''

" ಮಾ....ಮಾವಾ....ನಾ ...ನಾನ್ ಮಾಡಿಲ್ಲಾ. ಮಾವಾ ನಾ ತುಡುಗು ಮಾಡಿಲ್ಲಾ. ನಾ ಅಂಥಾವರ ಮಗಳಲ್ಲಾ. ಸರಾ ಟ್ರಂಕಿನ್ಯಾಗ ಹ್ಯಾಂಗ ಬಂತೋ ಗೊತ್ತಿಲ್ಲಾ ಮಾವಾ, ನನಗೆ ಗೊತ್ತಿಲ್ಲಾ. ದೇವರಾಣೀ. ನಮ್ಮ ಹಡದವ್ವನಾಣಿ. " ಶಿವಪ್ಪನ ಮೊಣಕಾಲು ಅಪ್ಪಿ ಹಿಡಿದು ಎದೆ ಒಡೆಯುವಂತಾದರೂ ದನಿ ಜೋರಾಗಿ ತೆಗೆಯದೆ ಅತ್ತಳು ಕಾಶವ್ವ.

" ಹಂs " ಎನ್ನುತ್ತ ಎಷ್ಟೋ ಹೊತ್ತು ಅವಳನ್ನೇ ದಿಟ್ಟಿಸಿ ನೋಡಿದ ಶಿವಪ್ಪ ಮೆತ್ತಗೆ ಅವಳ ರಟ್ಟೆ ಹಿಡಿದು ಮೇಲೆ ಎತ್ತಿ ಎದೆಗೆ ಒತ್ತಿಕೊಂಡು ಬಗ್ಗಿ ಅವಳು ನೊಂದಾಳು ಎನ್ನುವಂತೆ ಮೆದುವಾಗಿ ಮುತ್ತಿಟ್ಟು ಸರ ಕಿಸೆಗೆ ಹಾಕಿಕೊಂಡು ಸುಮ್ಮನೆ ಹೊರಗೆ ಹೊರಟುಹೋದ.

" ಯವ್ವಾs, ಏನಬೇ ಎಷ್ಟ ಗದ್ದಲಾ ಮಾಡಿದೀ. ನಿನ್ನ ಸರಾ ಅಲ್ಲೇ ಬಚ್ಚಲದಾಗ ಮೈಲಿಗಿ ಸೀರಿ ಮಾಡದಾಗ ಇತ್ತು, ನೆಪ್ಪ ಹಾರಿ ನೀನs ಇಟ್ಟಿರಬೇಕು. ಪಾಪ ಸುಮ್ಮಕ ಅವರು ಇಬ್ಬರನೂ ಬಡಿಸಿದಿ. " ಶಿವಪ್ಪನ ದನಿ ಕಾಶವ್ವನ ಕಿವಿಗೆ ಅಮೃತ ಸುರಿಯಿತು. ಅಂದು ರಾತ್ರಿ

ಈರಪ್ಪ ಹೆಂಡತಿಯ ಮೈ ಕೈ ಸವರುತ್ತ "ಪಾಪ ಹೊಡೆತಾ ತಿಂದೀನ ಕಾಶೀs, ಅಣ್ಣ ನಿನ್ನ ಹೊಡೆದ್ನಂತ. ಅವ್ವ ಮುದುಕಿ ನೆಪ್ಪ ಹಾರಿ ಸರಾ ಇಟ್ಟಿದ್ದಾಳು. ನಿನಗ ನೋವು ಭಾಳ ಆತೇನ ?" ಎಂದಾಗ ಅವನ ಮಾತಿನ ಹೊಡೆತದಿಂದ ನಿಜವಾಗಿಯೂ ನರಳಿತ್ತು ಕಾಶವ್ವನ ಮೈ ಮನಸ್ಸು ಎರಡೂ.

ಹಬ್ಬಕ್ಕೆ ತವರಿಗೆ ಬಂದ ಅಣ್ಣನ ಮಗಳನ್ನು ಕಳಿಸಲು ಚಕ್ಕಡಿ ಕಟ್ಟಿಕೊಂಡು ಹೋಗಿದ್ದ ಈರಪ್ಪ. ದೂರದ ಊರಲ್ಲ ಚಕ್ಕಡಿ ಒಯ್ದಿದ್ದಾನೆ ರಾತ್ರಿ ಬಂದೇ ಬರುತ್ತಾನೆ ಎನ್ನುವ ಭರವಸೆಯಿಂದ ಅಡಿಗೆಯ ಮನೆಯಲ್ಲೇ ಮಲಗಿದ್ದಳು ಕಾಶವ್ವ. ಸಂಜೆಯಿಂದ ಮೋಡ ಕವಿದಿದ್ದರಿಂದ ಕತ್ತಲಾಗಿ ಬೇಗ ಮಲಗಿದ್ದರು ಎಲ್ಲರೂ. ಒಂದು ಹೊತ್ತು ನಿದ್ದೆ ಹತ್ತಿ ಕಾಶವ್ವನಿಗೆ ಎಚ್ಚರವಾದಾಗ ಬಾಗಿಲು ಕಿರ್ರೆಂದಿತ್ತು. ಗಂಡ ಬಂದನೇನೋ ಎಂದು ಹಾಸಿಗೆಯಲ್ಲೇ ಎದ್ದು ಕುಳಿತು 'ಕಡ್ಡೀ ಕೊರಿ' ಎಂದಳು. ಒರಟಾದ ಕೂದಲು ತುಂಬಿದ ದಪ್ಪ ಕೈಗಳು ಅವಳನ್ನು ಬಿಗಿಯಾಗಿ ಹಿಡಿದುಕೊಂಡು ಮುತ್ತಿಟ್ಟಾಗ ತಿಳಿಯಿತು ಬಂದವನು ಶಿವಪ್ಪ ಮಾವನೆಂದು. ಮನೆಯ ಜನರೆಲ್ಲ ಗಾಢ ನಿದ್ದೆಯಲ್ಲಿ. ಹೊರಗೆ ಧೋ ಎಂದು ಸುರಿಯುವ ಮಳೆಯ ಸಪ್ಪಳ. ಅಂಗೈ ಅಗಲದ ಕಿಡಕಿಯಲ್ಲಿ ಆಗೀಗ ಇಣುಕುವ ಮಿಂಚಿನ ಬೆಳಕು. ಬಾಯಿ ತೆರೆಯುವದಂತೂ ದೂರ ಉಳಿಯಿತು. ಭಯದಿಂದ ಕಣ್ಣೂ ತೆರೆಯಲಾಗಲಿಲ್ಲ ಕಾಶವ್ವನಿಗೆ. ಅಷ್ಟು ಬಿಗಿಯಾಗಿದ್ದ ಶಿವಪ್ಪ. ಎದ್ದು ಹೋಗುವಾಗ "ಯಾರ ಮುಂದಲೆ ಬಾಯಿ ಬಿಟ್ಟೀ ಜ್ವಾಕೀ. ಗುಂಡಿನ ಸರಾ s. ಹಂ. ನೆನಪಿರಲಿ" ಎಂದು ಬೆದರಿಸಿ ಹೋಗಿದ್ದ.

ಬೆಳಿಗ್ಗೆ ಏಳುವಾಗ ಹಾಸಿಗೆಯೆಲ್ಲಾ ನೆನೆದು ಹೋಗಿತ್ತು. ಕಾಶವ್ವನ ಕಣ್ಣೀರಿನಿಂದಲೋ ಸೋರಿ ಬಂದ ಮಳೆ ನೀರಿನಿಂದಲೋ. ಅಂದೇ ಮಧ್ಯಾಹ್ನ ಈರಪ್ಪ ಬಂದಿದ್ದ. ಮಳೆ ಬಂದು ಹಳ್ಳ ಕಟ್ಟಿದ್ದರಿಂದ ರಾತ್ರಿ ಬರಲಾಗಲಿಲ್ಲವೆಂದು ಅವ್ವನೆದುರು ಹೇಳುತ್ತಿದ್ದ. ಇಲ್ಲಿ ತನ್ನ ಸಂಸಾರದ ಒಡ್ಡು ಒಡೆಯಿತೆಂದು ಕಾಶವ್ವ ಮೂಲೆಯಲ್ಲಿ ಮುಳು ಮುಳು ಅಳುತ್ತಿದ್ದಳು. ಜ್ವರ ಬಂದಿದೆ ಎಂದು, ಹೊಟ್ಟೆ ನೋವೆಂದು ನಾಲ್ಕೆಂಟು ದಿನ ಗಂಡನನ್ನು ದೂರವೇ ಇಟ್ಟ ಕಾಶವ್ವ ಒಳಗೊಳಗೇ ವಿಲಿ ವಿಲಿ ಒದ್ದಾಡಿದಳು. ಎಷ್ಟು ದಿನ ಈ ಮುಚ್ಚು ಮರೆ, ಸುಳ್ಳು ಸಾಧ್ಯ ? ಕೊನೆಗೊಮ್ಮೆ

ಈರಪ್ಪನ ಮುಗ್ಧ ಪ್ರೀತಿಗೆ, ಅಂತಃಕರಣಕ್ಕೆ ಸೋತು ಶರಣಾದಳು. ಅವಳ ಕಣ್ಣೀರು ಕೆನ್ನೆಯ ಮೇಲೆ ಹರಿಯುತ್ತಿದ್ದಾಗ,

"ಕಾಶೀS ಅಳಾಕ ಹತ್ತೀಯೇನ. ಯಾಕ? ಹೊಟ್ಟೆ ನೂಸತೈತೇನ? ನಂದ ತಪ್ಪಾಷು. ನಿನಗ ಆರಾಮ ಆಗೂತನಾ ನಾ ನಿನ್ನ ಹಂತ್ಯಾಕ ಬರಾಂಗಿಲ್ಲ. ಸುಮ್ಮಕ ಇರು. ಖರೇನ ಬರಾಂಗಿಲ್ಲ. ಆತಿಲ್ಲೊ" ತನ್ನ ಎದೆಗೆ ಒತ್ತಿಕೊಂಡು ರಮಿಸುತ್ತಿದ್ದ ಗಂಡನ ಅಪ್ಪುಗೆಯಲ್ಲೇ ತನ್ನ ಜೀವ ಹೋಗಬಾರದೇ ಎಂದು ರಾತ್ರಿ ಎಲ್ಲಾ ಬಯಸಿದ್ದಳು ಕಾಶವ್ವ. ಇತ್ತಿತ್ತಲಾಗ ಶಿವಪ್ಪ ತೋಯಿಸಿಕೊಂಡ ಮೇಲೆ ಮಳೆಯ ಅಂಜಿಕೆ ಇಲ್ಲದವನಂತೆ ಸಿಕ್ಕ ಅವಕಾಶ ಒಂದೂ ಬಿಡುತ್ತಿರಲಿಲ್ಲ. ಅವಳು ತನ್ನ ಸೊತ್ತು ಎನ್ನುವ ಹಕ್ಕಿನಿಂದ ಅನುಭವಿಸುತ್ತಿದ್ದ. ಗಂಡ ಆಗಾಗ ಹೊಲೆಯರ ಹನುಮಿಯ ಹತ್ತಿರ ಹೋಗುವುದನ್ನು ತಿಳಿದಿದ್ದ ಸಂಗವ್ವ ಪೀಡಾ ಹೋಯಿತೆಂದು ಹಾಯಾಗಿ ಮಲಗಿ ನಿದ್ದೆ ಮಾಡುತ್ತಿದ್ದಳು ಮಗ್ಗಲು ಕೋಣೆಯಲ್ಲಿ.

ಮತ್ತೊಂದು ರಾತ್ರಿ ಈರಪ್ಪ—"ಕಾಶೀS ಗೌರಿ ಗಬ್ಬ ಆಗೇತಿ. ಹಂ, ನೀ ಯಾವಾಗ?"—"ಕಾಶವ್ವ ಅವನ ಬಾಯ ಮೇಲೆ ಕೈಯಿಟ್ಟಳು. ಮುಂದಿನ ಮಾತು ಕೇಳಬಾರದೆಂದು. ಹೌದು—ಗೌರಿ ಗಬ್ಬಾಗಿದೆ. ನೋಡಲಿಕ್ಕೂ ಚೆಂದಾಗಿದೆ. ಹೆಣ್ಗರುವನ್ನೋ, ಹೋರಿಕರುವನ್ನೋ ಈಯುತ್ತದೆ. ಕರು ಟುಣು ಪುಣು ಹಕ್ಕೆ ತುಂಬ ಜಿಗಿದಾಡುತ್ತದೆ. ಗೌರಿ ಬಹಳಷ್ಟು ಹಾಲು ಕೊಡುತ್ತದೆ. ಈರಪ್ಪನಿಗೆ ಈ ಗೌರಿ, ಆದರ ಕರು ಇವುಗಳ ಮಾತು ಇಷ್ಟು ಸಂತೋಷ ಕೊಟ್ಟರೆ! ಇನ್ನು ತಾನು ಅವನ ಹೆಂಡತಿ. ತಾನೇ ತಾಯಿಯಾಗುವ ಸುದ್ದಿ ತಿಳಿದರೆ ಎಷ್ಟು ಸಂತೋಷ ...ಉಹುಂ ಎಲ್ಲೀ ಸಂತೋಷ ...ತಾನು ತಾಯಿ ಹೌದು. ಆದರೆ ಯಾರ ತಾಯಿ? ಯಾರ ಮಗುವಿನ ತಾಯಿ? ಈರಪ್ಪನದೋ, ಶಿವಪ್ಪನದೋ? ಉಹುಂ ಸಾಧ್ಯವಿಲ್ಲ. ಯಾರದೋ ತನಗೇ ಗೊತ್ತಿಲ್ಲ. ಹೇಗೆ ಹೇಳಬೇಕು? ತಾನು ತಾಯಿಯಾಗುವ ಸುದ್ದೀ ಯಾರಿಗೆ ಹೇಳಬೇಕು? ನಿನ್ನ ಮಗನೇ ಎಂದು ಈರಪ್ಪನಿಗಂತೂ ಹೇಳುವದು ಸಾಧ್ಯವಿಲ್ಲ. ಅಂದ ಮೇಲೆ ತಾನು ಬಸಿರಾದದ್ದು ಅವನಿಗೆ ಹೇಳಲೇಬಾರದು. ಅವನ ಸಂತೋಷವನ್ನು ಕಸಿದುಕೊಂಡು ಅವನಿಗೆ ಮೋಸ ಮಾಡುತ್ತಿದ್ದೇನೆ. ಗಂಡನಿಗೆ

ಅದೂ ದೇವರಂಥ ಗಂಡನಿಗೆ ಮೋಸ. ಇಂಥ ಬಾಳು ಯಾರಿಗೆ ಬೇಕು ? ಈ ಬಸಿರು ಯಾರಿಗೆ ಬೇಕು ? ಬಿದ್ದಾದರೂ ಹೋಗಬಾರದೇ ಈ ಪಿಂಡ. ಛೇ. ಬಸಿರು ಬೇಡವೆನ್ನುವ ತಾಯಿಯಾದೆನಲ್ಲ ನಾನು. ಛೇ....ಶಾಂತ ವಾಗಿ ಮಲಗಿ ನಿದ್ರಿಸುತ್ತಿದ್ದ ಗಂಡನನ್ನು ನೋಡುತ್ತ ಹೊಟ್ಟೆ ಹಿಸುಕಿ ಕೊಳ್ಳುತ್ತ ರಾತ್ರಿ ಎಲ್ಲ ಹೊರಳಾಡಿದಳು ಕಾಶವ್ವ.

ಅವತ್ತು ಸಂಜೆ ಹೊಲದಿಂದ ಬಂದ ಈರಪ್ಪ ಗುಡ್ಡಕ್ಕೆ ಹೋದ ಗೌರಿ ಇನ್ನೂ ಬಂದಿಲ್ಲವೆಂದು ಕೇಳಿ ಅವ್ವ ಎಷ್ಟು ಕರೆಯುತ್ತಿದ್ದರೂ ಹಾಗೇ ತಿರುಗಿ ಹೊರಟುಹೋದ. ಕೆಲವು ದಿನಗಳಿಂದ ಕಿರುಬವೊಂದು ಗುಡ್ಡದಲ್ಲಿ ಅಡ್ಡಾಡುತ್ತಿದೆ. ಊರಿನ ಒಂದೆರಡು ದನ ಹಿಡಿದಿದೆ ಎನ್ನುವ ಸುದ್ದಿ ಕೇಳಿದ್ದ. ಅವಸರದಿಂದ ಹೋಗುತ್ತ ಯಾರೂ ತನ್ನ ದಾರೀ ಕಾಯಬಾರ ದೆಂದೂ, ಉಂಡು ಮಲಗಬೇಕೆಂದೂ, ಗೌರಿಯನ್ನು ಹುಡುಕಿಕೊಂಡೇ ಮನೆಗೆ ಬರುವೆನೆಂದೂ ಹೇಳಿ ಹೊರಟುಹೋಗಿದ್ದ. ಅತ್ತ ಕಿರುಬ ಗೌರಿ ಯನ್ನು ಮುರಿದು ತಿನ್ನುತ್ತಿದ್ದಾಗ ಇತ್ತ ಶಿವಪ್ಪ ಕಾಶವ್ವನನ್ನು ಹಿಡಿದಿದ್ದ. ಅವನ ತೋಳತೆಕ್ಕೆಯಲ್ಲಿ ಅವಳು ನಿರ್ಜೀವ ಗೊಂಬೆಯಂತೆ ಅಲ್ಲಾಡದೆ ಮಲಗಿದ್ದಳು. ಹೊತ್ತು ಎಷ್ಟಾಗಿತ್ತೋ ಇಬ್ಬರಿಗೂ ತಿಳಿಯದು. ಬಾಗಿಲು ದಡಕ್ಕೆಂದು ತೆರೆಯಿತು. ಟಿಕ್ಕಿನ ಮೇಲೆ ಮಲಗಿದ್ದ ಶಿವಪ್ಪ ಎದ್ದು ಕಡ್ಡೀ ಗೀರಿದ. ಒಳಗೆ ಕಾಲಿಟ್ಟಿದ್ದ ಈರಪ್ಪನ ಕಣ್ಣುಗಳಲ್ಲಿ ಕಡ್ಡಿಯ ಬೆಳಕು ಮೂಡಿ ದೊಡ್ಡ ಜ್ವಾಲೆಯಾಗಿರುವಂತೆ ತೋರಿತು ಕಾಶವ್ವನಿಗೆ. ಅವಳು ರೆಪ್ಪೆ ಪಿಳುಕಿಸದೆ ನೋಡುತ್ತಿದ್ದಾಗಲೆ ಆ ಬೆಳಕು ದೊಡ್ಡ ದೊಡ್ಡದಾಗಿ ಏರುತ್ತ ಏರುತ್ತ ಇಡೀ ಮನೆಯೇ ಉರಿಯುತ್ತಿರು ವಂತೆ ಕಂಡಿತು. ಅದರಲ್ಲಿ ತಾವೂ ಸುಟ್ಟು ಬೂದಿಯಾಗಬೇಕು. ಈ ರೀತಿ ದಿನವೂ ಸುಡುವದಕಿಂತ ಒಂದೇ ಸಲಕ್ಕೆ ಉರಿದುಹೋಗಬೇಕು. ಹಾಗೆ ಸುಟ್ಟರೆ ತನಗೆ ತುಂಬ ಸಂತೋಷ. ಎಷ್ಟು ಸುಖ! ಎಂಥ ಶಾಂತಿ! ಕಾಶವ್ವನ ಕಣ್ಣುಗಳು ನಗುತ್ತಿದ್ದವು. ಒಂದೇ ಒಂದು ಕ್ಷಣ ಜ್ವಾಲೆ ಮಾಯವಾಯಿತು. ಈರಪ್ಪ ಹೊರಗೆ ಓಡಿಹೋಗಿದ್ದ. ಅವನ ಹಿಂದೆಯೇ ಓಡಬೇಕಾಗಿದ್ದ ಗಂಡು—ಹೆಣ್ಣುಗಳೆರಡೂ ಮೊದಲೇ ಸತ್ತು ಹೋಗಿದ್ದವು.

ಮರುದಿನ ಮುಂಜಾನೆ ಈರಪ್ಪ ಮನೆಯ ಮುಂದಿನ ಮರಕ್ಕೆ ತೂಗಾಡುತ್ತಿದ್ದ.

ವರ್ಗ ರದ್ದಾಯಿತು

ನಡುರಾತ್ರಿಯ ನೀರವತೆಯಲ್ಲಿ ಅಲಾರ್ಮ್ ಗಡಿಯಾರದ ಟಿಕ್ ಟಿಕ್ ಶಬ್ದ ತನ್ನ ಎದೆಬಡಿತದೊಡನೆ ಸ್ಪರ್ಧಿಸುತ್ತಿರುವುದು ಕಣ್ಣು ತೆರೆದು ಕೊಂಡೇ ಮಲಗಿದ್ದ ಅಶೋಕನಿಗೆ ಸ್ಪಷ್ಟವಾಗಿ ಕೇಳುತ್ತಿತ್ತು. ವಿಜಯ, ಮಕ್ಕಳು ಮೈಮರೆತು ನಿದ್ದೆಮಾಡುತ್ತಿರುವಾಗ ತನಗೆ ಮಾತ್ರ ಕಣ್ಣು ಮುಚ್ಚುವದೇ ಸಾಧ್ಯವಾಗಲೊಲ್ಲದು. ತಲೆಯಲ್ಲಿ ಸಂತೆಯ ಗದ್ದಲ ತುಂಬಿದೆ. ಬಯಲಾಟದ ಕುಣಿತವೂ ನಡೆಯುತ್ತಿದೆ. ಮಿದುಳು ತಕ್ಕಥೈ, ಧಿಮಿ, ಧಿಮಿ ಕುಣಿಯುತ್ತಿದೆ. ನರಗಳೆಲ್ಲ ಹಿಗ್ಗಿ ಮುಗ್ಗಿ ಜಗ್ಗಾಡು ತ್ತಿವೆ. ಅಬ್ಬಾ ! ಅಸಾಧ್ಯ ಈ ತಲೆನೋವು ; ಸಹಿಸಲೂ ಆಗುವುದಿಲ್ಲ. ತಲೆದಿಂಬಿನ ಬಳಿ ಅತ್ತಿತ್ತ ಕೈಯಾಡಿಸಿದ. ಉಹುಂ ಅಲ್ಲಿ ಸಿಗಲಿಲ್ಲ. ಬೆಡ್‌ಲೈಟಿನ ಬೆಳಕಿನಲ್ಲಿ ಕೋಣೆಯ ಸುತ್ತ ಕಣ್ಣೋಡಿಸಿದ. ಎದುರು ಮಂಚದ ಮೇಲೆ ಸುಚೀ, ಸುಷ್ಮಾ ಮಲಗಿದ್ದರು. ರಗ್ಗು ಜಾರಿ ಕೆಳಗೆ ಬಿದ್ದಿತ್ತು. ಒಬ್ಬಳ ಕಾಲು ಮಚ್ಛರದಾನಿಯಿಂದ ಹೊರಗೆ ಚಾಚಿ ಬಂದಿತ್ತು. ಮೂಲೆಯ ಟೀಪಾಯ್ ಮೇಲಿನ ರೇಡಿಯೋದ ಹಿಂದಿನ ಶೋಕೇಸಿನಲ್ಲಿ ಕಣ್ಣಾಡಿಸಿ ಡ್ರೆಸ್ಸಿಂಗ್ ಟೇಬಲ್ಲಿಗೆ ಬಂದಾಗ ಅದೋ ಅಲ್ಲಿತ್ತು. ಅಮೃತಾಂಜನ ಬಾಟಲಿ. ಬಾಟಲಿ ಸಿಕ್ಕಿದ್ದೊಂದೇ ಸಮಾ ಧಾನ. ಎದ್ದು ಹೋಗಿ ತೆಗೆದುಕೊಳ್ಳುವ ಮನಸ್ಸಾಗಲಿಲ್ಲ. ಕಾರಣ ವಿಜಯ ಅವನ ತೋಳಿನ ಮೇಲೆ ತಲೆಯಿಟ್ಟು ನಿದ್ದೆ ಮಾಡುತ್ತಿದ್ದಳು. ನಿಶ್ಶಬ್ದವಾಗಿ ಹೊರಳಿ ಅವಳತ್ತ ನೋಡಿದ. ಕೆನ್ನೆಯ ಮೇಲಿನ ಕಣ್ಣೀರು ಕರೆಕಟ್ಟಿತ್ತು. ನೀಳವಾದ ರೆಪ್ಪೆ ಇನ್ನೂ ಹಸಿಯಾಗಿರುವಂತೆ ಅಂಟಿ ಕೊಂಡಿದ್ದವು.

ವಿಜಯ ಇಂದು ಸಂಜೆ ಶಾಲೆಯಿಂದ ಬರುವಾಗ ದಿನದಂತೆ ಇಲ್ಲ ವೆನ್ನುವದು ತನಗೆ ಕೂಡಲೇ ಗೊತ್ತಾಯಿತು. ದಿನದ ದುಡಿತದಿಂದ ದಣಿ ದಿದ್ದರೂ ತನ್ನನ್ನು ಕಂಡಕೂಡಲೇ ಹೂವಿನಂತೆ ಅರಳುತ್ತಿದ್ದವಳು ಇಂದು

ಮುಖ ತಗ್ಗಿಸಿ ಒಳಗೆ ಬಂದು ಮಂಚದ ಮೇಲೆ ಪರ್ಸ್ ಒಗೆದು ತನ್ನ ಕಡೆಗೆ ನೋಡಿಯೂ ನೋಡದಂತೆ ಬಚ್ಚಲು ಮನೆಯತ್ತ ಹೊರಟಿದ್ದಳು. ಅವಳ ಈ ಹೊಸ ರೀತಿಯಿಂದ ಬೆಚ್ಚಿದ ತಾನೇ ಅವಳ ತೋಳು ಹಿಡಿದು ಕೋಣೆಗೆ ಕರೆತಂದಿದ್ದ. ಕೂಡಲೇ ಪರ್ಸಿನಲ್ಲಿಯ ಕಾಗದವನ್ನು ಬಿಚ್ಚಿ ತನ್ನ ಕೈಗಿತ್ತಳು. ಏನದು? ಯಾರ ಕಾಗದ? ಯಾರಾದರೂ ಬಂಧುಗಳು ಸತ್ತರೆ ಟೆಲಿಗ್ರಾಂ ಬರಬೇಕಿತ್ತು. ಇವಳನ್ನು ಕೆಲಸದಿಂದ ತೆಗೆದರೋ? ಅಥವಾ ಯಾರಾದರೂ ಬೇನಾಮಿ ಅಶ್ಲೀಲ ಪತ್ರ ಬರೆದರೋ? ತನ್ನ ವಿಜಯ ನೋಡೋದಕ್ಕೆ ಚೆನ್ನಾಗಿದ್ದುದರಿಂದ ಬೇರೆಯವರ ಕಣ್ಣು ಬೀಳುವದೂ ಸಾಧ್ಯವಿದೆ ಎಂದು ಯೋಚಿಸುತ್ತ ಕಾಗದ ಓದಿದರೆ-ಅದು ಅವಳನ್ನು ದೂರದ ಊರಿನ ಶಾಲೆಗೆ ವರ್ಗ ಮಾಡಿದ ಆರ್ಡರು. ಇನ್ನು ಹದಿನೈದು ದಿನಗಳಲ್ಲಿ ಹೋಗಿ ಚಾರ್ಜು ತೆಗೆದುಕೊಳ್ಳಬೇಕು ಎಂದು ಅದರಲ್ಲಿತ್ತು. ಓಹ್! ಇದು ತಮ್ಮಿಬ್ಬರಿಗೂ ಅನಿರೀಕ್ಷಿತ ಆಘಾತ! ವಿಜಯಳ ಕಣ್ಣೀರು ಒರೆಸಿ, ಏನಾದರೂ ಯೋಚಿಸೋಣವೆಂದು ಸಂತೈಸಿ, ಕೆಲಸದ ಗಂಗೂ ಮಾಡಿಟ್ಟ ಅಡಿಗೆಯನ್ನು ಎಲ್ಲರೂ ಊಟಮಾಡಿ ಹೊರಗೆ ಬರುವದರಲ್ಲಿ ಯೋಚನೆಗಳ ಭಾರದಿಂದ ತನ್ನ ತಲೆ ಸಿಡಿಯತೊಡಗಿತ್ತು. ನಿದ್ದೆ ಹಾರಿ ಹೋಗಿತ್ತು.

ತಾವಿಬ್ಬರೂ ದುಡಿಯುವವರಾದ್ದರಿಂದ ತಮ್ಮ ಮುಪ್ಪಿನ ಕಾಲಕ್ಕೆ ನೆರಳಿಗೆ ಸ್ವಂತ ಮನೆ ಇರಲೆಂದು ದೂರಾಲೋಚನೆ ಮಾಡಿ, ಸಾಲಮಾಡಿ ಮನೆ ಕಟ್ಟಿಸಿ ವರ್ಷ ಕಳೆದಿತ್ತು. ಸುಚೀ ಸುಷ್ಮಾ ಇಬ್ಬರ ವಿದ್ಯಾಭ್ಯಾಸ ಮುಗಿದು ಮದುವೆ ಜವಾಬ್ದಾರಿ ಹೊರುವ ಮುಂಚೆಯೇ ಮನೆಯ ಸಾಲ ತೀರಿಹೋಗುತ್ತದೆ ಎಂದು ಲೆಕ್ಕಹಾಕಿ ಸಾಧ್ಯವಿದ್ದಷ್ಟು ಮಿತವ್ಯಯಮಾಡಿ ತನ್ನ ಪಗಾರವನ್ನು ಮನೆಯ ಖರ್ಚಿಗೂ, ವಿಜಯಳದನ್ನು ಸಾಲಕ್ಕೂ ತೆಗೆದು ಇಡುತ್ತಾ ಬಂದಿದ್ದೆವು. ಆದರೆ-ಈಗ ನೋಡಿದರೆ ತಮ್ಮ ಮಿತವ್ಯಯ, ಲೆಕ್ಕಾಚಾರ ಎಲ್ಲಾ ಬುಡ ಮೇಲಾಗಿತ್ತು. ಬೇರೊಂದು ದೂರದ ಊರಿನಲ್ಲಿ ಮನೆಮಾಡಿಕೊಂಡು ತನ್ನ ಸಹಾಯವಿಲ್ಲದೆ ಒಬ್ಬಳೇ ಚಿಕ್ಕ ಮಕ್ಕಳೊಡನೆ ಇದ್ದು ಅವಳು ಎಷ್ಟು ಹಣ ಉಳಿಸಲು ಸಾಧ್ಯ? ಅವಳಿಗಾಗಲೀ ತನಗಾಗಲೀ ಒಬ್ಬರೇ ಇದ್ದು ಹೇಗಾದರೂ ಸಂಸಾರ ಸಾಗಿಸಿಕೊಂಡು ಹೋಗುವ ಮನಸ್ಸಿಲ್ಲ, ಶಕ್ತಿಯಿಲ್ಲ, ಆರ್ಥಿಕ ಅನುಕೂಲವೂ ಇಲ್ಲ. ಇವಳನ್ನು ವರ್ಗ ಮಾಡಬೇಕೆನ್ನುವ ಬುದ್ಧಿಯನ್ನು ದೇವರು ಯಾಕಾದರೂ ಅವರಿಗೆ

ಕೊಟ್ಟನೋ?—? ಎಲ್ಲವನ್ನೂ ಬಿಟ್ಟು ತನ್ನ ಹೆಂಡತಿಯನ್ನೇ ವರ್ಗ ಮಾಡಲು ಅವರಿಗೆ ಬೇರೆ ಏನೂ ಕೆಲಸ ಇರಲಿಲ್ಲವೇ ? ಅಥವಾ ಯಾರಾದರೂ ಬೇಕೆಂತಲೇ ಹೊಟ್ಟೇಕಿಚ್ಚಿನಿಂದ ಈ ಕೆಲಸ ಮಾಡಿಸಿದ್ದಾರೋ ? ತನಗೆ ಆಗದವರು ಎಷ್ಟೋ ಜನ ಇದ್ದಾರೆ. ತನಗೆ ಕಲಿತ, ಸುಂದರಿ ಹೆಂಡತಿ ಇರುವದೂ, ಇಬ್ಬರ ಗಳಿಕೆಯಿಂದ ತನ್ನ ಜೊತೆಯವರಿಗಿಂತ ಮೇಲ್ಮಟ್ಟದಲ್ಲಿ ಜೀವಿಸುತ್ತ ಇರುವದೂ, ಮನೆ ಕಟ್ಟಿಸಿಕೊಂಡಿರುವದೂ ಎಲ್ಲವನ್ನೂ ನೋಡಿ ಆಗದ ಸ್ನೇಹಿತರೂ, ಸಹೋದ್ಯೋಗಿಗಳೂ ಸಾಕಷ್ಟು ಸಂಖ್ಯೆಯಲ್ಲಿ ಇರಬಹುದು. ಆದರೆ—ಆಂ—ಆದರೆ ಈ ಕೆಲಸಕ್ಕೆ ಪ್ರಭಾವ ಬೀರುವಂಥ ಅಧಿಕಾರ ಬೇಕು, ಬೆಂಗಳೂರಿನಲ್ಲಿ ಅವರ ಮಾತು ನಡೆಯಬೇಕು ಅಂಥ—ಓs ಈಗ ಅರ್ಥವಾಯಿತು. ಈ ಕೆಲಸ ತನ್ನ ಬಾಸ್—ಮಂಜುನಾಥಯ್ಯಂದೇ, ಅದೇ ಅವನೇ—ಮೊದಲೇ ಹೊಳೆಯಲಿಲ್ಲ ತನಗೆ—

ಅದೇ ಮಂಜುನಾಥಯ್ಯ ಕಚೇರಿಯಲ್ಲಿ ಒಂದು ದಿನ ತನ್ನನ್ನು ಕರೆಸಿದ.

" ಸಾಹೇಬ್ರು ನಿಮ್ಮನ್ನು ಕರೀತಾರ್ರೀ. "

[ಯಾಕ ಕರೀತಿದ್ದಾನಪಾ ಇಂವಾ. ಎಷ್ಟು ಬಯ್ಸಿಕೋಬೇಕೋ ಇವನಿಂದ] ಒಳಗೆ ಹೋದೊಡನೆ ದಿನವೂ ತನ್ನನ್ನು ಕಂಡು ಹಾವಿನಂತೆ ಫೂತ್ಕರಿಸುವ ಮಂಜುನಾಥಯ್ಯ ದೇಶಾವರಿ ನಗೆ ನಗುತ್ತ, ಬೋಳು ನೆತ್ತಿಯ ಮೇಲೆ ಕೈಯಾಡಿಸುತ್ತ "ಕೂಡ್ರಿ ಮಿ. ದೇಸಾಯಿ, ಸ್ವಲ್ಪ ಮಾತಾಡೂದ ಅದ ನಿಮ್ಮ ಕೂಡ" ಅಂದ.

ಮುಂದಿನ ಒಂದು ಹಲ್ಲು ಇಲ್ಲದ ಬಾಯಿಂದ ಉಗುಳು ಸಿಡಿಸುತ್ತ ಟೈಪಿಸ್ಟ್ ಜೊತೆ ಮಾತಾಡುತ್ತಿದ್ದ. [ಲಗೂನ ಬೊಗಳಬಾರದ ? ಏನದ ಕೆಲಸಾ ? ಸುಮ್ಮನೆ ವೇಳೆ ಕಳೀತಾನ.]

ಟೈಪಿಸ್ಟ್ ಹೊರಗೆ ಹೋದೊಡನೆ " ಮಿ. ದೇಸಾಯ್ ನಿಮ್ಮ ಮಿಸೆಸ್ ಗರ್ಲ್ಸ್ ಸ್ಕೂಲಿನ್ಯಾಗ ಟೀಚರ್ ಅದಾರೇನು ? " ಅಂದ.

" ಹೌದ್ರಿ " [ಇಂವಗ್ಯಾಕ ಬೇಕ ನನ್ನ ಹೆಂಡತಿ ಉಸಾಬರಿ]

" ನೋಡ್ರಿs ನನ್ನ ಮಗಳು ಆಶಾ ಒಂಬತ್ತನೇ ಕ್ಲಾಸಿನ್ಯಾಗ ಕಲೀತಾಳ. ಅದsಸ್ಕೂಲಿಗೆ ಹೋಗತಾಳ. ವಾರ್ಷಿಕ ಪರೀಕ್ಷೆದಾಗ ಗಣೀತ

ಪೇಪರು ಫೆಲೋ ಆಗಿಲ್ಲಾ ಅಂತ ಅಳತಿದ್ಲು, ಹಿಡೀರಿ, ಇದು ಆಕೀ ನಂಬರು. ಆಕೀ ಪೇಪರು ಲಕ್ಷ್ಯಕೊಟ್ಟು ತಪಾಸ ಮಾಡಬೇಕು. ಕನಿಷ್ಠ ಪಕ್ಷ ನೂರಕ್ಕೆ ಎಪ್ಪತ್ತೈದು ಮಾರ್ಕ್ಸ್ ಕೊಡಬೇಕು ಅಂತ ನಿಮ್ಮ ಮಿಸೆಸ್‌ಗ ಹೇಳ್ರಿ. ತಿಳೀತೇನು, ಅಲಕ್ಷ ಮಾಡಬ್ಯಾಡ್ರಿ. ನಿಮ್ಮದs ಕೆಲಸ ಅಂತ ತಿಳಕೊಂಡು ಮಾಡ್ರಿ. ಆಯ್ತು ಹೋಗ್ರಿನ್ನ."

ಅವನನ್ನು ಬಯ್ಯಲು, ಶಪಿಸಲು ಶಬ್ದಗಳೇ ಸಾಲದೆ ಸಿಟ್ಟಾಗಿ ಮನೆಗೆ ಬಂದೆ. ವಿಜಯಳಿಗೆ ವಿಷಯ ತಿಳಿಸಿದೆ. ಅವಳು ಆಶಾನ ಪೇಪರು ಹುಡುಕಿ ತನ್ನ ಮುಖದ ಮುಂದೆ ಹಿಡಿದಾಗ ನೋಡಿ ದಂಗಾದೆ. ನೂರಕ್ಕೆ ಹದಿನೈದಕ್ಕಿಂತ ಹೆಚ್ಚು ಕೊಡಲು ಸಾಧ್ಯವೇ ಇರಲಿಲ್ಲ. ಏನು ಮಾಡ ಬೇಕೋ ತಿಳಿಯುದೆ ಪೆಚ್ಚಾಗಿ, ವಿಜಯಳ ಮುಖ ನೋಡದೆ. 'ಆಗಲಿ ಹದಿನೈದs ಹಾಕಿಬಿಡು. ನೋಡೋಣ ಏನು ಮಾಡ್ತಾನ ಮಂಜುನಾಥಯ್ಯ' ಎಂದೆ. ಸೇಡು ತೀರಿಸಿಕೊಂಡ ತೃಪ್ತಿಯ ನಗೆ ನಕ್ಕಿದ್ದೆ.

ಮುಂದಿನ ಮೂರು ತಿಂಗಳು ತನ್ನ ಪಾಲಿಗೆ ಬಾಸ್ 'ನಕ್ಷತ್ರಿಕ' ನಾಗಿದ್ದ. ಕಚೇರಿ ಕೆಲಸದಾಗ ಸಿಕ್ಕರೆ ತನ್ನ ಪಾತಾಳಕ್ಕೆ ತುಳೀತಾನ ಅನ್ನೂದು ತನಗೆ ಗೊತ್ತಿತ್ತು. ಮೈ ತುಂಬಾ ಕಣ್ಣಾಗಿ ಕೆಲಸಾ ಮಾಡಿ ದರೂ ಬಯ್ಯುತ್ತಿದ್ದ. ಅಪಮಾನ ಮಾಡುತ್ತಿದ್ದ. ದಿನಾ ನರಕ ಅನು ಭವಿಸುತ್ತಿದ್ದೆ. ಕೆಲವು ವಿಷಯಾನ ವಿಜಯನ ಮುಂದೆ ಹೇಳತಿದ್ದೆ. ಕೆಲವು ನಾನs ನುಂಗತಿದ್ದೆ. "ನೀವು ಬಾಸ್‌ನ ಎದುರು ಹಾಕ್ಕೊಳ್ಳೋ ಬಾರದಾಗಿತ್ತು. ಹೆಚ್ಚಿಗಿ ಮಾರ್ಕ್ಸ್ ಹಾಕಿದ್ದರ ನಿಮಗ ಈ ಕಾಟಾ ಇರ ತಿದ್ದಿಲ್ಲಾ. ಎಷ್ಟೋ ಮಂದಿ ಇಂಥಾವೆಲ್ಲಾ ಮಾಡತಾರ" ಅಂತ ಸ್ನೇಹಿ ತರು ತನಗೆ ಬುದ್ಧೀ ಹೇಳಿದರು. ಛೀ ! ಎಂತೆಂಥಾ ಮಂದಿ ಇರತಾರಲ್ಲ. ಮನುಷ್ಯಾ ಆಗಿ ಹುಟ್ಟಿಬಂದ ಮೇಲೆ ಇವರಿಗೆ ಒಂದು ತತ್ತ್ವ, ಆದರ್ಶ, ಜೀವನದ ಗುರಿ ಏನೂ ಇರೂದs ಇಲ್ಲs. ಬಾಸ್‌ನ ಮಗಳು ನಾಪಾಸಾ ದರ ಆಳತಾಳ. ಅವಗ ಕೆಟ್ಟ ಅನಸತದ, ಅಂತ ತನ್ನ ಹೆಂಡತಿ ಇಂಥಾ ಭ್ರಷ್ಟ ಕೆಲಸಾ ಮಾಡಬೇಕs ? ಅವಳಿಗಾಗಲೀ ಅಂತರಾತ್ಮ, ವಿವೇಕ ಬುದ್ಧಿ ಏನೇನೂ ಇಲ್ಲಾ ಅಂತ ತಿಳಕೊಂಡಾರ ಇವರೆಲ್ಲಾ. "ನಮ್ಮ ಬಾಸ್ ಹಾವು ಇದ್ದಾಂಗ ಆದಾನರೀ. ಸೇಡು ತೀರಿಸಿಕೊಳ್ಳದ ಬಿಡೂ ದಿಲ್ಲಾ" ಅಂತ ಸಹೋದ್ಯೋಗಿಗಳು ಹೆದರಿಸಿದ್ದರು. ಆ ಮಾತೆಲ್ಲಾ

ಅಲಕ್ಷ್ಯಮಾಡಿ ನಕ್ಕುಬಿಟ್ಟಿದ್ದ ತಾನು. ಆದರ ಈಗ— ಈಗ ಹ್ಯಾಂಗ ಎದುರಿಸಬೇಕು ಈ ಸಮಸ್ಯಾನ ?

ಖೊಖ್ಖ....ಖೊಖ್ಖ....ಸುಷ್ಮಾ ಒಂದೇ ಸಮನೆ ಕೆಮ್ಮತೊಡಗಿದಳು. ತಿವಿದು ಎಬ್ಬಿಸಿದಂತೆ ವಿಜಯ ಚಟ್ಟನೆದ್ದು ಹೋಗಿ ಅವಳನ್ನು ಎತ್ತಿಕೊಂಡು ಬೆನ್ನು ನೇವರಿಸತೊಡಗಿದಳು. ಮುಖ ಕೆಂಪಾಗಿ ಕಣ್ಣಲ್ಲಿ ನೀರು ಹರಿದು, ಬೆವತು, ಸೋತು ಮಲಗಿದಳು ಸುಷ್ಮಾ. ಅದು ನಾಯಿ ಕೆಮ್ಮಿನ ಪ್ರತಾಪ. ಮೂರು ತಿಂಗಳ ಕೆಳಗೆ ಸುಚೀ, ಸುಷ್ಮಾ ಇಬ್ಬರೂ ಈ ಕೆಮ್ಮಿನಿಂದ ಸತ್ತು ಬದುಕಿದರು. ಆಗ ಹಗಲು–ರಾತ್ರಿ ತಮ್ಮಿಬ್ಬರಿಗೂ ವಿಶ್ರಾಂತಿ ಇರಲಿಲ್ಲ. ಕೆಮ್ಮಿ ಕೆಮ್ಮಿ ಉಂಡದ್ದೆಲ್ಲ ವಾಂತಿ ಮಾಡಿಕೊಂಡು ಸುಸ್ತಾಗಿ ಮಲಗುವ ಮಕ್ಕಳನ್ನು ನೋಡಿ ತಮ್ಮಿಬ್ಬರಿಗೂ ಅನ್ನ ಗಂಟಲಲ್ಲಿ ಇಳಿಯುತ್ತಿರಲಿಲ್ಲ. ವಿಜಯ ಮಕ್ಕಳ ಉಪಚಾರಕ್ಕೆ ರಜೆ ಹಾಕಿದ್ದಳು. ಹಕ್ಕಿನ ರಜೆ ಮುಗಿದು ಪಗಾರವಿಲ್ಲದೆಯೂ ರಜೆ ತೆಗೆದುಕೊಂಡಿದ್ದಳು. ಸುಷ್ಮಾ ಅಶಕ್ತ ಪ್ರಕೃತಿಯವಳಾಗಿದ್ದರಿಂದ ಇನ್ನೂ ಒಮ್ಮೊಮ್ಮೆ ಕೆಮ್ಮು ತೊಂದರೆ ಕೊಡುತ್ತಿತ್ತು. ಈಗ ವಿಜಯಳಿಗೆ ರಜ ಸಿಗುವುದೂ ಸಾಧ್ಯವಿರಲಿಲ್ಲ. ಅಂದರೆ ಈಗ ಮಾಡಬೇಕೇನು ? ಚಿಂತೆಗೆ ಕೊನೆಯೇ ಇರಲಿಲ್ಲ. ಬೆಳಗಾಯಿತು.

* * *

" ಅವ್ವಾಗ ಟಾಟಾ ಮಾಡು ಮರೀs, ನೀನು ಮಾಡು ಸುಚೀs " ಅಶೋಕ ವಿಜಯ ಕುಳಿತ ಬಸ್ಸಿನ ಕಿಟಕಿಯ ಹತ್ತಿರ ನಿಂತು ಮಕ್ಕಳಿಗೆ ಹೇಳಿದ್ದ.

" ಟಾಟಾs ಟಾಟಾs '' ಇಬ್ಬರೂ ಒಂದೇ ಉಸುರಿನಲ್ಲಿ ಕೂಗಿದರು. ಗಂಡ ಮಕ್ಕಳನ್ನು ಬಿಟ್ಟು ತಾನೊಬ್ಬಳೇ ಬೆಂಗಳೂರಿಗೆ ಹೊರಡುವದು ವಿಜಯಳಿಗೆ ಅನಿವಾರ್ಯವಾಗಿತ್ತು. ಸಾಧ್ಯವಾದರೆ ಮೇಲಿನ ಅಧಿಕಾರಿಗೆ ಹೇಳಿ ತನ್ನ ವರ್ಗ ರದ್ದು ಮಾಡಿಸಿ ಬರಲು ಹೊರಟಿದ್ದಳು ಸ್ನೇಹಿತರ ಸಲಹೆಯಂತೆ. ಗಂಡ—ಹೆಂಡತಿ ಇಬ್ಬರೂ ಒಂದೇ ಊರಿನಲ್ಲಿ ಕೆಲಸ ಮಾಡುವ ಅನುಕೂಲತೆ ಒದಗಿಸಿಕೊಡಬೇಕೆನ್ನುವದು ಸರಕಾರೀ ಕಾನೂನಿನಲ್ಲಿ ಇದೆ. ಆದರೂ ಮೇಲಧಿಕಾರಿಗಳ, ಊರ ಪುಢಾರಿಗಳ ಅವಕೃಪೆಗೆ ಪಾತ್ರರಾದವರಿಗೆ ಇಂಥ ಶಿಕ್ಷೆ ಕೊಡುವದು ಸಹಜವಾಗಿತ್ತು. ಮೇಲಧಿಕಾರಿಗಳನ್ನು ಸ್ವತಃ ಭೆಟ್ಟಿಯಾಗಲು ಬೆಂಗಳೂರಿಗೆ ಹೋಗಬೇಕಾಗಿತ್ತು. ಬೇರೆ

ಊರಿಗೆ ಹೋಗಿ ಅಪರಿಚಿತರ ಮಧ್ಯೆ ಒಬ್ಬಳೇ ಹೊಸ ಜೀವನ ಪ್ರಾರಂಭಿಸು ವದಕಿಂತಲೂ ಇದು ಸುಲಭದ ಕೆಲಸ ಎಂದು ಗಂಡ–ಹೆಂಡತಿ ಇಬ್ಬರೂ ತಿಳಿದಿದ್ದುದೇ ಈ ಪ್ರವಾಸಕ್ಕೆ ಕಾರಣವಾಗಿತ್ತು.

" ನಿನ್ನ ಗೆಳತಿಯ ಮನೀ ಅಡ್ರೆಸ್ ಇಟ್ಟಕೊಂಡೀ ಅಲ್ಲಾ ? "

ಪರ್ಸಿನಲ್ಲಿ ಕಣ್ಣಾಡಿಸಿ ನೋಡಿದಳು ವಿಜಯ; " ಹೂಂ, ಇಟ ಕೊಂಡೀನಿ. "

" ಹೋದ ಕೂಡಲೇ ಅವರ ಮನೆಗೆ ಹೋಗಿ ಸಾಮಾನು ಇಟ್ಟು ಸ್ನಾನಾ ಮಾಡಿ ಫ್ರೆಶ್ಶ ಆಗಿ ಆಫೀಸಿಗೆ ಹೋಗು. ನಮ್ಮ ಅನಾನುಕೂಲ ಎಲ್ಲಾ ಅವರಿಗೆ ತಿಳಿಸಿ ಹೇಳು. ಅವರೂ ಅನುಭವಿಕರು ಇರತಾರ. ನೀ ಹೇಳಿದರ ನಂಬತಾರ. ವರ್ಗ ಕ್ಯಾನ್ಸಲ್ ಮಾಡಲಿಕ್ಕೆ ಇಲ್ಲಾ ಅನಲಿಕ್ಕಿಲ್ಲಾ. ಒಂದs ದಿವಸಕ್ಕ ಭೆಟ್ಟಿ ಆಗದಿದ್ದರ ಇನ್ನೊಂದು ದಿವಸ ನಿಂತು ಬಾ."

" ಹೂಂ ". ಎಂದು ಗೋಣು ಅಲ್ಲಾಡಿಸಿ, " ಗಂಗೂನ ಕಡೇಂದ ಎಲ್ಲಾ ಕೆಲಸಾ ಹೇಳಿ ಮಾಡಿಸಿಕೊಳ್ರಿ. ಹುಡುಗರು ಜ್ವಾಕಿ. ಸುಷ್ಮಾಗ ದಿನಾ ರಾತ್ರಿ ಎರಡ ಚಮಚೆ ಔಷಧ ಕುಡಿಸ್ರಿ " ಎಂದಳು ವಿಜಯ.

" ನಾ ಎಲ್ಲಾ ಮಾಡ್ತೀನಿ. ನೀ ಕಾಳಜೀ ಮಾಡಬ್ಯಾಡಾ. ನಿಶ್ಚಿಂತೆ ಆಗಿ ಹೋಗು. ನಿನ್ನ ಕೆಲಸಾ ಸರಿಯಾಗಿ ಮಾಡಿಕೊಂಡು ಬಾ. ಇದೊಂದು ಗುಡ್ಡ ಕೂತಂಗ ಆಗೇದ ತಲೀಮ್ಯಾಲೆ. "

ಎರಡು ಮೂರು ತಿಂಗಳು ಒಂದೇ ಸವನೆ ನರಕ ಅನುಭವಿಸಿದ ಗಂಡನ ಸೊರಗಿದ ಮುಖ ನೋಡಿ ವಿಜಯಳಲ್ಲಿ ಕನಿಕರದೊಡನೆ ಕೆಚ್ಚೂ ಮೂಡಿತು. ಕಿಟಕಿಯ ದಂಡೆಯ ಮೇಲೆ ಕೈಯಿಟ್ಟ ಗಂಡನ ಕೈಯ್ಯ ಮೇಲೆ ಕೈಯಿಟ್ಟು " ನೀವು ಚಿಂತೀ ಮಾಡಬ್ಯಾಡ್ರಿ. ನಾನು ನಿಮ್ಮನ್ನು ಬಿಟ್ಟ ಇರೂದು ಸಾಧ್ಯನs ಇಲ್ಲಾ. ವರ್ಗ ರದ್ದಾದ ಆರ್ಡರ ತಂದs ತೀರತೇನಿ. ಖಾತ್ರಿಲೆ ತರತೇನಿ. " ಆವೇಶದಲ್ಲಿ ವಿಜಯಳ ಮುಖ ಕೆಂಪಾಗಿತ್ತು. ಧೈರ್ಯ ತುಂಬುವಂತೆ ಅಶೋಕ ಅವಳ ಕೈಯನ್ನು ಮೃದುವಾಗಿ ಹಿಚು ಕಿದ.

*   *   *

ಸೆರಗು ಸರಿಪಡಿಸಿಕೊಳ್ಳುತ್ತ. ಪರ್ಸ್ ಎದೆಗೆ ಅವಚಿಕೊಂಡು ವಿಜಿಟರ್ಸ್ ರೂಮಿನಲ್ಲಿ ಕಾಲಿಟ್ಟಳು ವಿಜಯ. ಅಲ್ಲಿ ಕಾಯುತ್ತಿದ್ದ ಜನ ರನ್ನು ಒಂದು ಸಲ ನೋಡಿ, ಬೀಡಿ ಹೊಗೆಯನ್ನು ಉಗುಳುತ್ತ ಸ್ಟೂಲಿನ

ಮೇಲೆ ಕುಳಿತೇ ಇದ್ದ ಸಿಪಾಯಿಯ ಕೈಯಲ್ಲಿ ತನ್ನ ಹೆಸರಿನ ಚೀಟಿಯನ್ನು ಕೊಟ್ಟು ಒಂದು ಮೂಲೆಯಲ್ಲಿ ಕುಳಿತಳು. ಅವನು ಇವಳನ್ನು ತಲೆಯಿಂದ ಕಾಲಿನವರೆಗೂ ಒಂದು ವಿಧವಾಗಿ ದಿಟ್ಟಿಸಿ ನೋಡಿ ಚೀಟಿ ಒಳಗೆ ತೆಗೆದು ಕೊಂಡು ಹೋದ.

ಒಳಗಿನಿಂದ ಯಾರಾರೋ ಹೊರ ಬರುತ್ತಿದ್ದರು. ಮತ್ತೆ ಹೊರಗಿನವರು ಒಳಗೆ ಧಾವಿಸುತ್ತಿದ್ದರು. ಸಮಯ ಸರಿಯುತ್ತಿತ್ತು. ವಿಜಯ ತನ್ನ ಯೋಚನೆಯಲ್ಲಿಯೇ ಮುಳುಗಿದ್ದಳು. ಅಶೋಕನಿಗೆ ಮಂಜುನಾಥಯ್ಯ ರಜ ಕೊಡುವದಂತೂ ಕನಸಿನ ಮಾತು. ಮಕ್ಕಳು ಹಟಮಾಡಿದರೆ ಗಂಗೂ ಒಬ್ಬಳೇ ಹೇಗೆ ಸುಧಾರಿಸುತ್ತಾಳೋ ? ಇಬ್ಬರೂ ಇಲ್ಲದಾಗ ಅಡಿಗೆ ಮನೆಯಲ್ಲಿ ಎಷ್ಟೆಷ್ಟು ಸಾಮಾನು ಕದಿಯುತ್ತಾಳೋ. ಓಹ್ ! ಸಣ್ಣದಾಗಿ ಉಸಿರುಬಿಟ್ಟಳು. ತಲೆ ಭಾರವಾಗಿತ್ತು. ಹೊರಗೆ ಹೋಗಿ ಚಹ ಅಥವಾ ಕಾಫೀ ಕುಡಿದು ಬಂದರೆ ಹೇಗೆ ? ಎಂದು ಯೋಚಿಸುತ್ತಿದ್ದಂತೆ ಸಿಪಾಯಿ ಅವಳನ್ನು ಒಳಗೆ ಕರೆದ. ಅವಳೇ ಕೊನೆಯ ವಿಜಿಟರ್.

"ನಮಸ್ಕಾರ ಸರ್. ನಾನು ವಿಜಯಾ ದೇಸಾಯಿ" ಕೈಮುಗಿದು ನಿಂತ ತೆಳು ದೇಹದ, ನೀಳ ಜಡೆಯ ಸುಂದರಿಯನ್ನು ನೋಡಿ ಮಿ| ರಂಗಸ್ವಾಮಿ ಪೆನ್ನು ಮುಚ್ಚಿ ಫೈಲು ಅತ್ತ ಸರಿಸಿದರು.

"ಬನ್ನಿ, ಬನ್ನಿ ಕೂತ್ಕೊಳ್ಳಿ. ತುಂಬ ಹೊತ್ತಾಯಿತೇನೋ ನೀವು ಬಂದು. ಕೆಲಸ ಬಹಳವಿತ್ತು ನೋಡಿ, ವಿಜಿಟರ್ಸ್ ಬಂದೂ ಬಂದೂ ತಲೆ ತಿಂದುಬಿಟ್ಟರು. ಕೆಲಸ-ಕೆಲಸ-ಕಾಗದ, ಫೈಲು, ಆರ್ಡರು, ವಗೈರಾ ವಗೈರಿ ಅಬ್ಬಬ್ಬ ತಲೆ ಚಿಟ್ಟುಹಿಡಿದು ಹೋಗಿದೆ."

ಪೆಚ್ಚು ನಗೆ ನಗುತ್ತ ವಿಜಯ "ಸರ್, ನಾನೂ ಅದಕ್ಕೇ ಬಂದದ್ದು. ನನಗೆ ವರ್ಗ. . ."

ಅವರು ಅರ್ಧಕ್ಕೇ ತಡೆದರು "ಓs ಐಸೀ. ಅಂದ ಹಾಗೆ ಈಗ ಮೊದಲು ಸ್ವಲ್ಪ ಕಾಫೀ ತಗೊಳ್ಳೋಣ." ಸಿಪಾಯಿ ಇಬ್ಬರಿಗೂ ಕಾಫಿ ತಂದಿಟ್ಟ.

ಎಷ್ಟು ಒಳ್ಳೆಯವರು ಈ ಸಾಹೇಬರು ! ದೊಡ್ಡ ಅಧಿಕಾರದಲ್ಲಿದ್ದರೂ ಸೊಕ್ಕಿನವರಲ್ಲ. ತನ್ನ ಕೆಲಸವಾಗುವದು ಕಷ್ಟವಲ್ಲ ಎನ್ನಿಸಿ ಕಾಫಿ

ಅಮೃತದಂತೆ ಗಂಟಲಲ್ಲಿಳಿಯಿತು. ಮುಗುಳ್ನಗೆ ಮುಖದ ತುಂಬ ಹರಡಿತು.

ಕಾಫಿ ಕಪ್ ಕೆಳಗಿಟ್ಟ ರಂಗಸ್ವಾಮಿ ತಟ್ಟನೆ ಸಿಪಾಯಿಯ ಕಡೆಗೆ ಹೊರಳಿದರು "ಜೀಪ್ ಬಂತೇನು ನೋಡೋ. ಈಗಲೇ ಕೆಂಚನಹಳ್ಳೀಗೆ ಹೋಗಬೇಕು" ಎಂದು ಅವನನ್ನು ಕಳುಹಿಸಿ, "ನೋಡಿ ಮಿಸ್ ದೇಸಾಯಿ. . ."

"ಕ್ಷಮಿಸಿ ಸರ್. ನಾನು ಮಿಸೆಸ್ ವಿಜಯಾ ಅಶೋಕದೇಸಾಯಿ."

"ಓಃ ಹಾಗೇನು ? ನೀವು ಮದುವೆಯಾದವರ ಹಾಗೆ ಕಾಣೋದೇ ಇಲ್ಲ. ಇನ್ನೂ ಕಾಲೇಜು ಹುಡುಗಿಯ ಹಾಗೇ ಕಾಣ್ತೀರಿ." ವಿಜಯಳ ಕೆನ್ನೆ ಕೆಂಪಾಗಿ, ಕೈ ಮಂಗಳಸೂತ್ರ ಮುಟ್ಟಿತು.

"ಬನ್ನಿ ವಿಜಯಾಃ ಈಗ ಸದ್ಯ ನಾನು ತುಂಬಾ ಅವಸರದಲ್ಲಿದ್ದೇನೆ. ಒಂದು ಹಳ್ಳಿಗೆ ಇನ್ಸ್‌ಪೆಕ್ಷನ್‌ಗೆ ಹೋಗಬೇಕು. ಬಹಳ ಅರ್ಜಂಟು. ಇವತ್ತು ಹೋಗಲೇಬೇಕು. ನಿಮ್ಮ ಆಕ್ಷೇಪಣೆ ಇಲ್ಲದಿದ್ದರೆ ನನ್ನ ಜೊತೆ ಜೀಪಿನಲ್ಲಿ ಬಂದ್ಬಿಡಿ. ಅಲ್ಲೇ ನಿಮ್ಮ ಕೇಸು ಏನೂಂತ ಕೇಳ್ಕೊಳ್ತೀನಿ. ಸಾಧ್ಯವಿದ್ದರೆ ನಿಮ್ಮ ಕೆಲಸ ಮಾಡಿ ಕೊಟ್ಟೇಬಿಡ್ತೀನಿ. ನಾಳೆಯೇ ನೀವು ತಿರುಗಿ ಊರಿಗೆ ಹೋಗಬಹುದು."

ವಿಜಯಳಿಗೂ ಅದು ಸರಿ ಅನ್ನಿಸಿತು. ಸಾಹೇಬರನ್ನು ಹಿಂಬಾಲಿಸಿ ಜೀಪನ್ನೇರಿದಳು. ಹಿಂದೆ ಕುಳಿತ ಜವಾನನ ತುಟಿಗಳ ವ್ಯಂಗ್ಯನಗೆ ಅವಳ ಕಣ್ಣಿಗೆ ಬೀಳುವದು ಸಾಧ್ಯವಿರಲಿಲ್ಲ. ದಾರಿಯಲ್ಲಿ ಅವಳ ತೊಂದರೆ ಏನು ಅಂತ ರಂಗಸ್ವಾಮಿ ಕೇಳಿ ತಿಳಿದುಕೊಂಡರು.

"ಓಃ ಇಷ್ಟೇನೇ ? ಇದೇನು ಮಹಾ ಕೆಲಸ. ವರ್ಗ ರದ್ದು ಮಾಡೋದು ಅಲ್ಲವೇ ? ಮಾಡೋಣವಂತೆ. ಸರಕಾರದಲ್ಲಿ ಕಾನೂನೇ ಇದೆ. ಗಂಡ ಹೆಂಡತಿ ನೌಕರಿ ಮಾಡ್ತಾ ಇದ್ದರೆ ಒಂದೇ ಊರಿನಲ್ಲಿ ಇರುವ ಅನುಕೂಲ ಮಾಡಿಕೊಡಬೇಕು ಅಂತ. ಅದರಲ್ಲೂ ಒಳ್ಳೇ ಶಿಕ್ಷಕಿ ನೀವು. ನಿಮ್ಮಂತೋರಿಗೆ ತೊಂದರೆಯಾಗೋದನ್ನ ತಪ್ಪಿಸಲೇಬೇಕು."

"ಏನೋ ನನ್ನ ಕೈಲಾದ ಮಟ್ಟಿಗೆ ಶ್ರದ್ಧೆಯಿಂದ ಕಲಸ್ತೀನಿ. ಅದು ನಮ್ಮ ಕರ್ತವ್ಯ. ನೀವು ಭಾಳ ಹೊಗಳಲಿಕ್ಕೆ ಹತ್ತೀರಿ. ಇದು ನಿಮ್ಮ ದೊಡ್ಡ ಗುಣಾ ತೋರಸ್ತದ." ನಾಚಿಕೆಯಿಂದ ಹೇಳುತ್ತ

ವಿಜಯ ಗಾಳಿಗೆ ಪಟಪಟ ಹಾರುತ್ತಿದ್ದ ತನ್ನ ಸೆರಗು ಸರಿಮಾಡಿಕೊಂಡಳು. ರಂಗಸ್ವಾಮಿಯ ತೋಳು ತನ್ನ ಮೈಗೆ ತಾಕುತ್ತಿದ್ದರೂ ಅವಳಿಗೆ ಅರಿವಾಗ ಲಿಲ್ಲ.

ಊರ ಹೊರಗಿನ ಗೆಸ್ಟ್‌ಹೌಸಿನಲ್ಲಿ ಅವಳನ್ನು ಇಳಿಸಿ ಹೋದ ರಂಗಸ್ವಾಮಿ. ಇನ್ಸ್‌ಪೆಕ್ಷನ್ ಮುಗಿಸಿ ಬಂದೊಡನೆ ಅವರೊಡನೆ ಸೊಗ ಸಾದ ಭೋಜನವಾಯಿತು.

" ಬಂದ ಕೆಲಸವಾಯಿತು ವಿಜಯಾ, ಸ್ವಲ್ಪ ವಿಶ್ರಾಂತಿ ತಕ್ಕೊಂಡು ಬೆಂಗಳೂರಿಗೆ ಹೊರಡೋಣ. ಯಾಕೋ ತುಂಬಾ ಆಯಾಸ " ಎಂದು ಅವರು ಆಕಳಿಸಿದಾಗ ವಿಜಯ ಕನಿಕರದಿಂದ ಅವರತ್ತ ನೋಡಿ " ಆಗಲಿ ಸರ್, ಹಾಂಗs ಮಾಡ್ರಿ. ನೀವು ಇಲ್ಲೇ ಮಲಕೊಳ್ರಿ. ನಾನು ವರಾಂಡಾ ದಾಗ ಕೂತಿರ್ತೀನಿ, " ಎಂದು ಅತ್ತ ತಿರುಗುತ್ತಿದ್ದಾಗ ಬೆಡ್‌ರೂಮಿನ ಬಾಗಿಲು ಮುಚ್ಚಿ ಚಿಲಕ ಹಾಕಿದ ರಂಗಸ್ವಾಮಿ ಅವಳ ಎದುರಿಗೆ ನಿಂತಿ ದ್ದರು.

* * *

" ಯಾಕ? ವಿಜೂs ಹಿಂಗ್ಯಾಕ ಆಗೀದಿ ? ಜ್ವರಾ ಬಂದಾವೇನು ? ಮುಖಾ ಬತ್ತಿಹೋಗೇದ " ಸಂಜೆ ಮನೆಗೆ ಬರುತ್ತಿದ್ದಂತೆ ಶಾಲಿನಿ ಗಾಬರಿ ಯಿಂದ ಸ್ವಾಗತಿಸಿದಳು.

ಕುರ್ಚಿಯ ಮೇಲೆ ಕುಸಿದ ವಿಜಯ ಮುಖ ಮುಚ್ಚಿ ಬಿಕ್ಕಿದಳು. ಶಾಲಿನಿಗೆ ಏನೂ ತೋಚಲಿಲ್ಲ. ಹತ್ತಿರ ಬಂದು ಅವಳ ಹಣೆ ಮುಟ್ಟಿ ನೋಡಿ ಜ್ವರವಿಲ್ಲವೆಂದು ತಿಳಿದ ಮೇಲೆ ಮತ್ತೆ ಮತ್ತೆ ಪ್ರಶ್ನೆ ಹಾಕದೆ ಒಳಗೆ ಹೋಗಿ ಚಹ ತಂದು ಕೊಟ್ಟಳು. ಚಹ ಕುಡಿದು ಸ್ವಲ್ಪ ಸುಧಾರಿಸಿ ಕೊಂಡ ಮೇಲೆ ಎಲ್ಲ ಸಂಗತಿಯನ್ನು ತಾನೇ ಹೇಳುತ್ತಾಳೆ ಎನ್ನುವ ಭರ ವಸೆಯಿತ್ತು ಶಾಲಿನಿಗೆ.

" ವಿಜೂs ನೀ ಹೋದ ಕೆಲಸ ಆಗಲಿಲ್ಲೇನು ? ಅದನ್ನs ಮನಸ್ಸಿಗೆ ಹಚ್ಚಿಕೊಂಡೀ ಏನು ? "

" ಆಯ್ತು ಶಾಲೂ, ನನ್ನ ವರ್ಗ ರದ್ದಾಯ್ತು. "

" ಮತ್ತ ಯಾಕ ಅಳತೀ ? ನನಗಂತೂ ತಿಳೀವೊಲ್ಲದಾಗೇದ. ಕೆಲಸ ಆದದಕ್ಕ ಸಂತೋಷ ಪಡಬೇಕಲ್ಲಾ. "

“ ಆಂ ಹೌದು. ಸಂತೋಷಪಡಬೇಕು. ಆದರೆ ನನಗೆ ಅಳು ಬರಲಿಕ್ಕೆ ಹತ್ತೇದ. ಯಾಕಂದರೆ—ಅಂದರ ಒಂದು ಎಕ್ಸಿಡೆಂಟ ಆತು. . . ”

‘‘ ಏನೋ ನೀ ಹೊಗೂ ಬಸ್ಸಿಗೆ ಎಕ್ಸಿಡೆಂಟ ಆಯ್ತs ಯಾರರೆ ಸತ್ತರೇನು ? ನಿನಗ ಪೆಟ್ಟಾತೇನು ?’’

‘‘ ಇಲ್ಲಾ ನನಗೆ ಪೆಟ್ಟ ಆಗಿಲ್ಲಾ. ಆದರೆ ಒಂದು ಕೂಸು ಸತ್ತಿತು. ಎಷ್ಟು ಛಂದ ಇತ್ತು ಅಂತೀ. ಸಣ್ಣ ಕೂಸು. ಸ್ವಲ್ಪ ಹೊತ್ತಿನ ಹಿಂದೆ ನಕ್ಕೋತ ಇದ್ದ ಕೂಸು ನನ್ನ ಕಣ್ಣಮುಂದs ಸತ್ತಹೋತು ಅಂದಾಗ ನಂಬಲಿಕ್ಕೇ ಆಗಲಿಲ್ಲಾ. ಈ ಜೀವನ ಎಷ್ಟ ನಶ್ವರ ಅದ ಅನ್ನಿಸ್ತು. ಇನ್ನೊಂದ ಘಳಿಗ್ಗೆ ಏನಾಗ್ತದ ಅನ್ನೂದು ಗೊತ್ತs ಇರೂದಿಲ್ಲಾ. ಆದರೂ ಬದುಕಲಿಕ್ಕೆ ಎಷ್ಟು ಬಡದಾಡತೀವಿ. ಆ ಕೂಸಿನ ತಾಯಿ ಅಳೂದು ನೋಡಿ ಹೊಟ್ಯಾಗ ಸಂಕಟ ಆತು. ’’ ವಿಜಯ ಮತ್ತೆ ಭೋರೆಂದು ಅತ್ತೇಬಿಟ್ಟಳು.

ವಿಜಯಳ ಬೆನ್ನು ನೇವರಿಸುತ್ತ ಶಾಲಿನಿ “ ಇರಲಿ ಬಿಡೂ ವಿಜೂ ನೀ ಭಾಳ ಮೆತ್ತನ್ನ ಮನಸ್ಸಿನಾಕಿ. ಜೀವನ ಅಂದ ಮ್ಯಾಲೆ ಸಾವು–ನೋವು, ಸುಖಾ–ದುಃಖಾ ಎಲ್ಲಾ ಇರೂದ. ಬೆಂಗಳೂರಾಗಂತೂ ಇಂಥಾ ಎಕ್ಸಿಡೆಂಟು ದಿನಾ ಆಗತಿರತಾವ. ಹೊರಗ ಹೋದವರು ತಿರುಗಿ ಮನೀಗೆ ಬರತಾರ ಅನ್ನೂ ಭರೋಸs ಇರೂದಿಲ್ಲಾ. ಆದರೂ ಇಲ್ಲೀ ಮಂದಿ ಹೊರಗ ಹೋಗೂದು ಬಿಡೂದಿಲ್ಲಾ. ಮತ್ತ ಹೊರಗ ಹೋದವರು ಎಲ್ಲಾರೂ ಸಾಯೂದಿಲ್ಲಾ. ಇಲ್ಲೀ ಸತ್ತರ ಅಲ್ಲೀ ಹುಟ್ಟಿರತಾರ. ಇಲ್ಲೀ ಕಳಕೊಂಡವರಿಗೆ ಅಲ್ಲೆ ಬ್ಯಾರೆ ಏನೋ ಸಿಕ್ಕಿರತದ. ಹಿಂಗs ಹೋದಲ್ಲೋ ಜೀವನ ನಡದಿರೂದು. ಸುಮ್ಮನಾಗು ಅಳಬ್ಯಾಡಾ. ಅವರೂ ಬಂದರ ಕಾಣ್ತದ. ಏಳು ಮುಖಾ ತೊಳಕೋ ’’ ವಿಜಯಳ ಕೈ ಹಿಡಿದು ಎಬ್ಬಿಸಿದಳು.

‘‘ ಶಾಲೂ ನಾ ನಾಳೆ ಮುಂಜಾನೆ ಮೊದಲನೇ ಬಸ್ಸಿಗೆ ಊರಿಗೆ ಹೋಗತೀನಿ ’’ ಎನ್ನುತ್ತ ಒಳಗೆ ನಡೆದ ವಿಜಯಳಿಗೆ ಶಾಲಿನಿ ಚೇಷ್ಟೆ ಮಾಡಿದಳು.

" ಹೌದು ನೋಡು ನೀನು ನಿನ್ನ ಗಂಡನ್ನ ಬಿಟ್ಟು ಬಂದು ಮೂವತ್ತಾರು ತಾಸಾಯ್ತು. "

* * *

ಬಸ್ಸಿನ ಕಿಟಕಿಯಲ್ಲಿ ಹೆಂಡತಿಯನ್ನು ಕಂಡು ದೂರದಿಂದಲೇ ಅಶೋಕ ಕೈ ಬೀಸಿ ನಕ್ಕ.

ಎಷ್ಟು ದೂರದಿಂದ ತನ್ನ ಗುರುತು ಹಿಡಿದರಲ್ಲ ಇವರು, ತಾನಿನ್ನೂ ಮೊದಲಿನಾಂಗs ಕಾಣಸ್ತೀನೇನು ? ಏನೇನೂ ಬದಲಾಗಿಲ್ಲ ! ಖರೇನ ? ತನ್ನ ಮೈ, ಕೈ, ಕಾಲುಗಳನ್ನು ನೋಡಿಕೊಂಡಳು ವಿಜಯ. ಸಪ್ಪಗಾದ ಮುಖ ಮಾತ್ರ ಅವಳಿಗೆ ಕಾಣುವಂತಿರಲಿಲ್ಲ. ಇಳಿಯುತ್ತಿದ್ದ ವಿಜಯಳ ಬಗಲಿನ ಏರ್‌ಬ್ಯಾಗಿಗೆ ಕೈಚಾಚಿದಾಗ ಅಶೋಕನ ಕೈ ಅವಳ ಬತ್ತಲೆ ಬೆನ್ನಿಗೆ ತಾಕಿತು. ಅಬ್ಬ ! ತನ್ನ ಮೈ ಜುಂ ಅಂದೀತು. ನಾಚಿಕೆ ತುಂಬಿ ಬಂದಿತು. ಎಲ್ಲಾ ಮೊದಲಿನಾಂಗs ಆಗ್ತದ. ಏನೇನೂ ಫರಕ ಇಲ್ಲಾ. ಆದರೂ ಗಂಡನನ್ನು ನೇರವಾಗಿ ನೋಡಲಿಲ್ಲ ವಿಜಯ. ಅವನ ದೃಷ್ಟಿ ತಪ್ಪಿಸಿ ಅತ್ತಿತ್ತ ನೋಡುತ್ತಿದ್ದಳು. ಅವಳ ಈ ಪರಿ ಅಶೋಕನಿಗೆ ಹೊಸದು. ಏನೋ ಸಂಶಯ ಮೂಡಿ ಬಗ್ಗಿ ಅವಳ ಕಿವಿಯಲ್ಲಿ ಪಿಸುಗುಟ್ಟಿದ.

" ಹೋದ ಕೆಲಸ ಆಗಲಿಲ್ಲೇನು ವಿಜೂs ? " ದನಿಯಲ್ಲಿ ನಿರಾಶೆ ಇಣುಕುತ್ತಿತ್ತು.

" ಆಯ್ತಲ್ಲ. ವರ್ಗ ರದ್ದಾದ ಆರ್ಡರ್ ತಂದೇನಿ " ಈಗಲೂ ವಿಜಯ ಗಂಡನತ್ತ ನೋಡಲಿಲ್ಲ.

' ಹುರ್ರಾ ' ಎಂದು ಅಶೋಕ ಕೇಕೆ ಹಾಕಿ ನಕ್ಕ ಸುತ್ತಮುತ್ತ ಇದ್ದ ಜನರನ್ನು ಲೆಕ್ಕಿಸದೆ, ಬಯಸಿದ ವಸ್ತು ಕೈಗೆ ಸಿಕ್ಕೊಡನೆ ಹಿಗ್ಗಿ ಕುಣಿಯುವ ಮಗುವಿನಂತೆ ಕಾಣುತ್ತಿದ್ದ ಗಂಡನನ್ನು ವಿಜಯ ಮೊದಲ ಬಾರಿ ದಿಟ್ಟಿಸಿ ನೋಡಿದಳು. ಅವನು ಕಣ್ಣು ಮಿಟುಕಿಸಿದ ಛೀ ! ಮುಗ್ಧ ಮಗುವಿನಂಥ ಗಂಡ. ಸುಚೀ ಸಂಸ್ಕಾರ ಜೊತೆಗೆ ಇವನೂ ಒಂದು ಮಗು. ತನ್ನನ್ನು ಇಷ್ಟೊಂದು ಪ್ರೀತಿಸುವ, ಬಿಟ್ಟು ಇರಲೂ ಇಷ್ಟಪಡದ ಗಂಡನನ್ನು, ಪುಟ್ಟ ಮಕ್ಕಳನ್ನು ಮರೆತು ನಿನ್ನೆ ರಾತ್ರಿ ಎಲ್ಲಾ ಸಾವನ್ನೇ ಬಯಸಿದ್ದಳಲ್ಲ ತಾನು. ಇನ್ನು ಊರಿಗೆ ಹೋಗಲೇಬಾರದು. ಗಂಡಗೆ ಮುಖ ತೋರಿಸಲೇಬಾರದು. ಇಲ್ಲಿಯೇ ಸತ್ತು ಹೋಗಬೇಕು ಎನ್ನುವ ಯೋಚನೆ

ತುಂಬಾ ಕಾಡಿತ್ತು. ಆದರೆ ಸಾಯಲು ಧೈರ್ಯ ಮಾತ್ರ ಬರಲಿಲ್ಲ. ಎಂಥ ಹೇಡಿ ತಾನು ಎಂದು ತನ್ನ ಬಗ್ಗೆಯೇ ಜುಗುಪ್ಸೆ ಪಟ್ಟುಕೊಂಡಿದ್ದಳು. ಬಸ್ಸಿಗೆ ಹತ್ತಿದ ಮೇಲೂ ನಿಜವಾಗಿಯೂ ಎಕ್ಸಿಡೆಂಟ ಆಗಿ ತಾನು ಸಾಯ ಬಾರದೇ ಎಂದು ಆಸೆಪಟ್ಟಿದ್ದಳು. ಊಹೂಂ ; ಸಾವು ಬರಲಿಲ್ಲ. ತಾನು ಸತ್ತುಹೋಗಿದ್ದರೆ ಈ ಮೂವರ ಪಾಲಿಗೆ ಬದುಕು ಹೇಗಿರುತಿತ್ತು ? ಅಬ್ಬಾ ! ಊಹಿಸಲೂ ಸಾಧ್ಯವಿಲ್ಲ. ಆದರೂ ಗಂಡನ ಜೊತೆಗೆ ಹೆಜ್ಜೆ ಹಾಕದೆ ವಿಜಯ ಅತ್ತಿತ್ತ ನೋಡುತ್ತಿದ್ದಳು.

" ವಿಜೂs ನಿನ್ನೆ ರಾತ್ರೆಲ್ಲಾ ನನಗ ನಿದ್ದೀನs ಬರಲಿಲ್ಲಾ ವಿರಹ ತಾಪದಿಂದ. ಒಂದು ರಾತ್ರಿ ನೀ ಇರದಿದ್ದರ ನನಗ ಭಣಭಣಾ ಅನಸತದ. ಇನ್ನ ವರ್ಗ ರದ್ದು ಆಗಿರದಿದ್ದರ ನಾನು ಹುಚ್ಚ ಆಗಿಬಿಡತಿದ್ದೆ. ಹೌದಲ್ಲೋ ? ಅಲ್ಲs ಏ ಹುಡುಗೀ ನೀ ನಿದ್ದೀ ಮಾಡಿದಿ ಏನು ? ಆಂ ಖರೇ ಹೇಳು ಮತ್ತ ?

" ಇಲ್ರೀ ನನಗೂ ನಿದ್ದಿ ಬರಲಿಲ್ಲಾ ". ಎಂದಳು ವಿಜಯ ಅತ್ತಿತ್ತ ಹುಡುಕು ನೋಟ ಬೀರುತ್ತ.

" ಅಲ್ಲs ನಾ ಏನೇನೋ ಮಾತಾಡೇ ಮಾತಾಡ್ತೀನಿ. ನೀ 'ಆಂ', 'ಊಂ' ಅಂತೀದಿ. ಯಾಕ ? ಏನರೆ ಕಳಕೊಂಡೀ ಏನು ? ಏನು ಹಡುಕತೀ ?

" ಹಾಂ. ನಾ ಎನೋ ಕಳಕೊಂಡೀನಿ ಅನಸತಿತ್ತು. ಏನು ಅಂತ ನೆನಪು ಆಗವೊಲ್ಲದಾಗಿತ್ತು. ಈಗ ನೆನಪಾತು ನೋಡ್ರಿ. ನಂದು ಬಿಳೀ ಎಂಬ್ರಾಯ್ಡರಿ ಕರಚೀಫು ಇತ್ತಲ್ಲ. ಅದನ್ನs ಬೆಂಗಳೂರಾಗ ಕಳಕೊಂ ಡಾಂಗ ಅನಸ್ತದ, "

" ಅಯ್ಯ s ಹುಚ್ಚೀ ಕರಚೀಫs, ಹ್ಹ ಹ್ಹ ಹ್ಹ. ಹೋದರ ಹೋಗಲಿ ಬಿಡು. ಅಂಥಾ ಡಜನ್ ಕರಚೀಫ ಕೊಡಸತೇನಿ ನಿನಗ. ಮೊದಲ ಮನೀಗೆ ನಡೀ. ಸುಚೀ ಸುಷ್ಮಾ ಒಂಟಗಾಲಿನ ಮ್ಯಾಲೆ ನಿಂತಾರ 'ಅವ್ವ ಯಾವಾಗ ಬರತಾಳ' ಅಂತ. ನಡೀ, " ಅವಳ ಭುಜದ ಸುತ್ತ ಕೈಹಾಕಿ ಮನೆಯತ್ತ ನಡೆಸಿದ.

ಯಾರ ಮುಂದೂ ಹೇಳಬಾರದು

ಆಫೀಸಿನಿಂದ ಮನೆಗೆ ಬಂದ ಶಿವಮೂರ್ತಿ ನೇರವಾಗಿ ಅಡಿಗೆ ಮನೆಯ ಬಾಗಿಲಿಗೆ ಬಂದು ನಿಂತದ್ದು ಗೊತ್ತಾದರೂ ಶಕುಂತಲ ಹೊರಳಿ ನೋಡಲಿಲ್ಲ.

" ಶಕೂ '' ಗಂಡನ ಆತುರದ ಕರೆಗೆ ಕೈಯಲ್ಲಿದ್ದ ಪಾತ್ರೆಯನ್ನು ಕಟ್ಟೆಯ ಮೇಲೆಯೇ ಇಟ್ಟು ನಿಧಾನವಾಗಿ ಅವನತ್ತ ತಿರುಗಿ '' ಏನು '' ಎನ್ನುವಂತೆ ಹುಬ್ಬು ಏರಿಸಿದಳು. ತೆಳುವಾದ ಹುಬ್ಬು ಏರಿದಾಗ ಇನ್ನೂ ಚೆನ್ನಾಗಿ ಕಂಡಿತು ಶಿವಮೂರ್ತಿಗೆ. ತನ್ನತ್ತ ನೋಡುತ್ತ ಹೇಳಬೇಕಾದು ದನ್ನೇ ಮರೆತು ನಿಂತ ಗಂಡನನ್ನು ನೋಡಿ ಏರಿದ ಹುಬ್ಬು ಕೆಳಗಿಳಿಸಿ ಗಂಟಿಕ್ಕಿ ಸಿದಳು. ಕೂಡಲೇ ಮೂರ್ತಿಯೂ ಎಚ್ಚೆತ್ತ.

" ಶಕೂ ಇವತ್ತು ಯಾರು ಭಟ್ಟಿ ಆಗಿದ್ದರು ಗೊತ್ತದ ಏನು ? '' ಮಾತಿಗೆ ಪೀಠಿಕೆ ಹಾಕಿದ.

" ನಿಮಗೆ ಯಾರ ಭೆಟ್ಟಿ ಆದರು ಅನ್ನೂದು ನನಗ ಹ್ಯಾಂಗ ಗೊತ್ತಾಗಬೇಕು ? ನಾ ಏನು ಅಂತ ಜ್ಞಾನಿ ಏನು ? '' ಸಿಡುಕುತ್ತ ಮತ್ತೆ ಚಹ ಸೋಸಲು ತಿರುಗಿದಳು.

ಹೆಂಡತಿಯ ಬೆನ್ನ ಮೇಲಿಂದ ತೊಡೆಯವರೆಗೆ ತೂಗಾಡುವ ಜಡೆ ಯನ್ನು ಹಿಡಿದು ಹತ್ತಿರ ಎಳೆದುಕೊಳ್ಳಬೇಕೆನ್ನಿಸಿದರೂ ಶೂಸು ಕಾಲಲ್ಲಿ ಅಡಿಗೆಮನೆಗೆ ಕಾಲಿಡಬಾರದೆನ್ನುವ ಅವಳ ಆಜ್ಞೆಯನ್ನು ನೆನಪಿಸಿಕೊಂಡು ಸುಮ್ಮನಾದ.

" ಇವತ್ತು ಒಂದು ಸುದ್ದೀ ಹೇಳತೇನಿ. ಅದನ್ನ ಕೇಳಿ ನಿನಗೆ ಸಂತೋಷ ಆಗ್ತದ. ಭಾಳ ಸಂತೋಷ ಪಡ್ತೀ ಅನ್ನೂದು ನನಗ ಗೊತ್ತದ. ನನಗ ಏನರೆ ಬಹುಮಾನಾ ಕೊಡ್ತೀ ಹೇಳು ? ಏನ ಕೊಡ್ತೀ ? ಎಂದ.

ಮಗುವಿನಂತೆ " ಏನು ಕೊಡುತ್ತೀ " ಎಂದು ಕೇಳುತ್ತಿದ್ದ ಗಂಡ ನನ್ನು ನೋಡಿ ಮೋಜೆನಿಸಿ ಶಕುಂತಲ ನಾಲಿಗೆ ತೆರೆದು ಅಣಕಿಸಿದಳು.

ತಾನೂ ಸಣ್ಣ ಹುಡುಗಿಯ ಹಾಗೆ. "ಉಹುಂ" ಎಂದು ಗೋಣು ಅಲ್ಲಾಡಿಸಿ ತುಟಿ ಮುಂದೆ ಚಾಚಿ ಬೆರಳಿನಿಂದ ಕೆನ್ನೆ ತಟ್ಟುತ್ತ ತನಗೇನು ಬೇಕು ಎನ್ನುವುದನ್ನು ಮೂರ್ತಿ ತೋರಿಸಿದ.

"ಮೊದಲ ಸುದ್ದೀ ಏನದು ಹೇಳ್ರಿ. ಆಮ್ಯಾಲೆ ನೋಡೂಣಂತ."

"ನೋಡೂಣು ಅಂತ ಅಂದರ ನಾ ಕೇಳಾಂವ ಅಲ್ಲಾ. ನಾ ಕೇಳಿದ್ದು ಇಲ್ಲಾ ಅನಬಾರದು."

"ಹೇಳರೆ ಹೇಳ್ರೀ. ಹೇಳ್ರಿ ಅಂದರ ಎಷ್ಟ ವ್ಯಾಳ್ಯೆ ಕಳೀತೀರಿ."

"ನಿಮ್ಮ ವಾಸಂತಿ ಅಕ್ಕನ ಗಂಡ ಭೆಟ್ಟಿ ಆಗಿದ್ದರು."

"ಆಂ ವಿಶ್ವನಾಥ ಮಾಮಾ ಯಾವಾಗ ಬಂದಾರ ಈ ಊರಿಗೆ? ಅಕ್ಕನೂ ಬಂದಾಳೇನು? ಮನೀಗೆ ಯಾಕ ಕರಕೊಂಡು ಬರಲಿಲ್ಲಾ? ಬರ್ರಿ ಅಂತ ಕರದ್ಯರೋ ಇಲ್ಲೋ?" ಹತ್ತಿರ ಬಂದ ಶಕೂನನ್ನು ಬಿಡದೆ ತನ್ನ ಕಡೆಗೆ ಎಳೆದುಕೊಂಡು ಬಹುಮಾನ ಗಿಟ್ಟಿಸಿದ ಮೇಲೆಯೇ ಕೋಟು ಕಳಚುತ್ತ ರೂಮಿನತ್ತ ನಡೆದ ಮೂರ್ತಿ. ಆವಳು ಪ್ರಶ್ನೆಗಳಿಗೆ ಉತ್ತರ ತಿಳಿಯಲು ತನ್ನ ಹಿಂದೆ ಬಂದೇ ಬರುತ್ತಾಳೆನ್ನುವುದು ಅವನಿಗೆ ಗೊತ್ತು. ಅಲ್ಲದೆ ಮುಂದಿನ ಮಾತನ್ನು ಸ್ವಲ್ಪ ನಿಧಾನವಾಗಿಯೇ ಅವಳ ಮನಸ್ಸು ನೋಯದಂತೆಯೇ ಹೇಳಬೇಕಾಗಿತ್ತು.

"ನಿನ್ನ ಮಾಮಾಗೆ ದೊಡ್ಡ ಕೆಲಸಾ ಕೊಟ್ಟು, ಅಂದರ ಚೀಫ ಅಕೌಂಟೆಂಟ ಅಂತ ಬಡ್ತೀ ಕೊಟ್ಟು ಈ ಊರಿಗೆ ವರ್ಗ ಮಾಡಿದರಂತ. ಹದಿನೈದಿಪ್ಪತ್ತು ದಿವಸ ಆದೂವಂತ ಇಲ್ಲಿಗೆ ಬಂದು."

"ಮನೀ ಇನ್ನೂ ಸಿಕ್ಕಿರಲಿಕ್ಕಿಲ್ಲಾ. ಒಬ್ಬರ ಬಂದು ಹೋಟೆಲ್ಲಿನ್ಯಾಗ ಇಳದಾರಂತೇನು?"

"ಉಹುಂ. ನಿಮ್ಮಕ್ಕನೂ ಬಂದಾರಂತ. ಅವರಿಗೆ ಮನೀ ಹುಡುಕೂ ತೊಂದರಿನ ಇಲ್ಲಾ. ಕಂಪನೀಯವರು ಕ್ವಾರ್ಟರ್ಸ ಕೊಟ್ಟಾರ. ದೊಡ್ಡ ಕೆಲಸಾ, ಕೆಲಸಕ್ಕ ತಕ್ಕ ಹಾಂಗ ಸೌಕರ್ಯಾನೂ ಇರತಾದ. ಅವರೇನು ನಮ್ಮ ಹಾಂಗ ಕಾರಕೂನರ? ಒಮ್ಮೆ ಮನೀಗೆ ಬರ್ರಿ ಅಂತ ಅಡ್ರೆಸ್ ಕೊಟ್ಟ. "ನೋಡೂಣು ಕೆಲಸ ಭಾಳ ಇರತದ" ಅಂದರು.

"ಮಾಮಾ ಅವರು ಹಾಂಗ ಬಿಡ್ರಿ ಯಾವಾಗಲೂ. ಅವರಿಗೆಲ್ಲಿ ಪುರಸೊತ್ತು ಇರತದ. ನಮ್ಮ ತವರ ಮನೀಗೆ ಸುದ್ದಾ ಬರತಿದ್ದಿಲ್ಲಾ. ನಮ್ಮ ಮದುವೀಗೆ ಕಾರು ತೊಗೊಂಡು ಅಕ್ಕನ್ನ, ಮಕ್ಕಳ್ನ, ಕರಕೊಂಡು ಬಂದು ಅಕ್ಕೀಕಾಳು ಹಾಕಿ ಆಗೆ ಹೋಗಿ ಅಕ್ಕನ್ನ ಜೀವ ನೆನಸತದ. ನೋಡಿ ಭಾಳ ವರ್ಷಾತು" ಧೇನಿಸುತ್ತಿದ್ದ ಶಕುಂತಲ ಎಚ್ಚತ್ತು ಗಂಡ ನಿಗೆ ಚಹ ತರಲು ಓಡಿದಳು.

* * *

ಅಂದು ಅವಳ ಕಾಲು ನೆಲದ ಮೇಲೆಯೇ ಇರಲಿಲ್ಲ. ಮನಸ್ಸಂತೂ ಕಲ್ಪನಾ ಲೋಕದಲ್ಲೇ ಹಾರಾಡುತ್ತಿತ್ತು. ಗಳಿಗೆಗೊಮ್ಮೆ ಕುರುಳು ತಿದ್ದು ವದು, ಕುಂಕುಮ ಸರಿಮಾಡಿಕೊಳ್ಳುವದು, ನೀಳವಾದ ಜಡೆಯನ್ನು ಹಿಂದೆ ಹಾಕಿದರೆ ಚಂದವೋ, ಮುಂದೆ ಹಾಕಬೇಕೋ ಎನ್ನುವ ಗಹನ ವಿಚಾರದಲ್ಲಿ ಮುಳುಗುವದು, ಮೇಲಿಂದ ಮೇಲೆ ಸಿಲ್ಕ ಸೀರೆಯ ನೆರಿಗೆ ತೀಡುವದು, ತಲೆಯಲ್ಲಿಯ ಮಾಲೆ ಮುಟ್ಟಿ ನೋಡಿಕೊಳ್ಳುವದು, ಎಲ್ಲವೂ ನಡದೇ ಇತ್ತು. ತನ್ನ ಸಂಭ್ರಮ ನೋಡಿ ಮೀನಾಕ್ಷಿ, ಮಾಲತಕ್ಕ, ಅಶೋಕಣ್ಣ, ಶಂಬತ್ತೆ, ದೊಡ್ಡಣ್ಣ, ಅವ್ವ, ಒಟ್ಟಿನಲ್ಲಿ ಮನೆಯಲ್ಲಿಯ ಸಮಸ್ತರೂ ತಲೆಗೊಂದು ಮಾಡಿ ತನ್ನನ್ನು ಕಾಡಿಸುತ್ತಿದ್ದರು. ಕಡೆಗೆ ಅಪ್ಪ ಕೂಡ ಮೀಸೆಯ ಮರೆಯಲ್ಲಿ ಮುಗುಳು ನಕ್ಕಿದ್ದರು.

ಇವರಿಗೆಲ್ಲಾ ನಗೆಯಾದರೆ ತನಗೆ ಮನಸ್ಸಿನ ತುಂಬಾ ಚಿಂತೆ. ಇವತ್ತು ತನ್ನನ್ನು ನೋಡಲು ಬರುವ ವರ ಮಹಾಶಯ ಹೇಗಿರಬಹುದು? ಕೆಂಪಗೆ, ಎತ್ತರವಾಗಿ ವಾಸಂತಿ ಅಕ್ಕನ ಗಂಡನ ಹಾಗಿದ್ದರೇ ಬಹಳ ಚೆಂದ. ಕಪ್ಪಾಗಿ ಕುಳ್ಳಾಗಿದ್ದರೆ ತನಗೆ ಬೇಡನೇ ಬೇಡ. ಆದರೆ ತಾನು ಹಾಗೆಲ್ಲ ಬೇಡ ಎಂದರೆ ಹೇಗೆ? ಅಪ್ಪ, ದೊಡ್ಡಪ್ಪ ಸುಮ್ಮನಿದ್ದಾರೆಯೇ? ಆ ತುಂಬಿದ ಮನೆಯಲ್ಲಿ ಮದುವೆಯಾಗುವ ಹುಡುಗಿಯರು ಇನ್ನೂ ನಾಲ್ಕು ಜನ ಇದ್ದಾರಲ್ಲ. ಉಹುಂ ವರನಿಗೆ ನೀಳ ಮೂಗು, ಗುಂಗುರು ಕೂದಲು ಇರಬೇಕು. ನೋಡಲು ಸುಂದರನಾಗಿರಬೇಕು, ದೊಡ್ಡ ನೌಕರಿಯೂ ಇರಬೇಕು. ಇಬ್ಬರೂ ಜೋಡಿಯಾಗಿ ಹೊರಟರೆ ಜನ ತಮ್ಮನ್ನೇ ನೋಡುವಂತಿರಬೇಕು. ಪರಿಚಿತರು ಬಂಧು ಬಳಗದವರೆಲ್ಲಾ "ಹೇಳಿ ಮಾಡಿಸಿದ ಜೋಡಿ ನೋಡ್ರಿ ಇದು. ದಂಪತಿಗಳು ಇದ್ದರೆ ಹೀಗಿರಬೇಕು" ಎನ್ನಬೇಕು.

ನಮ್ಮ ವಾಸಂತಿ ಅಕ್ಕ–ವಿಶೂ ಮಾವಾನದು ಅಂಥಾ ಜೋಡಿ. ಅಕ್ಕನ, ಕಣ್ಣು, ಹುಬ್ಬು, ತುಟಿ, ಮೂಗು ಎಲ್ಲ ತಿದ್ದಿ ತೀಡಿದ ಹಾಗೆ. ಮೈ ಬಣ್ಣವಂತೂ ಕೈ ತೊಳೆದು ಮುಟ್ಟಬೇಕು. ಆ ಕಪ್ಪು ಕಣ್ಣುಗಳು ನೋಡಿದ ಕೂಡಲೇ ನೋಡಿ ಹಾಕುತ್ತವೆ. ಇಂಥ ಸುಂದರಿ ನಮ್ಮ ಮನೆಯಲ್ಲಿಯೆ ಕಪ್ಪಾಗಿದ್ದ ದೊಡ್ಡಮ್ಮನಿಗೆ ಮಗಳಾಗಿದ್ದುದು ಆಶ್ಚರ್ಯದ ಸಂಗತಿಯೇ. ಅಕ್ಕನನ್ನು ದಾರಿಯಲ್ಲಿ ನೋಡಿಯೇ ವಿಶೂ ಮಾವಾ ತನ್ನ ಕಕ್ಕನನ್ನು ನಮ್ಮ ಮನೆಗೆ ಹೆಣ್ಣು ಕೇಳಲು ಕಳಿಸಿದ್ದು. ದೊಡ್ಡಮ್ಮನ ಭಾಗ್ಯವನ್ನು ಅಪ್ಪ ಚಿಕ್ಕಮ್ಮ ಎಲ್ಲರೂ ಹೊಗಳಿದ್ದೇ ಹೊಗಳಿದ್ದು. ಸುಶಿಕ್ಷಿತ, ಸುಂದರ, ಕೈತುಂಬ ಸಂಬಳ ತರುವ ಅಳಿಯ ಮನೆ ಬಾಗಿಲಿಗೇ ಹೆಣ್ಣು ಕೇಳಲು ಬಂದಾಗ ತಡವಾಗುವದೇ. ಎಂಟೇ ದಿನಗಳಲ್ಲಿ ಮದುವೆ ನಡೆದು ಹೋಗಿತ್ತು.

“ ಬಾ ಶಕೂ ಅವರೆಲ್ಲಾ ಬಂದು ಕೂತಾರ ” ದೊಡ್ಡಮ್ಮ ಬಂದು ಕರೆಯುವವರೆಗೆ ತನಗೆ ಎಚ್ಚರವೇ ಇರಲಿಲ್ಲ. “ ಏನೇನೋ ಯೋಚನೆಯೊಳಗೆ ಮುಳುಗಿ ಮೊದಲು ಅವರನ್ನು ಕಿಡಿಕಿಯೊಳಗಿನಿಂದ ನೋಡಲೇ ಇಲ್ಲಲ್ಲ ” ಎನ್ನುವ ಕಳವಳದೊಡನೆ, ಮತ್ತೆ ಹೇಗಿದ್ದಾರೋ ಎನ್ನುವ ಕುತೂಹಲಮಿಶ್ರಿತ ಭಯದೊಡನೆ ತಲೆ ತಗ್ಗಿಸಿಕೊಂಡು ಹೊರಗೆ ಹೋಗಿದ್ದಳು. “ ತಂಗೀ ಮಾರೀ ಮ್ಯಾಲ ಎತ್ತವ್ವಾ ” ಎಂದಾಗ ತಲೆ ಎತ್ತಿ ನೋಟವನ್ನು ಅತ್ತಿತ್ತ ಮಿಂಚಿಸಿದ್ದಳು. ಸರಿ, ಅವರ ಗುರುತು ಹತ್ತಿತ್ತು. ಸುಂದರ ಎನ್ನುವ ಸಾಲಿನಲ್ಲಿ ಬರದಿದ್ದರೂ, ನಗುವ ಕಣ್ಣುಗಳಿಂದ ಕಳೆಕಳೆಯಾಗಿದ್ದರು. ಮನಸ್ಸಿನ ಮೂಲೆಯಲ್ಲಿ ನಿರಾಶೆ ಇಣುಕಿತು. ಆದರೆ ಸಂಜೆಯೊಳಗೆ ಹುಡುಗ ಒಪ್ಪಿದ್ದಾನೆ, ಮದುವೆಯ ಮಾತುಕತೆ ಮುಂದುವರಿಯಬೇಕು ಎನ್ನುವ ವಿಷಯ ಮನೆಯವರೆಲ್ಲರಲ್ಲಿ ಚರ್ಚೆಯಾಗಿತ್ತು. ತಾನು ಅವರ ಚೇಷ್ಟೆಯ ವಸ್ತುವಾಗಿ, ಬದುಕು ತುಂಬ ಸುಂದರವಾಗಿ, ಕಂಡು ನಿರಾಶೆ ಬೆನ್ನು ತೋರಿತ್ತು.

ಹೆಂಡತಿಯ ತುಟಿಗಳಲ್ಲಿ ನಗು ಇನ್ನೂ ಅರಳಿ ನಿಂತಾಗ ಮೂರ್ತಿ ಅವಳನ್ನು ಹತ್ತಿರ ಎಳೆದುಕೊಂಡು,

“ ಏ ಹುಡುಗೀ, ಇವತ್ತು ಇಷ್ಟು ಸಂತೋಷ ಆಗೇದಲ್ಲ ನಿನಗ. ಆಗಿನಿಂದ ನೋಡ್ತೀನಿ ಕುಲು ಕುಲು ನಕ್ಕ ನಗತೀ. ಅಕ್ಕ-ಮಾವಾ ಅಂದರ ಎಷ್ಟು ಪ್ರೀತಿ ನಿನಗ. ಅವರ ಧ್ಯಾನದಾಗ ಈ ಬಡಪಾಯಿ ಗಂಡನ

ನೆನಪು ಸುದ್ದಾ ಇಲ್ಲಾ ನಿನಗ'' ಎಂದ. ಗಂಡನ ದನಿಯು ಹಿಂದಿನ ನಿರಾಶೆಯನ್ನು ಹೀರಿಕೊಳ್ಳುವಂತೆ ಅವನ ತುಟಿಗಳನ್ನು ಚುಂಬಿಸಿದಳು. ಶಕೂ. ಮೂರ್ತಿ ಪ್ರಸನ್ನನಾದ.

" ಈ ಭಾನುವಾರ ಅಕ್ಕನ ಮನೀಗೆ ಹೋಗೂಣು ''

'' ಆಗಲಿ. ಮುಂಜಾನೆ ಸಿಹಿ, ಖಾರ, ಹಣ್ಣು, ಹೂವು ತರ್ತೇನಿ. ಸಂಜೀ ಮುಂದ ಹೋಗೂಣು. ''

* * *

ಭಾರವಾದ ಕಾಲುಗಳನ್ನೆತ್ತಿ ಹೆಜ್ಜೆ ಇಡುತ್ತಿದ್ದ ಶಕುಂತಲಳನ್ನು ನೋಡಿ ಕನಿಕರದಿಂದ ಮೂರ್ತಿ " ಆಟೋ ಕರಿಲ್ಯಾ ? '' ಎಂದ.

'' ಬ್ಯಾಡಾ. ಬಸ್ಸಿಗೆ ಹೋದರಾಯ್ತು. ಮತ್ತ್ಯಾಕ ರೊಕ್ಕ ದಂಡ. ಹುಡುಗರು ಇಬ್ಬರ ಏನ್ಮಾಡ್ತಾರೋ ಮನೀಯೊಳಗ ಎಂದ ಶಕುಂತಲ ತನ್ನ ಕಣ್ಣು ಕಾಣದಂತೆ ಮುಖ ಅತ್ತ ತಿರುವಿದಳು.

ಅಕ್ಕನ ಮನೆಗೆ ಒಯ್ದ ಪ್ಲಾಸ್ಟಿಕ್ ಬುಟ್ಟಿ ತುಂಬಿದ್ದು ಹಾಗೆಯೇ ತಿರುಗಿ ಬಂದಿತ್ತು. ಮನೆಗೆ ಬಂದೊಡನೆ ಮೌನವಾಗಿ ಪ್ಲೇಟಿನಲ್ಲಿ ತಿಂಡಿ ಹಾಕಿ ಗಂಡ, ಮಕ್ಕಳನ್ನು ಕರೆದು ಕೊಡುತ್ತಿದ್ದ ಹೆಂಡತಿಯ ಮನಸ್ಸಿನ ಆಂದೋಲನವನ್ನು ಅರಿತಿದ್ದ ಮೂರ್ತಿ, '' ಬಾ, ನೀನೂ ತೊಗೊ '' ಎಂದ. ಹೊಟ್ಟಿ ತುಂಬುವಷ್ಟು ತಿಂದಾದ ಮೇಲೆ " ರಾತ್ರಿ ಅಡಿಗಿ ಮಾಡಬ್ಯಾಡಾ. ಹಾಲು ನಾನು ಕಾಸತೇನಿ. ನೀನು ರೆಸ್ಟ ತೊಗೋ '' ಎಂದ.

ಹಾಸಿಗೆಯಲ್ಲಿ ಮಲಗಿ ಕಾಲು ಚಾಚಿದರೂ ಮನಸ್ಸಿಗೆ ರೆಸ್ಟ ಇರಲಿಲ್ಲ. ಎಷ್ಟೋ ವರ್ಷಗಳ ಮೇಲೆ ಭೆಟ್ಟಿಯಾದರೂ ಅಕ್ಕ ತಮ್ಮನ್ನು ನೋಡಿ ಸಂತೋಷಪಟ್ಟಂತೆ ಕಾಣಲಿಲ್ಲ. ನಗಲಿಲ್ಲ, ಮನಸ್ಸು ಬಿಚ್ಚಿ ಮಾತಾಡ ಲಿಲ್ಲ. ಕೇಳಿದ್ದಕ್ಕೆಲ್ಲ ಹಾಂ, ಹೂಂ ಅಷ್ಟೇ ಇತ್ತು ಅವಳ ಉತ್ತರ. ಮಕ್ಕಳಂತೂ ತನಗೆ ಅಪರಿಚಿತರೆನ್ನುವಷ್ಟು ದೊಡ್ಡವರಾಗಿದ್ದರು. ಇವಳು ನಿಮ್ಮ ಚಿಕ್ಕಮ್ಮ, ಇವರೂ ನಮ್ಮವರೇ, ಇವರ ಮನೆಗೆ ಒಮ್ಮೆ ಹೋಗೋಣ ಎನ್ನುವ ಮಾತು ಅವಳ ಬಾಯಿಂದ ಬರಲಿಲ್ಲ. ತಪ್ಪಿ ಬೇರೆ ಯಾರ ಮನೆಗಾದರೂ ಬಂದಿರುವೆನೇ ಎನಿಸತೊಡಗಿತ್ತು. ತನಗೆ ಆತ್ಮೀ ಯತೆಯಿಲ್ಲ. ಸುಖ-ದುಃಖದ ಮಾತುಕತೆಯಿಲ್ಲ. ದೊಡ್ಡ ಸಾಹೇಬರ ಹೆಂಡತಿಯಾಗಿದ್ದಾಳೆ ಜಂಬ ಬಂದಿರಬೇಕು ಎನ್ನಬೇಕೆಂದರೆ ಅವಳು ಯಾವ

ದೊಡ್ಡಸ್ತನವನ್ನೂ ಕೊಚ್ಚಿಕೊಳ್ಳಲಿಲ್ಲ, ಜಂಭದ ಮಾತಾಡಲಿಲ್ಲ. ಇವಳು ಆ ತನ್ನ ಚಿಕ್ಕಂದಿನ, ವಾತ್ಸಲ್ಯದ ಮೂರ್ತಿ ವಾಸಂತಿ ಎನ್ನುವುದನ್ನು ನಂಬಲಿಕ್ಕೇ ಆಗಲಿಲ್ಲ. ಹುಟ್ಟಿದಾಗಿನಿಂದ ದೊಡ್ಡವರಾಗಿ ಗಂಡನ ಮನೆಗೆ ಹೋಗುವವರೆಗೂ ಕೂಡಿಯೇ ಉಂಡು, ತಿಂದು, ಓದಿ, ಆಡಿ, ಬೆಳೆದವರು. ಸ್ವಂತ ಅಕ್ಕ ಮಾಲತಿಗಿಂತಲೂ ವಾಸಂತಿಯ ಮೇಲೆಯೇ ತನಗೆ ಹೆಚ್ಚು ಪ್ರೀತಿ. ಹೂವು ಹಣ್ಣು, ಸೀರೆ ಬಳೆ ಏನಿದ್ದರೂ, ಇಬ್ಬರೂ ಹಂಚಿಕೊಳ್ಳುತ್ತಿದ್ದೆವು.

ಊರಿಗೆ ಬಂದು ಇಷ್ಟು ದಿನಗಳಾದರೂ ತಮಗೆ ತಿಳಿಸಿಲ್ಲ. ತಮ್ಮ ಮನೆಗೇ ಬಂದಿಲ್ಲ, ಎಂದು ಆಕ್ಷೇಪಿಸಿದರೆ "ಏನೋ ಕೆಲಸದಲ್ಲಿ ಬಿಡುವೇ ಸಿಗಲಿಲ್ಲ" ಎಂದು ಬಂದಿತು ಉತ್ತರ. "ನಾವು ಇದೇ ಊರಲ್ಲಿ ಇರೋದು ನಿಮಗೆ ಗೊತ್ತಿರಲಿಲ್ಲವೇ ?" ಎಂದು ಕೇಳಿ, ಅದಾದರೂ ನಿಜವಾಗಿರಲಿ ಎನ್ನುವ ಆಸೆಯಿಂದ ಕೇಳಿದರೆ "ಹೌದು ಗೊತ್ತಿತ್ತು" ಎಂದು ನಿರಾಸಕ್ತಿಯಿಂದ ಹೇಳಿದಳು. ಅವರ ಮನೆ ಹುಡುಕಲು ತಾವಿಬ್ಬರೂ ತೆಗೆದುಕೊಂಡ ತೊಂದರೆ, ಪಟ್ಟ ಕಷ್ಟ, ವಿವರಿಸಿ ಹೇಳಿದರೆ, ಅದಕ್ಕೆ ಒಳ್ಳೆಯ ಎರಡು ಮಾತಿರಲಿ, ನೀವು ಇಷ್ಟು ತೊಂದರೆ ತೆಗೆದುಕೊಳ್ಳುವ ಆವಶ್ಯಕತೆ ಇರಲಿಲ್ಲ ಎನ್ನುವ ಹಾಗೆ ಅಲಕ್ಷ್ಯದಿಂದ ಒಂದು ತರಹ ನಕ್ಕಳು. ಇನ್ನೇನು ಮಾತಾಡಬೇಕು ತಿಳಿಯದೆ ಹುಡುಕಿ, ಹುಡುಕಿ ಮಾತನಾಡುವ ವಿಷಯಗಳೂ ಮುಗಿದದ್ದರಿಂದ ಸುಮ್ಮನೆ ಕುಳಿತೆ. ಇವರು ಒಬ್ಬರೇ ಹೊರಗಿನ ಕೋಣೆಯಲ್ಲಿ ಗೋಡೆ ನೋಡುತ್ತಾ ಕುಳಿತಿದ್ದರೇನೋ. ಮಾಮಾ ಅಟ್ಟದ ಮೇಲಿನ ರೂಮಿನಲ್ಲಿ ಮಲಗಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರಂತೆ. ಅವರಿಗೆ ತಾವು ಬಂದ ಸುದ್ದಿ ಕೂಡ ಯಾರೂ ಹೋಗಿ ಹೇಳಲಿಲ್ಲ. ಮೌನದಿಂದ ತನಗೆ ಕಸಿವಿಸಿಯಾಗತೊಡಗಿತು. ಏನೂ ಮಾಡದೆ ಅತ್ತಿತ್ತ ನೋಡುತ್ತ ಪಿಳಿ ಪಿಳಿ ಕಣ್ಣು ಬಿಡುತ್ತ ಕೂಡ್ರುವದೂ ತನ್ನಿಂದ ಅಸಾಧ್ಯವಾಯಿತು. ಅಷ್ಟು ದೊಡ್ಡ ಬಂಗಲೆಯಲ್ಲಿ ಗಾಳಿಯ ಸುಳಿವೇ ಇಲ್ಲದಂತೆ ಅನಿಸಿತು. ಉಸಿರಾಡಲು ಹವೆ ಸಾಲದೆ ಉಸಿರು ಕಟ್ಟಿದ ಹಾಗಾಯಿತು. ಹೊರಗೆ ದೂರ ಇಲ್ಲಿಂದ ಎಲ್ಲಿಗಾದರೂ ಸರಿ ಬಹು ದೂರ–ಓಡಿಹೋಗಿ ಬಯಲಿನ, ಸ್ವಚ್ಛ ಹವೆಯನ್ನು ನೀಳವಾಗಿ ಉಸಿರಾಡಿಸಬೇಕು ಎನ್ನಿಸಿ ಮನಸ್ಸು ದೇಹ ಎರಡೂ ಚಡಪಡಿಸುತ್ತಿದ್ದವು.

ಅಷ್ಟರಲ್ಲಿ ಮಹಡಿಯಿಂದ ಚಟಪಟ ಸಪ್ಪಳವೊಂದು ಕೆಳಗೆ ಇಳಿದು ಬಂದು ಬಚ್ಚಲು ಮನೆಗೆ ಹೋಯಿತು. ನೀರು ಬಿಟ್ಟ ಸದ್ದಾಯಿತು. "ವಾಸಂತಿ" ಎನ್ನುವ ಗಂಭೀರ ಧ್ವನಿಯು ಹಿಂದೆ ಅಕ್ಕ ಓಡಿಹೋದಳು. ತಿರುಗಿ ಬಂದು "ಶಕೂ ನಾವು ಒಂದು ಪಾರ್ಟಿಗೆ ಹೋಗಬೇಕಾಗಿದೆ. ಮರತೇ ಬಿಟ್ಟಿದ್ದೆ. ಇನ್ನ ಹತ್ತು ನಿಮಿಷದೊಳಗೆ ರೆಡಿ ಆಗಬೇಕು ನಾನು" ಎಂದು ಕುಂಕುಮ ಭರಣಿ ನನ್ನ ಮುಂದೆ ಹಿಡಿದಳು. ಕುಂಕುಮ ಇಟ್ಟುಕೊಂಡು ತಾನೇ ನಾಚಿಕೆ ಬಿಟ್ಟು "ಈ ತಿಂಡಿ ಹುಡುಗರಿಗೆ" ಎನ್ನುತ್ತಿರುವಾಗಲೇ ಅಕ್ಕ "ಬ್ಯಾಡಾ ಶಕೂ, ನಾವು ಈಗ ಟೀ ಪಾರ್ಟಿಗೆ ಹೋಗತೇವಿ. ಹುಡುಗರೂ ಬರತಾರ. ಸುಮ್ಮನ ಇಲ್ಲೆ ಇಟ್ಟು ತಿಂಡಿ ಯಾಕ ವೇಸ್ಟ ಮಾಡತೀ. ಮನೀಗೆ ಒಯ್ದುಬಿಡು. ನಿನ್ನ ಮಕ್ಕಳು ತಿಂತಾರ" ಅಂದಳು. "ಇನ್ನೊಮ್ಮೆ ಭೆಟ್ಟಿ ಆಗೋಣು. ನಿನ್ನ ಮಕ್ಕಳನ್ನೂ ಕರಕೊಂಡು ಇನ್ನೊಮ್ಮೆ ಬಾ" ಅಂತ ಉಪಚಾರಕ್ಕೂ ಹೇಳಲಿಲ್ಲ. ಅಕ್ಕ ಅಕ್ಕ ಅಂತ ಪ್ರೀತಿಯಿಂದ ತಾನು ತಿಂಡಿ, ಆಟೋಕ್ಕ ಅಷ್ಟು ರೊಕ್ಕಾ ಖರ್ಚು ಮಾಡಿ, ಗಂಡನ್ನ ಕರಕೊಂಡುಹೋಗಿ ಬಂದದ್ದಕ್ಕ ಮಂಗಳಾರತಿ ಚಂದಾಗಿ ಆಯ್ತು. ಈ ರೀತಿ ನಡಕೊಳ್ಳಲಿಕ್ಕೆ ತಾನೇನು ಅಂಥಾ ತಪ್ಪು ಮಾಡಿದ್ದೆ? ಮನೆಯವರೆಗೆ ಹೋದರೂ ಮಾಮನೂ "ಆರಾಮ ಅದೀ ಏನವಾ" ಅಂತ ಒಂದು ಮಾತು ಕೇಳಲಿಲ್ಲ. ತಾವು ಸಣ್ಣ ಪಗಾರದವರು, ಅವರಿಗಿಂತ ಕೆಳಗಿನ ಮಟ್ಟದವರು ಅಂತ ಮಾಮಾ ಜಂಭ ಮಾಡಿದರೂ, ವಾಸಂತಿ ತನಗೆ ಅಕ್ಕ ಅಲ್ಲೇನು? ರಕ್ತ ಸಂಬಂಧ ಪೂರ್ಣ ಅಳಿಸಿ ಹಾಕಿದಾಂಗ ಮಾಡಿದಳಲ್ಲ?

"ಹುಚ್ಚಿ ಇಷ್ಟಕ್ಕೆಲ್ಲಾ ಅಳತಾರೇನ?" ಬಿಕ್ಕುತ್ತಿದ್ದ ಶಕೂನನ್ನು ಮೂರ್ತಿ ಎಬ್ಬಿಸಿ, ಎದೆಗೆ ಒರಗಿಸಿಕೊಂಡು ಕಣ್ಣೀರು ಒರೆಸಿದ.

* * *

ಮುಂದೆ ಆರೆಂಟು ತಿಂಗಳು ಕಳೆದರೂ ಅಕ್ಕನ ಹೆಸರು ಒಂದು ದಿನವೂ ಎತ್ತಲಿಲ್ಲ ಶಕುಂತಲ. ಇನ್ನೊಂದು ದಿನ ಮೂರ್ತಿ ಬಂದು ಹೇಳಿದ ಸುದ್ದಿ ಭೀಕರವಾಗಿತ್ತು. ಮಾಮಾ ಟೂರಿಗೆ ಹೋದಾಗ, ಅಕ್ಕ ಒಬ್ಬಳೇ ಮಕ್ಕಳೊಡನೆ ಇದ್ದಾಗ ಅವರ ಮನೆಗೆ ಕಳ್ಳರು ಹೊಕ್ಕಿದ್ದರು. ಬಾಗಿಲು ಕಾಯಲು ಮಲಗಿದ್ದ ಆಳನ್ನು ಹೊಡೆದು, ಮನೆ ಬಾಗಿಲು ಮುರಿದು ಒಳ ಹೊಕ್ಕು, ಅಕ್ಕನ ಬೆದರಿಸಿ, ಹೊಡೆದು ಕೀಲಿಕೈ ಇಸಿದು

ಕೊಂಡು ಬಂಗಾರ, ಬೆಳ್ಳಿ, ಕ್ಯಾಷ್ ಎಲ್ಲವನ್ನೂ ಹೊತ್ತು ಒಯ್ದಿದ್ದರು. ಅಕ್ಕನಿಗೆ ಪೆಟ್ಟು ಬಹಳವಾಗಿ ಆಸ್ಪತ್ರೆಯಲ್ಲಿದ್ದಳು. ಶಕೂನ ಜೀವ ತಳಮಳಿಸಿತು. ಹೊಟ್ಟೆಯಲ್ಲಿ ಸಂಕಟವಾಯಿತು. ಏನಾದರೂ ತನ್ನ ಪ್ರೀತಿಯ ಅಕ್ಕ. ಕೂಡಿ, ಆಡಿ ಬೆಳೆದವರು. ಪೆಟ್ಟಾಗಿ ಆಸ್ಪತ್ರೆಯಲ್ಲಿದ್ದಾಳೆ. ಎಷ್ಟು ತೊಂದರೆಯಾಗಿದೆಯೋ ಏನೋ. ದೊಡ್ಡಪ್ಪ ತೀರಿಕೊಂಡು ಬಹಳ ವರ್ಷ ಕಳೆದಿವೆ. ದೊಡ್ಡಮ್ಮ ಬಂದಿರಲಿಕ್ಕಿಲ್ಲ. ಹೊಸ ಮೊದಲಗಿತ್ತಿಯಾಗಿ ವಾಸಂತಿ ಗಂಡನ ಮನೆಗೆ ಬಂದಾಗ ಅವಳೊಡನೆ ಹೋಗಿ ಬಂದ ದೊಡ್ಡಮ್ಮ ತಿರುಗಿ ಮಗಳ ಮನೆಗೆ ಹೋಗಿರಲಿಲ್ಲ. ಅಕ್ಕನ ಚೊಚ್ಚಿಲು ಬಾಣಂತಿತನವೂ ಗಂಡನ ಮನೆಯಲ್ಲಿಯೇ ಆಗಿತ್ತು. ಹೆಂಡತಿಯನ್ನು ಹೆಚ್ಚು ದಿನ ಬಿಟ್ಟಿರಲಾರದ ಮಾವ ಅವಳನ್ನು ಎಂದೂ ತೌರಿಗೆ ಕಳುಹಿಸುತ್ತಿರಲಿಲ್ಲ. ಅಷ್ಟು ಪ್ರೀತಿ ಅವರಿಗೆ ಅಕ್ಕನ ಮೇಲೆ. ತಾನೀಗ ಹೋಗಿ ಅವಳನ್ನು ನೋಡಬೇಕು. ಇಂಥ ಹೊತ್ತಿನಲ್ಲಿ ತಾನು ಹೋಗಿ ಸಹಾಯ ಮಾಡಿದರೆ ಅಕ್ಕನ ಮನಸ್ಸು ಬದಲಾದೀತು. ಮೃದುವಾದೀತು ಎನ್ನುವ ಆಸೆ ಶಕುಂತಲೆಗೆ.

ಹೆಂಡತಿಯ ಮುಖವನ್ನು ನೋಡಿ ಭಾವನೆಗಳನ್ನು ಓದಿಕೊಳ್ಳಬಲ್ಲ ಮೂರ್ತಿ " ಲಗೂ ತಯಾರಾಗು ಶಕೂ. ನಾವು ಆಸ್ಪತ್ರೆಗೆ ಹೋಗೂಣು" ಎಂದ.

ವಾಸಂತಿಯ ತಲೆಗೆ ನಾಲ್ಕಾರು ಹೊಲಿಗೆ ಬಿದ್ದು, ಬ್ಯಾಂಡೇಜು ಕಟ್ಟಿದ್ದರು. ಮುಂಗೈಗಳಲ್ಲಿ ಬಳೆಚೂರು ನಟ್ಟುಗಾಯಗಳಾಗಿದ್ದವು. ಕಣ್ಣು ಮುಚ್ಚಿ ಸಣ್ಣಗೆ ನರಳುತ್ತಿದ್ದಳು ವಾಸಂತಿ. ಹತ್ತಿರ ಯಾರೂ ಇರಲಿಲ್ಲ.

ಶಕೂನನ್ನು ಕಂಡ ಕೂಡಲೇ ವಾಸಂತಿಯ ಕಣ್ಣು ತುಂಬಿ ಬಂದವು. ಹತ್ತಿರ ಬಂದು ಕುಳಿತು, ಅವಳ ಹಣೆಯ ಮೇಲೆ ಕೈಯಾಡಿಸಿ ಮೃದುವಾಗಿ "ಅಕ್ಕಾ ನೊವು ಭಾಳ ಆಗ್ತದೇನು ?" ಎಂದು ಶಕೂ ಕೇಳಿದಾಗಲಂತೂ ಅವಳ ಕಣ್ಣೀರು ಕೋಡಿ ಹರಿಯಿತು. ಹತ್ತಿರ ತಂಗಿಯ ಗಂಡ ನಿಂತಿದ್ದರೂ, ಅವಳ ಕೈ ಹಿಡಿದು ಮಗುವಿನಂತೆ ಬಿಕ್ಕಿ ಬಿಕ್ಕಿ ಅಳುತ್ತಲೇ ಇದ್ದಳು. ಮೃದು ಮನಸ್ಸಿನ ಮೂರ್ತಿ ಅಲ್ಲಿ ನಿಲ್ಲಲಾರದೆ ಮುಖ ತಗ್ಗಿಸಿಕೊಂಡು ಹೊರಗೆ ವರಾಂಡಕ್ಕೆ ಹೋದ. ಸೆರಗಿನಿಂದ ತನ್ನ ಕಣ್ಣೀರು ಅಕ್ಕನ ಕಣ್ಣೀರು ಒರೆಸುತ್ತ ಶಕುಂತಲ "ಅಳಬ್ಯಾಡಕ್ಕ" ಎನ್ನುತ್ತ ತಾನೇ ಅತ್ತಳು.

“ ನೀ ಇನ್ನ ನನ್ನ ನೋಡಲಿಕ್ಕೆ ಬರೂದಿಲ್ಲಂತ ತಿಳಕೊಂಡಿದ್ದೆ ” ಎಂದು ವಾಸಂತಿ ಅಂದಾಗ ಮತ್ತೆ ಅವರ ಮನೆಗೆ ಹೋದ ದಿನ ಇನ್ನೆಂದೂ ತಾನು ಅವರ ಮನೆಗೆ ಹೋಗಲೇಬಾರದು ಎಂದುಕೊಂಡದ್ದು ನೆನಪಾಯಿತು. ಅಂದಿನ ಅಕ್ಕ ಇವಳೇಯೇ ? ಛೇ, ಅವಳೇ ಬೇರೆ, ಇವಳೇ ಬೇರೆ. ತನ್ನ ಅಕ್ಕ ಎಷ್ಟೊಂದು ರೂಪು ತೊಡುತ್ತಾಳೆ! ಇವಳು ತನ್ನ ಅಕ್ಕ. ತನ್ನ ಪ್ರೀತಿಯ ವಾಸಂತಿ ಅಕ್ಕ. ಮತ್ತೆ ಮತ್ತೆ ಪ್ರೀತಿಯಿಂದ ಅಕ್ಕನ ಕೈ ಸವರಿದಳು ಶಕುಂತಲ. ವಾಸಂತಿಯ ದುಃಖ ಕಡಿಮೆಯಾಗಿತ್ತು. ಸ್ನೇಹ ವಾತ್ಸಲ್ಯಗಳ ಪ್ರವಾಹ ತುಂಬಿ ಹರಿಯಿತು.

“ ರಾಣೀ ನೀ ನನ್ನ ಮ್ಯಾಲೆ ಸಿಟ್ಟಾಗಿಲ್ಲಲ್ಲಾ ” ಎಂದಳು ವಾಸಂತಿ. ಬಾಲ್ಯದಲ್ಲಿಯಂತೆ ತನ್ನನ್ನು ಮತ್ತೆ ರಾಣೀ ಎಂದು ಅಕ್ಕ ಕರೆದಾಗ ಶಕುಂತಲ ಕರಗಿ ಹೋದಳು. ಮಾತು ಬಾರದೆ ಇಲ್ಲವೆಂದು ಗೋಣು ಅಲ್ಲಾಡಿಸಿದಳು.

“ ನೀವಿಬ್ಬರೂ ಗಂಡ ಹೆಂಡತಿ ನಮ್ಮ ಮನೀಗೆ ಬಂದಾಗ ನಡೆದದ್ದು ನೆನಪಾದರೆ ನನಗೆ ಇನ್ನೂ ಜೀವ ಚಡಪಡಿಸ್ತದ. ನಿಮಗೆ ನಮ್ಮಲ್ಲೆ ಒಳ್ಳೇ ಮಾತು, ಆತಿಥ್ಯ, ಒಂದು ಕಪ್ಪು ಚಹಾ ಯಾವದೂ ಸಿಗಲಿಲ್ಲಾ. ನಿನ್ನ ಗಂಡ ನಿನ್ನ ಎಷ್ಟು ಬಯ್ಯಾತ್ತಾರೋ ಅಂತ ನನಗೆ ಹೆದರಿಕೆ ಆಗಿತ್ತು. ಅವತ್ತು ನಿನ್ನ ಗಂಡ ನಿನ್ನ ಹೊಡದರೇನು ? ಭಾಳ ಹೊಡೆದಿರಬೇಕು ಅಲ್ಲಾ ? ”

ವಾಸಂತಿಯ ಪ್ರಶ್ನೆಗೆ ಶಕುಂತಲ ಅಗಲವಾಗಿ ಕಣ್ಣರಳಿಸಿದಳು.

“ ಇಲ್ಲಕ್ಕಾ. ಅವರ್‍ಯಾಕ ಹೊಡೀತಾರ ? ಅವರೆಂದೂ ನನಗ ಒಂದು ಪೆಟ್ಟು ಕೊಟ್ಟಿಲ್ಲಾ. ನನ್ನ ಮನಸ್ಸು ಎಂದೂ ನೋಯಿಸೂದಿಲ್ಲಾ ಅವರು. ಅವತ್ತು ಕೆಟ್ಟ ಅನಿಸಿ ನಾನು ಭಾಳ ಅತ್ತೆ. ಅವರು ಎಷ್ಟು ರಮಿಸಿದರು ಅಂದೀ. ಮರತಬಿಡು ಅದನ್ನೆಲ್ಲಾ ಅಂದರು. ”

“ ಪುಣ್ಯ ಮಾಡಿ ಬಂದೀಯವ್ವಾ ಇಂಥಾ ಗಂಡ ಸಿಕ್ಕಾರ. ನಾನು ನೋಡು ದುರ್ದೈವಿ. ಯಾಕಾದರೂ ದೇವರು ನನ್ನ ಉಳಿಸಿದನೋ ಅನಸತದ. ನೆತ್ತಿಗೇ ಏಟು ಬಿದ್ದಿದ್ದರ ಒಂದು ಹೊಡೆತಕ್ಕ ಖಲಾಸ ಆಗತಿದ್ದೆ ” ಹೃದಯವನ್ನು ಸೀಳಿಕೊಂಡು ಬಂದ ನಿರಾಶೆಯ ದನಿಯಲ್ಲಿ ವಾಸಂತಿ ನರಳಿದಳು.

" ಅಕ್ಕಾ ಹ್ಯಾಂಗ ಅನಬ್ಯಾಡಾ. ದೇವರಂಥಾ ಗಂಡ, ಮುತ್ತಿನಂಥಾ ಮಕ್ಕಳು ಇದ್ದಾರ. ಕೆಟ್ಟದ್ದು ಬಯಸಬ್ಯಾಡಾ. ಬಂಗಾರ ಬೆಳ್ಳಿ ಹೋದರ ಏನಾಯ್ತು ? ಕಳ್ಳರು ನಿನ್ನ ಜೀವಾ ಉಳಿಸ್ಯಾರಲ್ಲ ಅಷ್ಟೇ ಸಾಕು. ದೇವರು ದೊಡ್ಡಾಂವ ಅದಾನ. "

" ಏನಂದೀ ? ಶಕೂ ದೇವರಂಥಾ ಗಂಡನ ? ಥ್ಥು ಥ್ಥು ಪಾಪ. ನಿನಗೇನು ಗೊತ್ತು ? ಕಳ್ಳರು ನನ್ನ ಹೊಡದಾರ ಅಂತ ತಿಳಕೊಂಡೀ ಏನು ನೀನು ? ಹುಚ್ಚೀ ನೀನು ಹುಚ್ಚಿ. ಪ್ರಪಂಚ ಹ್ಯಾಂಗ ಅದ ನಿನಗೆ ಗೊತ್ತಿಲ್ಲಾ ಶಕೂ. ನನ್ನ ಹೊಡದು ಈ ಆಸ್ಪತ್ರೆಗೆ ಹಾಕಿದವರು ಕಳ್ಳರಲ್ಲಾ ಶಕೂ. ನಿನ್ನ ಮಾವಾ ಹೊಡೆದಾರ, ನನ್ನ ಗಂಡ. "

ಶಕೂ ಸಿಡಿಲು ಬಡಿದವರಂತೆ ಕುಳಿತಾಗ ವಾಸಂತಿ ಬಡಬಡಿಸುತ್ತಿದ್ದಳು. " ಇದನ್ನ ಯಾರ ಮುಂದೂ ಹೇಳಿಲ್ಲಾ ನಾನು. ಬಂಗಾರ, ಬೆಳ್ಳಿ ಕಳ್ಳರಿಗೆ ಒಯ್ಯಲಿಕ್ಕೆ ಬಿಟ್ಟೆ ಅಂತ ನನ್ನ ಹೊಡೆದರು. ನಾನು ಮೊದಲು ಮೇಜಿನ ಕೀಲಿಕೈ ಕೊಡಲಿಲ್ಲಾ. ಆದರ ಅವರು ನಾಲ್ಕು ಮಂದಿ ಇದ್ದರು. ನಾನು ಒಬ್ಬಳೇ ಹೆಂಗಸು. ಏನ ಮಾಡಲಿ ? ನನಗ ಏನೂ ಮಾಡದಿದ್ದರ ಸಾಕು ಅಂತ ಕೀಲಿಕೈ ಕೊಟ್ಟುಬಿಟ್ಟೆ. ಇವರು ನೀನು ಸತ್ತಿದ್ದರೆ ಚಲೊ ಆಗ್ತಿತ್ತು ಅಂತ ಬಯ್ದು ನನ್ನ ಸಾಯೋಹಾಂಗ ಹೊಡೆದರು .ಆದರ ಇನ್ನೂ ಆಯುಷ್ಯ ಗಟ್ಟಿ ಅದ ನಂದು. ನನ್ನ ಹೊಡಿಯೂದು ಒದಿಯೂದು ಮದುವಿ ಆದಾಗಿಂದ ನಡದದ. ತಂಗೀ, ನಾನು ಸಂಸಾರದ ಗುಟ್ಟು ಬಿಟ್ಟು ಕೊಟ್ಟಿದ್ದಿಲ್ಲಾ. ತವರ ಮನೀಯಿಂದ ದೂರ ಮಾಡಿದರು. ಬಳಗದವರನ್ನು ಹಚಿಕೋಬಾರದು, ಬಂದರ ಮಾತಾಡಬಾರದು ಅಂತ ಅಪ್ಪಣೆ ಮಾಡಿದರು. ಎಲ್ಲಾದಕ್ಕೂ ಬಗ್ಗಿದೆ. ಹನ್ನೆರಡು ವರುಷ ತಪಸ್ಸು ಮಾಡಿದೆ ತಂಗೀ. ಆದರೂ ದೇವರು ಒಲೀಲಿಲ್ಲಾ. ಅವರ ಮನಸ್ಸು ಕರಗಲಿಲ್ಲಾ. ನನ್ನ ದೇಹ ಮಾತ್ರ ಬೇಕು. ನನ್ನ ಮನಸ್ಸು, ಭಾವನಾ, ಆಶಾ, ಯಾವದನ್ನೂ ಕೇಳೂದಿಲ್ಲಾ. ಅದಕ ಬೆಲಿ ಕೊಡೂದಿಲ್ಲಾ. ಅವರ ಡ್ರಾಯಿಂಗ್ ರೂಮಿನ ಶೋಕೇಸಿನ್ಯಾಗಿನ ಗೊಂಬೀ ಹಾಂಗ ನಾನೂ ಒಂದು ಗೊಂಬಿ, ಸೂತ್ರದ ಗೊಂಬಿ. ಅವರು ಹಿಡಿದು ಆಡಿಸಿದಾಂಗ ನಾನು ಆಡಬೇಕು. ನೋಡುವವರ ಕಣ್ಣಿಗೆ ಈ ಆಟ ಭಾಳ ಚಂದ. ಆದರ ನನಗೆ ? ನಿತ್ಯ ನರಕ. ಅವರು ಕುಣಿಸ್ತಾರ, ನಾ ಕುಣೀತೇನಿ. ಆ ಸೂತ್ರ ಹರದು ಹೊರಗೆ ಬರೂವಷ್ಟು ಚೈತನ್ಯ

ನನಗಿಲ್ಲಾ ಶಕೂ. ಗಂಟು ಭಾಳ ಬಿಗಿ ಅದ. ಕೈ ಕಾಲು ಎಲ್ಲಾ ಕಟ್ಟಿ ಹಾಕ್ಯಾರ? ನನಗ ಬಿಡುಗಡೀನ ಇಲ್ಲಾ. ಇದನ್ನ ಯಾರ ಮುಂದ ಹೇಳಲಿ? ನನ್ನವರು ಅಂತ ನನಗೆ ಯಾರ ಅದಾರ? ಅಂತ ಅಳತಿದ್ದೆ. ಇವತ್ತು ನಿನ್ನ ಮುಂದ ತೋಡಿಕೊಂಡೆ. ಮನಸ್ಸಿನ ಭಾರ ಇಳೀತು, ಎದಿ ಹಗೂರಾತು. ಆದರ ಆಣಿ, ನನ್ನ ಆಣಿ ಆಗೇದ. ನೀ ಯಾರ ಮುಂದೂ ಹೇಳಬಾರದು. ಹಾಂ. ತಿಳೀತೇನು? ಕೈ ಮ್ಯಾಲೆ ಕೈ ಹಾಕು ಇದನ್ನೆಲ್ಲಾ ಯಾರ ಮುಂದೂ ಹೇಳಬಾರದು''

ಅಸ್ಪಷ್ಟವಾಗಿ, ದೂರದಿಂದ ಕೇಳುತಿದ್ದ ಟಕ್ ಟಕ್ ಬೂಟಿನ ಸಪ್ಪಳ ಜೋರಾಗುತ್ತ ಬಂದು ಬಾಗಿಲ ಹತ್ತಿರ ನಿಂತಿತು. ವಾಸಂತಿ ಮಗ್ಗುಲಿಗೆ ಹೊರಳಿದಳು. ಮುಖ ಕಾಣದಂತೆ ಶಕುಂತಲೆ ತಲೆ ಎತ್ತಿ ನೋಡಿದಳು. ಕರೀ ಮುಸುಡಿಯ ಕೋರೆ ಹಲ್ಲಿನ, ಕೆಂಪು ಕಣ್ಣಿನ, ಟಗರು ಕೂದಲಿನ ದೈತ್ಯಾಕಾರದ ಕುರೂಪಿ–ಜಗತ್ತಿನಲ್ಲಿಯೇ ಅತ್ಯಂತ, ಕುರೂಪಿ–ಮನುಷ್ಯನನ್ನು ಕಂಡ ಶಕುಂತಲ '' ಮತ್ತ ಬರ್ತೀನಿ'' ಎನ್ನುತ್ತ ಎದ್ದು ಅವನತ್ತ ನೋಡದೆ ಬಾಗಿಲು ದಾಟಿ ಹೊರಗೆ ಹೋದಳು.

ಸಿರಿ

ನಾನು ಆಗತಾನೇ ಎದ್ದು ಮುಖ ತೊಳೆದುಕೊಳ್ಳುತ್ತಿದ್ದೆ. ಬಾಬು ಅವಸರವಾಗಿ ಓಡಿ ಬಂದು ತೇಕುತ್ತ ಹೊರಬಾಗಿಲಲ್ಲಿ ನಿಂತು ಕೊಂಡೇ 'ರಾಯರೇ' ಎಂದು ಜೋರಾಗಿ ಕೂಗಿದ. ನಾನು ಹೊರಗೆ ಬರುವ ಮೊದಲೇ ಬಾಗಿಲಿಗೆ ನೀರು ಹಾಕುತ್ತಿದ್ದ ನನ್ನವಳಿಗೆ ಹೇಳಿದ- "ಅವ್ವ ಹ್ಯಾಂಗ್ಯಾಂಗೋ ಮಾಡತಾರ. ಮಾತಾಡ್ಸಿದರ ಆಡೂದೂ ಇಲ್ಲಾ. ಲಗೂನ ಬರಲಿಕ್ಕೆ ಹೇಳ್ರಿ ರಾಯರಿಗೆ" ಎಂದು ಒಂದೇ ಉಸಿರಿನಲ್ಲಿ ಎಲ್ಲ ಹೇಳಿ ಮತ್ತೆ ಓಡಿಹೋದ. ಸುಮಾ ತಂದುಕೊಟ್ಟ ಚಹದ ಕಪ್ಪು ಹಿಡಿದು ಹೇಳಿದೆ:

"ನಿನ್ನೆ ನಾನು ಮನೀಗೆ ಹೋದಾಗ ಅವ್ವಾಗ ಭಾಳ ತ್ರಾಸಾಗಿತ್ತು. ನಾ ಇಲ್ಲೇ ಇರ್ತೀನಿ ಅಂದರ ಕೇಳಲಿಲ್ಲ. ಬಾಬು ಇರ್ತಾನ, ನೀ ಮನೀಗೆ ಹೋಗು ಅಂದರು. ನನಗಂತೂ ಏನೂ ಆಸೇ ಉಳಿದಿಲ್ಲ. ಇವತ್ತ ಕಳಿಯೂದು ಕಷ್ಟ ಅಂತ ಡಾಕ್ಟರ ಅಂದಿದ್ದರು. ನಾ ತಿರುಗಿ ಬರೂದು ತಡಾ ಆದರ ನೀ ದಾರೀ ನೋಡಬ್ಯಾಡಾ" ಎಂದು ಹೊರಬಿದ್ದೆ.

"ಅವ್ವಾ" ಎಂದು ಕರೆದಾಗ ಬಹಳ ಕಷ್ಟದಿಂದ ಕಣ್ಣು ತೆರೆಯಲು ನೋಡಿದರು. ಅರೆಗಣ್ಣು ತೆರೆಯಲು ಮಾತ್ರ ಸಾಧ್ಯವಾಯಿತು. ಏನೋ ಹೇಳಲು ತುಟಿ ಅಲುಗಿಸುತ್ತಿದ್ದರು. ಧ್ವನಿ ಹೊರಬರುತ್ತಿರಲಿಲ್ಲ. 'ಡಾಕ್ಟರರನ್ನು ಕರೀತಿನಿ' ಎಂದು ಜೋರಾಗಿ ಹೇಳಿದಾಗ ಬೇಡವೆಂದು ತಲೆ ಅಲುಗಿಸಿದರು. ಎಡಗೈ ಎತ್ತಲಾಗದೆ ಅತ್ತಿತ್ತ ಮಿಸುಕಾಡಿಸಿದರು. ಹತ್ತಿರ ಕುಳಿತು ಬಗ್ಗಿ ಅವರ ಕೈ ಹಿಡಿದೆ. 'ಉಂ' 'ಉಂ' ಎನ್ನುತ್ತಿದ್ದುದು ಕೇಳಿ ಅವರ ಬೆರಳ ಉಂಗುರ ಮುಟ್ಟಿದೆ. ಹೌದೆನ್ನುವಂತೆ ಗೋಣು ಹಾಕಿದರು. ಕೈಸನ್ನೆ, ಬಾಯಿಸನ್ನೆಗಳಿಂದ ಅವರು ಹೇಳುತ್ತಿದ್ದುದನ್ನು ತಿಳಿದುಕೊಂಡೆ. "ಉಂಗುರಾ ಮಾರಿ ಮುಂದಿನ ಕೆಲಸಾ ನಡೆಸಬೇಕs ?" ಎಂದಾಗ 'ಹೂಂ' ಎಂದು ತಲೆ ಅಲುಗಿಸಿದರು. ಸಾವಿನ ಹೊಸ್ತಿಲಲ್ಲಿಯೂ ಒಂದು ಸಮಾಧಾನದ ಕಳೆ ಮುಖದಲ್ಲಿ ಕಂಡಿತು.

ಮುಂದೆ ಅರ್ಧಗಂಟೆಯಲ್ಲಿ ನಾನು ಹತ್ತಿರ ಕುಳಿತು ನೋಡುತ್ತಿದ್ದಂತೆಯೆ ಜೀವ ಬಿಟ್ಟರು ಅಮ್ಮ. ಅಂಥ ಶಾಂತವಾದ, ಸಮಾಧಾನದ ಸಾವನ್ನು ನಾನು ಅದುವರೆಗೆ ಕಂಡಿರಲೇ ಇಲ್ಲ. ಕಳೆದ ನಾಲ್ಕು ತಿಂಗಳಿಂದಲೂ ಅವರ ಸಾವು ಸಮೀಪಿಸುತ್ತಿದ್ದ ವಿಷಯ ತಿಳಿದಿದ್ದರೂ ಆ ಘಳಿಗೆಯಲ್ಲಿ ಮನಸ್ಸು ಶೂನ್ಯವಾಗಿ ದುಃಖ ತುಂಬಿ ಬಂದು ಕಣ್ಣೀರು ತೊಟ್ಟಿಕ್ಕಿತು. ಮನಸ್ಸಿಗೆ ಸಮಾಧಾನವಾದ ಮೇಲೆ ಕಣ್ಣು ಗಟ್ಟಿಯಾಗಿ ಒತ್ತಿ ಮುಚ್ಚಿ, ಕೈಕಾಲು ಮಡಚಿಟ್ಟು ಮುಂದಿನ ವ್ಯವಸ್ಥೆ ಮಾಡಲು ಹೊರಬಂದೆ.

ಬರೆಯುವ ಟೇಬಲ್ ಮೇಲಿನ ಹಾಳೆಯೊಂದನ್ನು ತೆಗೆದು ಪೆನ್ನು ಓಡಿಸುವ ಮೊದಲು ಒಮ್ಮೆ ವಿಚಾರ ಮಾಡಿದೆ. ಕೊನೆಗೆ ನನ್ನ ಕರ್ತವ್ಯ ನಾನು ಮಾಡಿದರಾಯಿತು. ಅಂತ್ಯ ಕ್ರಿಯೆಗೆ ಬರುವ, ಬಿಡುವ ವಿಷಯ ಅವರಿಗೆ ಸೇರಿದ್ದು ಎಂದುಕೊಂಡು ದಿಲ್ಲಿಯಲ್ಲಿರುವ ಅಮ್ಮನ ಸಾಕುಮಗಳು ಶಶಿಕಲಾಗೆ ಟೆಲಿಗ್ರಾಂ ಬರೆದೆ. ಬಾಬೂನಿಂದ ಎಲ್ಲ ಪರಿಚಿತರಿಗೆ ಹೇಳಿಕಳಿಸಿದೆ. ಮತ್ತೆ ಬಂದು ರೂಮಿನಲ್ಲಿ ಅಮ್ಮನ ಮಂಚದ ಹತ್ತಿರವೇ ಕುರ್ಚಿ ಎಳೆದು ಕುಳಿತುಕೊಂಡೆ. ಅಮ್ಮನನ್ನು ನೋಡಿದರೆ ಅದು ಶವ ಎನ್ನುವ ಹಾಗಿರಲಿಲ್ಲ. ಕಣ್ಣು ಮುಚ್ಚಿ ನಿದ್ದೆ ಮಾಡುತ್ತಿದ್ದಾರೇನೋ ಎನಿಸುತ್ತಿತ್ತು. ಪ್ರಾಯದಲ್ಲಿ ತುಂಬ ಸುಂದರಿಯಾಗಿರಬೇಕು ಎನ್ನುವ ಲಕ್ಷಣಗಳೆಲ್ಲವೂ ಈ ಐವತ್ತರ ಅಂಚಿನಲ್ಲಿಯೂ ಇದ್ದವು. ನಾನು ಮೊದಲ ಸಲ ಅವರನ್ನು ನೋಡಿದ್ದೇ ಹತ್ತು ವರ್ಷಗಳ ಹಿಂದೆ.

ವಕೀಲ ಉಮಾಪತಿರಾಯರು ಕ್ಲಬ್ಬಿನಲ್ಲಿ ಭೆಟ್ಟಿ ಆಗಿದ್ದಾಗ, ನನ್ನ ತಂದೆ ಅವರ ಹತ್ತಿರ ತಮ್ಮ ಮಗನೊಬ್ಬ ಅದೇ ತಾನೇ ಲಾ ಪರೀಕ್ಷೆ ಮುಗಿಸಿದ್ದಾನೆ-ಕೆಲಸ ಕಲಿತುಕೊಳ್ಳೋದಕ್ಕೆ ನಿಮ್ಮ ಹತ್ತಿರ ಕಳಿಸಿಕೊಡಬೇಕೆಂದು ಆಸೆ ಎಂದು ಹೇಳಿದ್ದರಂತೆ. ಉಮಾಪತಿರಾಯರಂಥ ಹೆಸರುವಾಸಿಯಾದ ವಕೀಲರು ನಮ್ಮ ನಗರದಲ್ಲಿ ಕೇವಲ ಬೆರಳೆಣಿಕೆಯಷ್ಟು ಜನ. ಅಂಥವರ ಹತ್ತಿರ ಕೆಲಸ ಕಲಿತುಕೊಳ್ಳೋದಕ್ಕೆ, ವೃತ್ತಿಯ ಗುಟ್ಟು ತಿಳಿಯೋದಕ್ಕೆ ನನಗೂ ಆಸೆ ಏನೋ ಇತ್ತು. ಆದರೆ ಅವರು ನನ್ನನ್ನು ಕೆಲಸಕ್ಕೆ ಸೇರಿಸಿಕೊಳ್ಳುತ್ತಾರೋ ಇಲ್ಲವೋ ಎನ್ನುವ ಅನುಮಾನವೂ ಇತ್ತು. ಒಂದು ದಿನ ಅಪ್ಪ ನನ್ನನ್ನು ಕರೆದು " ನಾಳೆ ಮುಂಜಾನೆ ಎಂಟೂವರೆ ಗಂಟೆಗೆ ಉಮಾಪತಿರಾಯರ ಮನೆಗೆ ಹೋಗಿ ಭೆಟ್ಟಿಯಾಗು. ನಿನ್ನನ್ನು

ಮಾತನಾಡಿಸಿ ನೋಡ್ತೀನಿ ಎಂದು ಹೇಳಿದ್ದಾರೆ " ಎಂದಾಗ ಸಂತೋಷ ದೊಡನೆ ಹೆದರಿಕೆಯೂ ಆಯಿತು.

ಅವರ ಮನೆ ಗೇಟು ತೆಗೆದು ಕಂಪೌಂಡು ದಾಟಿ ಮನೆ ಮೆಟ್ಟಿಲು ಹತ್ತುವವರೆಗೆ ನನ್ನ ಎದೆ ಡವಗುಟ್ಟುತ್ತಿದ್ದದ್ದೂ, ಮೈಬೆವತಿದ್ದುದೂ, ಗಂಟಲು ಒಣಗಿದ್ದುದೂ ನೆನೆಸಿಕೊಂಡು ಮುಂದೆ ಎಷ್ಟೋ ದಿನ ನನ್ನಷ್ಟಕ್ಕೆ ನಾನೇ ನಕ್ಕಿದ್ದೆ. ಅಂದು ಬೆಲ್ ಒತ್ತಿದಾಗ ಬಾಗಿಲು ತೆಗೆದವರು 'ಅಮ್ಮ.' ಆದೇ ಸ್ನಾನ ಮಾಡಿ ಬಂದಿದ್ದರೇನೋ. ತಿಳಿಹಸಿರುಬಣ್ಣದ ಸೀರೆಯಲ್ಲಿ ಅದೇ ಅರಳಿದ ಗುಲಾಬಿಯಂತೆ ಶುಭ್ರವಾಗಿ ಪರಿಮಳ ಸೂಸು ತ್ತಿದ್ದರು. ನಾವಿಬ್ಬರೂ ಒಬ್ಬರಿಗೊಬ್ಬರು ಅಪರಿಚಿತರೇ ಆದರೂ ಮುಗು ಳ್ನಕ್ಕು "ಬರ್ರಿ ಒಳಗ ಕೂಡ್ರಿ. ಸ್ನಾನ ಮಾಡ್ತಾ ಇದ್ದಾರ" ಎಂದು ಹೇಳಿ ನನ್ನ ಮುಂದೆ ಅಂದಿನ ಪೇಪರ ಇಟ್ಟು ಹೋದರು. ಡ್ರಾಯಿಂಗ್ ರೂಮಿನ ಅಂದ-ಚೆಂದ ನೋಡುತ್ತ ಪೇಪರಿನ ಮೇಲೆ ಕಣ್ಣಾಡಿಸುತ್ತ, ನನ್ನ ಭಯವನ್ನು ಕಡಿಮೆ ಮಾಡಿಕೊಂಡೆ. ವಕೀಲರು ಹೊರಗೆ ಬಂದು ಮಾತ ನಾಡಿಸಿದಾಗ ಆತ್ಮವಿಶ್ವಾಸದಿಂದ ನಿರ್ಭಯವಾಗಿ ಮಾತನಾಡಿದೆ. ನಾಳೆ ಯಿಂದ ತಮ್ಮ ಆಫೀಸಿಗೆ ಬರಲು ಹೇಳಿದರು. ನಮಸ್ಕಾರ ಮಾಡಿ ಏಳು ತ್ತಿದ್ದೆ. ತಡೆಯಿರಿ ಎನ್ನುವಂತೆ ಕೈಮಾಡಿ "ಸಿರೀ ಇಬ್ಬರಿಗೂ ಚಹಾ-ತಿಂಡಿ" ಎಂದರು. "ಬರ್ರಿ ಒಳಗ ತಯಾರ ಅದ" ಎಂದು ಉತ್ತರ ಬಂದಿತು. ಒಳಗೆ ಹೋದೊಡನೆ ಇಬ್ಬರಿಗೂ ಪರಿಚಯ ಮಾಡಿಕೊಟ್ಟರು. ಡೈನಿಂಗ್ ಟೇಬಲ್ಲಿನ ಮೇಲಿನ ಪ್ಲೇಟು ನೋಡಿ ಗಾಬರಿಯಾದೆ. ನನ್ನ ಉಪಾಹಾರ ಆದೇ ಮುಗಿದಿದೆ ಎಂದು ಹೇಳಿದಾಗ "ನಿಮ್ಮಂಥ ಹರೇ ದವರು ತಿನಲಿಕ್ಕೆ ಅನುಮಾನಾ ಮಾಡಬಾರದು. ಕೊಟ್ಟದ್ದೆಲ್ಲಾ ತಿಂದು ದಕ್ಕಿಸಿಕೊಳ್ಳುವಷ್ಟು ತಾಕತ್ತು ಇರಬೇಕು ನಿಮಗ" ಎಂದು ದೊಡ್ಡ ದನಿ ಯಲ್ಲಿ ವಕೀಲರು ಗದರಿಸಿದರು. ಶ್ರೀದೇವಿಯಮ್ಮ ನಗುತ್ತ "ನಿಮಗ ಏನು ಬೇಕೋ ಅಷ್ಟ ತೊಗೊಳ್ರಿ. ಬ್ಯಾಡಾದ್ದು ಬಿಟ್ಟಬಿಡ್ರಿ. ಆದರ ಈ ಸಿಹಿ ಮಾತ್ರ ನೀವು ತಿನಲಿಕ್ಕೇ ಬೇಕು. ನಮ್ಮ ಮನೆಗೆ ಮೊದಲನೆ ಸಾರೆ ಬಂದೀರಿ. ವಕೀಲರ ಹತ್ತರ ಕೆಲಸಾ ಮಾಡವರೂ ಅಂದರ ನಮಗ ಮನೀ ಮಕ್ಕಳು ಇದ್ದಾಂಗ. ಸಂಕೋಚ ಮಾಡಕೊಬ್ಯಾಡ್ರಿ. ನಿಮ್ಮದ ಮನೀ ಅದ" ಎಂದು ಪ್ರೀತಿಯಿಂದ ಹೇಳಿದಾಗ ಮೈಮರೆತು ಪ್ಲೇಟಿನಲ್ಲಿ ಇದ್ದದ್ದೆಲ್ಲಾ ಮುಗಿಸಿಬಿಟ್ಟದ್ದೆ. ನನ್ನ ಖಾಲೀ ಪ್ಲೇಟು ನೋಡಿ ವಕೀಲರು

ಹಾಸ್ಯಮಾಡಿದ್ದರು. "ಸಿರೀ, ವಕೀಲ ಸಾ ಆಗೂದಕಿಂತ ನೀನು ಆಗ ಬೇಕಾಗಿತ್ತು. ನಿನ್ನ ಮಾತಿನಿಂದ ಅರುಣನ ಮ್ಯಾಲೆ ಎಷ್ಟು ಪ್ರಭಾವ ಬಿತ್ತು ನೋಡು" ಎಂದು. ಅಂದಿನಿಂದ ಉಮಾಪತಿರಾಯರ ಮನೆ ನನಗೆ ಅಮ್ಮನ ಮನೆಯೇ ಆಯಿತು.

ಅವರ ಮನೆಯಿಂದ ತಿರುಗಿ ಬಂದ ಮೇಲೆ ಮನೆಯಲ್ಲಿ ಅವ್ವನ ಹತ್ತಿರ ಅಲ್ಲಿ ನಡೆದ ವಿಷಯವನ್ನೆಲ್ಲ ಹೇಳಿದೆ. ಶ್ರೀದೇವಿಯರ ಮಾತು ಬಂದಾಗ ಅವ್ವ ಸುಮ್ಮನಾಗಿದ್ದಳು. ಯಾವ ಪ್ರತಿಕ್ರಿಯೆಯನ್ನೂ ತೋರಿಸಲಿಲ್ಲ. ನನಗೆ ಇದೇನೋ ಆಶ್ಚರ್ಯವಾಗಿ ಕಂಡಿತು. ವಕೀಲರ ಹೆಂಡತಿಯನ್ನು ನಾನು ಹೊಗಳಿದ್ದು ಅವ್ವನ ಮನಸ್ಸಿಗೆ ಬರಲಿಲ್ಲವೇ ? ಯಾಕೆ ಸುಮ್ಮನಾದಳು ? ಎಲ್ಲರ ಹಾಗೆ ನನ್ನ ಅವ್ವನಿಗೂ ಇನ್ನೊಂದು ಹೆಣ್ಣಿನ ಹೊಗಳಿಕೆ ಕೇಳಿ ಹೊಟ್ಟೆ ಕಿಚ್ಚೇ ? ಸಂಶಯದಿಂದ ಮನಸ್ಸುಬೇಕು ಬೇಕಾದಂತೆ ವಿಚಾರ ಮಾಡಿತು. ಕೊನೆಗೊಂದು ದಿನ ಧೈರ್ಯಮಾಡಿ ಅವ್ವನನ್ನು ಒಬ್ಬಳೇ ಇದ್ದಾಗ ಕೇಳಿಯೇಬಿಟ್ಟೆ.

"ಅರುಣ, ನೀ ತಿಳಕೊಂಡ ಹಾಂಗ ಶ್ರೀದೇವಿ ಅವರ ಹೆಂಡತಿ ಅಲ್ಲ. ಉಮಾಪತಿರಾಯರ ಹೆಂಡತಿ ತೀರಿಕೊಂಡಾಳ. ಆಕೀ ಮಗಳು ಶಶಿಕಲಾ. ಈ ಶ್ರೀದೇವಿ ವಕೀಲರು ಇಟ್ಟುಕೊಂಡ ಹೆಣ್ಣು. ನೀ ಅವರ ಜೋಡಿ ಕೆಲಸಾ ಮಾಡತೀ ಅಂದಮ್ಯಾಲೆ ಎಲ್ಲಾ ವಿಷಯ ನಿನಗೂ ತಿಳಿದಿರಬೇಕು ಅಂತ ಹೇಳಿದೆ" ಅಷ್ಟು ಹೇಳಿ ಅವ್ವ ತನ್ನ ಕೆಲಸಕ್ಕೆ ಹೋಗಿಬಿಟ್ಟಿದ್ದಳು. ಮುಂದೆ ಮಾತಾಡುವುದೇ ಅಪಚಾರ ಎನ್ನುವಂತೆ. ನಾನು ಕೇಳಿದ ವಿಷಯವನ್ನು ನಂಬದವನಂತೆ ಮತ್ತೆ ಮತ್ತೆ ಅದನ್ನೇ ಮೆಲುಕು ಹಾಕುತ್ತ ಕುಳಿತುಬಿಟ್ಟಿದ್ದೆ.

ಕೆಲಸ ಹೆಚ್ಚಾದಂತೆ ನಾನು ವಕೀಲರ ಜೊತೆ ಮಾತಾಡಲು ದಿನವೂ ಅವರ ಮನೆಗೆ ಹೋಗಬೇಕಾಗುತ್ತಿತ್ತು. ಎಷ್ಟೋಸಲ ಅವರ ಮನೆಯಲ್ಲಿ ತಿಂಡಿ–ಊಟಗಳ ಉಪಚಾರವೂ ನಡೆಯುತ್ತಿತ್ತು. ಆಗೆಲ್ಲಾ ಶ್ರೀದೇವಿಯವರನ್ನು ಸೂಕ್ಷ್ಮವಾಗಿ ನಿರೀಕ್ಷಿಸುತ್ತಿದ್ದೆ. ಅವರ ನಯ, ವಿನಯ, ಸೌಜನ್ಯ, ಹಿತವಾದ ಮಾತು, ವಾತ್ಸಲ್ಯಪೂರ್ಣ ಉಪಚಾರ ಎಲ್ಲವೂ ಅತ್ಯುತ್ತಮ ಗೃಹಿಣಿಯ ಲಕ್ಷಣಗಳನ್ನೇ ಎತ್ತಿ ತೋರಿಸುತ್ತಿದ್ದವು. ಇವಳು ನೀತಿವಂತೆಯಲ್ಲದ, ಚಂಚಲ ಮನಸ್ಸಿನ ಹೆಣ್ಣು ಎನ್ನುವ ಭಾವನೆ ಕನಸು

ಮನಸ್ಸಿನಲ್ಲಿಯೂ ಬರಲಿಲ್ಲ. ವಕೀಲರಂತೂ ಕೂತರೆ ಸಿರಿ, ನಿಂತರೆ ಸಿರಿ, ಸಿರಿ ಇಲ್ಲದೆ ಅವರ ಎದೆಯ ಏರಿಳಿತವೂ ಇಲ್ಲ, ಉಸಿರಾಟವೂ ಇಲ್ಲ, ರೆಪ್ಪೆಯ ಬಡಿತವೂ ಇಲ್ಲ, ಎನ್ನುವಂತೆ ನಡೆದುಕೊಳ್ಳುತ್ತಿದ್ದರು. ಒಮ್ಮೆ ಜ್ವರದಿಂದ ವಕೀಲರು ಹಾಸಿಗೆ ಹಿಡಿದಾಗ ಶ್ರೀದೇವಿ ಅವರಿಗೆ ಆರೈಕೆ ಮಾಡಿದ್ದು ನೋಡಿ ನನ್ನ ಮನಸ್ಸಿನ ಮೂಲೆಯಲ್ಲಿದ್ದ ಅಲ್ಪ ಸ್ವಲ್ಪ ಹೊಲಸನ್ನೂ ತೊಳೆದುಹಾಕಿದೆ. ಹೊರಗೆ ಬಂದು ಇತರರೊಡನೆ ಹೆಚ್ಚಾಗಿ ಬೆರೆಯಲು ಇಷ್ಟಪಡದೆ ಸದಾ ಮನೆಯಲ್ಲೇ ಕಾಲ ಕಳೆಯಬಯಸುವ ಅಮ್ಮನಿಗೆ ನಾನು ಮಗನಾದೆ. ನನ್ನ ತಾಯಿಯಷ್ಟೇ ಗೌರವ ಅವರಿಗೂ ಕೊಡುತ್ತಾ ಬಂದೆ.

ಉಮಾಪತಿರಾಯರು ಸಾಯುವ ಮೊದಲು ಬರೆದಿದ್ದ ವಿಲ್‌ನಲ್ಲಿ ಅಮ್ಮ ಇರುವವರೆಗೆ ಆ ಮನೆ ಅವರಿಗೆ, ಆಮೇಲೆ ಶಶಿಕಲೆಗೆ-ಬ್ಯಾಂಕಿನಲ್ಲಿ ಇಪ್ಪತ್ತು ಸಾವಿರ ರೂಪಾಯಿ ಇಟ್ಟು ಅದರಿಂದ ಬರುವ ಬಡ್ಡಿಯಿಂದ ಅಮ್ಮನ ಉಪಜೀವನ ನಡೆಯಬೇಕು—ಅದರ ತರುವಾಯ ಅದೂ ಶಶಿಕಲೆಗೆ ಸೇರಬೇಕು ಎಂದು ಬರೆದಿದ್ದರು. ಅದಕ್ಕೆ ಸಾಕ್ಷಿಯಾಗಿ ಸಹಿ ಹಾಕಿದ್ದ ನನ್ನ ಮುಂದೆ ಉಮಾಪತಿರಾಯರು ತಮ್ಮ ಮನಸ್ಸು ಬಿಚ್ಚಿದ್ದರು.

"ನಾನು ಹೋದಮೇಲೆ ಸಿರಿ ಎಷ್ಟು ವರ್ಷ ಬದುಕಿರುತ್ತಾಳೋ ಏನೋ. ಮುಪ್ಪಿನ ಕಾಲದಲ್ಲಿ ಅವಳನ್ನು ನೋಡಿಕೊಳ್ಳಲು ಯಾರೂ ಇಲ್ಲದಂತಾಯಿತು. ಶಶಿಯನ್ನು ಬಿಟ್ಟರೆ ತನಗೆ ಬೇರೆ ಮಕ್ಕಳೇ ಬೇಡ ಎಂದುಬಿಟ್ಟಳು. ದೊಡ್ಡವಳಾದಂತೆ ಶಶಿಯೂ ಅವಳನ್ನು ದೂರಮಾಡುತ್ತ ಬಂದಳು. ಹೋಗಲಿ, ಶಶಿ ಈಗ ಗಂಡನ ಮನೆಯಲ್ಲಿ ಸುಖವಾಗಿದ್ದಾಳೆ. ಎಲ್ಲ ಆಸ್ತಿಯನ್ನೂ ನಿನ್ನ ಹೆಸರಿಗೆ ಬರೆಯುತ್ತೇನೆ. ನಿನ್ನನ್ನು ಜೋಪಾನ ಮಾಡುವವರಿಗೆ ನೀನೇ ಕೊಟ್ಟುಬಿಡು ಅಥವಾ ದತ್ತಕ ತೆಗೆದುಕೋ ಎಂದರೆ ಅದಕ್ಕೂ ಒಪ್ಪಲಿಲ್ಲ. ಹಟಮಾಡಿ ಎಲ್ಲವನ್ನೂ ನನ್ನಿಂದಲೇ ಶಶಿಗೆ ಬರೆಸಿಬಿಟ್ಟಳು. ಅವಳು ಬದುಕಿನಲ್ಲಿ ನನಗೆ ಕೊಟ್ಟಿದ್ದಕ್ಕೆ ಲೆಕ್ಕವೇ ಇಲ್ಲ. ಆದರೆ ಮಾತ್ರ ಏನೂ ತೆಗೆದುಕೊಳ್ಳಲಿಲ್ಲ." ಎಂದು ಹೇಳಿ ಅಷ್ಟು ಗಂಡೆದೆಯ ವಕೀಲರು ಮಕ್ಕಳಂತೆ ಕಣ್ಣೀರು ಹಾಕಿದರು.

ವಕೀಲರು ತೀರಿಕೊಂಡ ಮೇಲೆ ನನ್ನ ಕೆಲಸ ಹೆಚ್ಚಾದರೂ ಅದರಲ್ಲೇ ಬಿಡುವು ಮಾಡಿಕೊಂಡು ದಿನಕ್ಕೊಮ್ಮೆಯಾದರೂ ಅಮ್ಮನನ್ನು ಭೆಟ್ಟಿಯಾಗಿ ಬರುತ್ತಿದ್ದೆ. ತಂದೆಯ ಸಾವಿನ ಸುದ್ದಿ ಕೇಳಿ ಬಂದ ಶಶಿಕಲೆ ಗಂಡ ದಿಲ್ಲಿಗೆ

ಹೋದಮೇಲೆಯೂ ತಿಂಗಳೊಪ್ಪತ್ತು ಇಲ್ಲಿಯೇ ನಿಂತಿದ್ದಳು. ಈ ನಡುವೆ ರಜೆಗೆ ಬಂದಾಗ ಆಗಾಗ ಅವಳನ್ನು ನೋಡುತ್ತಿದ್ದರೂ ಅವಳ ಸ್ವಭಾವ ಪರಿಚಯು ನನಗೆ ಸರಿಯಾಗಿ ಆಗಿರಲಿಲ್ಲ. ಪಾಪ, ಅಮ್ಮ ನಾಲ್ಕು ದಿನಕ್ಕೇ ಹತ್ತು ವರ್ಷ ಹೆಚ್ಚಾದವರ ಹಾಗೆ ಕಾಣುತ್ತಿದ್ದರು. ಅವರ ದುಃಖ ತೀವ್ರ ನನಗೆ ಶಶಿಕಲೆ ತಾಯಿಯ ಮನಸ್ಸಿಗೆ ಸಮಾಧಾನ ಕೊಟ್ಟಾಳು ಎಂದು ಭಾವಿಸಿದ್ದೆ. ಒಂದು ದಿನ ಅಮ್ಮ,

" ಅರುಣ ನನಗೊಂದು ವಿಚಾರ ಬಂದ. ಶಶಿಕಲಾ ತಿರುಗಿ ಊರಿಗೆ ಹೋದಮ್ಯಾಲೆ ಇಲ್ಲೇ ನಾ ಒಬ್ಬಾಕಿನೇ ಇರುವಾಕಿ. ಮಂಚ, ಡ್ರೆಸಿಂಗ್ ಟೇಬಲ್, ಡೈನಿಂಗ್ ಟೇಬಲ್, ಸೋಫಾಸೆಟ್ಟು, ರೇಡಿಯೋಗ್ರಾಮ್ ಇವೆಲ್ಲಾ ಯಾತಕ್ಕ ಬೇಕು ? ಕೊಳ್ಳುವವರು ಯಾರರೆ ಸಿಗತಾರೇನು ನೋಡು. ಮಾರಿಸಿ ಕೊಟ್ಟುಬಿಡು " ಅಂದರು.

ಅವರ ಮಾತು ಮುಗಿಯುತ್ತಲೇ ಶಶಿಕಲೆ ಅವಸರದಿಂದ " ಮಿ. ಅರುಣ, ನಮ್ಮ ತಂದೆಯವರ ಕಾನೂನು ಪುಸ್ತಕ ಅದಾವಲ್ಲಾ ಅವು ಇನ್ನ ಯಾರಿಗೆ ಉಪಯೋಗಕ್ಕ ಬರತಾವ ? ಅದಕ್ಕ ಅವನ್ನೂ ಯಾರರೆ ಕೊಳ್ಳ ತಾರೇನು ನೋಡ್ರಿ " ಎಂದು ಹೇಳಿದಾಗ ಈ ಶಶಿಕಲೆ ಎಂಥವಳು ಇವಳ ಸ್ವಭಾವ ಎಂಥದು ಎನ್ನುವ ಕಲ್ಪನೆ ನನಗೆ ಸ್ಪಷ್ಟವಾಯಿತು. ಅದರ ಜೊತೆಗೆ ಅವಳೇ ಇವನ್ನೆಲ್ಲ ಮಾರಿಸಿ ರೊಕ್ಕ ಕಟ್ಟಿಕೊಂಡು ಹೋಗ ಬೇಕೆಂದು ಉಪಾಯ ತೆಗೆದಿದ್ದೂ ಹೊಳೆಯಿತು.

ವಕೀಲರ ಕಾನೂನು ಪುಸ್ತಕಗಳನ್ನು ಮಾರದೆ ಲಾ ಕಾಲೇಜಿನ ಲೈಬ್ರರಿಗೆ ಕೊಟ್ಟರೆ ಅವರ ಹೆಸರು ಉಳಿಯುತ್ತದೆ. ಅಷ್ಟೊಂದು ಬೆಲೆ ಯುಳ್ಳ ಪುಸ್ತಕಗಳು ಎಲ್ಲರಿಗೂ ಸಿಗುವುದಿಲ್ಲ. ಹೊಸ ವಕೀಲರಿಗೆ ಅವು ಗಳಿಂದ ಬಹಳ ಉಪಯೋಗವಾಗುತ್ತವೆ. ಉಮಾಪತಿರಾಯರ ಹೆಸರಿನ ವಿಂಗ್ ಒಂದನ್ನು ಮಾಡಿದರೆ ಒಳ್ಳೆಯದು ಎಂದು ನನ್ನ ಮನಸ್ಸಿನಲ್ಲಿದ್ದ ವಿಷಯವನ್ನು ಮರುದಿನ ಅಮ್ಮ ಒಬ್ಬರೇ ಇದ್ದಾಗ ಹೇಳಿಕೊಂಡೆ.

" ಒಟ್ಟು ಅಂದಾಜು ಈ ಪುಸ್ತಕಗಳ ಬೆಲೆ ಎಷ್ಟಾದೀತು ಅರುಣ " ಎಂದರು. ಅಮ್ಮ ಏನೋ ಯೋಚಿಸುತ್ತ.

" ಹತ್ತು ಸಾವಿರ ರೂಪಾಯಿ ಆದರೂ ಆಗಬಹುದು. ಆದರ ರೊಕ್ಕ ಕೊಟ್ಟರೂ ಇಂಥ ಪುಸ್ತಕ ಸಿಗೋದಿಲ್ಲ " ಅಂದೆ.

"ಹಾಂಗಾದರ ಮಾರೋದು ಬೇಡ. ಪುಸ್ತಕಾ ಲೈಬ್ರರಿಗೆ ಕೊಡಿಸಿ ಬಿಡು. ಅವರ ಹೆಸರು ಉಳೀಲಿ" ಅಂದರು. ಶಶಿಕಲೆಯನ್ನು ಒಂದು ಮಾತೂ ಕೇಳಲಿಲ್ಲ ಅಮ್ಮ ಎಂದು ನನಗೆ ಆಶ್ಚರ್ಯವಾಯಿತು. ಆದರೂ ಅದನ್ನು ಹೆಚ್ಚು ಹಚ್ಚಿಕೊಳ್ಳದೆ ಪುಸ್ತಕಗಳನ್ನು ಲೈಬ್ರರಿಗೆ ಸಾಗಿಸಿದೆ. ಆದರೆ ಅದರ ಹಿಂದೆ ನಡೆದ ಮಸಲತ್ತು ಎಷ್ಟೋ ದಿನಗಳ ಮೇಲೆ ನನಗೆ ಗೊತ್ತಾಯಿತು. ಅದೆಂದರೆ ಅಮ್ಮ ಶಶಿಕಲೆಗೆ ತಮ್ಮ ಹೆಸರಿನಲ್ಲಿ ಬ್ಯಾಂಕಿನಲ್ಲಿದ್ದ ಇಪ್ಪತ್ತು ಸಾವಿರದಲ್ಲಿ ಹತ್ತು ಸಾವಿರ ರೂಪಾಯಿ ಕೊಟ್ಟುಬಿಟ್ಟಿದ್ದರು. ಒಂದು ದೃಷ್ಟಿಯಲ್ಲಿ ಪುಸ್ತಕಗಳನ್ನು ತಾವೇ ಕೊಂಡು ಕಾಣಿಕೆಯಾಗಿ ಕೊಟ್ಟಿದ್ದರು. ಶಶಿಕಲೆ ಹೋಗುವಾಗ ಮನೆಯಲ್ಲಿಯ ಬಂಗಾರ, ಬೆಳ್ಳಿ, ಎಲ್ಲ ಸಾಮಾನು ಮಾರಿಬಂದ ಹಣ ಎಲ್ಲವನ್ನೂ ಒಯ್ದಿದ್ದಳು. ಅಮ್ಮ ತಮಗೆ ಬೇಕಾದಷ್ಟೇ ಪಾತ್ರೆ, ವಕೀಲರು ಮಲಗುತ್ತಿದ್ದ ಮಂಚ, ಅವರು ಬರೆಯುತ್ತಿದ್ದ ಕುರ್ಚಿ ಟೇಬಲ್ ಇಷ್ಟನ್ನೇ ಇಟ್ಟುಕೊಂಡಿದ್ದರು. ಅವರ ಮೈಮೇಲಿದ್ದ ಬಂಗಾರವೆಂದರೆ ಈ ಉಂಗುರವೊಂದೇ........

ಹೊರಬಾಗಿಲ ಸಪ್ಪಳವಾಯಿತು. ನಾನು ಹೇಳಿಕಳಿಸಿದ್ದ ಜನರೆಲ್ಲ ಬಂದಿದ್ದರು. ಅಮ್ಮನಿಗೆ ಬೇಕಾದವರೆಲ್ಲ ಬಂದು ನೋಡಿಕೊಂಡು ಹೋದರು. ಶಶಿಕಲೆಯಿಂದ ಉತ್ತರರೂಪವಾಗಿ ತಾರು ಫೋನು ಏನಾದರೂ ಬರುವ ಸಮಯ ಮೀರಿ ಹೋದಮೇಲೆ ಶವ ಎತ್ತಿದೆವು. ಸಂಸ್ಕಾರ ಮುಗಿಸಿ ತಿರುಗಿ ಅವರ ಮನೆಗೇ ಬಂದೆ. ಅವರು ಮಲಗಿದ್ದ ಜಾಗದಲ್ಲಿ ದೀಪ ಹಚ್ಚಿಟ್ಟೆ. ಯಾಕೋ ಮನೆಗೆ ಹೋಗುವ ಮನಸ್ಸಾಗದೆ ಬಾಬೂನನ್ನು ಮನೆಗೆ ಕಳಿಸಿ ನಾನು ಸುಮ್ಮನೆ ಅಲ್ಲಿಯೇ ಕುಳಿತಿದ್ದೆ.

ಉಮಾಪತಿರಾಯರು ಹೋದಮೇಲೆ ಅಮ್ಮ ಎರಡು ವರುಷ ಮಾತ್ರ ಬದುಕಿದ್ದರು. ಹಾಗೆ ನೋಡಿದರೆ ಸಾಯುವಂಥ ವಯಸ್ಸೂ ಅವರದಲ್ಲ. ಆದರೆ ತಮಗೆ ಗುಣವಾಗದ ಗಂಟಲು ಕ್ಯಾನ್ಸರ್ ರೋಗ ಸುರುವಾಗಿದೆ ಎಂದು ಗೊತ್ತಾದ ಮೇಲೆ ಬಹಳ ಸಮಾಧಾನದಿಂದ "ಅರುಣ ಇನ್ನು ಭಾಳ ಅಂದರ ಕೆಲವು ತಿಂಗಳೋ ದಿನಾನೋ ಇರ್ತೀನಿ. ಅವರು ಹೋದಮ್ಯಾಲೆ ಇನ್ನೂ ಎಷ್ಟು ವರ್ಷ ಈ ಭಾರಾ ತಾಳಬೇಕಪ್ಪಾ ಅಂತಿದ್ದೆ. ಅಂತೂ ದೇವರು ನನ್ನ ಮೊರಿ ಕೇಳಿದಾ" ಅಂದಿದ್ದರು.

ಅಮ್ಮನಿಗೂ ನನಗೂ ಒಂದು ಅಪರೂಪವಾದ ಬಾಂಧವ್ಯ, ಆತ್ಮೀಯತೆ ಬೆಳೆದುಬಂದಮೇಲೆ ಒಂದು ದಿನ ನಾನೇ ವಕೀಲರು ಅವರನ್ನು

ಮದುವೆಯಾದದ್ದು ಯಾವಾಗ ? ಹೇಗೆ ? ಎಂದು ಕೇಳಿದೆ. ಅದಕ್ಕೆ ಅವರು ಕೊಟ್ಟ ಉತ್ತರವನ್ನು ಅವರ ಶಬ್ದಗಳಲ್ಲಿಯೇ ಮೂಡಿಸುತ್ತಿದ್ದೇನೆ.

'ನನ್ನ ಅಪ್ಪ ನನ್ನನ್ನು ಒಂದು ದೊಡ್ಡ ಶ್ರೀಮಂತ ಕುಟುಂಬಕ್ಕೆ ಕೊಟ್ಟಿದ್ದರು. ಹದಿನಾರು ವರ್ಷಕ್ಕೆ ಮದುವೆಯಾದೆ. ಮುಂದೆ ಎರಡೇ ವರುಷಗಳಲ್ಲಿ ವಿಧವೆಯೂ ಆದೆ. ನಾವು ಬಡವರು ಅಲ್ಲದಿದ್ದರೂ ಗಂಡನ ಮನೆಯವರು ಬಹಳ ಶ್ರೀಮಂತರಿದ್ದರು. ನನ್ನವರು ಮದುವೆಯಾದದ್ದು ನನ್ನ ಚೆಲುವು ನೋಡಿ ಎಂದು ನನಗೆ ತಿಳಿದಿತ್ತು. ಅವರೇ ಹೋದಮೇಲೆ ಆ ಮನೆಯಲ್ಲಿ ನಾನು ಯಾರಿಗೂ ಬೇಡದ ವಸ್ತುವಾದೆ. ಅತ್ತೆ, ಮಾವ, ಭಾವ–ಮೈದುನರಿಂದ ತುಂಬಿದ ಮನೆಯಲ್ಲಿ ನನ್ನ ಪಾಡು ನಾಯಿಪಾಡಾಯಿತು. ಎಲ್ಲರಿಂದಲೂ ತಿರಸ್ಕಾರ ಅಪಮಾನ ಸಹಿಸಿದೆ. ಭಾವ ಮೈದುನರು ನನ್ನ ಬಗ್ಗೆ ಸ್ವಲ್ಪ ಆಸಕ್ತಿ ತೋರಿಸಿದರೂ ಸಾಕು, ಓರಗಿತ್ತಿಯರ ಕೊಂಕು ಮಾತು, ಬಯ್ಗಳಿಂದ ಹಣ್ಣಾಗುತ್ತಿದ್ದೆ. ಪ್ರಕೃತಿ ಸಹಜ ಪ್ರಾಯ, ನನ್ನ ಸೌಂದರ್ಯ, ಬೇರೆಯವರಿಗೆ ಕಣ್ಣು ಕಿಸುರಾದಾಗ ನನಗೆ ಜೀವವೇ ಬೇಡವಾಯಿತು. ಒಂದು ರಾತ್ರಿ ಬಾವಿಗೆ ಬೀಳಲು ಹೋದೆ, ಮೈದುನ ಯಾವಾಗ ಎಚ್ಚರವಾಗಿದ್ದನೋ ನನನ್ನು ಉಳಿಸಿದ. ಸರಿ, ಅವನಿಗೂ ನನಗೂ ಗಂಟುಹಾಕಿ ಒದರಾಡಿ ಛೀಮಾರಿ ಹಾಕಿದರು ಮನೆಯ ಮಂದಿ. ಇದೆಲ್ಲ ನನ್ನ ಅಪ್ಪನ ಕಿವಿಗೆ ಬಿದ್ದಿತು. ನನ್ನ ಕಳ್ಳು ನನಗೆ ಭಾರವಲ್ಲ ಅಂತ ಅವರಿಗೆ ಹೇಳಿ ನನ್ನನ್ನು ಕರೆದುಕೊಂಡು ಬಂದ. ಆಗಿನ್ನೂ ನನಗೆ ಇಪ್ಪತ್ತು ವರುಷ. ಬರಬರುತ್ತ ಅಪ್ಪ ಅಣ್ಣನ ಮನಸ್ಸು ಬದಲಾಯಿತು. ಅವರಿವರ ಮಾತು ಕೇಳಿ ಬೀಗರ ಹತ್ತಿರ ಆಸ್ತಿಯಲ್ಲಿ ನನ್ನ ಪಾಲು ಕೇಳಿದ. ನಾನು ಬೇಡವೆಂದರೆ ಕೇಳಲಿಲ್ಲ. "ನಾ ಮಾಡೋದೆಲ್ಲಾ ನಿನ್ನ ಹಿತಕ್ಕ. ನೀ ಇನ್ನೂ ಸಣ್ಣಾಕಿ. ನಾವು ಹೋದಮ್ಯಾಲೆ ನಿನ್ನ ಯಾರು ನೋಡಿಕೊಂಡಾರು ? ಕಾಯ್ದೆ ಪ್ರಕಾರ ಅವರು ಆಸ್ತಿ ನಿನಗ ಕೊಡಲಿಕ್ಕೇ ಬೇಕು. ಆಮೇಲೆ ನೀನs ದತ್ತಕ ಮಾಡಿಕೊಳೂವಂತೆ. ಎಂದು ನನಗೆ ಬಯ್ದು ಬುದ್ಧಿ ಹೇಳಿ ಒಪ್ಪಿಸಿದರು. ಬೀಗರ ಮೇಲೆ ಕೇಸು ಹಾಕೋದಕೆ ಉಮಾಪತಿರಾಯರನ್ನ ಹಿಡಿದರು. ನನಗೆ ಆಸ್ತಿಯಲ್ಲಿ ಪಾಲು ಸಿಗುವ ಭರವಸೆ ವಕೀಲರಿಂದ ಸಿಕ್ಕಾಗ ಅಪ್ಪ, ಅಣ್ಣ, ಅತ್ತಿಗೆ ನನಗೆ ಉಪಚಾರ ಮಾಡಿದ್ದೇ ಮಾಡಿದ್ದು. ತೂಗು ಮಣೆಯಲ್ಲಿಟ್ಟು ತೂಗುವುದೊಂದೇ ಬಾಕಿ ಇತ್ತು. ಎಲ್ಲಾ ದುಡ್ಡಿನ ಮಹಿಮೆ. ಅಣ್ಣನ ಮಗನನ್ನು ನನಗೆ

ದತ್ತಕ ಕೊಡುವ ಮಾತೂ ಗಟ್ಟಿಯಾಗಿತ್ತು. ಬೀಗರು ಸುಲಭವಾಗಿ ಪಾಲು ಕೊಡಲು ತಯಾರಿರಲಿಲ್ಲ. ಕೇಸು ನಡೆಯಿತು.

ಆದೇ ಮೊದಲನೆಯ ಸಲ ನಾನು ಅಪ್ಪನ ಜೊತೆಗೆ ವಕೀಲರ ಮನೆಗೆ ಬಂದಿದ್ದೆ. ನಾವೆಲ್ಲ ವರಾಂಡದಲ್ಲಿ ಕಾದು ಕುಳಿತಿದ್ದೆವು. ವಕೀಲರು ಇನ್ನೂ ಹೊರಗಿನ ಕೋಣೆಗೆ ಬಂದಿರಲಿಲ್ಲ. ಒಳಗೆ ಸಣ್ಣ ಹುಡುಗಿಯೊಬ್ಬಳು ಅಳುವುದೂ, ಚೀರುವುದೂ ಕೇಳುತ್ತಿತ್ತು. ಯಾರ್‍ಯಾರೋ ಸಮಾಧಾನ ಮಾಡುತ್ತಿದ್ದರು. ಆದರೂ ಹುಡುಗಿ ಒಂದೇಸಮನೆ 'ಅವ್ವಾs' ಎಂದು ಅಳುತ್ತಲೇ ಇತ್ತು. ವಕೀಲರ ಹೆಂಡತಿ ತೀರಿಕೊಂಡಿದ್ದಾರೆ. ಮಗಳು ಅನಾಥಳಾಗಿದ್ದಾಳೆ ಎನ್ನುವ ವಿಷಯ ನನಗೆ ತಿಳಿದಿತ್ತು. ಯಾಕೋ ನನ್ನ ಜೀವ ಹರಿಯಿತು. ಆ ತಬ್ಬಲಿ ಮಗು ಅಳುವುದು ಕೇಳಿ ಸಂಕಟವಾಯಿತು. ಅದನ್ನು ಎತ್ತಿಕೊಂಡು ರಮಿಸಬೇಕು ಎನ್ನುವ ಕನಿಕರ ಉಕ್ಕಿ ಅಪ್ಪನತ್ತ ನೋಡದೆ ದಿಗ್ಗನೆ ಎದ್ದು ಅವರ ಮನೆಯೊಳಕ್ಕೆ ಹೋಗಿಬಿಟ್ಟೆ. ಕೆಲಸ ದವಳು ಶಶಿಕಲೆಗೆ ಹಾಲುಕುಡಿಸಲು ಹೋರಾಡುತ್ತಿದ್ದಳು. ಆದರೆ ಅವಳು ಮಾತ್ರ ಕೈಕಾಲು ಝಾಡಿಸಿ ಹಾಲಿನ ಕಪ್ಪು ತಳ್ಳಿ, ಕಣ್ಣು ಮುಚ್ಚಿಕೊಂಡು ಚೀರುತ್ತಿದ್ದಳು. ನಾನು ಹೋಗಿ ಅವಳನ್ನು ಎತ್ತಿಕೊಂಡು ಎದೆಗೆ ಅವಚಿ ಕೊಂಡೆ. ಅವಳು ಕಣ್ಣು ತೆಗೆದು ನೋಡೋದಕ್ಕೆ ಪ್ರಯತ್ನ ಮಾಡಿ ದರೂ ನಾನು ಮುಖ ತೋರಿಸದೆ ಹಾಗೆಯೇ ತಬ್ಬಿಕೊಂಡು ಅವಳ ಬೆನ್ನು, ತಲೆ ಮೃದುವಾಗಿ ನೇವರಿಸುತ್ತಿದ್ದೆ. ಅತ್ತು ಅತ್ತು ದಣಿದ ಶಶಿ ನನ್ನ ಹೆಗಲ ಮೇಲೆಯೇ ನಿದ್ದೆ ಮಾಡಿದಳು. ನಾವಿಬ್ಬರೂ ಹಾಗೆ ಕುಳಿತಿದ್ದಾಗ ಅವಳ ತಂದೆ ರೂಮಿನ ಬಾಗಿಲ ಹತ್ತಿರ ಬಂದು ನಿಂತರು. ನಾನು ಅದೇ ಮೊದಲಸಲ ಅವರನ್ನು ನೋಡಿದ್ದು.

ಅಂದಿನಿಂದ ನನ್ನ, ಶಶಿಕಲೆಯ ಪರಿಚಯ ಹೆಚ್ಚಾಗಿ ನಾನೇ ಹಾಲು ಕುಡಿಸಬೇಕು, ಸ್ನಾನ ಮಾಡಿಸಬೇಕು, ತಲೆ ಬಾಚಬೇಕು ಎಂದು ಹಟ ಮಾಡತೊಡಗಿದಳು. ವಕೀಲರು ನಮ್ಮ ಕೇಸು ಹಿಡಿದಿದ್ದಾರೆ ಎನ್ನುವ ಕಾರಣದಿಂದ ಅವರ ಮನೆಗೆ ಹೋಗುವುದಕ್ಕೆ ಅಪ್ಪ ಬೇಡವೆನ್ನುತ್ತಿರಲಿಲ್ಲ. ದಿನವೂ ಭೆಟ್ಟಿಯಾದರೂ ನಾನು ವಕೀಲರು ಮಾತಾಡಿದ್ದೇ ಬಹಳ ಕಡಿಮೆ. ಕಣ್ಣುಗಳು ಮಾತನಾಡುತ್ತಿದ್ದವು. ಮೌನವು ನಮಗೆ ಪ್ರಿಯವಾಗಿತ್ತು. ಕಾಲ ಹೆಚ್ಚು ಹೆಚ್ಚಾಗಿ ಒಬ್ಬರನ್ನೊಬ್ಬರಿಗೆ ತಿಳಿಸಿ ಕೊಡುತ್ತಿತ್ತು. ನಾನು ಮಾಡುವುದು ಸರಿಯೋ, ತಪ್ಪೋ ಎಂದು ವಿವೇಚಿಸುವ ಪರಿಸ್ಥಿತಿಯ

ಲ್ಲಿಯೂ ನಾನು ಇರಲಿಲ್ಲ. ಯಾಕೆಂದರೆ ನಾನು ನನಗೇ ತಿಳಿಯದೆ ಅವರನ್ನು ಪ್ರೀತಿಸುತ್ತಿದ್ದೆ.

ನಮ್ಮ ಕೇಸು ಇನ್ನೂ ನಡೆಯುತ್ತಲೇ ಇತ್ತು. ಶಶಿಕಲೆಗೆ ಜ್ವರ ಹೆಚ್ಚಾಗಿ ಡಾಕ್ಟರು ಟೈಫಾಯ್ಡ್ ಎಂದಾಗ ಅವರು ಬಹಳ ಕಂಗಾಲಾಗಿದ್ದರು. ಅವತ್ತು ಅವರ ಮುಖನೋಡುವ ಹಾಗಿರಲಿಲ್ಲ. ಮನೆಯಲ್ಲಿ ರಾತ್ರಿ ಅವಳನ್ನು ನೋಡಿಕೊಳ್ಳುತ್ತೇನೆಂದು ಅಪ್ಪನಿಗೆ ಹೇಳಿ ಅವತ್ತು ಅಲ್ಲಿಯೇ ಉಳಿದೆ. ಆಸ್ತಿ ತೆಗೆದುಕೊಂಡು ಮಗನನ್ನು ದತ್ತಕ ಕೊಡುವ ಕನಸು ಕಾಣುತ್ತಿದ್ದ ಅಣ್ಣ—ಅತ್ತಿಗೆಯರೂ ನನ್ನನ್ನು ಆಕ್ಷೇಪಿಸಲಿಲ್ಲ. ರಾತ್ರಿ ಹೆಚ್ಚಾದಂತೆ ಜ್ವರ ಏರಿ ಶಶಿ ಬಾಯಿಗೆ ಬಂದಂತೆ ಬಡಬಡಿಸುತ್ತಿದ್ದಳು. ನಾನು ಆಗಾಗ ಜ್ವರ ಅಳೆಯುತ್ತ, ಬಾಯಾರಿಕೆ ಅಂದಾಗ ಗ್ಲೂಕೋಸ್ ನೀರು ಕುಡಿಸುತ್ತ ಹಣೆಯ ಮೇಲೆ ಯೂಡಿಕೊಲೋನ್ ನಲ್ಲಿ ನೆನೆಸಿದ ಪಟ್ಟಿಹಾಕುತ್ತ ಬೆಳಗಿನವರೆಗೂ ಹಾಗೆಯೇ ಕೂತಿದ್ದೆ. ನಡುನಡುವೆ ಒಂದೆರಡು ಸಲ ವಕೀಲರು ಎದ್ದುಬಂದು ನೋಡಿ ಹೋಗಿದ್ದರು. ಅವರಿಗೂ ನಿದ್ದೆ ಬಂದಿರಲಿಲ್ಲ. ಬೆಳಿಗ್ಗೆ ಅವಳ ಜ್ವರ ಇಳಿಯುತ್ತ ಬಂದಾಗ ನಾನು ಕೂತಲ್ಲಿಯೇ ಕಣ್ಣುಮುಚ್ಚಿದೆ. ಎಚ್ಚರವಾದಾಗ ವಕೀಲರ ರಗ್ಗು ನನ್ನ ಮೈಮೇಲಿತ್ತು. ಅವರ ಕೈ ಮೃದುವಾಗಿ ನನ್ನ ಹಣೆಯ ಮೇಲೆ ಆಡುತ್ತಿತ್ತು. 'ಸಿರಿ' ಎಂದರು. ಅವರ ಕಣ್ಣುಗಳಲ್ಲಿಯ ಮಿಂಚು ಅಪೂರ್ವವಾಗಿತ್ತು. ಅವರು ಏನು ಹೇಳಬೇಕೆನ್ನುತ್ತಾರೆ ಎನ್ನುವುದು ಹೇಳದೆಯೆ ನನ್ನ ಹೃದಯಕ್ಕೆ ತಿಳಿದುಹೋಯಿತು. ಮೌನವಾಗಿ ಅವರ ಕೈಮೇಲೆ ನನ್ನ ಕೈ ಇಟ್ಟೆ. ಅಂದಿನಿಂದ ತಿರುಗಿ ನನ್ನ ತವರುಮನೆಗೆ ಹೋಗಲಿಲ್ಲ. ಜನ ಬಾಯಿಗೆ ಬಂದಂತೆ ಆಡಿಕೊಂಡರೂ ವಕೀಲರು ನನ್ನ ಕೈಬಿಡದೆ ರಿಜಿಸ್ಟರ್ಡ್ ಮದುವೆ ಮಾಡಿಕೊಳ್ಳೋಣ ಎಂದರೂ ನಾನೇ ಬೇಡವೆಂದೆ. ಸಮಾಜದ ದೃಷ್ಟಿಯಲ್ಲಿ ಹೇಗಿದ್ದರೂ ನಾನು ವಿಧವೆ, ಕಳಂಕಿನಿ, ಇಂಥ ಸಮಾಜಕ್ಕೆ ಸಮಜಾಯಿಷಿ ಕೊಡೋದು ನನಗೆ ಬೇಕಾಗಿಲ್ಲ. ನಾನು ಸಾಯುವವರೆಗೂ ನಿಮ್ಮ ಸಂಗಾತಿ. ಅಷ್ಟು ಸಾಕು ನನಗೆ ಅಂದೆ. ಕೇಸು ಮುಂದುವರಿಸುವುದು ಬೇಡವೆಂದೆ. ಅವರಿಗೂ ಇಷ್ಟವಿರಲಿಲ್ಲ. ಬಿಟ್ಟುಬಿಟ್ಟರು. ಆಸ್ತಿ ಕೈತಪ್ಪಿದ್ದಕ್ಕೆ ತವರಿನ ಬಳಗ ನನ್ನನ್ನು ತೂಗುಮಣೆಯಿಂದ ತಿಪ್ಪೆಗೆ ಚೆಲ್ಲಿದರು. ಅವರ ಪಾಲಿಗೆ ನಾನು ಸತ್ತು

ಹೋದೆ. ಮಗಳನ್ನು ನೋಡಿಕೊಳ್ಳಲು ಬಂದವಳಿಗೆ ದೊಡ್ಡ ಮಗುವನ್ನೂ ನೋಡಿಕೊಳ್ಳಬೇಕಾಯಿತು. ಇದು ಅಮ್ಮನ ಕತೆ.

ವಕೀಲರು ನಿಮ್ಮ ಹಟದಂತೆ ವಿಲ್ ಬರೆದ ದಿನ ಕಣ್ಣೀರು ಹಾಕಿದ್ದು ಅಮ್ಮನಿಗೆ ಹೇಳಿದ್ದೆ. ಅಮ್ಮನ ಕಣ್ಣು ತುಂಬಿಬಂದಿತ್ತು. "ಅವರು ನನಗ ಎಂದೂ ಬತ್ತಲಾರದ ಪ್ರೀತಿ ಕೊಟ್ಟರು ಅರುಣ. ಆ ಪ್ರೀತಿ ಗುರುತಾಗಿ ಈ ಉಂಗುರಾ ಕೊಟ್ಟರು. ಇದಕ್ಕೂ ಹೆಚ್ಚಾಗಿ ಆಸ್ತಿ ಪಾಸ್ತಿ ನನಗ ಒಂದೂ ಬೇಕಾಗಿದ್ದಿಲ್ಲ" ಅಂದಿದ್ದರು.

ಅಂತ್ಯಕ್ರಿಯೆಯ ಖರ್ಚು ನಾನೇ ವಹಿಸಿಕೊಂಡಿದ್ದೆ. ಅಮ್ಮನ ಉಂಗುರ ನನ್ನ ಜೇಬಿನಲ್ಲಿಯೇ ಇತ್ತು. ಎತ್ತಿ ಅಂಗೈಯಲ್ಲಿಟ್ಟುಕೊಂಡೆ. "ಅಮ್ಮ, ನಿಮ್ಮಿಬ್ಬರ ಪ್ರೀತಿಯ ಗುರುತಾಗಿ ಇವನ್ನು ನಾನೇ ಇಟ್ಟುಕೋತೇನೆ" ಎಂದು ಹೇಳಿದೆ. ದೀಪ ನಿಧಾನವಾಗಿ ಉರಿಯುತ್ತಿತ್ತು. ಎದ್ದು ಹೊರಬಂದು ಬಾಗಿಲಿಗೆ ಕೀಲಿ ಹಾಕಿದೆ.

ಆಜನ್ಮ ಶಿಕ್ಷೆ

ಅವಳ ಪರವಾಗಿ ವಾದಿಸಲು ಸರಕಾರದಿಂದಲೇ ನಿಯಮಿಸಲ್ಪಟ್ಟ ವಕೀಲನಾಗಿ ಅವಳನ್ನು ಮೊದಲು ಭೆಟ್ಟಿಯಾಗಲು ಹೋದೆ. ಅವಳಿದ್ದ ಜಾಗ ತೋರಿಸಿ ಕಾನ್‌ಸ್ಟೇಬಲ್ ಹೊರಗೆ ಹೋದ ಮೇಲೆ ಮಬ್ಬು ಬೆಳಕಿನಲ್ಲಿ ದಿಟ್ಟಿಸಿ ನೋಡಿದೆ. ಹಸಿರೋ ಕೆಂಪೋ ಹೇಳಲು ಬಾರದಷ್ಟು ಬಣ್ಣ ಹೋಗಿ ಮಣ್ಣಾಗಿದ್ದ ಹರಕು ಸೀರೆ, ಎಣ್ಣೆ ಕಾಣದ ಕೆದರಿದ ತಲೆ, ಬಡಕಲಾಗಿದ್ದ ದೇಹ ಇಷ್ಟೇ ನನಗೆ ಕಂಡದ್ದು. ಲಾಕಪ್ಪಿನ ಒಂದು ಮೂಲೆಯಲ್ಲಿ ಮೊಣಕಾಲು ಸಂದಿಯಲ್ಲಿ ತಲೆ ಹುದುಗಿಸಿ ಕುಳಿತವಳು ನಾನು ಬಂದದ್ದು ತಿಳಿದರೂ ಹೊರಳಿ ನೋಡಲಿಲ್ಲ. ಹೆತ್ತ ಕೂಸಿನ ಕೊಲೆಯ ಆಪಾದನೆ ಹೊತ್ತ ತಾಯಿ. ನನಗೆ ಅವಳ ಮುಖ ನೋಡುವ ತವಕ ಹೆಚ್ಚುತ್ತಿತ್ತು. ಇನ್ನೊಂದು ಹೆಜ್ಜೆ ಮುಂದಿಟ್ಟು 'ಜಾನವ್ವಾ' ಅಂದೆ. ನೀಳವಾದ ಮೂಗು, ದೊಡ್ಡ ದೊಡ್ಡ ಕಣ್ಣುಗಳು, ರಕ್ತಹೀನತೆಯಿಂದ ಬಿಳಿಚಿಕೊಂಡ ಮುಖ ಇತ್ತ ಹೊರಳಿತು. 'ನಾನು ನಿನ್ನ ವಕೀಲ. ನಿನ್ನ ಪರವಾಗಿ ಕೋರ್ಟಿನ್ಯಾಗ ವಾದಿಸತೇನಿ' ಆಶ್ಚರ್ಯದಿಂದ ಕಣ್ಣುಗಳು ಇನ್ನೂ ದೊಡ್ಡವಾದವು. ಓs ಇವಳು ತಿಳದಾಕಿ ಅಲ್ಲ. ಕೂಲಿಯವಳು. ಇವಳಿಗೆ ಎಲ್ಲಾ ತಿಳಿಸಿ ಹೇಳಬೇಕು ನೋಡವ್ವಾ, ನೀನು ಬಡವಿ, ದಿಕ್ಕಿಲ್ಲದಾಕಿ. ಅದಕ್ಕs ಸರಕಾರದವರು ನಿನ್ನ ಸಲುವಾಗಿ ಕೋರ್ಟಿನೊಳಗೆ ಮಾತಾಡಲಿಕ್ಕೆ ನನ್ನ ಕಳಿಸ್ಯಾರ. ನೀನು ಹೇಳೂದೆಲ್ಲಾ ನನ್ನ ಮುಂದ ಅಂಜಿಕೆ ಇಲ್ಲದs ಹೇಳು.'

'ನೀವು ವಕೀಲರು? ಕೋರ್ಟಿನ್ಯಾಗ ಏನು ಮಾತಾಡತೀರಿ?'

"ನಿನ್ನ ಕೇಸು ನಡಸತೀನಿ. ನೀನು ನಿರಪರಾಧಿ ಅಂತ ಸಿದ್ಧ ಮಾಡತೇನಿ. ನಿನಗ ಬಿಡುಗಡಿ ಆಗದಿದ್ದರೂ ಶಿಕ್ಷೆ ಕಡಿಮಿ ಆಗತದ ಅನ್ನೂ ಭರವಸೆ ಅದs ನನಗ.'

ಉಹುಂ ಎಂದು ಅಡ್ಡಡ್ಡ ತಲೆ ಆಡಿಸಿದಳು. 'ಸಾಧ್ಯ ಇಲ್ಲಾ.'

‘ ಯಾಕ ? ಯಾಕ ಸಾಧ್ಯ ಇಲ್ಲಾ ? ’

‘ ಯಾಕಂದ್ರ. ನಾನು ಖರೇನ ಖೂನಿ ಮಾಡೇನಿ. ನಾನು ಹೊಟ್ಟೀ ಹೊತ್ತು ಹಡದ ಕೂಸಿನ ಕುತ್ತಿಗಿ ಹಿಚಿಕಿ ಕೊಂದೇನಿ ನಾ ನಿರಪರಾಧಿ ಅಲ್ಲಾs ’ ದನಿ ಹಸಿಯಾಗಿದ್ದರೂ ಕಣ್ಣುಗಳು ಒಣಗಿದ್ದವು. ಅತ್ತು ಅತ್ತು ಕಣ್ಣೀರು ಮುಗಿದಿರಬೇಕು ಅಥವಾ ಮಾಡಿದ ತಪ್ಪಿಗೆ ಶಿಕ್ಷೆ ಅನುಭವಿಸಬೇಕೆನ್ನುವ ಭಂಡ ಧೈರ್ಯವಿರಬೇಕು.

‘ ಜಾನವ್ವಾs ನೀನು ಉಳಿದ ವಿಚಾರಾ ಎಲ್ಲಾ ಬಿಡು. ಖರೇನ ಏನು ನಡೀತು ಅನ್ನೂದು ನನ್ನ ಮುಂದ ಹೇಳು. ಸಾಧ್ಯ ಇದ್ದಷ್ಟು ಪ್ರಯತ್ನ ಮಾಡತೇನಿ. ’

‘ ರಾಯರs ನಿಮ್ಮ ಹೆಸರೇನೋ ? ನೀವು ಯಾರೋ ನನಗ ಗೊತ್ತಿಲ್ಲ. ನನ್ನಂಥಾಕೀಗೆ ಸಹಾಯಾ ಮಾಡಾಕ ಬಂದೀರಿ. ನೀವು ಪುಣ್ಯವಂತರು. ನಿಮಗ ಕೈ ಜೋಡಸತೇನಿ. ನನ್ನ ಪಾಡಿಗೆ ನನ್ನ ಬಿಟ್ಟ ಬಿಡ್ರಿ. ಕೂಸನ್ನ ಕೊಂದಕ್ಕ ನನ್ನ ಜೀವಾ ತೊಗೊಂಡರೂ ಶಿಕ್ಷಾ ಅನುಭೋಗಸಾಕ ತಯಾರ ಇದ್ದೀನಿ. ನಾ ಸತ್ತರ ಅಳೂವವರು ಯಾರು ? ’

‘ ಯಾಕ ನಿನಗ ತಂದಿ ತಾಯಿ, ಗಂಡ ಬಂಧು ಬಳಗ........ ’

‘ ಇದ್ದರು ಒಂದು ಕಾಲಕ್ಕ. ಆದರ ಈಗ ಯಾರೂ ಇಲ್ಲಾ. ಮತ್ತ ಬದಕಬೇಕಂತ ಆಶಾನೂ ಇಲ್ಲಾ. ನಾನು ಸತ್ತು ಹೋದರ ಸುಖಾ ಆದ ನನಗ ’ ತಿರಸ್ಕಾರದಿಂದ ತನ್ನಲ್ಲೇ ನಕ್ಕಳು.

ಇವಳು ಒಳ್ಳೆಯ ಮನೆತನದ ವಿದ್ಯಾವಂತ ಯುವತಿಯಾಗಿದ್ದಿರಬೇಕು. ಮಾತು ರೀತಿಯಿಂದ ಕೂಲಿಯವಳಂತೆ ಕಾಣಿಸುವುದಿಲ್ಲ. ದುಃಸ್ಥಿತಿಯಲ್ಲಿದ್ದಾಳೆ. ಸಾಧ್ಯವಿದ್ದರೆ ಪಾರು ಮಾಡಬೇಕು. ಅದಕ್ಕಾಗಿ ಅವಳನ್ನು ಇನ್ನಷ್ಟು ತಿಳಿಯಬೇಕೆನ್ನುವ ಹಟ ಹೆಚ್ಚಿತು ನನಗೆ. ‘ ನಾನು ಈಗ ಇಲ್ಲೆ ಒಳಗ ಬರೂ ಮುಂದ ಅಂಗಳದಾಗ ಒಬ್ಬ ಹುಡುಗನ್ನ ನೋಡಿದೆ. ಅಂವಾ ನಿನಗ ಏನಾಗಬೇಕು?’ ಎಂದೆ.

‘ನನ್ನ ಮಗಾರೀs’ ಒಣಗಿದ ಕಣ್ಣುಗಳಲ್ಲಿ ನೀರು ಚಿಮ್ಮಿತು. ‘ನನ್ನ ಹಿಡಿದು ಹಾಕಿದಾಗಿಂದ ಅಲ್ಲೇ ಕುಂತಾನ. ನಿನ್ನೆ ರಾತ್ರಿ ಎಲ್ಲಾ ಅಳತಿದ್ದಾ. ಪೋಲಿಸರು ಜಬರಿಸಿದಾಗ ಸುಮ್ಮನಾದ.’

‘ ಒಂದು ಕೂಸನ್ನ ಕೊಂದದ್ದು ನಿನಗ ಸಾಕಾಗಿಲ್ಲೇನು ? ಅವನೂ ಸಾಯಲಿ ಅಂತಿಯೇನು ? ನೀ ಇಲ್ಲದ ಅಂವಾ ಹ್ಯಾಂಗ ಬದಕಬೇಕು ? ’

‘ ಅಯ್ಯೋ ’ ಎಂದು ಸೆರಗು ಮುಸುಕು ಹಾಕಿ ಜಾನವ್ವ ಗೋಳಿಟ್ಟಳು. ಅವಳನ್ನು ಸ್ವಲ್ಪ ಹೊತ್ತು ಅಳಲು ಬಿಟ್ಟು ಮತ್ತೆ ಕೇಳಿದೆ–ಈಗ ಹೇಳು ಖರೇನ ಸೀ ಯಾರು ? ಹುಡುಗನ ತಂದಿ ಯಾರು ? ಕೂಸನ್ನ ಯಾಕ ಕೊಂದಿ ? ’

ಕ್ಲಬ್ಬಿನಲ್ಲಿ ಆ ರಾತ್ರಿ ‘ ಮಿಸ್ಟರ್ ಪಾಟೀಲರ ನೀವು ಇವತ್ತ ಕೋರ್ಟಿನಾಗ ಏನ ಅದ್ಭುತ ಮಾತಾಡಿದಿರಿ. ನನಗ ಭಾಳ ಸೇರಿತು Really I appreciate it. ” ಎಂದರು ಮನೋಹರ ಸಿಗರೇಟಿನ ಬೂದಿ ಕೊಡುವುತ್ತ.

ಇಸ್ಪೀಟು ಪೀಸುತ್ತಿದ್ದ ನಾನು ಸುಂದರವಾದ ಸ್ಟೈಲ್ ಕೊಟ್ಟು ‘ Thanks ’ ಎಂದೆ. ಮನಸ್ಸಿನಲ್ಲಿ ನಿಜವಾಗಿಯೂ ನನಗೆ ಆನಂದವಾಗಿತ್ತು. ಕಾರಣ ಸರಕಾರೀ ವಕೀಲ ಮನೋಹರರೇ ಅಂದು ನನ್ನ ವಿರುದ್ಧ ವಾದಿಸಿದ್ದರು. ಆದರೂ ನಾನೇ ಗೆದ್ದಿದ್ದೆ. ನನ್ನ ನಗು ವ್ಯಂಗ್ಯವಾಗಿ ತೋರಿತೋ ಅಥವಾ ಗುಟುಕರಿಸಿದ ವ್ಹಿಸ್ಕಿಯ ಪರಿಣಾಮವೋ ಮನೋಹರ ಆವೇಶಭರಿತರಾಗಿ ಹೇಳಿದರು. ‘ ಆದರ ಪಾಟೀಲರ ಖರೇನ ಆ ಹೆಂಗಸಿಗೆ ಕನಿಷ್ಠ ಐದು ವರ್ಷ ಶಿಕ್ಷಾ ಆಗಬೇಕಾಗಿತ್ತು ಅಂತ ಅಭಿಪ್ರಾಯ ಅದ. ಯಾಕ ಅಂದರ ....’

‘ ಮನೋಹರ, ಯಾಕ ಅನ್ನೋದು ನನಗ ಗೊತ್ತದ. ಅವಳು ಅನೀತಿವಂತಳು, ವ್ಯಭಿಚಾರಿ, ಮತ್ತ ಹೆತ್ತ ಕೂಸನ್ನ ಕೊಂದು ನಿಮ್ಮ ದೃಷ್ಟಿಯೊಳಗೆ ರಾಕ್ಷಸಿ ಆಗಿದ್ದಳು. ’

‘ Correct. ಪಾಟೀಲರs ಸರಿಯಾಗಿ ಹೇಳಿದಿರಿ. ಇಂಥವರಿಂದ ನಮ್ಮ ಸಮಾಜ ಎಷ್ಟು ಹೀನಸ್ಥಿತೀಗೆ ಇಳಿಲಿಕ್ಕೆ ಹತ್ತೇದ ನೋಡ್ರಿ. ನಮ್ಮ ಭಾರತೀಯ ಸಂಸ್ಕೃತಿ ಎಂಥಾದ್ದು ! ನಮ್ಮ ಭಾರತೀಯ ನಾರಿ ತನ್ನ ನಯ, ವಿನಯ, ಲಜ್ಜೆಯಿಂದ ಎಲ್ಲಾರಿಗೂ ಆದರ್ಶ ಆಗಿರಬೇಕು. ಅದು ಬಿಟ್ಟು ಆ ಹೆಂಗಸು ಇಂಥಾ ಕೆಲಸಾ ಮಾಡಿಯೂ ಸ್ವಲ್ಪೂ ನಾಚಿಕೆ ಇಲ್ಲದ ತಲೆ ಎತ್ತಿ ನಿಂತು ಕೋರ್ಟಿನ್ಯಾಗ ಎಲ್ಲಾರ್ನೂ ಹ್ಯಾಂಗ ದಿಟ್ಟಿಸಿ ನೋಡುತ್ತಿದ್ದಳು. ನನಗಂತೂ ಭಾಳ ಅಸಹ್ಯ ಆಯ್ತು. ಇಂಥವರಿಗೆ

ಕಠಿಣ ಶಿಕ್ಷಾ ಆದರ ದಾರಿಗೆ ಬರತಾರ, ಇಲ್ಲಾಂದರ ನಮ್ಮ ಸಂಸ್ಕೃತಿಯ ಅಧಃಪತನ ನಮ್ಮ ಕಣ್ಣ ಮುಂದ ಆಗ್ತದ ನೋಡ್ತಿರ್ರಿ ನೀವೂ"

"ಇರಲಿ ಬಿಡ್ರಿ ಮನೋಹರ ಮೊದಲ ಎಲಿ ಎತ್ತಿಕೊಳ್ರಿ ಈಗ ಆಡೂದು ನಿಮ್ಮ ಸರದಿ ಅಲ್ಲಾ ಪಾಟೀಲರ ಮುಂದ ಕೇಸು ಏನಾತು ? ಹೇಳ್ರಿಲ್ಲಾ ನನಗೂ ನಿಮ್ಮ ಕಥಿ ಭಾಳ ಸ್ವಾರಸ್ಯ ಇರುತಾವು" ಪ್ರೊ ಚಂದ್ರಕಾಂತ ನನಗೆ ಪ್ರೋತ್ಸಾಹ ಕೊಟ್ಟರು.

"ಪ್ರೊಫೆಸರರ ಅದು ಕಥೀ ಅಲ್ಲರೀ ನಿಜವಾಗಿ ನಡೆದದ್ದು, ನೀವೇನು ಲೇಖಕರು ಅದನ್ನೇ ಕಥೀ ಕಾದಂಬರಿ ಮಾಡಬಹುದು. ನಿಮಗ ಒಂದು ವಸ್ತೂನು ಸಿಕ್ಕ ಹಾಂಗ ಆಗ್ತದ ಆದರೆ ......"

"ಪಾಟೀಲರ ನೀವೂ ಭಾಷಣಾ ಸುರು ಮಾಡಿಬಿಟ್ರಿಲಾ ಮೊದಲು ನಿಮ್ಮ ಕೇಸಿನ ಸುದ್ದೀ ಹೇಳ್ರಿ ನಾನು ಆ ಕೂಸಿನ ಪೋಸ್ಟಮಾರ್ಟಂ ಮಾಡಿದ್ದೆ. ಹೆತ್ತ ಇಪ್ಪತ್ನಾಲ್ಕು ತಾಸಿನೊಳಗ ಅದರ ಕುತಿಗಿ ಹಿಚಿಕಿ ಕೊಂದದ್ದು ಅದs ಹೌದಲ್ಲೋ ?" ಡಾ. ದೇಸಾಯಿ ನಡುವೆ ಬಾಯಿ ಹಾಕಿದರು ಆಟವನ್ನು ಗೆದ್ದ ಸಂತೋಷದಲ್ಲಿ ರೊಕ್ಕ ತೆಗೆದು ಕಿಸೆಗೆ ಸೇರಿಸುತ್ತ

"ಹಾಂ ಅದ, ಆಕಿ ವಿಧವಾ, ಯಾರಾ- ದಿಕ್ಕಿಲ್ಲದಾಕಿ. ಬಡವಿ. ಯಾರಿಗೋ ಗರ್ಭಿಣಿ ಆದ್ಲು. ಮೊದಲಿನ ಗಂಡನಿಂದ ಒಂದು ಹುಡುಗ ಇತ್ತು."

"ನನಗ ಸಿಟ್ಟು ಬರೂದು ಅದಕ್ಕ ನೋಡ್ರಿ. ಮದುವಿ ಆದಾಕಿ ಒಂದು ಮಗುವಿನ ತಾಯಿ ಇದ್ದೂ ವ್ಯಭಿಚಾರಕ್ಕೆ ಇಳದ್ಲು ಅಂತ."

"ಆಕಿ ತನ್ನ ಮನಸಾ ವ್ಯಭಿಚಾರಕ್ಕ ಇಳೀಲಿಲ್ಲಾ ಮನೋಹರ, ನಾನು ಕೋರ್ಟಿನ್ಯಾಗ ಹೇಳಿದ್ನೆಲ್ಲಾ ನಿಜವಾಗಿ ಏನು ನಡೀತು ಅನ್ನೂದು."

"ಹೌದು ಹೌದು ಹೇಳಿದ್ರಿ, ಆಕಿ ಕತೀ ಕಟ್ಟಿ ಹೇಳಿದ್ಲು, ನೀವು ಅದನ್ನ ನಂಬಿ, ನಿಮ್ಮ ವಾಕ್ಚಾತುರ್ಯ ತೋರಿಸಿ ಎಲ್ಲರ ಮನಸ್ಸು ಕರಗೂ ಹಾಂಗ ಮಾಡಿದ್ರಿ ನಾನು ಎಷ್ಟೋ ಜೋರಿನಿಂದ ಆಕೀಗೆ ಶಿಕ್ಷಾ ಆಗಬೇಕು ಅಂತ ವಾದಿಸಿದ್ರೂ ಜಜ್‌ರ ಮನಸ್ಸು ತಿರುಗಿಸಿ ಬಿಟ್ರಿ ಮನೋಹರ ಆವೇಶದಿಂದ ಕೆಂಪಾಗಿದ್ದರು.

"ಏನು ನಡೀತು ಅನ್ನೂದು ನಮಗೂ ಅಷ್ಟು ಹೇಳ್ರಿ ಅಂದರ ಮತ್ತ ನೀವು ಇಬ್ಬರ ವಾದಿಸತೀರಿ ಇದು ಕೋರ್ಟಲ್ಲಾ ಕ್ಲಬ್ಬು ಅನ್ನೂದು ಮರತ ಬಿಟ್ಟೀರೇನು ?" ಚಂದ್ರಕಾಂತ ನಗುತ್ತಾ ಹೇಳಿದಾಗ ಕಾವೇರುತ್ತಿದ್ದ ವಾತಾವರಣ ತಂಪಾಯಿತು.

"ಆಕಿ ತಾನು ಸ್ವತಾ ದುಡದು ಹೊಟ್ಟಿ ತುಂಬಿಸಿಕೋತಿದ್ಲು. ತನ್ನ ಜೋಡಿ ಮಗನ್ನೂ ಸಾಕಬೇಕಾಗಿತ್ತು. ಆದರ ಆಕೀಗೆ ಇರಲಿಕ್ಕೆ ಎಲ್ಲೂ ಆಸರ ಇದ್ದಿದ್ದಿಲ್ಲಾ. ಒಂದು ಬಿಲ್ಡಿಂಗ್ ಕಟ್ಟುತಿದ್ದರು. ಅಲ್ಲೆ ಆಕಿ ಇಟ್ಟಂಗಿ ಹೊರತಿದ್ಲು. ಅರ್ಧಾ ಮರ್ಧಾ ಕಟ್ಟಿದ ಬಿಲ್ಡಿಂಗಿನ ಮೂಲಯೊಳಗ ಜಾಗಾ ಮಾಡಿಕೊಂಡು ಮಗನ ಜೋಡಿ ಇರತಿದ್ಲು. ಕಪ್ಪಗಿದ್ದರೂ ಕಣ್ಣು ಮೂಗಿಲೆ ಚೆಲುವಿ."

"ವಯಸ್ಸು ? "

"ಇಪ್ಪತ್ತೆರಡು ವರ್ಷಾ ಅಂದ್ಲು. ಆಯ್ತು, ಒಬ್ಬಾಕೆ ಅದಾಳ ಅಂತ ಗೊತ್ತಾದ ಕೂಡಲೆ ಆ ಬಿಲ್ಡಿಂಗಿನ ಕೆಲಸಾ ಮಾಡಿಸೂ ಮೇಸ್ತ್ರಿ ಗಂಟುಬಿದ್ದಾ; ಬ್ಯಾಡಾ ಅಂತ ವಿರೋಧಿಸಿದರ ಕೆಲಸಾ ಜಾಗಾ ಎರಡೂ ಬಿಡಸತೀನಿ ಅಂತ ಬೆದರಿಕೆ ಹಾಕಿದಾ ಏನ ಮಾಡ್ತಾಳು? ಸುಮ್ಮನಾದ್ಲು, ಅದರ ಫಲಾ ಈಗ ಹುಟ್ಟಿದ ಕೂಸು. ಎರಡು ಜೀವಾ ಜ್ವಾಪಾನ ಮಾಡೂದು ಕಠಿಣ ಆಗಿತ್ತು. ಬಿಲ್ಡಿಂಗಿನ ಕೆಲಸಾನೂ ಮುಗಿದಿತ್ತು. ಹೊಟ್ಟಿಗೆ ಕೂಳು ಇದ್ದಿದ್ದಿಲ್ಲಾ ಹೆತ್ತು ಸಿಟ್ಟಿನಾಗ ಅದರ ಕುತ್ತಿಗಿ ಹಿಚಿಗಿ ಹಾಕಿದ್ಲು, ಪೋಲೀಸರ ಕೈ ಯಾಗ ಸಿಕ್ಕಬಿದ್ಲು"

ಓಹ್ Horrible ! ಆದರ ವಿಚಾರ ಮಾಡಿದಾಗ ನನಗ ಅನಸ್ತದ ತಪ್ಪು ಎಲ್ಲಾ ಆವಳದ ಅಲ್ಲಾ ಅಂತ. ಇದರೊಳಗೆ ಮೇಸ್ತ್ರಿಗೇನೂ ಜವಾಬ್ದಾರಿ ಇಲ್ಲೇನು ? ಚಂದ್ರಕಾಂತ ಕಳಕಳಿಯಿಂದ ಕೇಳಿದರು.

ಅವನ್ನ ಹಿಡಿದು ಕೇಳುವವರು ಯಾರು ? ಅದನ್ನ ನಾನು ಕೋರ್ಟಿನ್ಯಾಗ ವಾದಿಸಿದೆ. ಅವಳ ಪರಸ್ಥಿತೀನ ಸರಿಯಾಗಿ ತಿಳಿಕೊಂಡರೆ ಅವಳು ನಿರ್ದೋಷಿ ಅಂತ ಹೇಳಿದೆ ಜಜ್ ಒಪ್ಪಿಕೊಂಡರು. ಆದರೂ ಸಮಾದದಲ್ಲಿ ಕಟ್ಟು-ನಿಟ್ಟು ನೀತಿ-ನಿಯಮ ಇರಬೇಕು ಅನ್ನುವ ಸಮಾಜಸ್ವಾಸ್ಥ್ಯದ ದೃಷ್ಟಿಯಿಂಧ ಆಕೀಗೆ ಕೇವಲ ಮೂರು ತಿಂಗಳು ಸಾದಾ ಶಿಕ್ಷಾ ಕೊಡತೇನಿ, ಅಂತ ತೀರ್ಪು ಹೇಳಿದರು—ಇಸ್ಪೇಟ್ ಪ್ಯಾಕಿನಲ್ಲಿ ಸೇರಿಸುತ್ತಾ ಹೇಳಿದೆ.

"ಅಲ್ರೀ ಪಾಟೀಲರ ಇಷ್ಟು ದೊಡ್ಡ ಊರೊಳಗೆ ಆಕೀಗೆ ಸಂಬಂಧಿಕರು ಯಾರೂ ಹ್ಯಾಂಗ ಇಲ್ಲಾ? ಆಶ್ಚರ್ಯ ಆಗದ ನನಗ. ತಂದಿ, ತಾಯಿ, ಗಂಡ ಇಲ್ಲದಿದ್ದರೂ ಅಕ್ಕ ತಂಗಿ, ಅಣ್ಣ, ತಮ್ಮ, ಭಾವ, ಮೈದುನ ದೂರದ ಬಳಗದವರಾದ್ರೂ ಇರಬೇಕಲ್ಲ" ಎಂದು ಚಂದ್ರಕಾಂತ ತಮ್ಮ ಅನುಮಾನ ವ್ಯಕ್ತಪಡಿಸಿದಾಗ ನಾನು ವಿವರವಾಗಿ ಆವಳ ಗತ ಇತಿಹಾಸ ಹೇಳಲೇ ಬೇಕಾಯಿತು.

"ನೀವು ಅನ್ನೂದು ಖರೇ ಅದ ಚಂದ್ರಕಾಂತ. ಹಾಂಗ ನೋಡಿದರ ಮನುಷ್ಯಾ ಎಂದೂ ಪೂರ್ತಿ ಅನಾಥ ಇರೂದಿಲ್ಲ. ರಕ್ತ ಸಂಬಂಧಿಗಳು ಇಲ್ಲದಿದ್ದರೂ ಸ್ನೇಹಿತರು, ಹಿತೈಷಿಗಳು, ಪ್ರೇಮಿಸಿದವರು ಆದರೂ ಇದ್ದs ಇರತಾರ, ಆದರ ಈಕೀದೊಂದು ದೊಡ್ಡ ಟ್ರಾಜಿಡಿ........"

"ಅಬ್ಬಬ್ಬ! ಆಗಲೇ ಒಂಬತ್ತಾಯ್ತು ನಾ ಇನ್ನು ಬರ್ತೀನಿ Good–Night" ಎನ್ನುತ್ತ ಮನೋಹರ ಎದ್ದು ಹೊರಟೇ ಬಿಟ್ಟರು.

"ಆಗಲಿ ಹೋಗಿ ಬರ್ರಿ. ನಿಮಗ ಹೆಂಡತೀ ಮಕ್ಕಳು ದಾರಿ ಕಾಯ ತಿರತಾರ. ನನ್ನ ಹಾಂಗ ಏನು ಒಂಟಿಬಡಕರಲ್ಲ. ನನಗೇನು ಕ್ಲಬ್ಬು ಮನೀ ಎರಡೂ ಒಂದs ಅಲ್ಲೇನ್ರೀ ಚಂದ್ರಕಾಂತ.''

"ಹೌದ್ರೆಪಾ. ನಿಮ್ಮ ದೇಶಕ್ಕ ನೀವs ರಾಜಾ ನೀವs ಪ್ರಜಾ. ನಮ್ಮ ಹಾಂಗ ಸ್ವಾತಂತ್ರ್ಯ ಮಾರಿಕೊಂಡಿಲ್ಲಲ್ಲಾ ನೀವು ಸುಖಪುರುಷರು. ಯಾವ ಜವಾಬ್ದಾರೀನೂ ಇಲ್ಲದs ಜೀವನದ ಎಲ್ಲಾ ಕ್ಷಣಾನೂ ಪೂರ್ಣ ಸುಖಾ ಅನುಭವಿಸೂವವರು.'' ಚಂದ್ರಕಾಂತ ನನ್ನ ರಸಿಕತೆಯನ್ನು ನೆನೆದು ನಗುತ್ತ ಹೇಳಿದರು.

'' ಮನೋಹರ ಹೋದ್ರಲ್ಲ. ಇನ್ನ ನಿಮ್ಮ ಕಥೀ ಮುಂದು ವರಿಸ್ರೀ ಪಾಟೀಲರ'' ದೇಸಾಯಿ ಮತ್ತೆ ನೆನಪಿಸಿದರು. ನನ್ನ ನಗು ಅಡಗಿತು.

"ಜಾನಕಿ ಅಂತ ಆ ಹೆಂಗಸಿನ ಹೆಸರು. ಜಾನಕಿ ಅಪ್ಪ ಅಷ್ಟೇನೂ ಆಸ್ತಿವಂತರಲ್ಲ. ಇರಲಿಕ್ಕೆ ಒಂದು ಮನೀ ಇತ್ತು. ಒಂದು ಅಂಗಡೀ ಯೊಳಗ ಲೆಕ್ಕಾ ಬರಕೊಳ್ಳೂ ಕೆಲಸಾ ಮಾಡತಿದ್ದರು. ಅವರಿಗೆ ನಾಲ್ಕು ಮಂದಿ ಹೆಣ್ಮಕ್ಕಳು. ಜಾನಕೀನೇ ದೊಡ್ಡಾಕಿ. ಹೈಸ್ಕೂಲಿನ್ಯಾಗ ಕಲೀ ತಿದ್ದಳು, ಅಪ್ಪಗ ಬರೂ ಪಗಾರಕ್ಕ, ಹೊಟ್ಟೀ ಬಟ್ಟೆಗೆ ಚಾಟಿ ಆಗ್ತಿತ್ತು. ಸಂಸಾರ ಬೆಳಿದ್ಹಾಂಗ ಅದೂ ಸಾಲತಿದ್ದಿಲ್ಲ. ಯಾವಾಗಲೂ ಕೈಗಡ,

ಕೈಸಾಲ ಅಂತ ವ್ಯೆ ತುಂಬ ಇರತಿತ್ತು. ಇವಳ ಜೋಡಿ ಸಾಲೀ ಕಲಿಯೂ ಹುಡುಗೇರ ಫ್ಯಾಷನ್ನಿನ ಅರಿವಿ, ರಿಬ್ಬನ್ನು, ಬಳೀ, ಸರಾ, ಹೂವು ಎಲ್ಲಾ ನೋಡಿ ಇವಳಿಗೂ ಆಸೇ ಆಗತಿತ್ತು. ಆದರ ಅವೆಲ್ಲಾ ಈಕೀಗೆ ಹ್ಯಾಂಗ ಸಿಗಬೇಕು ? ತಾನೂ ಅವರ ಹಾಂಗs ಶ್ರೀಮಂತ ಆಗಬೇಕು. ಕೈಯಾಗ ರೊಕ್ಕ ಇರಬೇಕು. ಚಾಕಲೇಟು, ಕ್ಯಾಡ್‌ಬರೀಜ್ ಕೊಂಡು ತಿನ್ನಬೇಕು, ಛಂದನ್ನ ಅರಿವೀ ಹಾಕೋಬೇಕು ಅಂತ ಅನ್ನೂ ಆಸೇ ದಿನದಿನಕ ಬೆಳಕೋತ ಹೋಯ್ತು. ಇದಕೆಲ್ಲಾ ಏನು ಉಪಾಯಾ ಅಂತ ವಿಚಾರಾ ಮಾಡತಿದ್ದಳು. ಬರೇ ವಿಚಾರಾ ಮಾಡದ ಮುಂದುವರಿದು ಅದನ್ನ ಕೃತಿಗೆ ಇಳಿಸಿದ್ದs ಆಕೀ ಜೀವನಾ ದುರಂತ ಆಗಲಿಕ್ಕೆ ಕಾರಣ ಆಯ್ತು.''

''ಅಂದರ ಜಾನಕಿ ಕಳವು ಮಾಡಲಿಕ್ಕೆ ಸುರು ಮಾಡಿದ್ಲೇನು ? ''

" ಇಲ್ರೀ ಕಳವು ಮಾಡಿದ್ದರ ತಂದಿ ತಾಯಿಗೆ ಗೊತ್ತಾದ ಮ್ಯಾಲೆ ಹೊಡದು ಬಡದು ಅದನ್ನ ಬಿಡಸುತಿದ್ದರು. ಆದರೆ ಜೀವನದ ಪೂರ್ಣ ತಿಳುವಳಿಕೆ ಇಲ್ಲದ ಹುಡುಗಿ, ಬರೇ ಹದಿನಾರು ವರ್ಷದಾಕಿ, ಮುಂದೇನಾ ದೀತು ಅನ್ನೂ ವಿಚಾರ ಮಾಡದ ಆಸೇಗ ಬಲಿಯಾಗಿ ತನ್ನ ಶೀಲಾ ಕಳ ಕೊಂಡಳು. ಇವರು ಕಿರಾಣಿ ಸಾಮಾನು ಉದ್ದರೀ ತರೂ ಮಾಲಕರ ಮಗಾ, ಕಾಲೇಜು ಕಲಿಯೂ ಹುಡುಗಾ ಈಕೀ ಸ್ವಭಾವಾ ತಿಳಕೊಂಡ. ಬಳೀ, ತಿನಸು, ಸಿನಿಮಾ ಅಂತ ಆಸೆ ತೋರಿಸಿ ಸುಲಭವಾಗಿ ಅವಳ್ನ ಕೆಡಿಸಿಬಿಟ್ಟಾ. ತನಗ ಬೇಕಾದ್ದೆಲ್ಲಾ ಸಿಕ್ಕದ್ದಕ್ಕ ಇವಳೂ ಒಪ್ಪಿಕೊಂಡಳು. ತನ್ನ ಅವನಿಗೆ ಮಾರಿಕೊಂಡಳು. ಅದರ ಫಲಾ ಅವಳ ಹೊಟ್ಟೆಯೊಳಗ ಮೂಡಿದ ಕೂಡಲೇ ಅಂವಾ ಕೈ ಬಿಟ್ಟು ಜಾರಿಕೊಂಡಾ. ಮನ್ಯಾಗ ಗೊತ್ತಾತು. ತಮ್ಮ ಮರ್ಯಾದೀ ಉಳಿಸಿಕೊಳ್ಳಲಿಕ್ಕೆ ಗರ್ಭಪಾತಾ ಮಾಡಿಸಿದ್ರು. ಲಗೂನ ಈಕೀನ್ನ ಮನೀಯಿಂದ ಸಾಗಹಾಕ ಬೇಕಾಗಿತ್ತು. ಆಕಾಶ ಪಾತಾಳ ಒಂದು ಮಾಡಿ ಎರಡನೇ ವರಾ ಹುಡುಕಿ ಲಗ್ನಾ ಮಾಡಿ ಗಂಡನ ಮನೀಗೆ ಅಟ್ಟಿದರು. ಕಳಿಸೂ ಮುಂದ ಇನ್ನೊಮ್ಮೆ ತವರ್ಮನಿಗೆ ಕಾಲು ಇಡಬಾರದು ಅಂತ ಬೆದರಿಕೆ ಹಾಕಿದ್ದರಂತ. ಈಕೀ ತಂಗಿಯರ ಲಗ್ನ ಆಗಬೇಕಾಗಿತ್ತಲ್ಲ ಇನ್ನೂ. ಗಂಡ ಅಷ್ಟೇನೂ ಸ್ಥಿತಿವಂತ ಅಲ್ಲಾ. ಯಾವದೋ ಫ್ಯಾಕ್ಟರಿ ಒಳಗ ಕೆಲಸಾ ಮಾಡುತಿದ್ದಾ. ಈಕೀಗಿಂತ ದೊಡ್ಡನರು ಮಲಮಕ್ಕಳು ಇದ್ದರು. ಈಕೀಗೂ ಒಂದು ಹುಡುಗ

ಹುಟ್ಟಿತು. ಗಂಡ ಸತ್ತ. ಮಲಮಕ್ಕಳು ತಮಗೇನೂ ಸಂಬಂಧ ಇಲ್ಲದ ವರಾಂಗ ಮನೀ ಬಿಟ್ಟು ಹೊರಗ ಹಾಕಿದರು. ದುಡಿದು ಹೊಟ್ಟೀ ತುಂಬಿ ಸಿಕೋಬೇಕು ಅಂತ ಈ ಊರಿಗೆ ಬಂದಳು. ಇಲ್ಲೆ ಈ ಪ್ರಕರಣ ಆತು. ನೋಡ್ರಿ ಈಗ ಆಕೀ ಅನಾಥಳು ಹೌದೋ ಅಲ್ಲೋ ? ನಮ್ಮ ವಕೀಲಿ ಕೆಲಸದಾಗ ಎಷ್ಟೋ ಜನರನ್ನು ನೋಡ್ತೇವಿ. ಆದರ ಇಂಥಾ ದುರ್ದೈವೀನ ನಾನೋಡಿದ್ದಿಲ್ಲಾ. ''

" ರಕ್ತಸಂಬಂಧಿಗಳು ಇದ್ದೂ ಇಲ್ಲಾದರು. ಪ್ರೇಮಿಗಳು ಕೈ ಬಿಟ್ಟರು. ಇನ್ನ ಆಕೀಗೆ ಆಸರ ಅಂದರ ಆ ಹುಡುಗ ಒಂದs " ಚಂದ್ರಕಾಂತ ವಿಷಾದದಿಂದ ನುಡಿದರು.

" ಆ ಹುಡುಗಾ ಆಸರ ಅಲ್ಲಾರೀ, ಭಾರ ಅನ್ನರಿ ಭಾರಾ. ಹಾಂ ಅಂದ್ಹಾಂಗ ಆ ಹುಡುಗ ಎಲ್ಲೆ ಆದಾನ ಈಗ ? ಡಾಕ್ಟರ ಸಹಾನುಭೂತಿಯಿಂದ ಕೇಳಿದರು.

" ಇವತ್ತs ನಾನು ಅವನ್ನ ಕರಕೊಂಡು ಹೋಗಿ ಪ್ರಾಮಾಣಿಕ ಶಾಲೆಗೆ ಸೇರಿಸಿ ಬಂದೆ, ತಾಯಿ ಜೇಲಿನಿಂದ ಬರೂತನಕ ಅಂವಾ ಎಲ್ಲಿರಬೇಕು ? ಭಾಳ ಅಳತಿದ್ದಾ. ಸ್ವಲ್ಪ ಸರಿಯಾಗಿ ಕಾಳಜಿ ತೊಗೊಳ್ರಿ. ಹೊಟ್ಟೆ ತುಂಬ ಊಟಕ್ಕ ನೀಡ್ರಿ ಅಂತ ಅವರಿಗೆ ತಾಕೀತು ಮಾಡಿ ಬಂದೇನಿ. "

" Good. ನಾಗರಿಕರಿಗಾಗಿ ನಿಮ್ಮ ಕರ್ತವ್ಯ ನೀವು ಮಾಡಿದಿರಿ. ಒಳ್ಳೇದಾಯ್ತು. ಆಯ್ತು ನಾವೂ ಹೊರಡೋಣ ಇನ್ನ.'' ದೇಸಾಯಿಯರ ಜೊತೆ ನಾವೂ ಎದ್ದೆವು.

ಅಂದು ಕೆಲಸ ಬಹಳವಾಗಿದ್ದರಿಂದ ಸಂಜೆ ಕ್ಲಬ್ಬಿಗೆ ಹೋಗದೆ ಮನೆಯಲ್ಲೇ ಆರಾಮವಾಗಿ ಕುಳಿತು ಶಂಕರ ಕರಿದುಕೊಟ್ಟ ಗೋಡಂಬಿಯೊಡನೆ ಬೀರು ಸವಿಯುತ್ತಾ ಒಬ್ಬನೇ ಕುಳಿತಿದ್ದೆ. ಶಂಕರ ಅಡಿಗೆ ಮಾಡಿಟ್ಟು ಊಟಕ್ಕೆಲ್ಲ ಸಿದ್ಧ ಮಾಡಿಟ್ಟು ಮನೆಗೆ ಹೋಗುತ್ತೇನೆಂದು ಹೇಳಿ ಹೊರಗೆ ಹೋದವನು ಮರಳಿ ಬಂದು ಒಬ್ಬ ಹೆಂಗಸು ನಿಮ್ಮನ್ನು ಕಾಣಬೇಕೆಂದು ಹೇಳಿದ. ನಾನು ಒಳಬರಲು ಹೇಳಿದೆ, ಜಾನಕಿ ಬಂದು ನಾನು ಕುಳಿತ ರೂಮಿನ ಬಾಗಿಲಲ್ಲಿ ನಿಂತಳು.

ನಿನ್ನನ್ನು ಎಂದು ಬಿಟ್ಟರು ಎಂದು ನಾನು ಕೇಳಿದೆ.

“ ಇವತ್ತs ಸಂಜೀನ್ಯಾಗ ಬಿಟ್ಟರು. ಎಂದು ಮತ್ತೆ ಸುಮ್ಮನೆ ನಿಂತಳು. ಆವಳನ್ನು ಕಣ್ಣು ಅಗಲಿಸಿ ಸರಿಯಾಗಿ ದಿಟ್ಟಿಸಿ ನೋಡಿದೆ. ಮೂರು ತಿಂಗಳಲ್ಲಿ ಸಾಕಷ್ಟು ಬದಲಾಗಿದ್ದಳು ಮೈಮೇಲೆ ಒಗೆದ ಸೀರೆಯಿತ್ತು, ಕೂದಲು ಓರಣವಾಗಿತ್ತು. ಮೈಯಲ್ಲೂ ರಕ್ತ ತುಂಬಿತ್ತು ತಟ್ಟನೆ ತಲೆ ಎತ್ತಿ ನನ್ನ ನೋಟವನ್ನು ಎದುರಿಸಿದಳು. ಅವಳ ಕಣ್ಣಲ್ಲಿಯ ಮಿಂಚು ನಾನೆ ದೃಷ್ಟಿ ಹೊರಳಿಸುವಂತೆ ಮಾಡಿತು.

“ ನೀವು ಒಬ್ಬರs ಅದೀರಂತ ? ”

ಅವಳ ದೃಷ್ಟಿಯಿಂದ ಮಾತಿನ ಅರ್ಥ ಮಾಡಿಕೊಂಡಿದ್ದ ನಾನು ‘ ಹೌದು ’ ಅಂದೆ. ಮುಂದೆ ಏನು ಮಾತಾಡುವಳೋ ಎನ್ನುವ ಕುತೂಹಲದಿಂದ ಸುಮ್ಮನಿದ್ದೆ. ಹೇಳಲೋ ಬೇಡವೋ ಎಂದು ಹಿಂಜರಿಯುತ್ತ ನೆಲ ನೋಡುತ್ತ ಹೇಳಿದಳು.

‘ನನ್ನ ನಿಮ್ಮ ಮನೀಯೊಳಗ ಇಟಕೋತೀರೇನು ? ಅದನ್ನ ಕೇಳಾಕ ಬಂದೆ. ನಿಮಗ ಗೊತ್ತದ ನನಗೂ ಮನೀ ಇಲ್ಲಾ, ಆಸರ ಇಲ್ಲಾ, ಇಲ್ಲೇ ನಿಮ್ಮ ಜೊತೆಗೆ ಹೆಣ್ಣು ದಿಕ್ಕಿಲ್ಲಾ. ನೀವು ಹೂಂ ಅಂದರ ನಾನs ಇರತೇನಿ ’’

“ ಜಾನಕಿ ನನಗ ಅಡಿಗೀ, ಮನೀ ಕೆಲಸಾ ಮಾಡಲಿಕ್ಕೆ ಶಂಕರ ಅದಾನಲ್ಲಾ, ಭಾಳ ದಿನದಿಂದ ಅದಾನ ಅವನ್ನ ಹ್ಯಾಂಗ ಬಿಡಿಸಬೇಕು ? ”

ಅವನ್ನ ಬಿಡಿಸಬ್ಯಾಡರಿ. ಆದರ ನನಗೂ ಆಸರಾ ಕೊಡ್ರಿ ಅಂತ ಕೇಳಲಿಕ್ಕೆ ಬಂದೇನಿ, ನೀವು ಹೇಳಿದ್ದು ಮಾಡತೇನಿ, ಕೆಲಸಾ ಅಂದರ ಕೆಲಸಾ, ಇಲ್ಲಾಂದರ ’’ ಮುಖ ಕೆಂಪಗೆ ಮಾಡಿಕೊಂಡು ಸ್ವಲ್ಪ ತಡೆದು ಹೇಳಿದಳು, “ ನನ್ನs ನಿಮಗ ಕೊಡಲಿಕ್ಕೆ ತಯಾರ ಇದ್ದೇನಿ, ನಿಮಗ ಎಲ್ಲಾ ಸುಖಾ ಕೊಡತೇನಿ. ’’

ಅವಳ ಮಾತುಗಳಿಂದ ದಂಗಾದೆ, ಏನೋ ಪಾಪ ಬಡವಿ, ಅನಾಥೆ ಎಂದು ಸಹಾಯ ಮಾಡಿದರೆ ನನಗೆ ಗಂಟು ಬೀಳುತ್ತಿದ್ದಾಳೆಂದು ದಿಗಿಲಾಯಿತು. ಅವಳಲ್ಲಿ ಯೌವನವಿತ್ತು. ಆದರೆ ಇದುವರೆಗೆ ನಾನು ಅನುಭವಿಸಿದ ಹುಡುಗಿಯರ ಸೌಂದರ್ಯ, ಕೋಮಲತೆ, ವಿಲಾಸ ಯಾವದೂ ಇರಲಿಲ್ಲ. ಅವಳನ್ನು ನಾನು ಮುಟ್ಟುವ ಕಲ್ಪನೆಯೇ ಹೇಸಿಕೆ ಎನಿಸಿತು. ಇನ್ನು ಇವಳಿಗೆ ಅರಿವೆ, ಅನ್ನ ಕೊಟ್ಟು ಸಾಕುವಷ್ಟು ಶಕ್ತಿಯೇನೋ

ನನಗಿದೆ. ಆದರೆ ಒಬ್ಬನೇ ಇದ್ದ ನಾನು ಇಂಥ ಹರೆಯದ ಹೆಣ್ಣನ್ನು ಮನೆಯಲ್ಲಿ ಇಟ್ಟುಕೊಂಡರೆ ಜನ ಏನಂದಾರು ? ಸಮಾಜದಲ್ಲಿ ನನ್ನ ಗೌರವ, ಪ್ರತಿಷ್ಠೆ ಉಳಿಯುವದೂ ಸಾಧ್ಯವಿಲ್ಲ. ಉಹುಂ ಏನಾದರೂ ನಾನು ಈ ವಿಷಯದಲ್ಲಿ ದುರ್ಬಲನಾಗಬಾರದು.

ನಾನು ತಲೆ ಅಲುಗಿಸಿದ್ದು ಕಂಡು ಅವಳು ಸೋತ ಸ್ವರದಲ್ಲಿ ಅಂದಳು " ನನಗೆ ನೀವಾದರೂ ಆಸರಾ ಕೊಡ್ತಿರಿ ಅಂತ ನಂಬಿದ್ದೆ, ಜೇಲಿಗೆ ಹೋಗಿ ಬಂದಾಕಿ ನಾನು. ನನಗ ಯಾರು ಕೆಲಸಾ ಕೊಡ್ತಾರ. ಹೇಳ್ರಿ ನೀವs''

ನನಗೂ ಅದು ನಿಜ ಅನ್ನಿಸಿತು. ಎದ್ದು ಪರ್ಸಿನಲ್ಲಿಯ ಹಣ ತೆಗೆದು ಅವಳತ್ತ ಚಾಚಿ ಹೇಳಿದೆ " ಈ ಊರು ಬಿಟ್ಟು ಬ್ಯಾರೆ ಊರಿಗೆ ಹೋಗು. ಹಿಡಿ ಈ ರೊಕ್ಕಾ. "

ಅವಳು ಕೈ ಚಾಚದೆ ನನ್ನತ್ತ ತೀಕ್ಷ್ಣವಾಗಿ ನೋಡಿ ಕೇಳಿದಳು.

'' ಕೋರ್ಟಿನ್ಯಾಗ ವಾದಿಸಿದರಲ್ಲ ಆ ಸರಕಾರೀ ವಕೀಲರ ಹೆಸರು ಮನೋಹರ ಕುಲಕರ್ಣಿ ಏನು ? "

" ಹೌದು ಯಾಕ ? ಅದ್ಯಾಕ ಬೇಕಾಗಿತ್ತು ? ಅವರ ಮನೀಗೆ ಹೋಗತೀಯೇನು ? ಅದರೆ ಅವರು ನಿನಗ ಕನಿಷ್ಠ ಐದು ವರ್ಷ ಕಠಿಣ ಶಿಕ್ಷಾ ಆಗಲಿ ಅಂತ ವಾದಿಸಿದ್ದರು. ನೆನಪ ಅದs ಏನು ನಿನಗ. '' ನನಗೇಕೋ ಸಿಟ್ಟು ಏರುತ್ತಿತ್ತು.

"ಹೋ ನೆನಪ ಇರದs ಏನು ? ಅವರು ಯಾಕ ಅಷ್ಟು ಕಠಿಣ ಆಗಿ ವಾದಿಸಿದರು ಅನ್ನೂದಕ್ಕ ಕಾರಣ ಏನು ಅನ್ನೂದು ಗೊತ್ತಿಲ್ಲ ನಿಮಗ, ನನಗ ಗೊತ್ತದ'' ಉಗುಳು ನುಂಗಿ ತಡೆದು ಹೇಳಿದಳು. "ನೀವು ಈ ಮಾತು ನಂಬತೀರೋ ಇಲ್ಲೊ, ನನಗ ಗೊತ್ತಿಲ್ಲಾ, ನಾ ನಿಮಗ ನನ್ನ ಕಥೀ ಹೇಳಿದ್ನೆಲ್ಲಾ. ನಾವು ಕಿರಾಣಿ ಸಾಮಾನು ತರೂ ಅಂಗಡಿ ಮಾಲ ಕರ ಮಗಾ ಇದs ಮನೋಹರ ಕುಲಕರ್ಣಿ. ಅವತ್ತು ಕೋರ್ಟಿನ್ಯಾಗ ನಾ ಗುರ್ತಾಹಿಡಿದೆ. ಇವರs ನನ್ನ ಮೊದಲನೇ ಪ್ರಿಯಕರಾs ಹಾ ಹಾ ಹಾs ಹಾs'' ಅಟ್ಟಹಾಸದಿಂದ ನಗುತ್ತಿದ್ದ ಅವಳನ್ನು ಬೆಪ್ಪಾಗಿ ನೋಡುತ್ತಿದ್ದೆ. "ಐದು ವರ್ಷ ಯಾಕ ಇಡೀ ಜೀವನ ಪರ್ಯಂತ ನನಗ ಶಿಕ್ಷಾ ಕೊಟ್ಟಾರ ಅವರು. ಜೀವನ ಪರ್ಯಂತ ನಾನು ಹಿಂಗs ಇರಬೇಕು ಇನ್ನ ಹೊಟ್ಟೀ ತುಂಬಿಸಿಕೊಳ್ಳಲಿಕ್ಕೆ ಮೈ ಮಾರಬೇಕು ಮತ್ತು ಮಕ್ಕಳ್ನ ಹುಟ್ಟಿಸಬೇಕು

ಅವರ ಕುತ್ತಿಗೆ ಹಿಚಕಬೇಕು. ಮತ್ತು ಮಾರಬೇಕು, ಹುಟ್ಟಿಸಬೇಕು, ಹಾ ಹಾ ಹ್ಹಾs ಎಂದವಳೇ ದಡ ದಡ ನಡೆದು ಬಾಗಿಲು ದಾಟಿ ಓಡಿದಳು.

ನಾನು ಮಾಡಿದ ಒಂದು ಒಳ್ಳೆಯ ಕೆಲಸ ವ್ಯರ್ಥವಾದ ನಿರಾಶೆಯನ್ನು ಮರೆಯುವುದಕ್ಕೆ ನಾನು ಮತ್ತೆ ಗ್ಲಾಸ್ ಕೈಗೆತ್ತಿಕೊಂಡೆ.

ನಿರುತ್ತರೆ

ಆಫೀಸಿನಿಂದ ಮನೆಗೆ ಬರುವಾಗಲೇ ದಿನಕ್ಕಿಂತಲೂ ಹೆಚ್ಚು ದಣಿವಾಗಿತ್ತು ದೇಹಕ್ಕೆ, ಜೊತೆಗೆ ಮನಸ್ಸಿಗೂ. ಅಂದು ಆಫೀಸಿಗೆ ಬಂದ ಹಳೆಯ ಪರಿಚಿತರೊಬ್ಬರು 'ಗೌರಕ್ಕನ ಆರೋಗ್ಯ ಚೆನ್ನಾಗಿಲ್ಲ. ಪಾಟೀಲರಿಗೆ ತ್ರಾಸಾಗಿದೆ. ಡಾಕ್ಟರರ ಉಪಚಾರ ನಡೆದಿದೆ' ಎಂದು ಹೇಳಿದ್ದು ಶಿವಣ್ಣನ ಚಿಂತೆಗೆ ಕಾರಣವಾಗಿತ್ತು. ಗೌರಕ್ಕ ತನಗೆ ಅಕ್ಕನಷ್ಟೇ ಅಲ್ಲ, ತಾಯಿಯೂ ಆಗಿ ಚಿಕ್ಕಂದಿನಿಂದಲೂ ಪಾಲಿಸಿದ್ದಳು. ಗತಿಸಿದ ತಾಯಿಯ ನೆನಪು ಬಾರದಂತೆ ಹತ್ತು ವರುಷ ಚಿಕ್ಕವನಾದ ತಮ್ಮನನ್ನು ಎತ್ತಿ ಆಡಿಸಿ, ಉಣಿಸಿ ತಿನಿಸಿ ಜೋಗುಳ ಹಾಡಿ ಮಲಗಿಸಿದ್ದಳು. ಒಬ್ಬನೇ ಕಣ್ಣು ಮುಚ್ಚಿ ಕುಳಿತಾಗ ಬಾಲ್ಯದ ಆ ಚಿತ್ರಗಳೆಲ್ಲ ಕಣ್ಣ ಪರದೆಯ ಮೇಲೆ ಮೂಡುವವು. ಅತ್ತಾಗ ಎತ್ತಿಕೊಂಡು ಲಲ್ಲೆಗರೆಯುವ ಆ ಮೆಲುಮಾತುಗಳು ಕೇಳುವವು. ಮಲಗಿಸಿ ಲಾಲಿ ಹಾಡುವ ಆ ಮಧುರಧ್ವನಿ ಕಿವಿಯನ್ನು ತುಂಬುವದು.

ಹೀಗೆ ವಿಚಾರ ಮಾಡುತ್ತ ಶಿವಣ್ಣ ತನ್ನ ಮನೆಯನ್ನು ದಾಟಿ ಮುಂದೆ ಹೋಗುತ್ತಿದ್ದ, ಅಮರ 'ಅಪ್ಪಾಜೀ' ಎಂದು ಕೂಗದಿದ್ದರೆ. ಅವನನ್ನು ಎತ್ತಿಕೊಂಡು ಒಳಗೆ ಬಂದ ಜಯಾಳ ಮುಖ ಅವನಿಗಿಂತಲೂ ಹೆಚ್ಚು ಬಾಡಿತ್ತು. ಪಾಪ, ಗರ್ಭಿಣಿ ಮನೆಗೆಲಸದಿಂದ ಆಯಾಸವಾಗಿರಬಹುದು ಎಂದುಕೊಂಡ. ಕೈಕಾಲು ತೊಳೆದು ತಿನಿಸು ತಿಂದಾದ ಮೇಲೆ ಅವನ ಕೈಗೊಂದು ಟೆಲಿಗ್ರಾಂ ತಂದುಕೊಟ್ಟಳು ಜಯಾ. 'ನಿನ್ನ ಅಕ್ಕನ ಆರೋಗ್ಯ ಚಿಂತಾಜನಕ. ಕೂಡಲೇ ಹೊರಡು–ಪಾಟೀಲ್' ಎಂದಿತ್ತು. ರಾತ್ರಿ ೯ ಗಂಟೆಯ ಬಸ್ ಹಿಡಿದರೆ ಬೆಳಿಗ್ಗೆ ಪುಣೆ ಮುಟ್ಟಬಹುದಾಗಿತ್ತು. ಜಯಾ ಆಗಲೇ ಅವನ ಸೂಟಕೇಸ್ ತುಂಬಿ ತಯಾರು ಮಾಡಿದ್ದಳು. ಮನೆಯಲ್ಲಿ ಮುಂದಿನ ಎರಡು ತಾಸು ಕಳೆಯುವಷ್ಟರಲ್ಲಿ ಅವನ ಜೀವ ವಿಲಿವಿಲಿ ಒದ್ದಾಡಿತು. ಅವನ ತಳಮಳವನ್ನು ಚೆನ್ನಾಗಿ ತಿಳಿದಿದ್ದ ಜಯಾ

ಮೌನವಾಗಿದ್ದ ಹೊರಡುವಾಗ, ‘ಪ್ರವಾಸ ಮಾಡೂ ಹಾಂಗಿದ್ದರ ಗೌರಕ್ಕನ್ನ ಇಲ್ಲಿಗೇ ಕರಕೊಂಡು ಬಂದ ಬಿಡ್ರಿ. ಇಲ್ಲೇ ಡಾಕ್ಟರಿಗೆ ತೋರಿಸೋಣ’ ಎಂದಾಗ, ಹೌದು, ಅಕ್ಕನ ಈ ಪರಿಸ್ಥಿತಿಯಲ್ಲಿ ತನ್ನಿಂದಾದಷ್ಟು ಸೇವೆ ಮಾಡಲೇ ಬೇಕು ಎಂದು ಸಮಾಧಾನ ತಂದುಕೊಂಡು ಹೊರಟ ಶಿವಣ್ಣ.

ಆದರೆ ಮನೆ ಮುಟ್ಟಿದಾಗ ಆ ಸಮಾಧಾನ ಉಳಿಯಲಿಲ್ಲ. ಪಾಟೀಲ್ ಮಾಮಾ ಅವನನ್ನು ಕೋಣೆಗೆ ಕರೆದುಕೊಂಡು ಹೋದಾಗ ಅವಳಿನ್ನೂ ಗಾಢ ನಿದ್ದೆಯಲ್ಲಿದ್ದಳು, ಹಾಸಿಗೆ ಹಿಡಿದು ಎಷ್ಟೋ ವರ್ಷ ಕಳೆದವರಂತೆ ಕಂಡಳು.

“ಇತ್ತಿತ್ತಲಾಗ ಸರಿಯಾಗಿ ನಿದ್ದೀನ ಮಾಡೂದಿಲ್ಲಾ ಗೌರಾ. ಊಟಾನೂ ಹೋಗೂದಿಲ್ಲಾ. ನಿನ್ನೆ ಭಾಳ ತ್ರಾಸ ಮಾಡಿಕೊಂಡಳು. ಅದಕ್ಕ್ಯಾs ಡಾಕ್ಟರರು ನಿದ್ದೀ ಇಂಜೆಕ್ಷನ್ ಕೊಟ್ಟಾರ. ಈಗ ಸ್ವಲ್ಪ ಮನೀ ಶಾಂತ ಅದ ನೋಡು. ನೀ ಬಂದದ್ದು ಒಳ್ಳೇದಾತು. ನನಗ ಎಷ್ಟೋ ಭಾರ ಇಳಿದಂಗಾತು. ನೀ ಅವಳನ್ನ ಸರಿಯಾಗಿ ನೋಡಿಕೊಳ್ತಿ ಅನ್ನೋದು ಖಾತ್ರಿ ಅದ ನನಗ. ನನ್ನ ಕಾಲೇಜಿನ ಕೆಲಸ, ರಿಸರ್ಚ ಪೇಪರು, ಕಾನ್ಫರೆನ್ಸು, ಮೀಟಿಂಗು, ರೀಡಿಂಗು ಈ ಎಲ್ಲಾದರೊಳಗ ಗೌರಾನ್ನ ಹ್ಯಾಂಗ ಆರೈಕೆ ಮಾಡಬೇಕು ಅನ್ನೂದು ತಿಳೀದs. ನನಗ ಹುಚ್ಚ ಹಿಡದಾಂಗ ಆಗಿತ್ತು. ಓಹ್ss” ಬೇಸರದಿಂದ ಹೇಳುತ್ತ ಹೊರಗೆ ಹೊರಟ ಮಾಮಾನನ್ನೇ ಹಿಂಬಾಲಿಸಿದ ಶಿವಣ್ಣ.

“ಅಂದ್ಹಾಂಗ ಅಕ್ಕಗ ಏನು ಆಗೇದ ? ಡಾಕ್ಟರರು ಏನಂತಾರ ? ಜ್ವರಾ ಭಾಳ ದಿವಸ ಬಂದಿದ್ದೇನು ? ಟೈಫಾಯ್ಡ, ನ್ಯೂಮೋನಿಯಾ..”

“ಛೇ ಛೇ, ನೀ ತಿಳಕೊಂಡ ಹಾಂಗ ಜ್ವರಾ ಎನೂ ಬಂದೇ ಇಲ್ಲಾ. ಯಾವ ಜಡ್ಡೂ ಇಲ್ಲಾ. ಸುಮ್ಮನ ಹಾಂಗs ತ್ರಾಸು, ಮಾನಸಿಕ ತ್ರಾಸು. ಯಾವಾಗಲೂ ವಟವಟ ಅಂತಿರೋದು, ಎಲ್ಲಾದಕ್ಕೂ ತಕರಾರು ಮಾಡೂದು. ಶಾಂತಿ-ಸಮಾಧಾನದಿಂದ ತಾನೂ ಇರು ಹಾಂಗಿಲ್ಲಾ, ಉಳಿದವರನ್ನು ಇರಗೊಡೂದಿಲ್ಲಾ. ನನಗಂತೂ ಸಾಕಾಗಿ ಹೋಯ್ತು. ಮನುಷ್ಯನ ತಾಳ್ಮೆಗೂ ಒಂದು ಮಿತಿ ಇರ್ತದ.” ಹುಬ್ಬು ಗಂಟಿಕ್ಕಿ, ಆವೇಶದಿಂದ ಮಾತನಾಡುತ್ತಿದ್ದ ಮಾಮಾನಿಗೆ ಯಾವ ಉತ್ತರ ಕೊಡಲೂ ತಿಳಿಯಲಿಲ್ಲ ಶಿವಣ್ಣನಿಗೆ. ಅವರೇ ಮುಂದುವರಿಸಿದರು.

"ಶಿವೂ, ನೀ ಹೇಳು ಗೌರಾಗ ಈಗ ಏನು ಕಡಿಮಿ ಆಗೇದ? ಸ್ವಂತ ಮನೀ ಕಾರು, ಅಡಿಗಿಯಾಕಿ, ಮುತ್ತಿನಂತಾ ಮಗಾ ಮಗಳು...."

"ಮಾಮಾS, ಅನುರಾಧಾ ಈಗ ಅಲ್ಲೆ ಅದಾಳ? ಅಕ್ಕ ಮಲಗಿದ್ದು ಆಕೀಗೆ ಗೊತ್ತಿಲ್ಲೇನು?"

"ಆಕೀ ಕಾನಪುರದಾಗ ಅದಾಳ. ಪಿಯೆಚ್‌ಡಿಗೆ ಸಬ್ಜೆಕ್ಟ ಚೂಜ ಮಾಡ್ಯಾಳಂತ. ಮೊನ್ನೆ ಪತ್ರಾ ಬರದಿದ್ಲು. ಆಕೀಗೆ ಸೆಮಿನಾರ ಅದ, ಅಭ್ಯಾಸ ಭಾಳ ಮಾಡೂದ ಅದ. 'ಓದಲಿಕ್ಕೆ ಟೈಮು ಸಿಗವೊಲ್ಲದು. ಎಷ್ಟೂ ಪುರಸೊತ್ತಿಲ್ಲ' ಅಂತ ಬರದಾಳ. ಅನೂಪಗೂ ಸುದ್ದೀ ತಿಳಿಸಿದ್ದೆ. 'ಅಪ್ಪನ ಆರೋಗ್ಯ ಕೆಟ್ಟಿದ್ದು ಕೇಳಿ ಭಾಳ ಕೆಟ್ಟ ಅನಿಸ್ತು. ಬಹುಶಃ ಈ ವರ್ಷ ಭಾರತಕ್ಕೆ ಬರಲಿಕ್ಕೆ ಆಗಲಿಕ್ಕಿಲ್ಲಾ. ದೊಡ್ಡ ಹಾಸ್ಪಿಟಲ್‌ಗೆ ಎಡ್ಮಿಟ್ ಮಾಡ್ರಿ, ಸ್ಪೆಷಲಿಸ್ಟಗ ತೋರಸ್ರಿ. ಕಾಳಜಿ ತೊಗೊಳ್ರಿ' ಅಂತ ಬರದಾನ."

"ಅನೂಗ ನೀವು ಬಾ ಅಂತ ಬರೀಬೇಕಾಗಿತ್ತು. ಅವಳ ತಾಯಿ ಭಾಳ ಹಾಸಿಗಿ ಹಿಡಿದಾಳ ಅಂತ ತಿಳಿಸಬೇಕಾಗಿತ್ತು" ಶಿವಣ್ಣನ ಹೊಟ್ಟೆಯಲ್ಲಿಯ ಮಾತು ಸೌಮ್ಯವಾಗಿಯೇ ಹೊರಗೆ ಬಂದಿತ್ತು.

ಅಷ್ಟಕ್ಕೇ ಪಾಟೀಲರು ಸಿಡಿದೆದ್ದರು. "ಶಿವೂ, ವಯಸ್ಸು ಆದಂಗ ಮನುಷ್ಯಾಗ ಮೊದಲಿನ ಆರೋಗ್ಯ ಉಳಿಯೂದಿಲ್ಲ. ಒಂದು ದಿನಾ ಹಾಂಗ, ಇರತಾರ. ಒಂದು ದಿನಾ ಹೀಂಗ ಇರತಾರ. ಗೌರಾಗೂ ಈಗ ನಲ್ವತ್ತೆಂಟು ವರ್ಷ ನಡೀತಾವ, ಏನೋ ನಾಲ್ಕೆಂಟು ದಿನಾ ತ್ರಾಸಾತು ಮಲಗ್ಯಾಳ. ಅಂದಷ್ಟಕ್ಕ ಏನ ಜಗತ್ತು ಮುಳುಗಿಹೋದ ಹಾಂಗ ಮಾತಾಡ್ತೀಯಲ್ಲ. ಈಗ ನೀನು ಬರಲಿಕ್ಕೇ ಬೇಕು ಅಂತ ಜುಲುಮಿ ಮಾಡಿ ಬರದರ, ಅನೂ ಕಾನಪುರದಿಂದ ಬರತಾಳ. ಆದರ ಅವಳ ಕೆರಿಯರ್ ಹಾಳಾಗೋದಿಲ್ಲೇನು? ಬುದ್ಧಿವಂತ ಹುಡುಗಿ. ಓದಬೇಕು ಅಂತ ಆಸೇ ಮಾಡ್ಯಾಳ. ಇಲ್ಲೇ ಬಂದು ಆಕಿ ಮಾಡೂದರೆ ಏನದ? ಯಮುನಾ ಎಲ್ಲಾ ಮಾಡ್ತಾಳ. ಮಗಳು ಕಣ್ಣ ಮುಂದ ಇದ್ದರ ಈಕೀನೂ ಸುಮ್ಮನ ಇರೂದಿಲ್ಲಾ. ಲಗ್ನಾ ಮಾಡ್ರಿ. ಲಗೂ ಲಗ್ನಾ ಮಾಡ್ರಿ ಅಂತ ಬೆನ್ನ ಹತ್ತತಾಳ. ಆಕೀಗೆ ಈಗ ಲಗ್ನಾ ಆಗೂ ಮನಸ್ಸಿಲ್ಲಾ. ಇವರ ಜಗಳಾ ನೋಡಲಾರದೆ ಅನುರಾಧಾ ಕಾನಪುರದಾಗ ಇರತೀನಿ ಅಂದ್ಳು. ಓ. ಕೆ. ಅಂದ್ಬಿಟ್ಟೆ.

ಈ ಗೌರಾಗಂತೂ ಯಾವಾಗ ಬುದ್ಧಿ ಬರತsದೋ ಏನೋ. ತಾನು ಇನ್ನೂ ಹದಿನೆಂಟನೇ ಶತಮಾನದಾಗ ಇದ್ಹಾಂಗ ಆಡತಾಳ. ಈಗ ಜಗತ್ತು ದಿನಕ್ಕ ದಿನಾ ಎಷ್ಟ ಮುಂದುವರೀತದ ಅನ್ನೂದರ ಎಚ್ಚರಾನ ಇಲ್ಲಾ. ಜಗತ್ತಿನ ಕೂಡಾ ನಾವು ಬದಲ ಆಗಬೇಕು ಅನ್ನೂ ಬುದ್ಧಿನೂ ಇಲ್ಲಾ. ಛೇ ನನಗಂತೂ ಸಾಕಾಗಿ ಹೋಗೇದ, ಈಕೀ ಕೂಡ."

ಕಪಾಳಿಗೆ ಹೊಡೆಸಿಕೊಂಡವನಂತೆ ಶಿವಣ್ಣ ಸುಮ್ಮನೆ ಅಕ್ಕನ ಕೋಣೆಗೆ ತಿರುಗಿ ಬಂದ. ಅವಳಿಗೆ ಎಚ್ಚರವಾಗುತ್ತಿದ್ದ ಹಾಗೆ ಕಂಡಿತು. ಹತ್ತಿರ ಹೋಗಿ ಕುಳಿತು 'ಅಕ್ಕಾ' ಎಂದ ಮೇಲು ದನಿಯಲ್ಲಿ, ಕಣ್ಣು ತೆರೆದು ಅವನನ್ನು ನೋಡಿದಳು. ಶಿವಣ್ಣ ಬೆಚ್ಚಿ ಬಿದ್ದ. ಅಕ್ಕ ತನ್ನನ್ನು ಗುರುತು ಹಿಡಿಯಲೇ ಇಲ್ಲವೆನಿಸಿತು. ಮನಸ್ಸಿಗೆ ಆಘಾತವಾಯಿತು. ಆದರೂ ಗಟ್ಟಿ ಧೈರ್ಯಮಾಡಿ ಇನ್ನೂ ಜೋರಾಗಿ "ಗೌರಕ್ಕಾs" ಅಂದ ಅವಳ ಎರಡೂ ಕೈ ಹಿಡಿದುಕೊಂಡು. ಅವನನ್ನು ದಿಟ್ಟಿಸಿ ನೋಡಿ ರಮಿಸುವವಳಂತೆ ಅವನ ಕೆನ್ನೆ ಸವರುತ್ತ ಮುದ್ದುಗರೆದಳು. "ಶಿವೂ, ಶಿವಣ್ಣಾs ಬಿದ್ದೆನೋ, ಭಾಳ ಪೆಟ್ಟಾಯ್ತೇನು ಬಾಳಾs" ಕ್ಷಣಹೊತ್ತು ದಿಗ್ಭ್ರಮೆಯಾದರೂ ಅವಳು ರೋಗಿ ಎನ್ನುವುದನ್ನು ಮನಸ್ಸಿಗೆ ತಂದುಕೊಂಡು,

"ಹೂಂ, ಹೌದಕ್ಕಾs ಬಿದ್ದೆ" ಎಂದ ಅಳುಮೋರೆ ಮಾಡಿ, ಅತ್ತಿತ್ತ ನೋಡಿದ, ಹತ್ತಿರ ಯಾರೂ ಇರಲಿಲ್ಲ.

"ಹೂಂ, ನಾ ಹೇಳಿದರ ನೀ ಎಲ್ಲಿ ಕೇಳತೀ ? ಆಯುಸ್ಕ್ರೀಮ ತಿನ್ನಾಕ ಓಡಿ ಹೋದಿ, ಬಿಸಿಲಾಗ ಓಡಬ್ಯಾಡ ಅಂದರ ಕೇಳಲಿಲ್ಲಾ. ಇರಲಿ ಬಿಡು ಅಳಬ್ಯಾಡಾ ಪಟ್ಟೀ ಕಟ್ಟತೀನಿ."

ಅವಳ ಮಾತು ಕೇಳುತ್ತ ಅಕ್ಕನ ಕೈ ಸವರುತ್ತಿದ್ದ ಶಿವಣ್ಣ ಅವಳು ಮತ್ತೆ ಕಣ್ಣ ಮುಚ್ಚಿದ್ದನ್ನು ಕಂಡು ಶಬ್ದ ಮಾಡದಂತೆ ಮೇಲೆ ಎದ್ದ.

* * *

ಡಾ|| ದತ್ತರ ಹೇಳಿಕೆಯಂತೆ ಜಯಾಳಿಗೆ, ೪-೫ ದಿನ ಬಿಟ್ಟು ಗೌರಕ್ಕನೊಡನೆ ಬರುತ್ತೇನೆ ಎಂದು ತಾರು ಕೊಟ್ಟ. ಅಡಿಗೆಯ ಯಮುನಾ ಎಲ್ಲವನ್ನೂ ಮಾಡಿಕೊಂಡು ಹೋಗುತ್ತಿದ್ದಳು. ಚಹಾ, ತಿಂಡಿ, ಹಾಲು, ನೀರು, ಸ್ನಾನ, ಊಟ ಎಲ್ಲವೂ ಹೊತ್ತಿಗೆ ಸರಿಯಾಗಿ ಆಗುತ್ತಿತ್ತು. ಮಾಮಾ ಕಾಲೇಜಿಗೆ ಹೋಗುವ ಮೊದಲು ಕೋಣೆಯಲ್ಲಿ ಬರುತ್ತಿದ್ದರು.

ಗೌರಾ ಹೇಗಿದ್ದೀ ?

ನಿದ್ದೆ ಬಾದಿತೇ ?

ಔಷಧಿ ತೊಗೊಂಡಿಯಾ ? ಎಂದು ಕೇಳುತ್ತಿದ್ದರು. ಅಲ್ಲಿಗೆ ಮುಗಿಯಿತು ಅವರ ಮಾತು, ಕರ್ತವ್ಯ ಎರಡೂ. ಮಾತಿನಲ್ಲಿ ಹೊಸತನ ವೇನೂ ಇರಲಿಲ್ಲ. ದಿನವೂ ಅದೇ ಪ್ರಶ್ನೆ, ಅದೇ ಉತ್ತರ.

ಮಾಮಾ ಕೋಣೆಯೊಳಗೆ ಬಂದಾಗ ಗೌರಕ್ಕ ಎಚ್ಚರವಿದ್ದರೂ ಅವರತ್ತ ನೋಡಲಿಲ್ಲ. ಪ್ರಶ್ನೆ ಮಾಡಿದಾಗ ಅಪರಿಚಿತರಂತೆ ಅವರನ್ನು ದಿಟ್ಟಿಸಿ ನೋಡಿ ಸುಮ್ಮನಿದ್ದಳು. ಶಿವಣ್ಣನೇ ಉತ್ತರ ಕೊಟ್ಟ. ಆದರೆ ಅದೇ ಗೌರಕ್ಕ ಅಂದು ಸಂಜೆ "ನಿನ್ನ ಮಾಮಾ ಎಲ್ಲೆ ಅದಾರ ? ಊರಿಗೆ ಹೋಗ್ಯಾರೇನು ? ನೋಡೇ ಇಲ್ಲಲ್ಲ ನಾನು ಅವರನ್ನ" ಎಂದು ಕೇಳಿದಾಗ ಶಿವಣ್ಣ ಅಚ್ಚರಿಪಟ್ಟ. ಹೆಜ್ಜೆ ಹೆಜ್ಜೆಗೆ ಅವನಿಗೆ ಹೊಸ ಅಕ್ಕ ಕಾಣಿಸುತ್ತಿದ್ದಳು. ಆದರೂ ಡಾ|| ದತ್ತರ ಮಾತು ನೆನಪಾಗಿ, ಅವಳಿಗೆ ಮಾಮಾ ಬಂದು ಹೋದ ವಿಷಯ ತಿಳಿಸಿದ. ಅವಳು ಇಷ್ಟಗಲ ಮುಖ ಅರಳಿಸಿ "ಹೌದೇನು ? ನನಗ ಗೊತ್ತ ಇಲ್ಲ. ಅವರು ಬಂದಾಗ ನನಗ ನಿದ್ದಿ ಹತ್ತಿತ್ತು ಕಾಣ್ತದ," ಎಂದಾಗ ಸುಮ್ಮನಿದ್ದ. ದಿನಕ್ಕೊಮ್ಮೆ ಯಾದರೂ ದತ್ತರನ್ನು ಭೆಟ್ಟಿಯಾಗಿ ಅವಳ ಮಾತುಗಳು, ಪ್ರಶ್ನೆಗಳು ಪ್ರತಿ ಕ್ರಿಯೆಗಳ ವಿವರವನ್ನು ಒಪ್ಪಿಸಿ ಅವರಿಂದ ಸಲಹೆ ಪಡೆಯುತ್ತಿದ್ದ.

ಒಂದು ಮುಂಜಾನೆ ಗೌರಕ್ಕ ಬೇಗ ಎದ್ದು ಸ್ನಾನ ಪೂಜೆ ಮುಗಿಸಿ ಯಮುನಾಳ ಸಹಾಯದಿಂದ ಅಂದಿನ ಅಡಿಗೆಯನ್ನೂ ಮಾಡಿದಳು. ಗಂಡನಿಗೆ ಕಾಲೇಜಿಗೆ ಲೇಟಾಗುತ್ತದೆ ಎಂದು ಡೈನಿಂಗ ಟೇಬಲ್ ಮೇಲೆ ಎಲ್ಲವನ್ನೂ ತಂದಿಟ್ಟು ಊಟಕ್ಕೆ ನೀಡಲೂ ತಯಾರಾಗಿದ್ದಳು. ಸ್ನಾನ ಮುಗಿಸಿ ಬಂದ ಮಾಮಾ ಊಟಕ್ಕೆ ಬರದೆ ಡ್ರೆಸ್ ಮಾಡಿಕೊಂಡೇ ಬಂದು ತಾವು ಮೀಟಿಂಗಿಗೆ ಹೋಗಬೇಕು ಈಗ ಊಟ ಮಾಡುವದಿಲ್ಲ, ಡಿನ್ನರ ಅಲ್ಲಿಯೇ ಇದೆ ಎಂದಾಗ ಗೌರಕ್ಕನ ಮುಖ ನೋಡಬೇಕಿತ್ತು. ಬಟ್ಟಲಲ್ಲಿ ಪಾಯಸ ಹಾಕಿಕೊಟ್ಟು "ಇದನ್ನಾದರೂ ಸ್ವಲ್ಪ ತೊಗೊಳಿ" ಎಂದು ಅಂಗಲಾಚಿದಳು.

"ಒಲ್ಲೆ ಅಂದರ ಯಾಕ ಜುಲುಮಿ ಮಾಡತೀ ಗೌರಾs. ನಿನ್ನ ಅಡಿಗಿ, ರುಚಿ, ಅಲಂಕಾರ, ಅಭಿಪ್ರಾಯ, ವಿಚಾರ ಎಲ್ಲಾ ಇನ್ನೊಬ್ಬರ ಮ್ಯಾಲೆ ಹಾಂಗ ಹೇರಬಾರದು ಅಂತ ನಾ ನಿನಗ ಎಷ್ಟ ಸಾರೆ ಹೇಳಿಲ್ಲಾ.

ನಾ ನಿನಗ ಹಾಂಗ ಯಾವದಕ್ಕಾರೂ ಒತ್ತಾಯ ಮಾಡ್ತಿನೇನು ? ನಿನಗ ಎಷ್ಟು ಹೇಳಿದರೂ ತಲ್ಯಾಗ ಹೋಗೂದಿಲ್ಲ, ಪ್ರೀತಿ ಪ್ರೀತಿ ಅಂತ ಹೇಳಿ. ಇನ್ನೊಬ್ಬರಿಗೆ ಕಷ್ಟಾ ಕೊಡೂದು ಇದೆಂಥಾ ಪ್ರೀತಿ ? '' ಎಂದು ಒದರಾಡಿ ಹೊರಟೇ ಹೋದರು.

ಬಿಳಚಿಕೊಂಡಿದ್ದ ಗೌರಕ್ಕನ ಮುಖ ಆವೇಶದಿಂದ ಕೆಂಪಾಯಿತು. ತುಟಿ ನಡಗುತ್ತಿದ್ದವು. ಮುಷ್ಟಿ ಬಿಗಿಯಿತು. ಇನ್ನೊಂದು ಗಳಿಗೆಯಲ್ಲಿ ಟೇಬಲ್ ಮೇಲಿನ ಸಾಮಾನುಗಳನ್ನೆಲ್ಲ ತಳ್ಳಿಬಿಡಲು ಕೈ ಎತ್ತಿದಳು. ಅಷ್ಟು ಹೊತ್ತಿನವರೆಗೆ ಸುಮ್ಮನೆ ನೋಡುತ್ತಿದ್ದ ಶಿವಣ್ಣ ಹತ್ತಿರ ಬಂದು ಅವಳ ಹೆಗಲ ಮೇಲೆ ಮೃದುವಾಗಿ ಕೈಯಿಟ್ಟ. ಗೌರಕ್ಕ ನಿಧಾನವಾಗಿ ಅವನತ್ತ ತಿರುಗಿದಳು. ಶಿವಣ್ಣ ತನ್ನ ಹೊಟ್ಟೆ ಬಡಿದುಕೊಂಡು ಐದು ಬೆರಳು ತುಟಿಗಿಟ್ಟು ಹಸಿವಾಗುತ್ತಿದೆ ಎನ್ನುವಂತೆ ಸನ್ನೆ ಮಾಡಿದ. ಗೌರಕ್ಕ ಮಿಸುಕಲಿಲ್ಲ. ಅವಳ ಕಿವಿಯ ಹತ್ತಿರ ಬಾಯಿ ಇಟ್ಟು ಮೆತ್ತಗೆ "ಅಕ್ಕಾs ಹಸಿವಿ ಆಗೇದ'' ಎಂದು ಮಕ್ಕಳಂತೆ ಅಂಗಲಾಚಿದ. ಅವಳ ಆವೇಶ ಇಳಿಯಿತು. ಕಣ್ಣು ತುಂಬಿ ನೀರು ಹೊರಚೆಲ್ಲಿದವು. ಸೆರಗಿನಿಂದ ಒರೆಸುತ್ತ, ''ಬಾ, ಶಿವಣ್ಣಾs ಹೊತ್ತಾಯ್ತು ನಿನಗ ಊಟಕ್ಕ ನೀಡ್ತೇನಿ" ಎಂದು ತಾಟು ಇಟ್ಟಳು. ಅಕ್ಕನ ಸಮಾಧಾನಕ್ಕೆ ಶಿವಣ್ಣ ಹೊಟ್ಟೆ ಬಿರಿಯುವಂತೆ ಊಟ ಮಾಡಿದ, ಹಾಸಿಗೆಯ ಮೇಲೆ ಹೊರಳಿದ.

ಎದ್ದು ಮುಖ ತೊಳೆದು ಬಂದ ಶಿವಣ್ಣನಿಗೆ ಯಮುನಾ ಗೌರಕ್ಕ ಉಪವಾಸವಿದ್ದ ಸುದ್ದಿ ಹೇಳಿದಳು. ಶಿವಣ್ಣ ಅವಳ ಕೈಯ ಟ್ರೇ ಇಸಿದುಕೊಂಡು ಅಕ್ಕನ ಕೋಣೆ ಹೊಕ್ಕ. ಉಪ್ಪಿಟ್ಟಿನ ಪ್ಲೇಟು ಅವಳ ಮುಂದೆ ಹಿಡಿದಾಗ,

''ನನಗ ಏನೂ ಬ್ಯಾಡಾ ಶಿವಣ್ಣಾs'' ಎಂದು ಉಸಿರ್ಗರೆದಳು.

"ಅಕ್ಕಾs ಮಾಮಾ ಅಲ್ಲಿ ಹೊಟ್ಟೆ ತುಂಬಾ ಊಟಾ ಮಾಡಿರತಾರ. ನೀ ಯಾಕ ಇಲ್ಲಿ ಉಪವಾಸ ಇರಬೇಕು ? ''

''ನಿನ್ನ ಮಾಮಾ ನನ್ನ ಮ್ಯಾಲೆ ಭಾಳ ಪ್ರೀತಿ ಅದಾರ ಶಿವೂs. ಆದಕ್ಕs ನನಗ ಎಲ್ಲಾ ಸ್ವಾತಂತ್ರ್ಯ ಕೊಟ್ಟಾರ. ಎಲ್ಲಾ ಅಂದರ ಎಲ್ಲಾ ದಕ್ಕೂ, ನಾ ಬೇಕಾದ್ದು ಮಾಡಬಹುದು, ಬೇಕಾದರ ಅಳಬಹುದು, ನಗಬಹುದು, ಉಪವಾಸ ಇರಬಹುದು. ಊಟಾನೂಮಾಡಬಹುದು.

ಇಷ್ಟ್ಯಾs ಯಾಕ, ಜೀವಂತ ಇದ್ದರೂ ಇರಬಹುದು, ಸತ್ತರೂ ಅಡ್ಡಿಯಿಲ್ಲ, ಎಲ್ಲಾದಕ್ಕೂ ಸ್ವಾತಂತ್ರ್ಯ ಅದ ನನಗ. ಯಾರೂ ಬ್ಯಾಡ ಅನ್ನೂದಿಲ್ಲಾ. ನಾ ಸತ್ತರ ಯಾರಿಗೂ ದುಃಖ ಆಗೂದಿಲ್ಲ, ನಾ ಯಾರಿಗೂ ಬೇಕಾಗಿಲ್ಲ, ನನ್ನ ಅವಶ್ಯಕತಾನ ಯಾರಿಗೂ ಇಲ್ಲಾ.''

ಅಳು ನಗುವಿನ ಮಧ್ಯೆ ಗೌರಕ್ಕ ಹೇಳಿದ ಮಾತು ಶಿವೂನ ಹೃದಯ ವನ್ನು ಚುಚ್ಚಿತು.

ಅವನೂ ಅಷ್ಟೇ ಕಳಕಳಿಯಿಂದ ಹೇಳಿದ. ಯಾಕ ಯಾರಿಗೂ ಬೇಕಾಗಿಲ್ಲ? ನಮಗೆಲ್ಲ ನೀ ಬೇಕs ಬೇಕು. –ಮಾವಾಗ, ಅನುರಾಧಾಗ, ಅನೂಪಗ, ನನಗ, ಜಯಾಗ. ನೀನs ತಪ್ಪು ತಿಳಕೊಂಡೀದಿ. ಅಮರ ಅಂತೂ ಅತ್ಯಾ ಅತ್ಯಾ ಅಂತ ನಿನ್ನ ಎಷ್ಟ ನೆನಸತಾನ.''

''ಶಿವೂs, ಜಯಾ ಹ್ಯಾಂಗ ಇದ್ದಾಳ? ಹಿಂದಿನ ಪತ್ರದಾಗ ಬಸಿರ ಅದಾಳಂತ ಬರದಿದ್ದಿ. ಈಗ ಎಷ್ಟು ತಿಂಗಳು? ಹುಚ್ಚಿ, ನಾನೊಬ್ಬಾಕಿ. ನೀ ಬಂದು ಇಷ್ಟ ದಿನಾ ಆದರೂ ಅಮರ ಹ್ಯಾಂಗ ಅದಾನಂತ ಸುದ್ದಾ ನಾನು ಕೇಳಿಲ್ಲಾ, ಅಷ್ಟ ಅರವು–ಮರವು ನಂದು.''

''ಜಯಾ ಆರಾಮ ಅದಾಳ ಅಕ್ಕಾs. ಈಗ ಏಳನೇ ತಿಂಗಳು ನಡೀತದ.''

''ಅಮರ ಭಾಳ ತುಂಟ ಆಗಿರಬೇಕಲ್ಲಾ; ಅವನ್ನ ನೋಡಬೇಕು ಅಂತ ಭಾಳ ಅನಸ್ತದ. ಬೆಳಗಾಂವಿಗೆ ಹೋಗೂಣೇನು?'' ಗೌರಕ್ಕ ಮುಗ್ಧ ಮಗುವಿನಂತೆ ಕೇಳಿದಳು.

''ಹೌದಕ್ಕಾs ಬೆಳಗಾಂವಿಗೆ ನಿನ್ನ ಕರಕೊಂಡು ಹೋಗಲಿಕ್ಕೇ ಬಂದೇನಿ ನಾನು. ಜಯಾ, ಅಮರ ನಿನ್ನ ದಾರಿ ನೋಡಲಿಕ್ಕೆ ಹತ್ಯಾರ. ಆದರ ಡಾ| ದತ್ತ ಹೇಳ್ಯಾರ ಮಿಸೆಸ್ ಪಾಟೀಲ್‌ರು ತಿಂದು ಉಂಡು ಗಟ್ಟಿ ಯಾಗಿ ಶಕ್ತಿ ಬಂದ ಮ್ಯಾಲೆ ಊರಿಗೆ ಹೋಗಲಿಕ್ಕೆ ಅಡ್ಡಿಯಿಲ್ಲಾ ಅಂತ. ಅದಕ್ಕs ಹಿಡಿ ಈ ಪ್ಲೇಟು, ಮೊದಲ ಈ ಉಪ್ಪಿಟ್ಟು ತಿನ್ನು. ಹಾಂ ಹಾಂಗs. ನೋಡು ಮುಂಜಾನೆ ನೀ ಮಾಡಿದ ಪಾಯಸ ಭಾಳ ರುಚಿಯಾಗಿತ್ತು. ನೀನು ಸ್ವಲ್ಪ ಸ್ಯಾಂಪಲ್ ನೋಡು. ಏ ಯಮುನಕ್ಕಾs ಮುಂಜಾನಿ ಪಾಯಸಾ ಉಳಿದಿದ್ದರ ಒಂದಿಷ್ಟು ತೊಗೊಂಡು ಬಾ, ನಾನು ಅಕ್ಕಾ ತಿಂತೀವಿ.''

"ಶಿವೂ, ನಮ್ಮ ಅನುಪಸೂ ಸಣ್ಣಾಂವಿದ್ದಾಗ ಅಮರನಾಂಗ ಭಾಳ ತುಂಟ ಇದ್ದಾ. ನನಗಂತೂ ಅವನ್ನ ಹಿಡದು ಹಿಡದು ಸಾಕಾಗಿ ಹೋಗಿತ್ತು. ಇಸರು ಕಾಲೇಜಿಗೆ ಹೋದಾಗಿನಿಂದಾ ಬರೂ ತನಕಾ ಹೊತ್ತು ಹ್ಯಾಗ ಹೋಗತಿತ್ತೊ ನನಗ ತಿಳಿತಿದ್ದಿಲ್ಲಾ. ಹಾಂ, ಅಂದಾಂಗ ನಿನಗೆ ಹೇಳಲಿಕ್ಕೆ ಮರತಿದ್ದೆ. ಅವರೂ ಹೇಳಿರಲಿಕ್ಕಿಲ್ಲ, ಅನೂಪಗ ಮಗಳು ಹುಟ್ಯಾಳಂತ, ಕೇಬಲ್ ಕಳಿಸಿದ್ದಾ. ಹುಡುಗೀಗೆ ಅವಳ ತಾಯಿ ಹಾಂಗ ನೀಲಿ ಕಣ್ಣು, ಹೊಂಬಣ್ಣದ ಕೂದಲಾ ಇರಬೇಕು. ಆ ಶೋಕೇಸಿನ್ಯಾಗಿನ ಗೊಂಬಿ ಹಾಂಗ ಕಾಣತಿರಬೇಕು. ನೋಡಲಿಕ್ಕೆ ಭಾಳ ಛಂದ ಇರಬೇಕು." ದೊಡ್ಡ ದೊಡ್ಡ ಕಣ್ಣುಗಳನ್ನು ಅರಳಿಸಿ ತಾನು ಕಾಣದ ಮೊಮ್ಮಗಳ ವರ್ಣನೆ ಮಾಡುತ್ತಿದ್ದ ಗೌರಕ್ಕನ ಮಾತು ಕೇಳುತ್ತ ಶಿವಣ್ಣ ತಿನ್ನುವುದನ್ನೇ ಮರೆತ.

* * *

ಶಿವಣ್ಣ ಗೌರಕ್ಕ ಕೂಡಿ ಬೆಳಗಾಂವಿಗೆ ಹೋಗುವ ದಿನ ನಿಶ್ಚಿತವಾಗಿತ್ತು. ಜಯಾ ಬಸಿರಿ ಎಂದು ತರತರದ ತಿಂಡಿ ಮಾಡಿಸಿ ಕಟ್ಟಿದಳು. ಅಮರನಿಗೆ ರೆಡಿಮೇಡ ಅರಿವೆ, ಆಟಿಗೆ ಸಾಮಾನು, ಶಿವಣ್ಣನಿಗೆ ಪ್ರೀತಿ ಎಂದು ಅಂಜೂರ, ದ್ರಾಕ್ಷಿ ಹಣ್ಣಿನ ಬುಟ್ಟಿಗಳನ್ನು ಖರೀದಿ ಮಾಡಿದಳು ಗೌರಕ್ಕ. ಮಾವಾ ಆಕೆ ಕೇಳಿದಷ್ಟು ಹಣ ಕೈಗೆ ಕೊಟ್ಟು, ಹೆಂಡತಿಯ ಬಗ್ಗೆ ಕಾಳಜಿ ಇದೆ ಎನ್ನುವುದನ್ನು ಶಿವಣ್ಣನಿಗೆ ಖಚಿತಪಡಿಸುವ ಯತ್ನ ಮಾಡಿದರು. ಆದರೂ ಶಿವಣ್ಣನಿಗೆ ಅಕ್ಕನ ಬದುಕಿನಲ್ಲಿಯ ಕೊರತೆ ಏನು ಎನ್ನುವ ಅರಿವಾಗಿತ್ತು. ಅದನ್ನು ಸಾಧ್ಯವಿದ್ದಷ್ಟು ತಾನೇ ತುಂಬಿ ಕೊಡಲು ನಿಶ್ಚಯಿಸಿದ್ದ.

ಗೌರಕ್ಕ ತುಂಬಾ ಸಂಭ್ರಮದಿಂದ ಮನೆತುಂಬ ಓಡಾಡುತ್ತಿದ್ದಳು. ಗಂಡನ ರೂಮನ್ನು ಸ್ವಚ್ಛಮಾಡಿದಳು. ಅವರ ಅರಿವೆಗಳನೆಲ್ಲಾ ಅಗಸನಿಗೆ ಕೊಟ್ಟಳು. ಅಗಸನಿಂದ ಬಂದವುಗಳನ್ನು ಹುಡುಕಿ ತೆಗೆದು ರಿಪೇರಿ ಮಾಡಿದಳು. ಅವರ ಊಟ ತಿಂಡಿಯ ಬಗ್ಗೆ ಯಮುನಾಳಿಗೆ ಮೇಲಿಂದ ಮೇಲೆ ಎಚ್ಚರಿಕೆ ಕೊಟ್ಟಳು, ನೆರೆಮನೆಯವರಿಗೆಲ್ಲ ಹೇಳಿ ಬಂದಳು. ಒಂದು ಮನೆಯಿಂದ ಮೂರು ತಿಂಗಳ ಪುಟ್ಟ ಮಗುವನ್ನು ತಂದು ತಮ್ಮನಿಗೆ ತೋರಿಸಿ, ಈ ಮಗು ಹುಟ್ಟಿದಾಗ ತಾನೇ ಹತ್ತಿರವಿದ್ದೆ ಎಂದಳು. ಮಗುವಿಗೆ ತಾನೇ ಎಣ್ಣೆನೀರು ಹಾಕುತ್ತಿದ್ದೆ. 'ಅಮೃತಾ' ಎಂದು ಅವಳಿಗೆ ಹೆಸರನ್ನೂ ತಾನೇ ಆರಿಸಿ ಇಟ್ಟೆ ಎಂದಳು. ಆ ಎಳೆ ಮಗುವಿನ ತಾಯಿಗೆ

ಅದರ ಆರೈಕೆಯ ಬಗ್ಗೆ ಅರ್ಧ ತಾಸು ಲೆಕ್ಚರ ಕೊಟ್ಟಳು. ಅಮೃತಾಳನ್ನು ಬಿಟ್ಟೂ ಬಿಡಲಾರದೆ ಮನೆಗೆ ಕಳಿಸಿದಳು. ಕೆಲದಿನಗಳ ಹಿಂದೆ ರೋಗಿಯಂತೆ ಮಲಗಿದ್ದ ಅಕ್ಕ ಇವಳೇ ಏನು ಅನ್ನುವಷ್ಟು ಅಚ್ಚರಿ ಶಿವಣ್ಣನಿಗೆ.

ಅಂದು ಸಂಜೆ ಕಾನಪುರದಿಂದ ಟೆಲಿಗ್ರಾಂ ಬಂದಿತು. ಮಾವಮಾ ಮನೆಯಲ್ಲಿರಲಿಲ್ಲ, ಶಿವಣ್ಣ ಓದಿ ಹೇಳಿದ. ಅನುರಾಧಾ ಅಲ್ಲಿಯ ಪಂಜಾಬಿ ಲೆಕ್ಚರರ್‌ರೊಂದಿಗೆ ಮದುವೆ ಮಾಡಿಕೊಂಡಿದ್ದಳು. ಅಕ್ಕನ ಚಲನ ವಲನಗಳೆಲ್ಲಾ ತಣ್ಣಗಾದವು. ಕಲ್ಲಿನಂತೆ ಸುಮ್ಮನೆ ಕುಳಿತುಬಿಟ್ಟಳು. ಎಷ್ಟೊ ಹೊತ್ತಿನ ಮೇಲೆ ನಿಧಾನವಾಗಿ ಎದ್ದು ತನ್ನ ಕೋಣೆಗೆ ಹೋದಳು. ಶಿವಣ್ಣ ಗಾಬರಿಯಾಗಿ ಅವಳ ಹಿಂದೆಯೇ ಹೋದ. ಗೌರಕ್ಕ ಮಂಚದ ಕೆಳಗಿನಿಂದ ತನ್ನ ಟ್ರಂಕ ಎಳೆದುಕೊಂಡು, ಆದರಲ್ಲಿಯ ಸಾಮಾನುಗಳನ್ನೆಲ್ಲ ಕಿತ್ತಾಡಿ, ತಳದಲ್ಲಿದ್ದ ಒಂದು ಸಣ್ಣ ನೀಲಿ ರೇಶಿಮೆಯ ಅರಿವೆಯ ಗಂಟು ತೆಗೆದಳು. ಶಿವಣ್ಣ ದೂರ ನಿಂತು ಸುಮ್ಮನೆ ನೋಡುತ್ತಿದ್ದ. ಗಂಟಿನ ಮೇಲೆ ಕೈಯಾಡಿಸುತ್ತ ತನ್ನಷ್ಟಕ್ಕೆ ವಟವಟ ಅನ್ನುತ್ತಿದ್ದಳು.

"ನಾ ಲಗ್ನ ಆಗಿ ಬಂದ ವರ್ಷ ಪ್ರದರ್ಶನಕ ಹೋದಾಗ ಇವರು ಪ್ರೀತಿಯಿಂದ ಈ ಕರವಸ್ತ್ರ ಕೊಡಿಸಿದ್ದರು. ಹಿಂದಕ ಭಾಳ ವರ್ಷದ ಹಿಂದ, ಹೋದ ಜನ್ಮದಾಗೋ ಏನೋ ಅನಸ್ತದ'' ಮುಖದ ಹತ್ತಿರ ಗಂಟು ತಂದು ಮೂಸಿ ನೋಡಿದಳು. "ಈ ಹೈದರಾಬಾದದ ಅತ್ತರ್ ಅವತ್ತ ಕೊಡಿಸಿದ್ದು.'' ಗಂಟು ಬಿಚ್ಚಿದಳು. ನಾಲ್ಕೈದು ಪುಟ್ಟ ಪುಟ್ಟ ರೇಶಿಮೆಯ ಅಂಗಿಗಳು, ಮುತ್ತು, ಜರಿ ಕೆಲಸ ಮಾಡಿ ಗೊಂಡೆ ಕಟ್ಟಿದ ನಾಲ್ಕೈದು ರೇಶಿಮೆಯ ಕುಂಚಿಗೆಗಳು, ಅಲ್ಲದೆ ಸಣ್ಣ ಹಿತ್ತಾಳೆ ಡಬ್ಬಿಯಲ್ಲಿ ಹವಳ–ಮುತ್ತು ಕೂಡಿಸಿದ ಎರಡೆಳೆ ಬಂಗಾರದ ಸರ, ಹವಳದ ಕಿವಿ ಓಲೆ, ಪುಟ್ಟ ಪುಟ್ಟ ಬಂಗಾರದ ಬಳೆಗಳು, ಹರಳಿನ ಲಾಕೆಟ್ ಇದ್ದ ಚೈನು ಇದ್ದವು. ಎಲ್ಲವನ್ನೂ ಎತ್ತಿ ಎತ್ತಿ ನೋಡಿ ''ಅನುರಾಧಾಗ, ಅವಳ ಕೂಸಿಗೆ ಅಂತ ಮಾಡಿಸಿದ್ದೆ. ಆದರ ಇನ್ಯಾತಕ್ಕ ಬೇಕು ಇದೆಲ್ಲಾ ಆಕೀಗೆ. ಕೊಟ್ಟರೂ ಹಾಕತಾಳೋ ಇಲ್ಲೋ ಯಾರಿಗ್ಗೊತ್ತು. ಹುಂ ಶಿವೂನ ಮಗಳಿಗೇ ಕೊಟ್ಟರಾಯ್ತು'' ಎನ್ನುತ್ತ ಮತ್ತೆ ಗಂಟು ಕಟ್ಟಿ ಅವಳು ಎದ್ದಾಗ ಶಿವಣ್ಣ ಮೊದಲೇ ಹೊರಗೆ ಹೋಗಿದ್ದ.

ಫೋನಿನ ಸದ್ದು ಕೇಳಿ ಗಂಡನಿರಬೇಕೆಂದು ಗೌರಕ್ಕ ಧಾವಿಸಿ ತಾನೇ ಬಂದು ಎತ್ತಿಕೊಂಡಳು. 'ಹಲೋ' ಎಂದವಳೇ ಮತ್ತೊಂದು ಕ್ಷಣಕ್ಕೆ

ಫೋನು ಇದ್ದಲ್ಲಿಯೇ ಕುಕ್ಕಿದಳು. ಆಶ್ಚರ್ಯದಿಂದ ನೋಡುತ್ತಿದ್ದ ಶಿವಣ್ಣನಿಗೆ "ಆಕೀನs ಬೋಸಡಿ. ಅವರಿಗೆ ಫೋನ ಮಾಡಿದ್ದಳು" ಎಂದಳು. ಅವಳ ಉತ್ತರದ ತಲೆಬುಡ ತಿಳಿಯದಿದ್ದರೂ ವಿಕಾರವಾಗುತ್ತಿದ್ದ ಅಕ್ಕನ ಮುಖ ನೋಡಿ ಶಿವಣ್ಣ ಕೂಡಲೇ ಉಪಾಯ ಹುಡುಕಿದ.

''ಗೌರಕ್ಕ, ಬಾ, ಈ ಖುರ್ಚಿ ಮ್ಯಾಲೆ ಕೂಡ್ರು'' ರಟ್ಟೆ ಹಿಡಿದು ಕೂಡ್ರಿಸಿದ. ''ಅನುರಾಧಾ ಲಗ್ನಾ ಮಾಡಿಕೊಳ್ಳೂದಿಲ್ಲಾ ಅಂತ ಜಗಳಾಡತಿದ್ದಿ. ಈಗ ಆಯಿತು ಇಲ್ಲೋ ಆಕೀ ಮದುವೀ.''

''ಹೂಂ ಆಯ್ತು. ಜಾತಿ ಅಲ್ಲಾ. ಕುಲಾ ಅಲ್ಲಾ. ಭಾಷಾ ಬರೂದಿಲ್ಲಾ. ಸಂಪ್ರದಾಯ ಬ್ಯಾರೇ. ಮಂದೀನ ಕರೀಲಿಲ್ಲಾ, ಅಕ್ಕೀ ಕಾಳು ಹಾಕಲಿಲ್ಲಾ. ಇಂಥಾದಕ್ಕ ಮದುವೀ ಅಂತಾರೇನು? ಕಚೇರ್ಯಾಗ ಹೋಗಿ ಸಹಿ ಮಾಡಿ ಬಂದದ್ದಕ್ಕ.''

"ಹೌದು. ಇದು ಕಾನೂನು ಪ್ರಕಾರ ಮದುವಿ. ನಮ್ಮದು ಶಾಸ್ತ್ರದ ಪ್ರಕಾರ ಮದುವಿ. ಈಗ ಕಾಲ ಬದಲಾಗೇದ. ಹೊಸಾ ಹೊಸಾ ಪದ್ಧತಿ ಬಂದಾವ, ಅಮೇರಿಕಾ ಮತ್ತು ಇಗ್ಲೆಂಡದಾಗ ಇಲ್ಲೀ ಹಾಂಗ ಹಂದರಾ ಹಾಕಿ, ಸುರಗೀ ಎರದು, ಅರಿಶಿಣಾ ಹಚ್ಚಿ, ಅಕ್ಕೀಕಾಳು ಹಾಕತಾರಂತ ನೀ ತಿಳಕೊಂಡೀ ಏನು? ಆದರ ಅದಕ್ಕೂ ಮದುವಿನs ಅಂತಾರ. ಅವರೂ ಗಂಡಾ-ಹೇಣ್ತಿ ಆಗ್ತಾರ, ಹೌದಲ್ಲೊ?''

''ಹುಂ ಆಗತಿದ್ದಾರ ಬಿಡು. ಮುಂದೇನು ಹೇಳು.''

''ಅನೂಗ ಮದುವಿ ಆತು, ಇನ್ನ ಮಗಳು ಹುಟ್ಟತಾಳ, ಆದರೆ ಆಕೀನ ನನ್ನ ಅಮರಗ ಕೊಡಬೇಕು. ಹಾಂ ಈಗs ಹೇಳತೀನಿ'' ಎಂದು ಶಿವಣ್ಣ ಬಾರದ ನಗು ಬರಿಸಿಕೊಂಡು ನಕ್ಕ.

ಗೌರಕ್ಕ ಅರ್ಧ ಸಿಟ್ಟಿನಲ್ಲಿ ಅರ್ಧ ನಗುವಿನಲ್ಲಿ ''ಹೂಂ ನಿಂದೊಂದು ಮಾತs, ತಾಯೀನs ನನಗ ಹೇಳಿದ ಮದುವಿ ಮಾಡಿಕೊಂಡಳು. ಇನ್ನ ಆಕೀ ಮಗಳು ಕೇಳತಾಳ? ಆದರ ಅನುರಾಧಾ ಓದು ಮುಗಿದ ಮ್ಯಾಲೆ ಕೆಲಸಾ ಮಾಡತೀನಿ ಅಂತಿದ್ಳು. ಆಕೀಗೆ ಕೂಸಿನ್ನ ಜೋಪಾನಾ ಮಾಡಲಿಕ್ಕೆ ಬರೂದಿಲ್ಲಾ, ಅದಕ್ಕ ಆಕೀ ಮಗಳ್ನ ಇಲ್ಲೇ ಇಟ್ಟಕೋತೀನಿ. ನಾನs ಬೆಳಸ್ತೇನಿ. ಅಲ್ಲಾ ನೀನs ಹೇಳು. ಪಿಯೆಚ್. ಡಿ. ಓದಿದರ

ಏನಾತು. ಅನೂಗ ಕೂಸಿನ್ನ ಹೆರಲಿಕ್ಕೆ ಬರ್ತದ ಅಂತ ತಿಳಕೊಂಡೀ ಏನು ?

*   *   *

ಶಿವಣ್ಣ ಅಕ್ಕನ ಮಾತು ಕೇಳಿ ತೆರೆದ ಬಾಯಿ ಮುಚ್ಚಲಿಲ್ಲ.

ಗೌರಕ್ಕ ಬಂದು ಮೂರು ತಿಂಗಳು ಕಳೆದಿತ್ತು. ಅವಳ ಆರೋಗ್ಯ ಬಹಳ ಸುಧಾರಿಸಿತ್ತು. ಜಯಾನ ಬಾಣಂತನ ಮುಗಿದ ಮೇಲೆಯೇ ಪುಣೆಗೆ ಹೋಗಬೇಕೆಂದು ನಿಂತಿದ್ದಳು. ಆಗಾಗ ಮಾವಾನಿಗೆ ಪತ್ರ ಬರೆಯುತ್ತಿದ್ದಳು. ಆದರೆ ಅವರಿಗೆ ಉತ್ತರ ಬರೆಯಲು ಪುರುಸೊತ್ತೇ ಸಿಕ್ಕುತ್ತಿರಲಿಲ್ಲ. ಅವರು ಬರೆದ ಒಂದೇ ಒಂದು ಪತ್ರದಲ್ಲಿ, ಅನೂಪನಿಂದ ಪತ್ರಗಳಿಲ್ಲ. ಅನುರಾಧಾ ಹನಿಮೂನ ಮುಗಿಸಿ ಕಾನಪುರಕ್ಕೆ ಬಂದಿದ್ದಾಳೆ. ಅಭ್ಯಾಸ ಬಾಕಿ ಬಹಳ ಉಳಿದಿದ್ದರಿಂದ ಪುಣೆಗೆ ಬರಲು ಆಗಲಿಲ್ಲವೆಂದು ವಿಷಾದ ಪಟ್ಟುಕೊಂಡು ಬರೆದಿದ್ದಾಳೆ. ಯಮುನಾ ಎಲ್ಲ ಕೆಲಸ ಮಾಡಿ ಕೊಂಡ್ನು ಹೋಗುತ್ತಾಳೆ. ನಮ್ಮ ಕಾಳಜಿ ಮಾಡಬೇಡ ಎಂದೆಲ್ಲಾ ಬರೆದು, ಕೊನೆಗೆ ಒಂದು ಸಾಲಿನಲ್ಲಿ ಮಾಲಿನಿಯ ತಾಯಿ ತೀರಿಕೊಂಡರು. ಅವಳಿಗೆ ಬಹಳ ದುಃಖವಾಗಿದೆ ಎಂದು ಬರೆದಿದ್ದರು. ಮಾಲಿನಿ ಯಾರೆಂದು ಶಿವಣ್ಣ ಕೇಳಿದಾಗ ಗೌರಕ್ಕನ ದುಃಖದ ಇನ್ನೊಂದು ಮುಖದ ಪರಿಚಯು ಅವನಿಗಾಯಿತು. ಪ್ರೊ. ಮಾಲಿನಿ ಕರ್ಣಿಕ ಮೂವತ್ತೈದು ವಯಸ್ಸಾ ದರೂ ಮಿಸ್ ಆಗಿಯೇ ಉಳದಿದ್ದಾಳೆಂದೂ ಮಾಮಾನಿಗೆ ಅವಳಿಗೆ ಒಂದು ಮೀಟಿಂಗಿನಲ್ಲಿ ಪರಿಚಯುವಾಗಿ ಈಗ ಇಬ್ಬರ ಸ್ನೇಹ ಗಾಢವಾಗುತ್ತ ನಡೆದಿದೆ ಎಂದೂ ಹೇಳಿ ಗೌರಕ್ಕ ಮಾಲಿನಿಗೆ ಹಿಡಿಶಾಪ ಹಾಕಿದಳು.

ಮುಂದೆ ಒಂದು ತಿಂಗಳು ಕಳೆದಿರಲಿಲ್ಲ. ಅಕ್ಕನ ಶಂಕೆ ನಿಜವಾ ಯಿತು. ಮಾವಾನ ಪತ್ರ ಶಿವಣ್ಣನಿಗೆ ಬಂದಿತು.

'ಪ್ರಿಯ ಶಿವಣ್ಣ,'

ನಿನ್ನೆ ನಾನು ಡಾ. ಮಾಲಿನಿ ಕರ್ಣಿಕ ಜೊತೆಗೆ ರಿಜಿಸ್ಟರ್ಡ ಲಗ್ನ ಮಾಡಿಕೊಂಡೆ. ಅವಳು ನನ್ನ ಬೌದ್ಧಿಕ ಜೀವನಕ್ಕೆ ಸರಿಯಾದ ಸಂಗಾತಿ. ನಾನು ಚೆನ್ನಾಗಿ ವಿಚಾರ ಮಾಡಿಯೇ ಈ ನಿರ್ಧಾರ ತೆಗೆದುಕೊಂಡಿದ್ದೇನೆ. ಈ ವಿಷಯುದಲ್ಲಿ ನಿನ್ನ ಅಕ್ಕನಿಂದ ಯಾವ ಅಡ್ಡಿ-ಆತಂಕಗಳು ಬರುವದಿಲ್ಲ ವೆನ್ನುವದೂ ನನಗೆ ಗೊತ್ತು. ಅವಳಿಗೆ ಯಾವದಕ್ಕೂ ನಾನು ಕಡಿಮೆ ಮಾಡುವುದಿಲ್ಲ. ಅವಳು ಇಷ್ಟಪಟ್ಟರೆ ಬಂದು ಪುಣೆಯ ಮನೆಯಲ್ಲಿ ಇರ

ಬಹುದು, ಅಥವಾ ನಿನ್ನ ಜೊತೆಗೇ ಇರಬಯಸಿದರೆ ಅವಳಿಗೆ ತಿಂಗಳಿಗೆ ಮುನ್ನೂರು ರೂಪಾಯಿ ಖರ್ಚಿಗೆ ತಪ್ಪದೇ ಕಳಿಸುವೆ. ಅವಳನ್ನು ಕೇಳಿ ಉತ್ತರ ಬರೆ. ಅವಳ ಇಷ್ಟಕ್ಕೇ ಬಿಟ್ಟಿರುವೆ.

ನಿನ್ನ,
ಮಾವಾ

ಪತ್ರ ಓದಿದ ಗೌರಕ್ಕ ಅದನ್ನು ಹರಿದು ಚೂರು ಚೂರು ಮಾಡಿ ಮುಷ್ಟಿಯಲ್ಲಿ ಹಿಡಿದು ಹಿಸುಕಿ ಮುಖ ಮುಚ್ಚಿಕೊಂಡು ಅಳಹತ್ತಿದಳು. ಅವಳ ಕಣ್ಣೀರು ಹರಿಯಗೊಟ್ಟ ಶಿವಣ್ಣ ಪುಟ್ಟ ಅಂಜನಾಳನ್ನು ಎತ್ತಿ ಒಯ್ದು ಅವಳ ಉಡಿಯಲ್ಲಿಟ್ಟ. ಕೂಸನ್ನು ಎತ್ತಿ ಎದೆಗವಚಿಕೊಂಡ ಗೌರಕ್ಕ ದೃಢವಾದ ದನಿಯಲ್ಲಿ ಹೇಳಿದಳು.

"ಶಿವೂ ಈ ಪತ್ರಕ್ಕ ಉತ್ತರ ಬರೀಬ್ಯಾಡಾ."

ಕ್ಯಾನ್ಸರ್

ಪಡಸಾಲಿಯ ಕಟ್ಟೆಯ ಮೇಲೆ ಹಾಕಿದ್ದ ಹೊರಸಿನ ಮೇಲೆ ಒಂದು ಅರಿವೆಯ ಗಂಟಿನಂತೆ ಮುದುಡಿ ಮುದುಡಿಯಾಗಿ ಮಲಗಿದ್ದ ಶಿವಣ್ಣನ ಹತ್ತಿರ ಬಂದಳು ಬಸವ್ವ.

"ತಮ್ಮಾಽ, ಏ ಶಿವಣ್ಣಾಽ"

ಕೌದಿಯ ಮುಸುಕು ಬಿಗಿದ ಶಿವಣ್ಣ ಮಿಸುಕಲಿಲ್ಲ. ಬಸವ್ವ ಅಷ್ಟಕ್ಕೆ ಬಿಡುವವಳೇ ? ಒಂದು ಕೈಯಲ್ಲಿ ಪತ್ರ ಹಿಡಿದು ಇನ್ನೊಂದು ಕೈಯಿಂದ ಅಲುಗಾಡಿಸುತ್ತ ದೈನಾಸಬಟ್ಟಳು. "ಶಿವೂ,, ಏಳಪ್ಪಾ. ಕಾಗದ ಬಂದೈತಪ್ಪಾ. ಕೊಪ್ಪದಿಂದ ಬಂದಾಂಗ ಕಾಣತದ. ನಿನ್ನ ಮಾವಂದಽ ಇರಬೇಕು. ಒಂದೀಟು ಓದಿ ಹೇಳೋಯಪ್ಪಾ."

ಗಂಟಿಗೆ ಜೀವಾ ಬಂದಿತು. ಒಂದೊಂದಾಗಿ ಕೈ, ಕಾಲು, ಮುಖ ಹೊರಗೆ ಬಂದವು. ಅವ್ವನ ಕೈಯಿಂದ ಕಾಗದ ಇಸಿದುಕೊಂಡು ಮುಖಕ್ಕೆ ಹಿಡಿದ. ಬೆಳಕು ಸಾಲದ್ದರಿಂದ ಅಕ್ಷರಗಳು ಸ್ಪಷ್ಟವಾಗಲಿಲ್ಲ. ನರಳುತ್ತಲೇ ಕೈ ಊರಿ ಎದ್ದ. ಅವ್ವ ಆಧಾರ ಕೊಟ್ಟಮೇಲೆ ಪಡಸಾಲೆಯ ಬಾಗಿಲಿಗೆ ಬಂದು ನಿಂತು ತನ್ನಷ್ಟಕ್ಕೇ ಪತ್ರ ಓದಿಕೊಂಡ.

ಮೊದಲೇ ಬೆಳ್ಳಗಾಗಿದ್ದ ಮುಖ ಮತ್ತಷ್ಟು ಬಿಳಿಚಿಕೊಂಡಿತು. ಬಾಗಿಲ ಚೌಕಟ್ಟು ಹಿಡಿದವ ಅಲ್ಲಿಯೇ ಕುಸಿದು ಕುಳಿತು ಮುಖ ಮುಚ್ಚಿಕೊಂಡ. ಅವ್ವ ಹತ್ತಿರವಿರದಿದ್ದರೆ ಬಿದ್ದೇಬಿಡುತ್ತಿದ್ದನೇನೋ ! ಬಸವ್ವ ಎಷ್ಟೋ ಸಲ ರಮಿಸಿ ಯಪ್ಪಾ, ಯಣ್ಣಾ ಎಂದು ಕೇಳಿಕೊಂಡ ಮೇಲೆ ನಿಧಾನವಾಗಿ ಪತ್ರ ಓದಿದ.

ಮಗನ ಬಾಯಿ, ತುಟಿಗಳನ್ನೇ ಕಣ್ಣರಳಿಸಿ ಆಶ್ಚರ್ಯದಿಂದ ನೋಡುತ್ತಿದ್ದ ಬಸವ್ವ ಒಮ್ಮೆಲೇ ಮನೆಯ ಸೂರು ಹಾರಿ ಹೋಗುವ ಹಾಗೆ ಒದರಿದಳು :

"ಏನಂತಾನ ಅಂವಾ ನಿನ್ನ ಮಾವ ಅನ್ನಿಸಿ ಕೊಂಡಾಂವಾ ? ನಾಕ ಮಂದಿ ಹಿರೇರ ಮುಂದ ಮಾತ ಮುಗಿಸಿ, ನನ್ನ ಕೊಳ್ಳಾಗಿನ

ಗುಂಡಿನ ಟಿಕ್ಕಿ, ಟೋಪ ಸೆರಗಿನ ಸೀರಿಹಾಕಿ, ಸಕ್ಕರಿ ಕಾರಣಾ ಮಾಡಿ ಬಂದೀನಿ. ಈಗೇನ ಧಾಡಿ ಬಂತ ಇಂವಗ. ನಾಕ ದಿನಾ ಜಡ್ಡಾಗಿ ಮಲಗಿದರ ಏನಾತು ?ಜಗತ್ತಿನ್ಯಾಗ ಬ್ಯಾನಿ ಯಾರಿಗೂ ಬರೂದಿಲ್ಲೇನ? ನನ್ನ ಮಗ ಆರಾಮ ಆಗೂ ಜಡ್ಡ ಅಲ್ಲಂತ ಯಾವ ಊರ ಶಾಣ್ಯಾ ಹೇಳಿದ ಇಂವಗ ? ಮಗಳು ಬ್ಯಾನಿ ಗಂಡಸ್ನ ಒಲ್ಲೆ ಅಂತಾಳಂತ ಕಾಗದಾ ಬರಸಾಕ ನಾಚಿಕೆ ಬರೂದಿಲ್ಲೇನ ಈ ಹೆಂಗಸ್ಯಾಗ. ಜಿಪ್ಪರಿ ಹಿಡಿದ ಮೈಹುಳೇ ಜಜ್ಜಿ ಮಗಳಿಗೆ ಬುದ್ಧೀ ಕಲಸಬೇಕೋ, ಏನ ಆಕೀ ಹೇಳಿದಾಂಗ ಕುಣೀಬೇಕೊ ? ನನ್ನ ಮಗ್ಗ ದೇಸದಾಗ ಹೆಣ್ಣ ಕೊಡಾವರ ಸಿಗತಿದ್ದಿಲ್ಲೇನ ? ಕಾಲ ಬಿದ್ದ ಕೊಡತಿದ್ದರು. ಕಳ್ಳಿನ್ಯಾಗಿಂದ ಅಂತ ಅಣ್ಣನ ಮಗಳ್ನ ಮಾಡಿದರ ಈಗ ಕೊಡೂದಿಲ್ಲ ಅಂತಾನ ಲುಚ್ಚಾ. ಎಷ್ಟ ಸೊಕ್ಕು ಬಂದsದ ಇಂವಗ. ಇರಲಿ, ಮಾಡ್ತೀನಿ ಅಂವಗ. ಮನ್ಯಾಗ ಹಿರ್ಯಾ ಸತ್ತಾನ ಅಂದಷ್ಟಕ ಊರಾಗಿನ ಹಿರ್ಯಾರು ಇಲ್ಲೇನು ? ''

ಅವ್ವನ ಆರ್ಭಟ ಕೇಳಿ ಹಿತ್ತಿಲಲ್ಲಿದ್ದ ನೀಲಕ್ಕ ಓಡಿಬಂದಳು. ಅಣ್ಣನ ಗೋಣು ಸೊಟ್ಟಗಾಗಿದ್ದು ನೋಡಿ ''ಯವ್ವಾ, ಬೇ ಯವ್ವಾs ಅಣ್ಣನ ನೋಡಲ್ಲೆ ಮಾರಿ ಹ್ಯಾಂಗ ಮಾಡ್ಯಾನ" ಎನ್ನುತ್ತ ಶಿವಣ್ಣನನ್ನು ಹಿಡಿದೊಡನೆ ಅವಳ ಮೇಲೇ ಬಿದ್ದುಬಿಟ್ಟನವ. ಇಬ್ಬರೂ ಕೂಡಿ ಅವಸರ ಮಾಡಿ ಅವನನ್ನು ಎತ್ತಿ ಒಯ್ದು ಮತ್ತೆ ಹೊರಸಿನ ಮೇಲೆ ಮಲಗಿಸಿದರು.

ಹೌಹಾರಿ ಎದೆ ಬಡಿದುಕೊಂಡು ಅವ್ವ ಅಳುತ್ತಿರುವಾಗ ಚಿಕ್ಕವಳಾದರೂ ಹೆಚ್ಚು ಧೈರ್ಯವಿದ್ದ ನೀಲಕ್ಕ ಒಳಗೆ ಓಡಿ ಒಲೆಯ ಬಿಸಿಬೂದಿ ತಂದು ಅಣ್ಣನ ಅಂಗಾಲು ತಿಕ್ಕಲು ಅವ್ವನಿಗೆ ಹೇಳಿ, ತಾನು ಉಳ್ಳಾಗಡ್ಡಿ ಜಜ್ಜಿ ತಂದು ಅವನ ಮೂಗಿಗೆ ಹಿಡಿದಳು. ಅದರ ಘಾಟಿಗೆ ಮುಖ ಅತ್ತಿತ್ತ ಹೊರಳಿಸುತ್ತ ಕಣ್ಣು ತೆರೆದ ಶಿವಣ್ಣ.

*   *   *

'' ಏ ಯಪ್ಪಾ ಶಿವಣ್ಣಾ. ಒಂದೀಟು ಬಾಯಿ ತಗಿ. ' ಆ ' ಅನ್ನು. ಹಣಮಂತದೇವರ ಪೂಜಾರಪ್ಪ ಆಕಳ ಹಾಲ ಮಂತ್ರಿಸಿ ಕೊಟ್ಟಾರ. ಕುಡಿ ಇದನ್ನ, ಹೊಟ್ಯಾಗ ಸಮಾಧಾನ ಆಕ್ಕೈತಿ. ತಿಪ್ಪಾ ಭಟ್ಟರು ಭಾಳ ಶಾಣ್ಯಾರು ಅದಾರ. ಏನೇನೋ ಮಂತ್ರಾ ಭಾಳ ಹೇಳತಾರ. ಇದನ್ನ ಕುಡದರ ಎಂಟ ದಿನದಾಗ ಎದ್ದ ಕೂಡತಾನ ನಿನ್ನ ಮಗಾ ಅಂದಾರ.

ಹಾಂಗ ಆಗಲಪ್ಪ, ನಿನ್ನ ಬಾಯಿ ಹರಕೆಂದ ನನ್ನ ಮಗ್ಗ ಗುಣಾ ಆದರ ಹಣಮಪ್ಪಗ ಬೆಳ್ಳಿ ಮೀಸಿ ಮಾಡಿಸಿ ಕೊಡ್ತೀನಿ ಅಂತ ಬೇಡಿಕೊಂಡೀನಿ.''

ಬಸವ್ವ ಮಾಡಿಸಿಕೊಟ್ಟ ಬೆಳ್ಳೀಮೀಸಿ ಇಟ್ಟುಕೊಳ್ಳುವ ಭಾಗ್ಯ ಹಣಮಪ್ಪನಿಗೆ ಬರಲೇ ಇಲ್ಲ. ಎಂಟು ದಿನ ಬಿಟ್ಟು ಹದಿನೈದು ದಿನ ಹಾಲು ಕುಡಿದರೂ ಏನೂ ಗುಣ ಕಾಣಲಿಲ್ಲ. ರಂಗವ್ವನ ಸೊಸೆಯ ತವರೂರಿನಲ್ಲಿ ಫಕ್ಕೀರ ಸಾಬನ ಗೋರಿ ಇದೆ. ಅದಕ್ಕೆ ಹನ್ನೊಂದು ಅಮಾ ಪಾಸ್ಯೆ ನಡೆದುಕೊಂಡರೆ ಎಂಥಾ ಜಡ್ಡು ಇದ್ದರೂ ಹಾರಿ ಹೋಗುತ್ತದೆಂದು ರಂಗವ್ವ ಹೇಳಿದಳು. ಮಗನಿಗೆ ಹಾಸಿಗೆ ಬಿಟ್ಟು ಏಳಲೂ ಆಗುತ್ತಿರಲಿಲ್ಲವಾ ದುದರಿಂದ ಬಸವ್ವ ಅಮಾವಾಸ್ಯೆಗೊಮ್ಮೆ ತಾನೇ ಹೊರಟಳು.

ಹೊಟ್ಟೆಯಲ್ಲಿ ಸಾವಿರಾರು ಸೂಜಿಗಳನ್ನು ಒಮ್ಮೆಲೇ ಚುಚ್ಚಿದಷ್ಟು ನೋವು ಶಿವಣ್ಣನಿಗೆ. ಉರಿ, ಸಂಕಟ, ನವೆತ ಎಲ್ಲ ಅನುಭವವೂ ಒಟ್ಟಿಗೇ. ಎರಡೂ ಕೈಗಳಿಂದ ಹೊಟ್ಟೆ ಕಿವಿಚುತ್ತ ಅತ್ತಿತ್ತ ಹೊರಳಾಡುತ್ತ ಶಿವಣ್ಣ 'ಯವ್ವಾ' 'ಯವ್ವಾ' ಎಂದು ವಿಲಿವಿಲಿ ಒದ್ದಾಡಿದ.

ಅಡಿಗೆ ಮನೆಯಿಂದ ನೀಲಕ್ಕ ಓಡಿಬಂದಳು. "ಯಣ್ಣಾS ಅವ್ವ ಇವತ್ತ ಮಣಗಾಂವಿಗೆ ಹೋಗ್ಯಾಳ. ಫಕ್ಕೀರ ಸಾಬನ ಸಮಾಧಿಗೆ. ಇವತ್ತ ಅಮಾಸಿ ಅಲ್ಲೇನು ? ಕರೆವ್ವಗ ಎಡಿ ಕೊಡಾಕ ಬ್ಯಾಳಿಗೆ ಹಾಕಾಕ ನನಗ ಹೇಳ್ಯಾಳ. ಹೂರಣಾ ತಿರುವಾಕ ಕುಂತೇನಿ. ನಿನಗೆ ಏನರೆ ಬೇಕಾಗಿತ್ತೇನ ?"

ಏನೂ ಬೇಡನೆಂದು ಗೋಣು ಅಲ್ಲಾಡಿಸಿದ ಅಣ್ಣನನ್ನು ನೋಡಿ ನೀಲಕ್ಕ ಸಮಾಧಾನದಿಂದ ಮತ್ತೆ ತನ್ನ ಕೆಲಸಕ್ಕೆ ನಡೆದಳು. ಸ್ವಲ್ಪ ಹೊತ್ತು ಜೋರಾಗಿದ್ದ ಹೊಟ್ಟೆನೋವು ನಿಧಾನವಾಗಿ ಕಡಮೆ ಆದಂತೆ ನಿಷ್ಕ್ರಿಯನಾಗಿ ಬಿದ್ದುಕೊಂಡಿದ್ದ ಶಿವಣ್ಣನ ಮಿದುಳು ಚುರುಕಾಯಿತು –

ಅವ್ವ ಫಕ್ಕೀರ ಸಾಬನ ಗೋರಿಗೆ ಹೋಗಾಕ ಹತ್ತಿ ನಾಕ ಅಮಾಸಿ ಆದವು. ದಾದಾ ಪೀರ ಮಂತ್ರಿಸಿ ಕೊಟ್ಟ ನಿಂಬೆಹಣ್ಣು ಸಕ್ಕರಿ ತಂದು ಪಾನಕಾ ಮಾಡಿ ನನಗ ಕುಡಸ್ತಾಳ. ಧೂಪಾಹಾಕಿ ಹೋಗಿ ನನ್ನ ಮಾರಿಗೆ ಊದತಾಳ. ಆದರ ದಿನ ದಿನಕ ನನ್ನ ಹೊಟ್ಟೆನೋವು ಕಡಿಮಿ ಆಗೂದು ಬಿಟ್ಟು ಹೆಚ್ಚS ಆಗಾಕ ಹತ್ತೇತಿ. ಈಶ್ವರಯ್ಯನ ಹಸರು ತೊಪ್ಪಲ ರಸಾ ಕುಡ್ಸಿದ್ಳು, ಕುರುಬ ರಾಮನ ನಾರು-ಬೇರು ತಿನಿಸಿದ್ಳು.

ಪಂಡಿತರ ಬಸ್ಮಾ ನೆಕ್ಕಿಸಿದ್ರು. ತನ್ನ ಕೈಲಾದ್ದೆಲ್ಲಾ ಮಾಡಾಕ ಹತ್ತ್ಯಾಳ. ಆಗಲೆ ನಾ ಹಾಸಿಗಿ ಹಿಡಿದು ದೀಡ ತಿಂಗಳಾತು. ನಾನು ಭಾಳ ಸಾರೆ ಕೇಳಿದೆ. 'ಬೇಯವ್ವ ನನ್ನ ಡಾಕ್ಟರಿಗೆ ತೋರಸಬೇಕ. ಹೊಟ್ಟ್ಯಾಗ ಹುಣ್ಣು-ಗಿಣ್ಣು ಆಗಿರಬೇಕು ಅದಕ್ಕ ನೋವಾಗ್ತತಿ. ಅವರು ಕೊಯ್ದು ತಗೀತಾರ, ಆರಾಮು ಆಕ್ತೈತಿ ಅಂತ. ಆದರ ಕಿಂವ್ಯಾಗ ಹಾಕ್ಕೊಳ್ಳೋಲ್ಲಳು. ಛೀ ಬಿಡ ತವ್ಮಾ, ಡಾಕ್ಟರಿಗೆ ತೋರಿಸೂದು ಬ್ಯಾಡಾ. ಹೊಟ್ಟೀ ಕೊಯ್ಸೂದು ಬ್ಯಾಡಾ. ದುಡಿಯೂ ಗಂಡಸ ಮಗಾ ನೀನು. ನಾಳೆ ಅದ್ದರ ಆಗಿ ಕುಂತಿ ಅಂದರ ಹೊಲದಾಗ ದುಡ್ಯಾಂವ ಹ್ಯಾಂಗ ಅಂತಾಳ. ಹಾಸಿಗಿ ಬಿಟ್ಟ ಏಳಾಕ ಆಗವೊಲ್ಲದು. ದುಡಿಯೂದು ದೂರದ ಮಾತು. ನಾ ಆರಾಮಾಗಿ ಏಳ್ತೀನೋ, ಇಲ್ಲಾs ಹಿಂಗ ಹಾಸಿಗಿ ಹಿಡದ ಸಾಯ್ತೀನೋ ಯಾರಿಗೆ ಗೊತ್ತು ? ಎಂಟ ದಿನಾ ಆತ ಅನ್ನಾ ಬಸದ ಗಂಜಿ, ಮಜ್ಜಿಗಿ ಮ್ಯಾಲೆ ಅದೀನಿ. ಅದಕ್ಕ ಸಗತೀ ಹ್ಯಾಂಗ ಬರ ವೇಕ ಮೈಯ್ಯಾಗ. ಡಾಕ್ತರ ಕಡೇ ಹೋದರ ಸಗತೀ ಗುಳಿಗೀ ಕೊಡ ತಾರ. ಇಂಜೆಕ್ಷನ್ ಚುಚ್ಚತಾರ. ಆರಾಮು ಆದೀತೋ ಏನೋ ಅನಸ್ತೇತಿ. ಆದರ ಈ ಹಟಮಾರಿ ಅವ್ವಗ ಹೇಳವರರೇ ಯಾರು ? ನಮ್ಮಪ್ಪನ ಮಾತs ಕೇಳತಿದ್ದಿಲ್ಲಾ, ಇನ್ನ ನನ್ನ ಮಾತ ಕೇಳತಾಳ ?

ನನಗ ಹೆಣ್ಣು ತರೂ ಮುಂದ ನಾ ಎಷ್ಟ ಚಾಲವರದೆ ಯವ್ವಾ ನನಗ ಆ ಹುಡುಗಿ ಬ್ಯಾಡಾ. ಆಕಿನ್ನ ಗಟ್ಟಿ ಮಾಡಾಕ ಹೋಗಬ್ಯಾಡಾ ಅಂತ. ನನಗ ಮದಲ ಗೊತ್ತಾಗಿತ್ತು. ಅವರ ಊರ ಪೈಲವಾನ ಯಮುನ್ಯಾನ ಮ್ಯಾಲೆ ಆಕೀ ಮನಸ್ಸ ಐತಿ ಅಂತ. ನನ್ನ ಗೆಣ್ಯಾ ಗಂಗಪ್ಪ ಹೇಳಿದ್ದ ನನಗ. ಅಟ್ಟಾದರೂ ಬಿಡಲಿಲ್ಲ ನಮ್ಮವ್ವ. ಟಿಕ್ಕಿ, ಸೀರಿ ಕೊಟ್ಟು ಆಕಿನ್ನ ಗಟ್ಟಿಮಾಡೇ ಬಂದ್ರು. ನಾ ಹಾಸಿಗಿ ಹಿಡಿದಮ್ಯಾಲೆ ನಮ್ಮ ಮಾವ ಒಂದ ಸಾರೆ ಬಂದು ಹೋದಾ. ನಮ್ಮತ್ತಿ, ಮಾಡಿಕೊಳ್ಳೊ ಹುಡುಗಿ ಇಬ್ಬರಿಗೂ ಈ ಮದುವಿ ಮನಸೀಗಿ ಬಂದಿದ್ದಿಲ್ಲಾ. ಇಬ್ಬರೂ ಇತ್ಲಾಗ ಹಣಿಕಿ ಹಾಕಲಿಲ್ಲಾ. ಅಷ್ಟs ಅಲ್ಲಾ, ಕಡೀಕ ಪಂಚರ ಮುಂದ ವಸ್ತ್ರಾ, ಸೀರಿ ತಿರಿಗಿ ಕೊಟ್ಟು ಸಂಬಂದಾ ಬಿಡಿಸಿಕೊಂಡು ಬಿಟ್ರು. ಅವ್ವ ಗಂಟಲ ಹರಿಯೂಹಾಂಗ ಅವರ ವಂಶಾವಳಿ ಎಲ್ಲಾ ಬೈದಾಡಿ ಕಡೀಕ ಥಣ್ಣಗಾದಳು. ಆದರ ಆ ಅಪಮಾನಾ, ಸಂಕಟ ಆದದ್ದೆಲ್ಲಾ ನನಗs ಮತ್ತ. ಒಬ್ಬನs ಮಗಾ ಅಂತ ಭಾಳ ಪಿರೀತಿ ಮಾಡತಾಳ ಅವ್ವ.

ನಾನು ನೆಳ್ಳಿದರ, ಅತ್ತರ, ತಾನೂ ಬೋರ್ಯಾಡಿ ಅಳತಾಳ. ಹರದಾರಿ ನೆಲಾ ನಡದು ಹೋಗಿ ಫಕ್ಕೀರ ಸಾಬಗ ನಡಕೊಂಡು ಪರಸಾದಾ ತರತಾಳ. ಆದರ ಈ ಪರಸಾದ ತನಗ ಗುಣಾ ಮಾಡೂದಿಲ್ಲ ಅನ್ನೂದs ಇಕೀಗೆ ತಿಳೀವೊಲ್ಲದಾಗೇದ. . .

'ಆಂss' ಎಂದು ಚೀರಿಬಿಟ್ಟ ಶಿವಣ್ಣ. ಈಗ ಮತ್ತೆ ಹೊಟ್ಟೆಯಲ್ಲಿ ಕಳೆ ಬರತೊಡಗಿತ್ತು. ರುಬ್ಬುಗುಂಡು ಬಿಟ್ಟು ನೀಲಕ್ಕ ಓಡಿಬಂದಾಗ ಶಿವಣ್ಣ ತೇಲುಗಣ್ಣು ಹಾಕಿ ನಿಶ್ಚಲನಾಗಿದ್ದ. ಗಾಬರಿಯಾದ ನೀಲಕ್ಕ ಓಣಿಗೆ ಓಡಿ ಬಂದು ಯಾರ್ಯಾರನ್ನೋ ಕರೆದಳು, ಅಂಗಲಾಚಿದಳು. ಅಣ್ಣ ಹ್ಯಾಂಗ್ಯಾಂಗೋ ಮಾಡ್ತಾನಾ ಬರ್ರಿವ್ವಾ, ಸಂಗವ್ವಕ್ಕಾ, ಮಲ್ಲವ್ವs ಎಂದು ಬೊಬ್ಬೆಹಾಕಿದಳು. ಗುಬು ಗುಬು ಜನ ಬಂದರು. ಕೂಡಿದ ಜನರಲ್ಲಿ ಹತ್ತಿರ ಬಂದು ಕುಳಿತು ಶಿವಣ್ಣನ ನಾಡಿ ಹಿಡಿದು ನೋಡಿದವಳು ಹೊಲಿಗೆ ಅಕ್ಕವರು ರಮಾ ತಾಯಿಯೇ. ಉಳಿದವರೆಲ್ಲ ಮೋಜು ನೋಡುವವರಂತೆ ಸುತ್ತ ನಿಂತರು. ರಮಾತಾಯಿಯೇ ಯಾರನ್ನೋ ಕರೆದು ಪಾಟೀಲ ಡಾಕ್ಟರರನ್ನು ಕರೆಯಲು ಹೇಳಿದಳು. ಅಣ್ಣನ ಮುಖ ನೋಡಿ ಸತ್ತೇ ಹೋದನೆಂದು ದುಃಖಪಡುತ್ತಿದ್ದ ನೀಲಕ್ಕ ಅದಕ್ಕೆ ಬೇಡವೆನ್ನಲಿಲ್ಲ. ಡಾಕ್ಟರರು ಬಂದು ಇಂಜೆಕ್ಷನ್ ಚುಚ್ಚಿದ ಮೇಲೆಯೇ ಶಿವಣ್ಣ ಮೆಲ್ಲಗೆ ಕಣ್ಣು ತೆರೆದ. ಅವನನ್ನು ಪೂರ್ತಿಯಾಗಿ ತಪಾಸುಮಾಡಿ ವಿವರ ತಿಳಿದುಕೊಂಡ ಪಾಟೀಲರು,

''ಇವನ ಹೊಟ್ಟೆಯ ಎಕ್ಸರೇ ಫೋಟೋ ತಗೀಬೇಕು. ಆಮ್ಯಾಲೆ ಆಪರೇಶನ್ನೂ ಮಾಡಬೇಕಾಗುತ್ತದೋ ಏನೋ. ಅದಕ್ಕೆಲ್ಲಾ ಇಲ್ಲೆ ಅನುಕೂಲ ಇಲ್ಲಾ. ಧಾರವಾಡಕ್ಕ ಕರಕೊಂಡು ಹೋಗ್ರಿ'' ಎಂದು ಹೇಳುತ್ತಿರುವಾಗ ಬಸವ್ವ ಜನರನ್ನು ಸರಿಸುತ್ತ ಒಳಗೆ ಬಂದಳು.

ಸವಾರಿ ಚಕ್ಕಡಿ ಕಟ್ಟಿಸಿಕೊಂಡು ಬಂದ ಕರಿಯಣ್ಣನೊಡನೆ ಅವ್ವ ಮಗಳು ಶಿವಣ್ಣನನ್ನು ಧಾರವಾಡಕ್ಕೆ ಒಯ್ದರು. ಕರಿಯಣ್ಣ ದೂರದ ಸಂಬಂಧದಲ್ಲಿ ಬಸವ್ವನಿಗೆ ಅಳಿಯನಾಗಬೇಕು. ನಾಲ್ಕೆಕರೆ ಗದ್ದೆ, ಅಣ್ಣ ತಮ್ಮ ಇಬ್ಬರೇ. ತಮ್ಮನಿಂದ ಹೊಲದ ಕೆಲಸಮಾಡಿಸುತ್ತ ಕರಿಯಣ್ಣ ಬಿಳಿ ಅರಿವೆ ಹಾಕಿಕೊಂಡು ದೊಡ್ಡ ಮನುಷ್ಯರಂತೆ ಊರಿನಲ್ಲಿ ಕಾರಭಾರ ಮಾಡುತ್ತ ಮೆರೆದಾಡುತ್ತಿದ್ದ. ಎರಡು ಮಕ್ಕಳನ್ನು ಬಿಟ್ಟು ಅವನ ಮೊದಲ ಹೆಂಡತಿ ಸತ್ತಿದ್ದಳು. ಇವನ ಕಾಟ ತಾಳಲಾರದೆ ಅವಳು ಸತ್ತಳು

ಎಂದು ಜನ ಆಡಿಕೊಳ್ಳುತ್ತಿದ್ದರು. ಊರಿನ ಚಂಡಾಳ–ಚೌಕಡಿಗಳಿಗೆಲ್ಲ ನಾಯಕನು ಅವನೇ. ಲಕ್ಷಣವಾಗಿದ್ದ ಹುಡುಗಿಯರ ಮೇಲೆಲ್ಲ ಇವನ ಕಣ್ಣು. ನೀಲಕ್ಕನನ್ನು ತನಗೆ ಕೊಡಬೇಕೆಂದು ಬಸವ್ವನಿಗೆ ಹೇಳಿಯೂ ಕಳಿಸಿದ್ದ. ಬಸವ್ವನಿಗೇನೋ ಕರಿಯನಂಥ 'ಗಂಡಸು' ಮಗನನ್ನು ಅಳಿಯನನ್ನಾಗಿ ಮಾಡಿಕೊಳ್ಳುವ ಮನಸ್ಸಿತ್ತು. ಆದರೆ ತಮ್ಮ ನೆರೆಮನೆಯ ಸಿದ್ದಿಯ ಜೊತೆಗೆ ಹಿತ್ತಿಲ ಬಾವಿಯ ಕಟ್ಟೆಯ ಮೇಲೆ ಸರಸ ಸಲ್ಲಾಪ ಮಾಡುತ್ತಿದ್ದ ಕರಿಯನನ್ನು ಆಗಾಗ ನೋಡಿದ್ದ ನೀಲಕ್ಕ ಮಾತ್ರ ಹಾರಾಡಿದ್ದಳು. ಅವನಿಗೆ ತನ್ನನ್ನು ಕೊಟ್ಟರೆ ಹಿತ್ತಿಲ ಬಾವಿ ಬೀಳುತ್ತೇನೆಂದು ಅವ್ವನಿಗೆ ಹೆದರಿಕೆ ಹಾಕಿದ್ದಳು. ನೀಲಕ್ಕ ಶಿವಣ್ಣನಷ್ಟು ಮೆದುಗಿ ಅಲ್ಲ. ಹೆಣ್ಣಾದರೂ ಸೆಟೆದು ನಿಲ್ಲುವವಳು. ಅಂತೆಯೇ ಧಾರವಾಡದಲ್ಲಿ ನಾಲ್ಕಾರು ದಿನ ಇರಬೇಕಾಗಿ ಬಂದಾಗ ಕರಿಯನಿಂದ ಆದಷ್ಟು ದೂರವಾಗಿ, ಎಚ್ಚರಿಕೆಯಿಂದ ಇದ್ದಳು.

ಧಾರವಾಡದ ಸರ್ಜನರು ಶಿವಣ್ಣನನ್ನು ಎಲ್ಲ ತರದಿಂದಲೂ ಪರೀಕ್ಷೆ ಮಾಡಿ ನೋಡಿದರು. ಕೊನೆಗೆ ಇದು ಕೈಬಿಟ್ಟ ಕೇಸು, ಆಪರೇಶನ್ನಿನಿಂದ ಏನೂ ಫಾಯದೆ ಇಲ್ಲವೆಂದು ತಿಳಿದು ತಿರುಗಿ ಊರಿಗೆ ಕಳಿಸಿದರು.

ಮಗನನ್ನು ತಿರುಗಿ ಊರಿಗೆ ಕರೆತಂದ ಬಸವ್ವ ಗಂಟಲೆತ್ತಿ ಜೋರಾಗಿ ಕೂಗಾಡಿದಳು. "ಆ ಹೊಲಿಗಿ ಕಲಸೂ ಬೋಸಡಿ ನನ್ನ ಮಗನ್ನ ಡಾಕ್ತರ ಕೈಯ್ಯಾಗ ಕೊಟ್ಟು. ಅವನ ಮಾತ ಕೇಳಿ ಮಗನ್ನ ಕಟಗೊಂಡು ಊರೂರು ತಿರುಗಿ ಬಂದೆ ಹುಚ್ಚನಾಯಿ ಹಾಂಗ. ನನಗ ಮದಲs ಗೊತ್ತಿತ್ತು ಈ ಡಾಕ್ತರಿಗೆ ಏನೇನೂ ತಿಳಿಯೂದಿಲ್ಲ ಅಂತ. ಇಲ್ಲೆ ಇದ್ದರ ನನ್ನ ಮಗಾ ಆರಾಮ ಇರತಿದ್ದಾ."

ಕ್ಯಾನ್ಸರಿನಿಂದ ಆಗಲೇ ಮೂರು ತಿಂಗಳು ಬಳಲಿದ್ದ ಶಿವಣ್ಣನ ಆಯುಸ್ಸು ಇನ್ನು ದಿನ ಎಣಿಸುವಷ್ಟು ಮಾತ್ರ ಉಳಿದಿತ್ತು. ಅಣ್ಣನ ನಿಜವಾದ ಪರಿಸ್ಥಿತಿ ತಿಳಿದ ನೀಲಕ್ಕ ಬಿಕ್ಕಿ ಬಿಕ್ಕಿ ಅತ್ತಳು.

* * *

"ಬಸವ್ವಕ್ಕಾs ಅದಿಯೇನಬೇ" ಎನ್ನುತ್ತ ಒಂದು ಸಂಜೆ ಕರಿಯ ಮನೆಯ ಒಳಗೆ ಬಂದ. ಅವನೊಡನೆ ಬಂದಿದ್ದ ಅಪರಿಚಿತನನ್ನು ನೋಡಿ ನೀಲಕ್ಕ ಅಣ್ಣನ ಹತ್ತಿರದಿಂದ ಎದ್ದು ಅಡಿಗೆ ಮನೆಗೆ ನಡೆದಳು.

"ಬಾರಪ್ಪ ಕರಿಯಣ್ಣ. ಬಡವರ ಮನೀಗೆ ಅಪರೂಪಕ್ಕ ಬಂದಿ."

"ಊರಾಗ ಇದ್ದಿದ್ದಿಲ್ಲಬೇ, ಅದಕs ಬರಾಕ ಆಗಿದ್ದಿಲ್ಲಾ. ಹ್ಯಾಂಗ ಅದಾನ ಶಿವಣ್ಣ ?"

"ಮಂತ್ರ, ತಂತ್ರ, ತಾಯತ, ತೀರ್ಥಾ ನೀ ನೋಡಿದಾಂಗ ಡಾಕ್ತರು ಎಲ್ಲಾ ಆತಪ್ಪಾ. ಏನೇನೂ ಗುಣಾ ಇಲ್ಲಾ. ನಿನ್ನ ಇಂದ ತಿಳಿಗಂಜಿ ನೀರು ಸುದ್ಧಾ ದಕ್ಕವೊಲ್ಲದು. ನನ್ನ ಮಗಾ ಕೈಗೆ ಹತ್ತತ್ತಾನೋ ಇಲ್ಲೋ ಅನ್ನೊ ಹಾಂಗ ಆಗೇದ ಕರಿಯಣ್ಣಾs. ಆ ದ್ಯಾವರಿಗೆ ಏನ ಕಣ್ಣ ಇಂಗಿ ಹೋಗ್ಯಾವೋ ಏನೋ" ಎನ್ನುತ್ತ ದುಃಖ ಒತ್ತರಿಸಿ ಬಂದು ಮುಸುಕು ಹಾಕಿ ಅಳಹತ್ತಿದ ಬಸವ್ವನಿಗೆ ಕರಿಯಣ್ಣ ಸಮಾಧಾನ ಹೇಳಿದ.

"ಯಕ್ಕಾs ಅಳಬ್ಯಾಡಾ, ಸುಮ್ಕಿರು. ನಾ ಏನ ನಿನಗ ಹೊರಗಿನಾಂವ ಅಲ್ಲಾ. ನಿನ್ನ ಹಿತಕ್ಕ ಹೇಳ್ತೀನಿ. ನನ್ನ ಮಾತು ಕೇಳು. ಇಷ್ಟೆಲ್ಲಾ ಮಾಡೀದಿ. ಇನ್ನೊಂದು ಕೆಲಸಾ ಮಾಡು. ಇಕಾ, ನನ್ನ ಜೋಡಿ ಬಂದಾರಲ್ಲ ನಾಗನಗೌಡರು ಇವರು ಮಾಟಾ-ಮದ್ದು ತಗಿಯಾಕ ಭಾಳ ಹುಶಾರ ಅದಾರ. ಸುತ್ತಾ-ಮುತ್ತಾ ಹತ್ತು ಊರ ಮಂದಿ ಇವರ ಕಡೇನ ಬರತಾರ. ಅದಕ್ಕ ಇವರ್ನ ಕರಕೊಂಡು ಬಂದೇನಿ. ಯಾರರೆ ನಿನಗ ಆಗಲಾರದವರು ಶಿವಣ್ಣಗ ಮಾಟಾ ಮಾಡಿಸಿದ್ದಾರು ಅಂತ ನನಗ ಅನಸ್ತೈತಿ. ಇವರು ರಂಗಾ ಹೊಯ್ದು ಪೂಜೀ ಮಾಡಿ, ಹುಂಜಾ ಬಲಿ ಕೊಟ್ಟರೂ ಅಂದರ ಎಂಥಾ ಮಾಟ ಇದ್ದರೂ ಎದ್ದ ಬರತೈತಿ. ಇದೆಲ್ಲಾ ಅಮಾಸಿ ದಿನಾ ಸರಿರಾತ್ರಿಗೆ ಆಗಬೇಕ. ಮತ್ತ ಆಸ-ಪಾಸ ಯಾವ ಮಂದಿಗೂ ತಿಳೀಬಾರದ. ನೀ ಪೂಜಾ ಮಾಡ್ಸಾಕ ಹತ್ತೀದಿ ಅನ್ನೊದು ತಿಳಿದರ ಕೆಲಸ ಕೆಡತೈತಿ. ಇದೊಂದು ಮಾಡೇ ಬಿಡೂಣು. ನೀ ಹೂಂ ಅನ್ನು. ನಾ ಅದಕ್ಕೆಲ್ಲಾ ಯವಸ್ಥಾ ಮಾಡತೀನಿ" ಎಂದು ದುಂಬಾಲು ಬಿದ್ದಾಗ ಬಸವ್ವ ಕೊನೆಯ ಪ್ರಯತ್ನವೆಂದು ಅದಕ್ಕೂ ಸಿದ್ಧಳಾದಳು.

ಅಮಾವಾಸ್ಯೆಯ ದಿನ ಸರಿರಾತ್ರಿಗೆ ಪೂಜೆ ಮುಗಿದು, ಗೌಡಪ್ಪ ಹುಂಜದ ಕುತ್ತಿಗೆಯನ್ನು ಒಂದೇ ಏಟಿಗೆ ಕತ್ತರಿಸಿದ. ಒಳಗಿನ ಕೋಣೆಯಲ್ಲಿ ಶಿವಣ್ಣ ವಿಲಿ ವಿಲಿ ಒದ್ದಾಡುತ್ತ ನೀಲಕ್ಕ ಬಾಯಿಗೆ ಬಿಟ್ಟ ನೀರನ್ನೂ ಗುಟುಕರಿಸದೆ ಜೀವ ಬಿಟ್ಟ. ಅವತ್ತು ಮುಂಜಾನೆಯಿಂದಲೂ ಅವನಿಗೆ ಪ್ರಜ್ಞೆ ಇರಲಿಲ್ಲ. ಹೊರಗೆ ಹೋಗಲು ಹೆದರಿ ಅಣ್ಣನ ಹಾಸಿಗೆಯ ಬಳಿ ಕುಳಿತಿದ್ದ ನೀಲಕ್ಕ ಅಣ್ಣನ ಸಾವು ಕಂಡು ಹೆದರಿ ಬಾಯಿ ಬಡಿದುಕೊಳ್ಳುತ್ತ ಹೊರಗೆ ಓಡಿಬಂದಳು. ಕರಿಯ ಕೂಡಲೇ ಅವಳನ್ನು ಅಡ್ಡ ತಡೆದು

ಬಾಯಿ ಒತ್ತಿ ಹಿಡಿದು ಕೋಣೆಗೆ ಎಳೆದೊಯ್ದ. ಪೂಜೆ ನೋಡುತ್ತ ಕುಳಿತ ಬಸವ್ವ ಮೂಲೆಯಲ್ಲಿ ತೂಕಡಿಸುತ್ತಿದ್ದಳು. ಪೂಜೆ ಮುಗಿಸಿ ಪ್ರಸಾದ ತೆಗೆದುಕೊಂಡು ಬಂದಾಗಲೇ ಅವಳು ಅರ್ಧಬಾಯಿ ತೆಗೆದ ಮಗನ ಹೆಣವನ್ನು ಕಂಡದ್ದು.

ಅಣ್ಣ ಸತ್ತ ಒಂದು ತಿಂಗಳಲ್ಲಿ ನೀಲಕ್ಕ ಹಾಸಿಗೆ ಹಿಡಿದಳು. ಎದ್ದೊಡನೆ ವಾಂತಿ, ಹೊಟ್ಟೆಯಲ್ಲಿ ತಳಮಳ, ಮಗನ ಸಾವಿನಿಂದ ಹುಚ್ಚಿಯಂತಾಗಿದ್ದ ಅವ್ವನ ಮುಂದೆ ತನಗೆ ಏನಾಗಿದೆ ಎಂದು ಹೇಳಲೂ ಆಗದೆ ಮುಚ್ಚಿಟ್ಟುಕೊಳ್ಳಲೂ ಆಗದೆ ಕೊರಗಿ ಕೊರಗಿ ತೊಳಲಾಡಿ, ಕೊನೆಗೆ ಒಂದು ದಿನ ಹಿತ್ತಲ ಬಾವಿಯ ತಳ ಕಂಡಳು ನೀಲಕ್ಕ. ಊರ ಜನ ಬಾಯಿಗೆ ಬಂದಂತೆ ಮಾತಾಡಿತು.

ಬಸವ್ವನಾದರೂ ಎಷ್ಟು ದಿನ ಅಳುತ್ತ ಮಲಗಿಯಾಳು ? ಎಷ್ಟು ದಿನ ನೆರೆಯುವರು ಬಂದು ಉಪಚಾರಮಾಡಿ ಊಟ ಮಾಡಿಸಿಯಾರು ? ಅದಕ್ಕೂ ಒಂದು ಮಿತಿ ಇದೆ ಅಲ್ಲವೇ ? ಮನೆಗೆ ಜನ ಬರುವುದು ಕಡಿಮೆಯ್ಮಾಯಿತು. ಹೊಟ್ಟೆಗೆ ಹಸಿವೆ ಆಯಿತು. ಬಸವ್ವ ಎದ್ದಳು, ಅಡಿಗೆ ಮಾಡಿಕೊಂಡಳು. ಉಂಡಳು, ತಿಂದಳು, ಮಲಗಿದಳು. ತಿಂಗಳೆರಡು ಕಳೆದ ಮೇಲೆ ಜೊತೆಯವರೊಡನೆ ಮಾತಿಗೆ ಕೂತಳು. ಹರಟೆ ಹೊಡೆದಳು. ಸುಖ ಕಂಡು ನಕ್ಕಳು. ದುಃಖ ಕಂಡು ಅತ್ತಳು. ಮೈಗೆ ದಣಿವಾಗುವವರೆಗೆ ದುಡಿದಳು. ಉಂಡಳು. ದಿನ ಕಳೆದವು. ಹಬ್ಬ ಮಾಡಿದಳು. ಹೊಸ ಸೀರೆ ಉಟ್ಟಳು. ಅಮಾವಾಸ್ಯೆಗೆ ಕರೆವ್ವನಿಗೆ ಹೋಳಿಗೆ ಎಡೆಮಾಡಿದಳು. ಗುಂಡಿನ ಟಿಕ್ಕೆ ಹಾಕಿಕೊಂಡು ಗೆಳತಿಯರೊಡನೆ ಹುಣ್ಣಿಮೆಗೆ ಯಲ್ಲವ್ವನ ಜಾತ್ರೆಗೆ ಹೋಗಿ ಕರಿಗಡಬು ಉಡಿ ತುಂಬಿ ಬಂದಳು. ಮತ್ತೆ ದಿನ ಉರುಳಿದವು. ಕತ್ತಲೆ ಆಯಿತು. ಬೆಳಕೂ ಆಯಿತು.

ಮತ್ತೊಂದು ಅಮಾವಾಸ್ಯೆಗೆ ಮಣಗಾಂವಿಗೆ ಫಕೀರಸಾಬನ ಸಮಾಧಿಗೆ ಹೋಗಿ ಬಂದಳು ಬಸವ್ವ. ಅವಳ ರಟ್ಟೆಯಲ್ಲಿ ಕರಿಯ ದಾರದಲ್ಲಿ ಕಟ್ಟಿದ ಚೀಟಿಯಿತ್ತು. ಅವ್ವಕ್ಕಗಳೆಲ್ಲ ಇದು ಯಾಕೆ ಎಂದು ಕೇಳುವ ಮೊದಲೇ ನೆರೆಮನೆಯ ಸಿದ್ದಿ ಸುದ್ದೀ ಹಬ್ಬಿಸಿದಳು.

"ಹಿತ್ತಲ ಬಾವಿ ಕಟ್ಟೀಮ್ಯಾಲೆ ಶಿವಣ್ಣಾ, ನೀಲಕ್ಕ ಇಬ್ರೂ ದೆವ್ವಾಗಿ ಕುಂತದ್ದು ಬಸವ್ವ ನೋಡಿದಳಂತ."

ಅಭಿಲಾಷೆ

ಮನೆ ತುಂಬ ಜನ. ಅಪ್ಪ, ಅವ್ವ, ಅಣ್ಣ ತಮ್ಮ ಎಲ್ಲ ಇದ್ದರೂ ಪ್ರಿಯಾ ಏಕಾಕಿ. ಸ್ವಭಾವತಃ ಅವಳು ಮಿತಭಾಷಿಣಿ. ಬೇರೆಯವರ ಮಾತಿನ ಗದ್ದಲ ಸಹಿಸುವದಾಗದೆ ಏಕಾಂತ ಬಯಸುವ ಹುಡುಗಿ. ಇತ್ತೀಚೆಗಂತೂ ಅವಳ ಮಾತು ಇನ್ನೂ ಕಡಿಮೆಯಾಗಿತ್ತು. ಕೈಯಲ್ಲಿ ನೆಪಕ್ಕೆ ಹೆಣಿಕೆ, ಪುಸ್ತಕ ಏನಾದರೊಂದು ಇರುತ್ತಿದ್ದರೂ ಅರೆಗಣ್ಣು ಮುಚ್ಚಿ ಯೋಚಿಸುತ್ತಿರುವದೇ ಹೆಚ್ಚು. ಅವಳ ಆ ಭಂಗಿ ಕಂಡಾಗಲೆಲ್ಲ ಹೆರಿಗೆಗೆಂದು ತವರಿಗೆ ಬಂದ ಸುನಂದಳಿಗೆ ಅಕ್ಕನ ವಚನ ನೆನಪಾಗುವದು:

"ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದರೆಂತಯ್ಯಾ" ಎಂದು ತಂಗಿಯ ಮುಖದ ಮುಂದೆ ರಾಗವಾಗಿ ಹಾಡುವಳು. ಸುನಂದ ಮಾತಿನ ಮಲ್ಲಿ. ತವರಿನಲ್ಲಿ ಕೈಗೆ ಕೆಲಸವೂ ಇಲ್ಲದೇ ಬಾಯಿಗೆ ರುಚಿ ಕಂಡದ್ದೆಲ್ಲ ತಿನ್ನುತ್ತ ಓಡಾಡುತ್ತಿದ್ದ ಅವಳ ಬಾಯಿ ಇನ್ನೂ ಜೋರಾಗಿತ್ತು. ಅವಳ ಮಾತು ಸಹಿಸದೆ ಒಮ್ಮೊಮ್ಮೆ ಪ್ರಿಯಾ ಕೂಡ,

"ಅಕ್ಕಾ, ಆ ಚಕ್ಕುಲಿ ಚೂರು ಬಾಯೊಳಗೆ ಹಾಕ್ಕೋ. ಮಾತಾದ್ರೂ ಬಂದಾಗ್ತದ," ಎಂದು ಚೇಷ್ಟೆ ಮಾಡಿ ತನ್ನನ್ನು ಹೊಡೆಯಲು ಬರುವ ಅಕ್ಕನ ಕೈಗೆ ಸಿಕ್ಕದೇ ನಗುತ್ತ ಹೊರಗೆ ತೋಟಕ್ಕೆ ಓಡಿಬಿಡುವಳು. ಅವಳ ಅಪ್ಪ ತೋಟದಲ್ಲಿ ಸಂಪಿಗೆ ಮರದ ಕೆಳಗೊಂದು ಸಿಮೆಂಟಿನ ಕಟ್ಟೆ ಕಟ್ಟಿಸಿದ್ದರು. ಅಲ್ಲಿ ಕುಳಿತು ಸೂರ್ಯಾಸ್ತ ಸಮಯಕ್ಕೆ ಬಣ್ಣ ಬದಲಾಯಿಸುವ ಮೋಡಗಳನ್ನು, ತಂಗಾಳಿಗೆ ತಲೆದೂಗುವ ಹೂಗಿಡಗಳನ್ನು ನೋಡುವದು ಪ್ರಿಯಾಗೆ ತುಂಬಾ ಪ್ರೀತಿಯ ಕೆಲಸ. ಹೊತ್ತು ಕಳೆದದ್ದೇ ಗೊತ್ತಾಗುತ್ತಿರಲಿಲ್ಲ ಅವಳಿಗೆ. ಕತ್ತಲಾದ ಮೇಲೆಯೇ ಮನೆಯ ಒಳಗೆ ಬರುವಳು. ಅವಳ ಏಕಾಂತಕ್ಕೆ ಆಗಾಗ ಸುನಂದನಿಂದ ಭಂಗ ಬರುವದಿತ್ತು. ಹೂವು ಕಟ್ಟುತ್ತ, ಸ್ವೆಟರ್ ಹೆಣೆಯುತ್ತ ತಂಗಿಯನ್ನು ಮಾತಿಗೆ ಎಳೆಯುವವಳು ಸುನಂದ.

ಆ ದಿನ ಸಂಜೆ ಆಫೀಸಿನಿಂದ ಬಂದೊಡನೆ ಪ್ರಿಯಾ ತಿಂಡಿ ತಿಂದು ಬಂದು ಕಟ್ಟೆಯ ಮೇಲೆ ಕುಳಿತಳು. ಆದರೆ ಅವಳು ಒಬ್ಬಳೇ ಇರಲಿಲ್ಲ. ಅವಳ ಉಡಿಯಲ್ಲಿ ಪತ್ರಗಳಿದ್ದವು. ಜೊತೆಗೆ ಅವಳ ಮನಸ್ಸಿನಲ್ಲಿ ಆ ಪತ್ರಗಳನ್ನು ಬರೆದ ವ್ಯಕ್ತಿಯೂ ಹರಿದಾಡುತ್ತಿದ್ದ. ಅಮೂರ್ತನಾಗಿದ್ದವನು ದಿನದಿನಕ್ಕೆ ಮೂರ್ತಸ್ವರೂಪನಾಗುತ್ತಿದ್ದ. ಕೇವಲ ಶಬ್ದಗಳೇ ಆಗಿರದೆ ಆ ಪತ್ರಗಳು ಅವನ ಸ್ವಭಾವದ ವ್ಯಕ್ತಿತ್ವದ ಚಿತ್ರಗಳೇ ಆಗಿದ್ದವು. ಹೊರಗೆ ಮೌನಿಯಾಗಿ ಶಾಂತಳಾಗಿದ್ದರೂ ಅವಳ ಅಂತರಂಗ ಮಾತಿಗೆ ಒದ್ದಾಡುತ್ತಿತ್ತು. ಮನಸ್ಸು ಅಶಾಂತವಾಗಿತ್ತು. ಹೃದಯ ಸಮುದ್ರ ತುಂಬಿ ಉಕ್ಕೇರಿ ಹೊರಚೆಲ್ಲಲಾಗದೆ ಇದ್ದಲ್ಲಿಯೇ ಭೋರ್ಗರೆಯುತ್ತಿತ್ತು. ಅಶಾಂತಿ ಹೆಚ್ಚಿದಂತೆಲ್ಲ ಪತ್ರಗಳನ್ನು ಮತ್ತೆ ಮತ್ತೆ ಓದುವಳು. ಕ್ರಮವಾಗಿ ಜೋಡಿಸುವಳು. ಪ್ರೀತಿಯಿಂದ ನೇವರಿಸುವಳು. ಮುಖಕ್ಕೆ ಹಿಡಿದು ಮೂಸಿ ನೋಡಿ ಮುತ್ತು ಕೊಡುವಳು. ತನ್ನ ಈ ಆಟಕ್ಕೆ ಗಾಬರಿಯಾಗಿ ಅತ್ತಿತ್ತ ನೋಡುವಳು. ಯಾರೂ ಇಲ್ಲದಾಗಲೂ ತನ್ನಷ್ಟಕ್ಕೆ ತಾನೇ ನಾಚಿ ಗಿಡದಲ್ಲಿ ಅರಳಿದ ಗುಲಾಬಿಗಿಂತಲೂ ತನ್ನ ಮುಖ ಕೆಂಪಾಗಿಸುವಳು. ತನ್ನ ಈ ಹೊಸ ಪರಿಯಿಂದ ಅವಳಿಗೆ ಆಶ್ಚರ್ಯ. ತನಗೆ ಹೀಗೇಕೆ ಆಗುತ್ತಿದೆ ? ಇದಕ್ಕೇ ಪ್ರೀತಿ ಎನ್ನುತ್ತಾರೆಯೆ ? ತನ್ನನ್ನೇ ಪ್ರಶ್ನಿಸಿಕೊಳ್ಳುವಳು. ಈ ಸಂವೇದನೆ ತನ್ನಲ್ಲಿ ಎಂದು ಹುಟ್ಟಿತು ? ಹೇಗೆ ಬೆಳೆಯಿತು ? ಈಗ ತನ್ನನ್ನು ಪೂರ್ತಿಯಾಗಿ ಆವರಿಸಿಕೊಂಡು ಒಂದು ತರದ ಆನಂದದಲ್ಲಿ ಮುಳುಗಿಸುತ್ತಿದೆಯೆಲ್ಲ ! ಬೇರೇ ಜಗತ್ತೇ ಬೇಡವಾಗಿದೆ. ತಾನು ಈ ಪತ್ರಗಳು ಅಷ್ಟಿದ್ದರೆ.... ತಾನು ಮೊದಲಿನ ಪ್ರಿಯಾ ಅಲ್ಲ. ತನಗೆ ಹೊಸ ಜನ್ಮ ಬಂದಿದೆ. ಈ ಜನ್ಮದ ಹುಟ್ಟು....

ಪರ್....ಪರ್.... ಒಣಗಿದ ಎಲೆಗಳ ಮೇಲೆ ನಡೆದು ಬರುವ ಶಬ್ದ. ಅಕ್ಕ ಬರುತ್ತಿದ್ದಾಳೇನೋ– ತಟ್ಟನೆ ಪತ್ರಗಳನ್ನು ಎದೆಯ ಒಳಭಾಗದಲ್ಲಿ ಮರೆಮಾಡಿಕೊಂಡು ಸೆರಗು ಹೊದ್ದುಕೊಂಡಳು. ಅದೂ ಒಂದು ಹೊಸ ಅನುಭವ. ಅವನು ಬರೆದ ಪತ್ರಗಳು ತನ್ನ ಎದೆಯ ಮೇಲೆ. ಮುಖ ರಾಗ ರಂಜಿತವಾಯಿತು.

"ಪ್ರಿಯಾ."

"ಏನಕ್ಕಾ ?" ಎತ್ತಲೋ ನೋಡುತ್ತಿದ್ದ ಪ್ರಿಯಾ ಅಕ್ಕನತ್ತ ತಿರುಗಿದಳು. ಅವಳ ಹತ್ತಿರ ಬಂದು ಕೂಡ್ರುತ್ತ ಸುನಂದ ಅಂದಳು :

''ನೀ ಇತ್ತಿತ್ತಲಾಗ ಭಾಳ ಬದಲಿ ಆಗೀ ಅಂತ ಅನಸ್ತದ ನನಗ.''

ಮಾತಿಗೆ ಮೊದಲು ಪ್ರಿಯಾ ನಕ್ಕಳು. "ನಾ ಏನೂ ಬದಲಾಗಿಲ್ಲ. ಇದ್ದಾಂಗ ಅದೀನಿ."

"ಮೊದಲಿಂದೂ ನಿಂದು ವಿಚಿತ್ರ ಸ್ವಭಾವ. unsocial, unromantic ಇನ್ನೂ ...''

"ಏ, ಏ, ಅಕ್ಕಾ ಹಾಂಗೆಲ್ಲಾ ಅನ್ನಬ್ಯಾಡಾ."

"ಮತ್ತೇನು ಅನ್ನಲಿ ? ಇನ್ನೂ ಎಷ್ಟು ದಿನಾ ನೀನು ಹಿಂಗ ಒಬ್ಬಾಕಿನೇ ಇರಬೇಕಂತೀ ? ಮದುವಿ ಆಗಬೇಕು ; ಮಜಾದಿಂದ ಸಂಸಾರ ಮಾಡಬೇಕು ಅಂತ ಎಂದೂ ಅನಸೂದೇ ಇಲ್ಲೇನು ನಿನಗ ? ಅವ್ವ ಅಪ್ಪಗ ನಿನ್ನದು ಚಿಂತಿ, ಎಂಥಾ ವರಾ ಬಂದರೂ ನೀ ಒಪ್ಪೂದಿಲ್ಲ, ಗಂಡಸಿನಂಗ ದುಡಿದು ರೊಕ್ಕಾ ತಂದರ ಆತೇನು ? ನೀನು ಹೆಣ್ಣು, ನೀ ಹೆಂಡತಿ ಆಗಬೇಕು, ತಾಯಿ ಆಗಬೇಕು. ಆಗ ಬರ‍್ತದ ಜೀವನದಾಗ ಖರೇ ಮಜಾ, ಖರೇ ಸುಖಾ. ಹುಡುಗಿ ನಿನಗೇನು ಗೊತ್ತದ ?"

"ನೀವೆಲ್ಲ ತಪ್ಪು ತಿಳಿಕೊಂಡೀರಿ ಅಕ್ಕಾ. ನನಗ ಮದುವಿ ಮಾಡಿಕೊಳ್ಳಬಾರದು ಅನ್ನೂ ಹಟಾ ಏನೂ ಇಲ್ಲಾ. ಆದರ ಯಾಕೋ ನೋಡಲಿಕ್ಕೆ ಬಂದ ಯಾರನ್ನು ನೋಡಿದರೂ ಇವರು ನನ್ನ ಜೀವನ ಸಂಗಾತಿ ಆಗಬೇಕು, ಇವರ ಜೊತೆಗೆ ನಾನು ಬಾಳಬೇಕು ಅನ್ನೂ ಅಪೇಕ್ಷಾನ ಹುಟ್ಟೂದಿಲ್ಲ. ನಾ ಏನ ಮಾಡ್ಲಿ ?"

ತಂಗಿಯ ಮುಗ್ಧ ಮುಖ ನೋಡಿ ಸುನಂದಳಿಗೆ ಪ್ರೀತಿ ಉಕ್ಕಿ ಬಂದಿತು. ಅವಳ ತಲೆಯ ಮೇಲೆ ಮೃದುವಾಗಿ ಕೈಯಾಡಿಸುತ್ತ ಹೇಳಿದಳು,

''ಪ್ರಿಯಾ, ನೀ ಛಂದ ಇದ್ದೀ, ಕಲತಾಕಿ ಇದ್ದೀ. ಆದರ ಜಗತ್ತಿನ ಜ್ಞಾನ, ಮನುಷ್ಯ ಮನುಷ್ಯರ ಸಂಬಂಧ ವಿಚಾರ ನಿನಗ ಇನ್ನೂ ತಿಳಿದಿಲ್ಲಾ. ನೀ ಹಸುಕೂಸಿನಂಗ ಅಮಾಯಕ ಇದ್ದೀ. ಹೊರಗಿನ ಜಗತ್ತಿನ ಕಡೆ ಕಣ್ಣು ಬಿಟ್ಟು ನೋಡು, ನಿನ್ನ ಮನಸ್ಸಿನ ಬಾಗಿಲಾ ತಗೀ. ನಾಲ್ಕು ಜನರ ಕೂಡ ಬೆರತುಕೋ. ಮನಸ್ಸು ಬಿಚ್ಚಿ ಮಾತಾಡು. ಅವರ ಸುಖಾ ದುಃಖಾ ಕೇಳು. ನಿಂದೂ ಅವರಿಗೆ ಹೇಳು, ಅಪರಿಚಿತರು ಗಂಡಾಗಲಿ, ಹೆಣ್ಣಾಗಲಿ ಧೈರ್ಯದಿಂದ ಮಾತಾಡಿಸು. ನಿಂದೇ ಒಂದು ಜಗತ್ತು

ಮಾಡಿಕೊಂಡು ಮುಚ್ಚಿಕೊಂಡು ಕೂಡ್ರಬ್ಯಾಡಾ. ಸುಖಾಪಡೂ ಕಾಲಕ್ಕ ಸುಖಾ ಪಡಬೇಕು. ವಯಸ್ಸು ಹೋದ ಮ್ಯಾಲೆ ಏನಾದರೂ ತಿರುಗಿ ಸಿಗೂದಿಲ್ಲ. ನಾ ನಿನಗಿಂತ ದೊಡ್ಡಾಕಿ ಇದ್ದೀನಿ. ಅನುಭವಿಕಳೂ ಇದ್ದೀನಿ. ನನ್ನ ಮಾತು ಖರೇ ಹೌದಲ್ಲೊ ನೀನೇ ವಿಚಾರ ಮಾಡು.''

"ಅಕ್ಕಾ ನೀ ಹೇಳೂದೆಲ್ಲಾ ಕೇಳಿದರ ಖರೇ ಅನಸ್ತದ. ಆದರ ನೀ ಇದನ್ನೆಲ್ಲಾ ಇವತ್ತ ನನಗ ಯಾಕ ಹೇಳಲಿಕ್ಕೆ ಹತ್ತೀದಿ. ಏನರೆ ಕಾರಣ ಇರಬೇಕು ?''

''ಹೌದು ಪ್ರಿಯಾ, ಮೊನ್ನಿನ ರವಿವಾರ ನಿನ್ನ ನೋಡಲಿಕ್ಕೆ ಬಂದಿದ್ದರಲ್ಲಾ ಪ್ರಕಾಶ ಅಂತ....''

''ಹುಂ. ಬ್ಯಾಂಕಿನಾಗ ಕೆಲಸಾ ಮಾಡ್ತಾರ. ಡಬಲ್ ಡಿಗ್ರಿ ಅದ. ಆಸ್ತಿ-ಪಾಸ್ತಿ ಭಲೋ ಅದ ಅಂತ ಅವ್ವ ನಿನ್ನೆ ಹೇಳತಿದ್ದಳು.''

''ಹಾಂ ಹಾಂ ಅವರs ನೋಡಲಿಕ್ಕೆ ಛಂದ ಅದಾರ. ಅವರೂ ನಿನ್ನ ಒಪ್ಪೀವಿ ಅಂತ ಹೇಳಿ ಕಳಿಸ್ಯಾರ. ಅದಕ್ಕ ಅಪ್ಪ ನಿನ್ನ ಒಂದ ಮಾತು ಕೇಳೂ ಅಂದರು.''

''ಅವ್ವ ಅಪ್ಪಗೂ ಮನಸ್ಸಿಗೆ ಬಂದಿರಬೇಕಲ್ಲ. ಅದಕ್ಕ ನನ್ನ ಕೇಳಿದರೇನು ?''

''ಹೌದು. ಎಲ್ಲಾರಿಗೂ ಮನಸ್ಸಿಗೆ ಬಂದದ. ಎದರೊಳಗ ಏನು ಕಡಿಮಿ ಅದ ಹೇಳು?''

''ಉಂ, ಉಹುಂ. ಏನೂ ಕಡಿಮೆ ಇಲ್ಲಾ ಅನಸ್ತದ. ಆದರ, ಆದರ ಅಕ್ಕಾ ನಾ ವಿಚಾರ ಮಾಡಬೇಕು. ಆಮ್ಯಾಲೆ ಹೇಳ್ತೀನಿ. ಯಾಕೋ ಒಮ್ಮೆಲೆ ಒಪ್ಪಿಗೆ ಕೊಡಲಿಕ್ಕೆ ಮನಸ್ಸಿಗೆ ಬರವೊಲ್ಲದು. ವಿಚಾರ ಮಾಡ್ತೀನಿ ಅಕ್ಕಾ, ಪ್ಲೀಜ್. ಅಪ್ಪಗ ನೀನ ಹೇಳಿ ಬಿಡು,'' ಅಕ್ಕನ ಕೈ ಹಿಡಿದು ಅಂಗಲಾಚಿದಳು ಪ್ರಿಯಾ.

ಸುನಂದ ನಗುತ್ತ, ''ಆಗಲಿ ಹುಡುಗೀ ಛೊಲೋತ್ನಾಗ ವಿಚಾರ ಮಾಡು. ಅಪ್ಪ ನಿನ್ನ ಮನಸ್ಸಿನ ವಿರುದ್ಧ ಏನೂ ಮಾಡೂದಿಲ್ಲ. ಆದರ ಇಂಥಾ ವರಾ ಮತ್ತ ಸಿಗೂದು ಕಷ್ಟ ಅನ್ನೂದು ಮರೀಬ್ಯಾಡಾ ಹಾಂ,'' ತಂಗಿಯ ಬೆನ್ನು ಚಪ್ಪರಿಸಿ ಎದ್ದು ಹೋದಳು.

ಪ್ರಿಯಾ ಎದೆಯ ಮೇಲೆ ಕೈಯಿಟ್ಟು ಕೊಂಡು ಆಕಾಶಕ್ಕೆ ಮುಖ ನೆಟ್ಟಿ ದೀರ್ಘವಾಗಿ ಉಸಿರೆಳೆದಳು. ಕಣ್ಣು ಮುಚ್ಚಿಕೊಂಡು ನಸುನಕ್ಕಳು.

ಅಕ್ಕ ತನ್ನನ್ನು ಏನೆಂದು ತಿಳಿದುಕೊಂಡಿದ್ದಾಳಲ್ಲ! ಹಸುಗೂಸಿನಂತೆ ಮುಗ್ಧಳು, ಅನಾಯಕಳು ಎಂದೆಲ್ಲ ಹೇಳಿದಳು. ಆದರ ಕೊನೆಗೆ ತಾನು ಇತ್ತೀಚೆಗೆ ಬದಲಾಯಿಸುತ್ತಿದ್ದೇನೆ ಎಂದೂ ಹೇಳಿದಳು. ಅದು ಮಾತ್ರ ನಿಜ. ಈ ಬದಲಾವಣೆ ಯಾರಿಂದ? ಅಲಕಾನಿಂದಲೇ ಇದರ ಪ್ರಾರಂಭ; ಅಲ್ಲವೇ? ಅಲಕಾ ತನ್ನ ಸಹೋದ್ಯೋಗಿ. ವಯಸ್ಸೂ ತನ್ನದೇ. ಬಿಚ್ಚು ಮಾತಿನ ಸ್ವಚ್ಛ ಮನಸ್ಸಿನ ಹುಡುಗಿ ಅಲಕಾಳನ್ನು ತಾನು ಉಳಿದ ವರಿಗಿಂತ ಹೆಚ್ಚು ಹಚ್ಚಿಕೊಂಡದ್ದು ಸಹಜವೇ. ಸ್ನೇಹಜೀವಿ ಅಲಕಾಳ ಆಫೀಸು ವಿಳಾಸಕ್ಕೆ ಹೊಸ ಹೊಸ ಪೆನ್ ಫ್ರೆಂಡಿನಿಂದ ವಾರಕ್ಕೊಂದಾದರೂ ಪತ್ರ ಬಂದೇ ಬರುತ್ತಿತ್ತು. ಅವಳ ಈ ಹವ್ಯಾಸ ಕಡಲನ್ನೂ ಈಸಿತ್ತು. ಆವರಿಗೆಲ್ಲ ಅಷ್ಟೇ ಉತ್ಸಾಹದಿಂದ ಅಲಕಾ ಉತ್ತರ ಬರೆಯುವಳು. ಅದನ್ನು ನೋಡಿ ತನಗೆ ನಗು.

''ಏನು ಅಲಕಾ, ಭಾಳ ತನ್ಮಯ ಆಗಿ ಓದಲಿಕ್ಕೆ ಹತ್ತೀದಿ. ಪತ್ರ ಯಾರದು? ಪಿಗ್ಮೀದೋ ಏನು ಎಸ್ಕಿಮೊಂದೋ? ಏನಂತಾನ ನಿನ್ನ ಗೆಳೆಯಾ?''

''ಏ ಪ್ರಿಯಾ, ಮಾತಾಡಿದರ ಮುತ್ತು ಸುರಿತಾವೇನೋ ಅನ್ನುವ ಮೂದೇವಿ ನೀನು, ನಿನಗೇನು ಗೊತ್ತದ ಈ ಮಜಾ. ಜೀವನದಾಗ ಹೊರಗಿನ ಜಗತ್ತು ನೋಡಲಿಕ್ಕೆ ನನಗ ಅವಕಾಶ ಇಲ್ಲದಿದ್ದರೂ ಈ ಪತ್ರ ದಿಂದ ಎಲ್ಲಾ ತಿಳೀತದ. ಜ್ಞಾನ ಬೆಳೀತದ. ಎಂಥಾ ಇಂಟರೆಸ್ಟಿಂಗ್ ಅದ ಈ ಪತ್ರ. ಓದಿ ನೋಡು ಒಮ್ಮೆ ಇದನ್ನ.'' ತನಗೆ ಅಲಕಾ ಕೊಟ್ಟ ಪತ್ರವನ್ನು ಕುತೂಹಲದಿಂದಲೇ ಓದಿದಳು ಪ್ರಿಯಾ. ಮತ್ತೊಂದು ದಿನ ಅಲಕಾನಿಂದಲೇ ಕೆಲವರ ಅಡ್ರೆಸ್ ಕೇಳಿ ಪಡೆದುಕೊಂಡಳು. ಆದರೆ ಅಲಕಾಳದು ಒಂದು ಕರಾರು–ತಾನು ಬರೆಯುವ ಫ್ರೆಂಡುಗಳನ್ನು ಬಿಟ್ಟು ಬೇರೆಯವರಿಗೇ ಪ್ರಿಯಾ ಬರೆಯಬೇಕೆನ್ನುವದು. ಅದಕ್ಕೆ ಒಪ್ಪಿ ಹೊಸ ಲೆಟರ್‌ಪ್ಯಾಡ್ ಕೊಂಡು ತಂದು ಎಸ್. ಎಸ್. ಕುಮಾರ ಎನ್ನುವ ಅಮೇರಿಕದಲ್ಲಿದ್ದ ಭಾರತೀಯ ವಿದ್ಯಾರ್ಥಿಗೆ ಪತ್ರವನ್ನೂ ಬರೆದಳು ಪ್ರಿಯಾ ಕೇವಲ ಮೋಜಿಗಾಗಿ. ಎಂಟು ಹತ್ತು ದಿನಗಳಲ್ಲೇ ಉತ್ತರ ಬಂದಿತು. ಪತ್ರ ಬಿಚ್ಚುವಾಗಲೇ ಬೆರಳುಗಳು ಸೂಕ್ಷ್ಮವಾಗಿ ನಡುಗುತ್ತಿದ್ದವು. ಯಾವದೋ ಸಾಹಸ ಮಾಡಿದವರಂತೆ ಎದೆ ಡಬ್‌ಡಬ್ ಎನ್ನುತ್ತಿತ್ತು.

ಇದೆಲ್ಲ ಯಾಕೆ ಆಯಿತೋ ಒಂದೂ ತಿಳಿಯಲಿಲ್ಲ ತನಗೆ. ಅನುಭವಿಸಿದ್ದು ಮಾತ್ರ ನಿಜ.

"ಪ್ರಿಯಾ,

ನಿಮ್ಮ ಇಂಗ್ಲೀಷಿನ ಪತ್ರಕ್ಕೆ ನನ್ನ ಈ ಕನ್ನಡ ಉತ್ತರವನ್ನು ನೋಡಿ ನಿಮಗೆ ಆಶ್ಚರ್ಯವಾಗಿರಬಹುದು. ನಾನು ಕನ್ನಡಿಗನೇ. ಮಲೆನಾಡಿನ ಒಂದು ಹಳ್ಳಿ ನನ್ನ ಊರು. ನನ್ನ ತಂದೆ ವಿದ್ಯಾ ಇಲಾಖೆಯಲ್ಲಿ ಕೆಲಸ ಮಾಡಿ ನಿವೃತ್ತರಾಗಿದ್ದಾರೆ. ಸದ್ಯ ಬೆಂಗಳೂರಿನಲ್ಲಿ ಅಣ್ಣನ ಮನೆಯಲ್ಲಿದ್ದಾರೆ. ಒಬ್ಬಳೇ ಅಕ್ಕ ಮದುವೆಯಾಗಿ ಶಿವಮೊಗ್ಗೆಯಲ್ಲಿದ್ದಾಳೆ. ನನ್ನ ತಾಯಿ ನಾನಿನ್ನೂ ಹಸುಗೂಸು ಇದ್ದಾಗಲೇ ತೀರಿ ಹೋದಳು. ತಾಯಿಯ ಪ್ರೀತಿಯನ್ನು ನಾನು ಕಂಡಿಲ್ಲ. ಅದಕ್ಕೇ ಏನೋ ನನ್ನ ಮನಸ್ಸು ತುಂಬಾ ಮೃದು. ಬಹಳ ಬೇಗ ದುಃಖಕ್ಕೆ ಕರಗುತ್ತೇನೆ. ಸ್ನೇಹಕ್ಕೆ ಹಾತೊರೆಯುತ್ತೇನೆ. . ."

ತನ್ನ ಪರಿಚಯದೊಂದಿಗೆ ಕುಮಾರ ಪತ್ರ ಬರೆಯುವದನ್ನು ಪ್ರಾರಂಭಿಸಿದ್ದ. ಸುಂದರವಾದ ಅಕ್ಷರದಲ್ಲಿ ಬರೆದ ಕನ್ನಡ ಪತ್ರವೆಂದೋ ಅಥವಾ ಅದರ ಆಕರ್ಷಕ ಒಕ್ಕಣೆಗೊ ಒಂದೇ ಪತ್ರ ಬರೆದು ಈ ಹೊಸ ಹವ್ಯಾಸ ನಿಲ್ಲಿಸಬೇಕೆಂದಿದ್ದ ತಾನು ಅದಕ್ಕೆ ಉತ್ತರವನ್ನೂ ಬರೆದಿದ್ದಳು. ಇದೆಲ್ಲ ನಡೆದದ್ದು ಆರು ತಿಂಗಳ ಹಿಂದೆ. ಅಲ್ಲಿಂದ ಮುಂದೆ ತಮ್ಮಿಬ್ಬರ ಪತ್ರ ವ್ಯವಹಾರ ಹವ್ಯಾಸ ಹೋಗಿ ಚಟವಾಗಿಬಿಟ್ಟಿತ್ತು.

ತನ್ನ ಇಂಜಿನಿಯರಿಂಗ್ ತರಬೇತಿ ನಡೆಯುತ್ತಿರುವ ಕಂಪನಿಯನ್ನು, ತನ್ನ ದಿನದ ದುಡಿತದ ಪರಿಚಯವನ್ನು ಕುಮಾರ ಮುಂದಿನ ಪತ್ರದಲ್ಲಿ ಮಾಡಿಕೊಟ್ಟಿದ್ದ. ಮತ್ತೊಂದರಲ್ಲಿ ನ್ಯೂಯಾರ್ಕಿನಿಂದ ಐವತ್ತು ಕಿಲೋ ಮೀಟರ್ ದೂರದಲ್ಲಿ ತಾನಿರುವ ಹಳ್ಳಿಯ ಅಥವಾ ವಿಸ್ತರಣೆಯ ವರ್ಣನೆ ಮಾಡಿದ್ದ. ಇನ್ನೊಂದರಲ್ಲಿ ತನ್ನ ಆಹಾರದ ಬಗ್ಗೆ, ತನ್ನ ಲ್ಯಾಂಡ್ ಲೇಡಿಯ ಬಗ್ಗೆ ಬರೆದಿದ್ದ. ಪ್ರತಿ ವೀಕ್‌ಎಂಡಿಗೂ ತಾನು ಬೇರೆ ಬೇರೆ ವಿಹಾರಸ್ಥಳಗಳಲ್ಲಿ ಭೆಟ್ಟಿಯಾಗುತ್ತಿದ್ದ ಸುಂದರ ತರುಣಿಯರ ಬಗ್ಗೆ ಬಿಚ್ಚು ಮನಸ್ಸಿನಿಂದ ಬರೆದಿದ್ದ. ಆ ಪತ್ರ ಓದಿದ ಮೇಲೆ ತನಗೆ ಏಳೆಂಟು ದಿನ ಸರಿಯಾಗಿ ನಿದ್ದೆ ಹತ್ತಿರಲಿಲ್ಲ. ಏನೇನೋ ತಳಬುಡವಿಲ್ಲದ ವಿಚಿತ್ರ ಕಲ್ಪನೆಗಳು, ಕನಸುಗಳು. ಅವುಗಳಲ್ಲಿ ತಾನು ಅಮೇರಿಕದಲ್ಲಿ ಕುಮಾರನೊಡನೆ

ಸುಂದರ ವಿಹಾರ ಸ್ಥಳಗಳಲ್ಲಿ ವಿಹರಿಸುತ್ತಿದ್ದಳು. ತನ್ನ ಜೊತೆಯಲ್ಲಿದ್ದ ಕುಮಾರ ಬೇರೆ ಸುಂದರ ತರುಣಿಯರ ಹಿಂದೆ ಹೋದಾಗ ಬೆಚ್ಚಿ ಬೀಳುತ್ತ ಎಚ್ಚರಾಗುತ್ತಿದ್ದಳು. ಒಂದು ದಿನವಂತೂ ಅಳುತ್ತಿದ್ದಳಂತೆ. ಅಕ್ಕ ನ್ಯೆ ಕುಲುಕಾಡಿ ಎಬ್ಬಿಸಿದಾಗಲೇ ಎಚ್ಚರ. ಯಾಕೆ ಅಳುತ್ತೀ ಎಂದು ಅಕ್ಕ ಕೇಳುತ್ತಿರುವಾಗ ತನಗೆ ತುಂಬಾ ನಾಚಿಕೆಯಾಗಿತ್ತು. ಏನು ಹೇಳಬೇಕು ಅಕ್ಕನಿಗೆ? ಕುಮಾರ ತನ್ನನ್ನು ಮುತ್ತಿಟ್ಟ ಎಂದು ಹೇಗೆ ಹೇಳಬೇಕು? ಕುಮಾರ ಯಾರು ಅವಳಿಗೇನು ಗೊತ್ತು? ಇವನು ತನ್ನನ್ನು ಯಾಕೆ ಇಷ್ಟು ಕಾಡಿಸುತ್ತಿದ್ದಾನೋ. ಯಾವ ಮುಹೂರ್ತದಲ್ಲಿ ಇವನ ಸ್ನೇಹ ಬೆಳೆಯಿತೊ? ಹೋಗಲಿ, ನಾನು ತಾನೇ ಅವನಿಗೆ ಪತ್ರ ಬರೆಯಲು ಸುರು ಮಾಡಿದ್ದು. ನಾನೇ ಬಿಟ್ಟುಬಿಟ್ಟರಾಯಿತು. ಸಿಟ್ಟಿನಿಂದಲೋ ನಿರಾಸೆಯಿಂದಲೋ ದುಃಖದಿಂದಲೋ ಒಂದೂ ತಿಳಿಯದೆ ತಾನು ಅವನ ಪತ್ರಕ್ಕೆ ಉತ್ತರವನ್ನೇ ಬರೆಯಲಿಲ್ಲ. ಎಂಟು ಹತ್ತು ದಿನಗಳ ಮೇಲೆ ಪತ್ರದ ಬದಲು ಕೇಬಲ್ ಬಂದಿತ್ತು.

"ಪ್ರಿಯಾ ಆರೋಗ್ಯವಾಗಿದ್ದೀಯಾ? ಪ್ಲೀಜ್ ಪತ್ರ ಬರೆ.'' ಎಂದ ಆ ಬೇಡಿಕೆಯ ಹಿಂದಿನ ಮನಸ್ಸು ಅರ್ಥವಾಗಿತ್ತು ತನಗೆ. ಬರೆಯಲು ತನಗೆ ವಿಷಯ ವೈವಿಧ್ಯವಿಲ್ಲದಿದ್ದರೂ ಇದ್ದುದರಲ್ಲೆ ಸ್ವಾರಸ್ಯವಾಗಿ, ಆಫೀಸಿನಲ್ಲಿ ನಡೆದ ಘಟನೆಯನ್ನು, ಹಿಂದೆ ಯಾವಾಗಲೋ ಪಿಕ್‌ನಿಕ್ ಹೋದುದನ್ನು ಸಿನಿಮಾ ನೋಡಿದುದನ್ನು ಅದು ತನಗೆ ಹಿಡಿಸದಿದ್ದರೆ ಯಾಕೆ ಎನ್ನುವದನ್ನು, ತನಗೆ ಸೇರುವ ಬಣ್ಣ ಹೂ ತಿಂಡಿಗಳ ಬಗ್ಗೆ ಬರೆಯುತ್ತಿದ್ದಳು. ತಿಂಗಳುಗಳು ಕಳೆದರೂ ತಮ್ಮಿಬ್ಬರಲ್ಲೇ ಪತ್ರವ್ಯವಹಾರ ಮುಂದುವರೆದದ್ದರಿಂದ ಈಗ ಕೀಟಲೆ ಮಾಡುವ ಸರದಿ ಅಲಕಾಳದಾಗಿತ್ತು.

ತನ್ನ ಬಾಸ್ ತನ್ನನ್ನು ಪಾರ್ಟಿಗೆ ಮನೆಗೆ ಕರೆದಾಗ ಅವರ ಮಗಳನ್ನು ನೋಡಿದೆ. ತುಂಬಾ ಚೆಲುವೆ, ಜಾಣೆ. ಅವಳನ್ನು ಬಿಟ್ಟು ಬರುವ ಮನಸ್ಸೇ ತನಗೆ ಇರಲಿಲ್ಲ ಎಂದೆಲ್ಲಾ ಕುಮಾರ ವರ್ಣಿಸಿ ಬರೆದಾಗ ಪ್ರಿಯಾಳಿಗೇಕೋ ಕಸಿವಿಸಿ. ಒಂದು ಥರಾ ಸಿಟ್ಟು, ಅಸಮಾಧಾನ. ಯಾರು ಮಾತನಾಡಿಸಿದರೂ ಹರಿಹಾಯುವ ಮೂಡಿನಲ್ಲಿದ್ದಳು. ತನ್ನಲ್ಲಿಯ ಈ ಬದಲಾವಣೆ ನೋಡಿ ಅವಳಿಗೆ ಅಚ್ಚರಿ. ಕುಮಾರ ಆ ಹುಡುಗಿಯನ್ನು ಹೊಗಳಿದರೆ ತನಗೇಕೆ ಹೊಟ್ಟೆಕಿಚ್ಚು? ಪ್ರೀತಿ ಇದ್ದಲ್ಲಿ ಅಸೂಯೆ ಇದ್ದೇ

ಇರುತ್ತದೆ ಎನ್ನುವದು ನೆನಪಾದಾಗ ತನ್ನ ಮೈನವಿರೆದ್ದಿತ್ತು. ಮಾತು ಮತ್ತು ಬರಹ ಮನಸ್ಸಿಗೆ ಹಿಡಿಯುವ ಕನ್ನಡಿ. ಅವಳ ಅಸೂಯೆ ಸಿಡುಕು ಪತ್ರದಲ್ಲೂ ವ್ಯಕ್ತವಾಗಿತ್ತೇನೊ? ಅದಕ್ಕೆ ಕುಮಾರನ ಉತ್ತರ.

"ಪ್ರಿಯಾ,

ನಿನ್ನ ಪತ್ರ ಬಿಸಿಯಾಗಿತ್ತು. ಯಾಕೆ ಆರೋಗ್ಯ ಚೆನ್ನಾಗಿಲ್ಲವೇ? ಜ್ವರ ಬಂದಿದೆಯೆ? ಬೇಗ ಔಷಧಿ ತೆಗೆದುಕೊಂಡು ಗುಣವಾಗು. ನಿನಗಾಗಿ ನಾನು ದೇವರಲ್ಲಿ ಪ್ರಾರ್ಥಿಸುತ್ತೇನೆ.

ಮೊನ್ನೆ ಮತ್ತೆ ಬಾಸ್ ಮನೆಗೆ ಹೋಗಿದ್ದೆ. ಲಿಲ್ಲಿಗಾಗಿ ಚಾಕಲೇಟ್ ಡಬ್ಬಿ ಒಯ್ದಿದ್ದೆ. ಮುದ್ದು ಮುದ್ದಾಗಿ ಥ್ಯಾಂಕ್ಸ್ ಹೇಳಿದಳು. ಅವಳ ತಾಯಿಯ ಅನುಮತಿಯಿಂದ ಅವಳನ್ನೆತ್ತಿಕೊಂಡು ಕೆನ್ನೆಯ ಮೇಲೆ ಮುತ್ತಿಟ್ಟೆ. ನನ್ನ ಕುತ್ತಿಗೆಯ ಸುತ್ತ ಕೈ ಹಾಕಿ 'ಅಂಕಲ್' ಎಂದಳು ಎರಡು ವರ್ಷದ ಲಿಲ್ಲಿ. . ." ಎಂದಿತ್ತು.

ಅಂದು ಅಲಕಾನಿಗೆ ಕಾಮತ್‌ನಲ್ಲಿ ಪ್ರಿಯಾಳಿಂದ ಪಾರ್ಟಿ. ಕಾರಣ? ಯಾಕೋ ಎಂದು ಬಿಟ್ಟಿದ್ದಳು ಪ್ರಿಯಾ ಹೃದಯ ತುಂಬಿ ನಗುತ್ತಾ. ಯಾಕೆ ಇಷ್ಟು ಸಂತೋಷ ಎನ್ನುವದು ತನ್ನ ಹೃದಯಕ್ಕೆ ಗೊತ್ತೇ ಇತ್ತು.

ಅವಳ ಕೈ ಎದೆಯಲ್ಲಿ ಮರೆಯಾಗಿದ್ದ ಪತ್ರಗಳನ್ನು ಈಚೆಗೆ ತೆಗೆದು ಒಂದೊಂದನ್ನೇ ಸವರುತ್ತಿದ್ದಾಗ ಅದನ್ನು ಓದಿದಷ್ಟೇ ಸಂತೋಷ. ಕುಮಾರ ತನ್ನ ಹತ್ತಿರ ಬಂದು ಕುಳಿತು ಮಾತನಾಡಿದಂತೆ ತನ್ನ ಅನಿಸಿಕೆ. ತನ್ನನ್ನು ಬಿಟ್ಟು ಅವನು ಸರಿಯಲೊಲ್ಲ. ಅವನನ್ನು ಅಗಲಿ ತಾನು ಇರಲಾರೆ. ಹೀಗೆ ತಮ್ಮದೇ ಲೋಕದಲ್ಲಿ, ಒಂದು ಅವರ್ಣನೀಯ, ಮಧುರ ವಾತಾವರಣದಲ್ಲಿ ತಾವಿಬ್ಬರೂ ವಿಹರಿಸುತ್ತಿದ್ದಾಗ ಮಧ್ಯೆ ಈ ಪ್ರಕಾಶ ಎನ್ನುವವ ಪ್ರವೇಶಿಸಿ ಬಾಂಬು ಹಾಕಿಬಿಟ್ಟಿದ್ದ. ಈಗ ತಾನು ಸುಮ್ಮನಿದ್ದರೆ ತನ್ನ ಮನಃಸ್ಥಿತಿಯನ್ನು ತಿಳಿಯದ ಮನೆಯವರು ಈ ಸಂಬಂಧವನ್ನು ನಿಶ್ಚಯಿಸಿಯಾರು ಎನ್ನುವ ಅಳುಕು ಪ್ರಿಯಾಳಿಗೆ. ವಿಚಾರ ಮಾಡಿ ಹೇಳುತ್ತೇನೆ ಎಂದು ಅಕ್ಕನಿಗೆ ಹೇಳಿಯಾಗಿದೆ. ಯಾವದೊಂದು ನಿರ್ಧಾರಕ್ಕೆ ಬರಲೇಬೇಕು ಎಂದುಕೊಳ್ಳುತ್ತಾ ಎದ್ದಳು ಪ್ರಿಯಾ.

*　　*　　*

"ಪ್ರಿಯಾ,

ಈ ಪತ್ರದ ಜೊತೆಗೆ ನಿನ್ನ ಇಚ್ಛೆಯಂತೆ ನನ್ನ ಫೋಟೋ ಕಳಿಸುತ್ತಿದ್ದೇನೆ. ನಿನಗೆ ನನ್ನ ಫೋಟೋದ ಅಗತ್ಯವಿರಬಹುದು. ಆದರೆ ನಿನ್ನ ಚಿತ್ರವನ್ನು ನಾನು ಎಂದೋ ಮನಸ್ಸಿನಲ್ಲಿ ಬರೆದುಕೊಂಡು ಬಿಟ್ಟಿದ್ದೇನೆ. ನಿನ್ನ ಕಣ್ಣುಗಳನ್ನು ನಾನೆಂದೂ ಮರೆಯಲಾರೆ. ನಾನಾರು? ಈಗ ನೆನಪಾಯಿತೆ? ಎರಡು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ನಿನ್ನ ಸೋದರತ್ತೆಯ ಮಗಳನ್ನು ನನ್ನ ಗೆಳೆಯ ಸುನೀಲ್‌ಗೆ ಮದುವೆ ಮಾಡಿ ಕೊಟ್ಟಾಗ ನಮ್ಮಿಬ್ಬರ ಭೆಟ್ಟಿಯಾಗಿತ್ತು. ಆಗಲೇ ನಾನು ಅಮೇರಿಕಕ್ಕೆ ಹೊರಟಿದ್ದೆ. ಬೆಂಗಳೂರು ತೋರಿಸುವ ನೆಪದಲ್ಲಿ ನಿನ್ನೊಡನೆ ಎರಡು ದಿನ ಸುತ್ತಾಡಿದಾಗ ನಿನ್ನನ್ನು ಸಮೀಪದಿಂದ ಕಂಡು ಮೆಚ್ಚಿದ್ದೆ. ಮದುವೆಯಾಗಬೇಕೆಂದು ಸುನೀಲನ ಮುಖಾಂತರ ಕೇಳಿಸಿದೆ. ಆದರೆ ನನಗೆ ನಿರಾಸೆ ಕಾದಿತ್ತು. ಹುಡುಗಿಗೆ ಈಗಲೇ ಮದುವೆಯಾಗುವ ವಿಚಾರವಿಲ್ಲ ಎನ್ನುವ ಉತ್ತರ ಬಂದಿತು. ನಾನು ಅಮೇರಿಕಕ್ಕೆ ಹೊರಟು ಬಂದೆ. ನಿನ್ನ ಮೊದಲ ಪತ್ರ ಬಂದಾಗಲೇ ನೀನು ಯಾರು ಎನ್ನುವದು ತಿಳಿದು ಹೃದಯ ಸಂತೋಷದಿಂದ ಹಾರಾಡಿತು. ಅದನ್ನು ಗಟ್ಟಿಯಾಗಿ ಕಟ್ಟಿ ಹಾಕಿ ಬರೀ ಪೆನ್ ಫ್ರೆಂಡ್ ಎನ್ನುವ ದೃಷ್ಟಿಯಿಂದಲೇ ಪತ್ರಗಳನ್ನು ಬರೆದೆ. ನಿನ್ನ ಬರವಣಿಗೆಯ ಧಾಟಿ ಬದಲಾಗುತ್ತಿದ್ದುದು ನನ್ನ ಹೃದಯಕ್ಕೆ ತಿಳಿಯಿತು. ಆತ್ಮೀಯವಾಗಿ ಬರೆಯುತ್ತಾ ಹೋದೆ.

ಪ್ರಿಯಾ, ಇನ್ನೊಮ್ಮೆ ಕೇಳುತ್ತೇನೆ. ನನ್ನನ್ನು ಮದುವೆಯಾಗುವಿಯಾ?

ಎಂದೂ ನಿನ್ನವನೇ ಕುಮಾರ."

ಪತ್ರವನ್ನೆತ್ತಿ ಮುತ್ತಿಟ್ಟ ಪ್ರಿಯಾ, "ಸರಿಯಾದ ಸಮಯಕ್ಕೆ ಬಾಗಿಲು ತಟ್ಟಿದ್ದೀರಿ ಕುಮಾರ," ಎಂದಳು.

ಶಾಂತಾದೇವಿ ಕಣವಿಯವರ ಈ ಮೊದಲಿನ ಕಥಾಸಂಗ್ರಹಗಳು

* ಸಂಜೆ ಮಲ್ಲಿಗೆ (2 ನೇ ಮುದ್ರಣ)
* ಬಯಲು ಆಲಯ (3 ನೇ ಮುದ್ರಣ)
* ಮರುವಿಚಾರ

ಬೆಲೆ : ಸಾಧಾರಣ 8–00 ರೂ. ಉತ್ತಮ 12 ರೂ.

---

49 ಅಕ್ಷಯ ತೊಣಚಿಕೊಪ್ಪಲು ಬಡಾವಣೆ
ಸರಸ್ವತೀಪುರಂ
ಮೈಸೂರು-570 009